ಬುಧವಾರ, ಅಕ್ಟೋಬರ್ 16, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋಟ

ಮುಂಬೈನಲ್ಲಿ ಮಂಗಳವಾರ ನಡೆದ 'ಸಿಟಾಡೆಲ್ ಹನಿ ಬನಿ' ಟಿ.ವಿ ಸರಣಿಯ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ನಟಿ ಸಮಂತಾ ರುತ್ ಪ್ರಭು ಫೋಟೊಗೆ ಪೋಸ್ ನೀಡಿದರು



ಬೆಂಗಳೂರು ನಗರ ಜಿಲ್ಲೆಯಲ್ಲಿ ಶಾಲೆಗಳಿಗೆ ರಜೆ ಘೋಷಿಸಿದ ಜಿಲ್ಲಾಧಿಕಾರಿ ● ಮಲೆನಾಡಿನಂತಾದ ಬಯಲುಸೀಮೆ

ಸತತ ಮಳೆಗೆ ತತ್ತರಿಸಿದ ಮಹಾನಗರ

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ಮರ್ಫಿ ಟೌನ್‌ನಲ್ಲಿ ರಸ್ತೆಯಲ್ಲಿ ನಿಂತ ಮಳೆ ನೀರಿನಲ್ಲೇ ಶಾಲಾ ವಿದ್ಯಾರ್ಥಿಗಳು ಮಂಗಳವಾರ ಸಾಗಿದರು

ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಬೆಂಗಳೂರು: ನಗರದ ಎಲ್ಲೆಡೆ ಮಂಗಳವಾರ ಮುಂಜಾನೆಯಿಂದ ಮಧ್ಯಾಹ್ನದವರೆಗೆ ಸುರಿದ ಸತತ ಮಳೆಯಿಂದ ರಸ್ತೆಗಳಲ್ಲಿ ನೀರು ನಿಂತು, ಅತಿ ಹೆಚ್ಚಿನ ವಾಹನ ದಟ್ಟಣೆ ಉಂಟಾಯಿತು.

ಯಲಹಂಕ ಹಾಗೂ ಕೆ.ಆರ್. ಪುರ ಭಾಗಗಳಲ್ಲಿ ಕೆಲವು ಮನೆಗಳಿಗೆ ಮಳೆ ನೀರು ನುಗ್ಗಿತು. ಯಲಹಂಕದ ಚೌಡೇಶ್ವರಿ ಬಡಾವಣೆ, ವಿದ್ಯಾರಣ್ಯಪುರ, ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಅತಿಹೆಚ್ಚು (8.5 ಸೆಂ.ಮೀ) ಮಳೆಯಾಯಿತು. ವಿದ್ಯಾರ್ಥಿಗಳು ಶಾಲೆ–ಕಾಲೇಜುಗಳಿಗೆ ಮಳೆಯಲ್ಲೇ ಸಾಗಿದರು. ಕಚೇರಿಗಳಿಗೆ ಹೋಗಲು ನಾಗರಿಕರು ಪರದಾಡಿದರು.

ಹವಾಮಾನ ಇಲಾಖೆ ಎರಡು ದಿನ ‘ಆರೆಂಜ್ ಅಲರ್ಟ್’ ಸೂಚನೆ ನೀಡಿರುವುದರಿಂದ ಬೆಂಗಳೂರು ನಗರ ಜಿಲ್ಲೆಯ ಅಂಗನವಾಡಿ, ಖಾಸಗಿ, ಅನುದಾನಿತ ಪ್ರಾಥಮಿಕ, ಪ್ರೌಢ ಶಾಲೆಗಳಿಗೆ ಅ.16ರಂದು (ಬುಧವಾರ) ರಜೆ ಘೋಷಿಸಲಾಗಿದೆ. 17ರಂದು ವಾಲ್ಮೀಕಿ ಜಯಂತಿಯಾಗಿದ್ದು, ಅಂದು ಸರ್ಕಾರಿ ರಜೆ ಇರುತ್ತದೆ ಎಂದೂ ಜಿಲ್ಲಾಧಿಕಾರಿ ಕೆ.ಜಿ. ಜಗದೀಶ್ ತಿಳಿಸಿದ್ದಾರೆ.

ನಗರದಲ್ಲಿರುವ ಐ.ಟಿ. ಬಿ.ಟಿ ಕಂಪನಿಗಳ ಉದ್ಯೋಗಿಗಳಿಗೆ ಅ.14ರಂದು ಮನೆಯಿಂದಲೇ ಕೆಲಸ ನಿರ್ವಹಿಸಲು ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ ಪ್ರಧಾನ ವ್ಯವಸ್ಥಾಪಕರು ಸೂಚಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ: ಬಯಲುಸೀಮೆಯ ಜಿಲ್ಲೆಗಳು ಬೆಳಗ್ಗೆಯಿಂದ ಇಡೀ ದಿನ ಬಿಟ್ಟು ಬಿಡದೆ ಸುರಿದ ಮಳೆಯಿಂದ ಮಲೆನಾಡಿನಂತಾಗಿದ್ದವು.

ಅಂಗನವಾಡಿಗಳಿಗೆ ಇಂದು ರಜೆ: ದೊಡ್ಡಬಳ್ಳಾಪುರ: ಧಾರಾಕಾರ ಮಳೆ ಹಿನ್ನೆಲೆಯಲ್ಲಿ ಅ.16ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ ಎಲ್ಲ ಅಂಗನವಾಡಿ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಡಾ.ಎನ್. ಶಿವಶಂಕರ್ ರಜೆ ಘೋಷಿಸಿದ್ದಾರೆ.

ತುಮಕೂರು ಜಿಲ್ಲೆಯಾದ್ಯಂತ ಸೋಮವಾರ ರಾತ್ರಿ ಹಾಗೂ ಮಂಗಳವಾರ ಒಂದೇ ಸಮನೆ ಮಳೆ ಸುರಿಯಿತು. ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಾಧಾರಣ ಮತ್ತು ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ದಿನವಿಡೀ ತುಂತುರು ಮಳೆಯಾಯಿತು.

ಚಿಕ್ಕಬಳ್ಳಾಪುರ ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣ ನಂದಿಬೆಟ್ಟವನ್ನು ಸಂಪೂರ್ಣವಾಗಿ ಮಂಜು ಆವರಿಸಿತ್ತು.

ಬಿರುಸಿನ ಮಳೆ (ಹುಬ್ಬಳ್ಳಿ ವರದಿ): ಧಾರವಾಡ, ಉತ್ತರ ಕನ್ನಡ, ಬೆಳಗಾವಿ, ಗದಗ ಜಿಲ್ಲೆಗಳಲ್ಲಿ ವಿವಿಧೆಡೆ ಗುಡುಗು ಸಹಿತ ಬಿರುಸಿನ ಮಳೆ ಸುರಿಯಿತು. ಗದಗ ತಾಲ್ಲೂಕಿನಲ್ಲಿ ರಾತ್ರಿ ಉತ್ತಮ ಮಳೆ ಸುರಿಯಿತು.

3 ಗೇಟ್‌ನಿಂದ ನೀರು ಹೊರಕ್ಕೆ: ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣದಲ್ಲಿ ಇಳಿಕೆ ಆಗಿರುವುದರಿಂದ ಮಂಗಳವಾರ ಮೂರು ಕ್ರಸ್ಟ್‌ಗೇಟ್‌ಗಳಿಂದ 34 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಯಿತು. ಹೀಗಾಗಿ ಹಂಪಿಯ ಪುರಂದರ ಮಂಟಪ ಮತ್ತೆ ಗೋಚರಿಸಿತು.

ಮೈಸೂರು ವರದಿ: ಮೈಸೂರು ಭಾಗದಲ್ಲಿ ಸೋಮವಾರ ತಡರಾತ್ರಿ ಹಾಗೂ ಮಂಗಳವಾರ ಬಿಟ್ಟೂ ಬಿಟ್ಟು ಸಾಧಾರಣ ಮಳೆ ಬಿದ್ದಿತು. ದಿನವಿಡೀ ಶೀತಗಾಳಿ ಬೀಸುತ್ತಿತ್ತು. ಮಂಡ್ಯ ಜಿಲ್ಲೆಯ ನಾಗಮಂಗಲ ಸೇರಿದಂತೆ ವಿವಿಧೆಡೆ ಬಿರುಸಿನ ಮಳೆಯಾಗಿದೆ. ಹಾಸನ ಜಿಲ್ಲೆಯಾದ್ಯಂತ ಬೆಳಿಗ್ಗೆಯಿಂದ ತುಂತುರು ಮಳೆ ಬಿದ್ದಿತು. ಚಾಮರಾಜನಗರದಲ್ಲೂ ತುಂತುರು ಮಳೆಯಾಗಿದೆ.

(ದಾವಣಗೆರೆ ವರದಿ): ಚಿತ್ರದುರ್ಗ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಜಿಟಿಜಿಟಿ ಮಳೆ ಸುರಿದ ಕಾರಣ ಸಾರ್ವಜನಿಕರು ಚಳಿಯಿಂದ ನಡುಗಿದರು.

ನಸುಕಿನಲ್ಲೇ ಆರಂಭವಾಗಿದ್ದ ಮಳೆ ಬೆಳಿಗ್ಗೆ 10 ಗಂಟೆವರೆಗೂ ಸುರಿಯಿತು. ಮೊಳಕಾಲ್ಮುರು ಪಟ್ಟಣಕ್ಕೆ ಹೊಂದಿಕೊಂಡಿರುವ ಬೆಟ್ಟದಲ್ಲಿನ ಸೀಗಲಗುಂದಿ ಕೆರೆ ಕೋಡಿ ಬಿದ್ದಿದೆ. ದಾವಣಗೆರೆ ನಗರ, ಚನ್ನಗಿರಿ, ಹೊನ್ನಾಳಿ, ನ್ಯಾಮತಿ, ಸಂತೇಬೆನ್ನೂರು, ಸಾಸ್ವೆಹಳ್ಳಿ ಹಾಗೂ ಮಾಯಕೊಂಡದಲ್ಲಿ ಮಳೆ ಬಿದ್ದಿದೆ. ಶಿವಮೊಗ್ಗ ಜಿಲ್ಲೆಯ ವಿವಿಧೆಡೆಯೂ ಹದ ಮಳೆಯಾಗಿದೆ.

ಚಿಕ್ಕಮಗಳೂರು ವರದಿ: ಜಿಲ್ಲೆಯಾದ್ಯಂತ ದಿನವಿಡೀ ಜಿಟಿಜಿಟಿ ಮಳೆ ಸುರಿಯಿತು. ಚಿಕ್ಕಮಗಳೂರು, ತರೀಕೆರೆ ಸುತ್ತಮುತ್ತ ಜೋರು ಮಳೆಯಾಗಿದ್ದು, ಮೂಡಿಗೆರೆ, ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ತಾಲ್ಲೂಕಿನಲ್ಲಿ ಸಣ್ಣದಾಗಿ ಮಳೆ ಸುರಿಯಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುಡುಗು ಮಿಂಚುಗಳಿಂದ ಕೂಡಿದ ಬಿರುಸಿನ ಮಳೆಯಾಗಿದೆ. ಕೆಲವೆಡೆ ಮಂಗಳವಾರ ಬೆಳಿಗ್ಗೆ ಬಿಟ್ಟು ಬಿಟ್ಟು ಸಾಧಾರಣ ಮಳೆಯಾಗಿತ್ತು. ಉಡುಪಿ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ.

ಬಂಡೆ ಉರುಳಿ ಇಬ್ಬರು ಮಕ್ಕಳು ಸೇರಿ ಮೂವರ ಸಾವು

ಕಲಬುರಗಿ: ಕಲ್ಯಾಣ ಕರ್ನಾಟಕದ ರಾಯಚೂರು ಹಾಗೂ ಕಲಬುರಗಿ ಜಿಲ್ಲೆಯಲ್ಲಿ ಮಂಗಳವಾರ ಉತ್ತಮ ಮಳೆ ಸುರಿದಿದ್ದು, ಮಳೆ ಸಂಬಂಧಿ ಅವಘಡದಿಂದಾಗಿ ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಗೌಡೂರು ತಾಂಡಾದ ಜಮೀನಿನಲ್ಲಿ ಇಬ್ಬರು ಮಕ್ಕಳು ಸೇರಿ ಮೂವರು ಸಾವನ್ನಪ್ಪಿದ್ದಾರೆ.

ಮಂಜುನಾಥ (9), ವೈಶಾಲಿ (7) ಹಾಗೂ ರಘು ಮಾನಪ್ಪ (18) ಮೃತರು.

ಮಂಜುನಾಥ ಹಾಗೂ ವೈಶಾಲಿ ಪಾಲಕರೊಂದಿಗೆ ಹೊಲಕ್ಕೆ ಹೋಗಿದ್ದರು. ದನ ಮೇಯಿಸುತ್ತಿದ್ದಾಗ ಜಿಟಿ ಜಿಟಿ ಮಳೆ ಸುರಿದ ಕಾರಣ ಮಕ್ಕಳು ಕಲ್ಲು ಬಂಡೆಯ ಬಳಿ ಕುಳಿತುಕೊಂಡಿದ್ದರು. ಈ ವೇಳೆ ಮಣ್ಣು ಕುಸಿದು ಬಂಡೆ ಮಕ್ಕಳ ಮೇಲೆ ಉರುಳಿದೆ. ಮಕ್ಕಳ ಚೀರಾಟ ಕೇಳಿ ಪೋಷಕರು ಬಂಡೆ ಎತ್ತಲು ಪ್ರಯತ್ನಿಸಿದರೂ ಪ್ರಯೋಜನವಾಗಿಲ್ಲ.

ಮಂಜುನಾಥ ಹಾಗೂ ವೈಶಾಲಿ ಸ್ಥಳದಲ್ಲಿಯೇ ಸಾವನ್ನಪ್ಪಿದ್ದರೆ ರಕ್ಷಣೆ ಮಾಡಲು ಹೋಗಿದ್ದ ರಘು ಮಾನಪ್ಪ ಅವರ ಕಾಲು ಮುರಿದಿತ್ತು. ಲಿಂಗಸುಗೂರು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯದಲ್ಲಿ ಸಾವನ್ನಪ್ಪಿದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಲಬುರಗಿ ನಗರ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಮಳೆ ಸುರಿದಿದೆ.

ಬೆಂಗಳೂರು ಸೇರಿ ಹಲವೆಡೆ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಳ್ಳಾರಿ, ಮೈಸೂರು, ಕೊಡಗು, ಚಾಮರಾಜನಗರ, ಮಂಡ್ಯ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಬುಧವಾರ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಈ ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಘೋಷಿಸಿದೆ.

ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ತುಮಕೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಗುಡುಗು ಸಹಿತ ಜೋರು ಮಳೆಯಾಗುವ ಸಂಭವ ಇದೆ ಎಂದು ಇಲಾಖೆ ಮಾಹಿತಿ ನೀಡಿದ್ದು, ಈ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ.

ವಾಯುಭಾರ ಕುಸಿತ: ಚೆನ್ನೈ ತತ್ತರ

ಪ್ರಜಾವಾಣಿ ವಾರ್ತೆ/ಪಿಟಿಐ



ತಾತ್ಕಾಲಿಕ ಬೋಟ್‌ಗಳನ್ನು ನಿರ್ಮಿಸಿಕೊಂಡ ಜನರು ಮಳೆಯಿಂದಾಗಿ ಜಲಾವೃತಗೊಂಡಿರುವ ಚೆನ್ನೈನ ರಸ್ತೆಯಲ್ಲಿ ಮಂಗಳವಾರ ಸಂಚರಿಸಿದರು –ಪಿಟಿಐ ಚಿತ್ರ

ಚೆನ್ನೈ: ಬಿಟ್ಟೂಬಿಡದೆ ಸುರಿದ ಮಳೆಯು, ಚೆನ್ನೈ ನಗರವನ್ನು ಮಂಗಳವಾರ ತನ್ನೆದುರು ಮಂಡಿಯೂರುವಂತೆ ಮಾಡಿತು. ನಗರದ ಹಲವು ತಗ್ಗು ಪ್ರದೇಶಗಳು ಮಳೆ ನೀರಿನಿಂದ ಜಲಾವೃತವಾಗಿವೆ. ನಗರ ಉತ್ತರ ಭಾಗದಲ್ಲಿ ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ.

ಅ.14ರ ಸಂಜೆ 6 ಗಂಟೆಯಿಂದ ಅ.15ರ ಸಂಜೆ 6 ಗಂಟೆಯವರೆಗೆ ಚೆನ್ನೈನಲ್ಲಿ ಸುಮಾರು 10 ಸೆ.ಮೀನಷ್ಟು ಮಳೆ ಸುರಿದಿದೆ. ಹಲವು ಪ್ರದೇಶಗಳಲ್ಲಿ ಮಳೆಯ ಪ್ರಮಾಣವು 15 ಸೆ.ಮೀನಷ್ಟಿತ್ತು.

ನಗರ ಹಲವು ಮುಖ್ಯ ರಸ್ತೆಗಳು ಜಲಾವೃತಗೊಂಡಿದ್ದವು. ಆದರೂ ಸಂಚಾರಕ್ಕೆ ಹೆಚ್ಚಿನ ಅಡಚಣೆಯಾಗಲಿಲ್ಲ. ಅಕ್ಟೋಬರ್‌ನಲ್ಲಿ ಪ್ರತಿವರ್ಷ ಸುರಿಯುವ ಮಳೆಗೆ ಚೆನ್ನೈನ ಉತ್ತರ ಭಾಗದ ವೆಲಚೇರಿ ಮತ್ತು ಪಾಲಿಕರಣೈ ಪ್ರದೇಶಗಳ ಜನರು ತೀವ್ರ ಸಂಕಷ್ಟ ಎದುರಿಸುತ್ತಾರೆ. ಮಂಗಳವಾರ ಸುರಿದ ಮಳೆಯೂ ಈ ಪ್ರದೇಶಗಳ ಮೇಲೆ ತೀವ್ರ ಪರಿಣಾಮ ಬೀರಿದೆ.

ವಾಯುಭಾರ ಕುಸಿತ: ಬಂಗಾಳ ಕೊಲ್ಲಿಯಲ್ಲಿ ಮಂಗಳವಾರ ಉಂಟಾದ ವಾಯುಭಾರ ಕುಸಿತದ ಪರಿಣಾಮವಾಗಿ ತಮಿಳುನಾಡಿನಲ್ಲಿ ತೀವ್ರ ಮಳೆಯಾಗಿದೆ. ಆಂಧ್ರ ಪ್ರದೇಶದ ಹಲವು ಭಾಗಗಳಲ್ಲಿ ಹಾಗೂ ಪುದುಚೆರಿಯಲ್ಲಿಯೂ ತೀವ್ರ ಮಳೆಯಾಗಿದೆ. ‘ವಾಯುಭಾರ ಕುಸಿತವು ಇನ್ನಷ್ಟು ತೀವ್ರಗೊಳ್ಳಲಿದ್ದು, ಇನ್ನೆರಡು ದಿನಗಳಲ್ಲಿ ತಮಿಳುನಾಡು, ಆಂಧ್ರ ಪ್ರದೇಶದ ದಕ್ಷಿಣ ಭಾಗಗಳಲ್ಲಿ ಹಾಗೂ ಪುದುಚೆರಿಯಲ್ಲಿ ತೀವ್ರ ಮಳೆಯಾಗಲಿದೆ’ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ.

- ದೇಶದಲ್ಲಿ ನೈರುತ್ಯ ಮುಂಗಾರು ಮುಕ್ತಾಯಗೊಂಡಿದ್ದು, ಈಶಾನ್ಯ ಮಾನ್ಸೂನ್ ಮಾರುತವು ತನ್ನ ಕಾರ್ಯಚಟುವಟಿಕೆಯನ್ನು ಆರಂಭಿಸಿದೆ
- ಭಾರತೀಯ ಹವಾಮಾನ ಇಲಾಖೆಯು ಚೆನ್ನೈ, ತಿರುವಳ್ಳೂರು, ಕಾಂಚೀಪುರ ಹಾಗೂ ಚಂಗ್ಲಪಟ್ಟು ಜಿಲ್ಲೆಗಳಲ್ಲಿ ’ರೆಡ್ ಅಲರ್ಟ್’ ಘೋಷಿಸಿದ್ದು, ಈ ಪ್ರದೇಶಗಳ ಶಾಲಾ–ಕಾಲೇಜು, ಸರ್ಕಾರ ಹಾಗೂ ಖಾಸಗಿ ಕಚೇರಿಗಳಿಗೆ ಬುಧವಾರ ರಜೆ ಘೋಷಿಸಲಾಗಿದೆ
- ಚೆನ್ನೈನ ಹಲವು ಭಾಗಗಳಲ್ಲಿ ಬಸ್ ಸಂಚಾರ ವ್ಯತ್ಯಯವಾಗಿದ್ದವು. ಚೆನ್ನೈ–ಮೈಸೂರು ಕಾವೇರಿ ಎಕ್ಸ್‌ಪ್ರೆಸ್ ಸೇರಿದಂತೆ ನಾಲ್ಕು ರೈಲು ಸಂಚಾರವನ್ನು ರದ್ದು ಮಾಡಲಾಗಿತ್ತು. ಹಲವು ದೇಶೀಯ ಮಾರ್ಗಗಳ ವಿಮಾನಗಳ ಹಾರಾಟವೂ ರದ್ದುಗೊಂಡಿತ್ತು. ಮೆಟ್ರೊ ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿಲ್ಲ
- ಚೆನ್ನೈನ ಉತ್ತರ ಭಾಗದಲ್ಲಿ 40 ಕಿ.ಮೀನಿಂದ 50 ಕಿ.ಮೀ ವೇಗದಲ್ಲಿ ದಿಢೀರ್ ಗಾಳಿ ಬೀಸಲಿದ್ದು, ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಸೂಚಿಸಲಾಗಿದೆ
- ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಪ್ರವಾಹ ಪೀಡಿತ ಪ್ರದೇಶಗಳಿಗೆ ಮಂಗಳವಾರ ಭೇಟಿ ನೀಡಿದರು. ಚೆನ್ನೈ ಕಾರ್ಪೊರೇಷನ್‌ನ ನಿಯಂತ್ರಣ ಕೊಠಡಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು

ಸುದ್ದಿ 2 ನಿಮಿಷ

ಅತ್ಯಾಚಾರ ಆರೋಪ: ಬಿಜೆಪಿ ಶಾಸಕ ಮುನಿರತ್ನಗೆ ಜಾಮೀನು

ಬೆಂಗಳೂರು: ಮಹಿಳೆಯೊಬ್ಬರ ಮೇಲಿನ ಅತ್ಯಾಚಾರ ಆರೋಪ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಮುನಿರತ್ನ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಪುರಸ್ಕರಿಸಿ ಮಂಗಳವಾರ ಆದೇಶಿಸಿದರು.

‘₹1 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಮತ್ತು ಇಷ್ಟೇ ಮೌಲ್ಯಕ್ಕೆ ಇಬ್ಬರ ಭದ್ರತೆ ಒದಗಿಸಬೇಕು. ಪ್ರಾಸಿಕ್ಯೂಷನ್ ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು. ತನಿಖಾಧಿಕಾರಿ ಸೂಚಿಸಿದಾಗ ವಿಚಾರಣೆಗೆ ಹಾಜರಾಗಬೇಕು. ಯಾವುದೇ ರೀತಿಯಲ್ಲೂ ತನಿಖೆ ಮತ್ತು ಸಾಕ್ಷ್ಯ ತಿರುಚುವ ಕೃತ್ಯ ಮತ್ತು ಇಂತಹುದೇ ಅಪರಾಧದಲ್ಲಿ ಭಾಗಿಯಾಗುವಂತಿಲ್ಲ. ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವವರೆಗೆ ಅಥವಾ ಮೂರು ತಿಂಗಳವರೆಗೆ ಪ್ರತಿ ತಿಂಗಳ ಭಾನುವಾರದಂದು ಬೆಳಿಗ್ಗೆ 9 ರಿಂದ ಸಂಜೆ 5ರ ನಡುವೆ ಸಂಬಂಧಿಸಿದ ಪೊಲೀಸ್ ಠಾಣೆಗೆ ತೆರಳಿ ಸಹಿ ಹಾಕಬೇಕು. ನ್ಯಾಯಾಲಯದ ಅನುಮತಿ ಪಡೆಯದೇ ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗೆ ಹೋಗುವಂತಿಲ್ಲ’ ಎಂಬ ಷರತ್ತುಗಳನ್ನು ವಿಧಿಸಲಾಗಿದೆ.



ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಮುನಿರತ್ನ ಸೇರಿದಂತೆ ಆರು ಮಂದಿಯ ವಿರುದ್ಧ ರಾಮನಗರ ಜಿಲ್ಲೆಯ ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಜಾತಿನಿಂದನೆ ಮತ್ತು ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದ ಮತ್ತೆರಡು ಪ್ರತ್ಯೇಕ ಪ್ರಕರಣಗಳಲ್ಲಿ ಮುನಿರತ್ನ ಅವರಿಗೆ ಈಗಾಗಲೇ ಜಾಮೀನು ಮಂಜೂರಾಗಿದೆ.

ಮಾರ್ಸೆಲ್, ಅಶೋಕಗೆ ಕೊಂಕಣಿ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ

ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ): ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು 2023ನೇ ಸಾಲಿನ ಗೌರವ ಪ್ರಶಸ್ತಿ ಹಾಗೂ ಪುಸ್ತಕ ಪುರಸ್ಕಾರ ಪ್ರಶಸ್ತಿಯನ್ನು ಘೋಷಿಸಿದೆ. ಗೌರವ ಪ್ರಶಸ್ತಿಯು ₹ 50 ಸಾವಿರ ನಗದು ಮತ್ತು ಪುಸ್ತಕ ಪುರಸ್ಕಾರ ₹ 25 ಸಾವಿರ ನಗದು ಒಳಗೊಂಡಿದೆ.

‘ಮಂಗಳೂರಿನ ಮಾರ್ಸೆಲ್ ಎಂ.ಡಿಸೋಜ ಅವರನ್ನು ‘ಕೊಂಕಣಿ ಸಾಹಿತ್ಯ’, ಮುಂಬೈನ ಹ್ಯಾರಿ ಫರ್ನಾಂಡಿಸ್ ಅವರನ್ನು ‘ಕೊಂಕಣಿ ಕಲೆ’ ಮತ್ತು ಹೊನ್ನಾವರದ ಅಶೋಕ ದಾಮು ಕಾಸರಕೋಡ ಅವರನ್ನು ‘ಕೊಂಕಣಿ ಜಾನಪದ’ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ’ ಎಂದು ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಅಲ್ವಾರಿಸ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಬಂಟ್ವಾಳದ ಮೇರಿ ಸಲೋಮಿ ಡಿಸೋಜ ಅವರ ಕವನ ‘ಅಟ್ಸೊಸುರ್’, ಫಾದರ್ ರೊಯ್ಸನ್ ಫರ್ನಾಂಡಿಸ್ ಹಿರ್ಗಾನ್ ಅವರ ಸಣ್ಣಕತೆ ‘ಪಯ್ಲಿ ಭೆಟ್’ ಹಾಗೂ ಮಂಗಳೂರಿನ ಸ್ಟೀಫನ್ ಮಸ್ಕರೇನಸ್ (ಹೇಮಾಚಾರ್ಯ) ಅವರ ಕೊಂಕಣಿ ಭಾಷಾಂತರ ಕೃತಿ ‘ಎಕ್ಸೊ ಎಕ್ಸುರೊ’ ಪುಸ್ತಕ ಪುರಸ್ಕಾರಕ್ಕೆ ಆಯ್ಕೆಯಾಗಿವೆ’ ಎಂದು ತಿಳಿಸಿದರು.

‘ನವೆಂಬರ್ 10ರಂದು ಇಲ್ಲಿನ ಕಾಸರಕೋಡ ಶಾನಭಾಗ ರೆಸಿಡೆನ್ಸಿ ಆವರಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು ಮೀನುಗಾರಿಕೆ ಹಾಗೂ ಬಂದರು ಸಚಿವ ಮಂಕಾಳ ವೈದ್ಯ ಪ್ರಶಸ್ತಿ ಪ್ರದಾನ ಮಾಡುವರು’ ಎಂದರು. ಅಕಾಡೆಮಿ ಸದಸ್ಯರಾದ ನವೀನ್ ಕೆನ್ಯುಟ್ ಲೋಬೊ, ಜೇಮ್ಸ್ ಪೆದ್ರು ಲೋಪಿಸ್ ಇದ್ದರು.

ಎಸ್‌ಸಿಒ ಸಭೆ: ಪಾಕ್‌ನಲ್ಲಿ ಜೈಶಂಕರ್

9 ವರ್ಷದ ನಂತರ ಭೇಟಿ ನೀಡಿದ ಭಾರತದ ವಿದೇಶಾಂಗ ಸಚಿವ

ಪ್ರಜಾವಾಣಿ ವಾರ್ತೆ/ ಪಿಟಿಐ



ಪಾಕಿಸ್ತಾನದ ಇಸ್ಲಾಮಾಬಾದ್‌ಗೆ ಮಂಗಳವಾರ ಬಂದಿಳಿದ ಭಾರತದ ವಿದೇಶಾಂಗ ಸಚಿವ ಎಸ್‌. ಜೈಶಂಕರ್ ಅವರಿಗೆ ಪಾಕ್‌ನ ಬಾಲೆ ಹೂಗುಚ್ಛ ನೀಡಿ ಸ್ವಾಗತಿಸಿದಳು– ಪಿಟಿಐ ಚಿತ್ರ

ಇಸ್ಲಾಮಾಬಾದ್/ನವದೆಹಲಿ: ಪಾಕಿಸ್ತಾನದಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಸಭೆಯಲ್ಲಿ ಭಾಗವಹಿಸಲು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಮಂಗಳವಾರ ಇಸ್ಲಾಮಾಬಾದ್ ತಲುಪಿದ್ದಾರೆ.

ಕಾಶ್ಮೀರ ಸಮಸ್ಯೆ ಮತ್ತು ಪಾಕಿಸ್ತಾನದಿಂದ ಹೊರಹೊಮ್ಮುತ್ತಿರುವ ಗಡಿಯಾಚೆಗಿನ ಭಯೋತ್ಪಾದನೆಗೆ ಸಂಬಂಧಿಸಿ ಉಭಯ ದೇಶಗಳ ನಡುವಿನ ಸಂಬಂಧ ಹದಗೆಟ್ಟಿದೆ. ಇದರ ನಡುವೆಯೇ, ಸುಮಾರು ಒಂಬತ್ತು ವರ್ಷಗಳ ನಂತರ ಭಾರತದ ವಿದೇಶಾಂಗ ಸಚಿವರು ಪಾಕಿಸ್ತಾನಕ್ಕೆ ಭೇಟಿ ನೀಡಿದ್ದಾರೆ. ಸುಷ್ಮಾ ಸ್ವರಾಜ್ ಅವರು ವಿದೇಶಾಂಗ ಸಚಿವರಾಗಿದ್ದಾಗ 2015ರ ಡಿಸೆಂಬರ್‌ನಲ್ಲಿ ಇಸ್ಲಾಮಾಬಾದ್‌ಗೆ ಭೇಟಿ ನೀಡಿದ್ದರು.

ರಾವಲ್ಪಿಂಡಿಯ ವಾಯು ನೆಲೆಗೆ ಬಂದಿಳಿದ ಜೈಶಂಕರ್ ಅವರನ್ನು ಪಾಕಿಸ್ತಾನ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಧಿಕಾರಿಯೊಬ್ಬರು ಸ್ವಾಗತಿಸಿದರು.

ಇತ್ತೀಚೆಗಷ್ಟೇ ಕಾಶ್ಮೀರವನ್ನು ಪ್ಯಾಲೆಸ್ಟೀನ್ ಜತೆಗೆ ಸಮೀಕರಿಸಿ, ಈ ಎರಡೂ ಪಾಕಿಸ್ತಾನದ ಕಳಕಳಿಯ ವಿಷಯಗಳೆಂದು ಹೇಳಿಕೆ ನೀಡಿರುವ ಪಾಕಿಸ್ತಾನದ ವಿದೇಶಾಂಗ ಸಚಿವ ಐಶಾಕ್ ದರ್ ಅವರೊಂದಿಗೆ ಯಾವುದೇ ದ್ವಿಪಕ್ಷೀಯ ಮಾತುಕತೆಯ ಸಾಧ್ಯತೆಯನ್ನು ಜೈಶಂಕರ್ ಅವರು ಈಗಾಗಲೇ ತಳ್ಳಿಹಾಕಿದ್ದಾರೆ.


ಭಾರತದೊಂದಿಗೆ ಉತ್ತಮ ಸಂಬಂಧ ಕಾಯ್ದುಕೊಳ್ಳಲು ಬಯಸುವುದಾಗಿ ಮಾಜಿ ಪ್ರಧಾನಿ ನವಾಜ್ ಷರೀಫ್, ಅವರ ಪುತ್ರಿ ಮತ್ತು ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿ ಮರಿಯಮ್ ನವಾಜ್ ಷರೀಫ್, ಪಾಕಿಸ್ತಾನ್ ಪೀಪಲ್ಸ್ ಪಾರ್ಟಿಯ ನಾಯಕ ಬಿಲಾವಲ್ ಭುಟ್ಟೊ ಜರ್ದಾರಿ ಸೇರಿದಂತೆ ಪಾಕಿಸ್ತಾನದ ಆಡಳಿತಾರೂಢ ಮೈತ್ರಿಕೂಟದ ಪ್ರಮುಖ ನಾಯಕರು ಸಾರ್ವಜನಿಕ ಹೇಳಿಕೆ ನೀಡುವ ಮೂಲಕ ಭಾರತಕ್ಕೆ ಸೂಕ್ಷ್ಮ ಸಂದೇಶ ರವಾನಿಸಿದ್ದಾರೆ. ಆದರೆ, ಗಡಿಯಾಚೆಗಿನ ಭಯೋತ್ಪಾದನೆ ನಿಲ್ಲಿಸದ ಹೊರತು ಪಾಕಿಸ್ತಾನದೊಂದಿಗೆ ಯಾವುದೇ ಮಾತುಕತೆ ನಡೆಸಲಾಗದು ಎಂಬ ತನ್ನ ನಿಲುವಿಗೆ ಭಾರತ ಅಂಟಿಕೊಂಡಿದೆ.

ಎಸ್‌ಸಿಒ ರಾಷ್ಟ್ರಗಳ ನಿಯೋಗದ ನಾಯಕರ ಗೌರವಾರ್ಥ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಆಯೋಜಿಸಿದ್ದ ಭೋಜನಕೂಟದಲ್ಲಿ ಜೈಶಂಕರ್ ಭಾಗವಹಿಸಿದರು. ಅವರು ಬುಧವಾರ ನವದೆಹಲಿಗೆ ಹಿಂದಿರುಗುವ ಮೊದಲು ಎಸ್‌ಸಿಒ 23ನೇ ಸಭೆಯಲ್ಲಿ ಪ್ರಧಾನಿ ಮೋದಿಯವರ ಪರವಾಗಿ ಪಾಲ್ಗೊಳ್ಳಲಿದ್ದಾರೆ.

ಲೋಕಸಭಾ ಚುನಾವಣೆ– 7.40 ಲಕ್ಷ ಮತದಾರರಿಗೆ ತಲಾ ₹200 ಹಂಚಿಕೆ: ಜಾರಿ ನಿರ್ದೇಶನಾಲಯ

‘ಬಳ್ಳಾರಿ ಮತದಾರರಿಗೆ ನಿಗಮದ ₹14.80 ಕೋಟಿ’

ಪ್ರಜಾವಾಣಿ ವಾರ್ತೆ



ಇ. ತುಕಾರಾಂ

ಬೆಂಗಳೂರು: ‘ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಅಕ್ರಮವಾಗಿ ವರ್ಗಾವಣೆ ಮಾಡಲಾಗಿದ್ದ ಹಣದಲ್ಲಿ ಬಳ್ಳಾರಿ ಲೋಕಸಭಾ ಕ್ಷೇತ್ರದ 7 ಲಕ್ಷಕ್ಕೂ ಹೆಚ್ಚು ಮತದಾರರಿಗೆ ಕಾಂಗ್ರೆಸ್‌ನ ಮೂವರು ಶಾಸಕರ ಮೂಲಕ ₹14.80 ಕೋಟಿ ಹಂಚಲಾಗಿದೆ’ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹೇಳಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಪ್ರಾಥಮಿಕ ಆರೋಪ ಪಟ್ಟಿಯಲ್ಲಿ ಈ ಮಾಹಿತಿಗಳು ಇವೆ. ‘ಈ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಇ.ತುಕಾರಾಂ ಅವರ ಪರವಾಗಿ ಮತ ಚಲಾಯಿಸುವಂತೆ ಓಲೈಸಲು ಮತದಾರರಿಗೆ ತಲಾ ₹200 ಹಂಚಲಾಗಿದೆ’ ಎಂದು ಆರೋಪ ಪಟ್ಟಿ ವಿವರಿಸಿದೆ.

‘ಬಳ್ಳಾರಿ ಲೋಕಸಭಾ ಕ್ಷೇತ್ರದ ಮತಗಟ್ಟೆಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಒಟ್ಟು ₹72 ಲಕ್ಷ ಹಂಚಲಾಗಿದೆ. ಮತದಾನದ ವೇಳೆ ಮತಗಟ್ಟೆಯಲ್ಲಿ ಕೆಲಸ ನಿರ್ವಹಿಸಿದ ಕಾರ್ಯಕರ್ತರಿಗೆ ತಲಾ ₹10,000 ವೆಚ್ಚ ಮಾಡಲಾಗಿದೆ’ ಎಂಬ ವಿವರ ಆರೋಪ ಪಟ್ಟಿಯಲ್ಲಿದೆ.

‘ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ, ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಅವರ ಆಪ್ತ ಸಹಾಯಕ ವಿಜಯ್ ಕುಮಾರ್ ಗೌಡ ವಿಚಾರಣೆ ವೇಳೆ ಈ ಬಗ್ಗೆ ಮಾಹಿತಿ ನೀಡಿದ್ದರು. ನಾಗೇಂದ್ರ ಅಣತಿಯಂತೆ ಕಾಂಗ್ರೆಸ್‌ನವರಾದ ಬಳ್ಳಾರಿ ನಗರ ಕ್ಷೇತ್ರದ ಶಾಸಕ ನಾರಾ ಭರತ್ ರೆಡ್ಡಿ, ಕಂಪ್ಲಿಯ ಶಾಸಕ ಗಣೇಶ್ ಮತ್ತು ಕೂಡ್ಲಿಗಿಯ ಶಾಸಕ ಎನ್. ಟಿ.ಶ್ರೀನಿವಾಸಗೆ ಹಣ ನೀಡಲಾಗಿತ್ತು’ ಎಂದು ಆರೋಪ ಪಟ್ಟಿ ಉಲ್ಲೇಖಿಸಿದೆ.

‘ಯಾರಿಗೆ ಹಣ ಹಂಚಲಾಗಿದೆ ಎಂಬುದರ ದಾಖಲೆಗಳು ವಿಜಯ್ ಕುಮಾರ್ ಮೊಬೈಲ್ ಮತ್ತು ಮನೆಯಲ್ಲಿ ದೊರೆತಿದ್ದವು. ಬಳ್ಳಾರಿ ನಗರ, ಕಂಪ್ಲಿ ಮತ್ತು ಕೂಡ್ಲಿಗಿ ವಿಧಾನಸಭಾ ಕ್ಷೇತ್ರಗಳ ಮತದಾರರ ಚೀಟಿಯ ಪಟ್ಟಿಗಳು ದೊರೆತಿದ್ದವು. ಉಳಿದ ವಿಧಾನಸಭಾ ಕ್ಷೇತ್ರಗಳ ಮತಗಟ್ಟೆಗಳ ಪೈಕಿ ಕೆಲವುಗಳ ಮತದಾರರ ಪಟ್ಟಿ ದೊರೆತಿದ್ದವು. ಹೀಗೆ 14 ಲಕ್ಷ ಮತದಾರರ ವಿವರ ಲಭ್ಯವಾಗಿದ್ದು, ಅವುಗಳಲ್ಲಿ 7.40 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರಿನ ಮುಂದೆ ‘200’ ಮತ್ತು ‘ರೈಟ್’ ಎಂದು ಗುರುತು ಮಾಡಲಾಗಿದೆ’ ಎಂದು ಇ.ಡಿ ಮೂಲಗಳು ಮಾಹಿತಿ ನೀಡಿವೆ.

‘ನಿಗಮದಿಂದ ದೋಚಲಾದ ಹಣದಲ್ಲಿ ₹20 ಕೋಟಿಯನ್ನು ಬಳ್ಳಾರಿ ಲೋಕಸಭಾ ಕ್ಷೇತ್ರದ ಚುನಾವಣೆಗೆ ವೆಚ್ಚ ಮಾಡಲಾಗಿದೆ. ಮತದಾರರಿಗೆ ಮತ್ತು ಕಾರ್ಯಕರ್ತರಿಗೆ ಒಟ್ಟು ₹15.52 ಕೋಟಿ ನೀಡಲಾಗಿದೆ. ಸುಮಾರು ₹4 ಕೋಟಿಯನ್ನು ಮದ್ಯ ಖರೀದಿಗೆ ಮತ್ತು ಸುಮಾರು ₹50 ಲಕ್ಷವನ್ನು ಓಡಾಟಕ್ಕೆ ವೆಚ್ಚ ಮಾಡಲಾಗಿದೆ’ ಎಂದು ಇ.ಡಿ ಮೂಲಗಳು ತಿಳಿಸಿವೆ.

ಈ ಪ್ರಕರಣ ಪತ್ತೆಯಾಗುತ್ತಿದ್ದಂತೆ ರಾಜಕೀಯ ವಾಕ್ಸಮರ ಜೋರಾಗಿತ್ತು. ಸಚಿವ ಸ್ಥಾನದಿಂದ ನಾಗೇಂದ್ರ ಅವರನ್ನು ಕೈಬಿಡುವಂತೆ ಬಿಜೆಪಿ–ಜೆಡಿಎಸ್ ಪಕ್ಷಗಳು ಆಗ್ರಹಿಸಿದ್ದವು. ಏತನ್ಮಧ್ಯೆ, ಪ್ರಕರಣದ ತನಿಖೆಗಾಗಿ ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿತ್ತು. ಈ ಬೆಳವಣಿಗೆ ಬೆನ್ನಲ್ಲೇ, ಸಚಿವ ಸ್ಥಾನಕ್ಕೆ ನಾಗೇಂದ್ರ ರಾಜೀನಾಮೆ ನೀಡಿದ್ದರು. ಅವರನ್ನು ವಿಚಾರಣೆಗೆ ಒಳಪಡಿಸಿದ್ದ ಇ.ಡಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು. ಸೋಮವಾರವಷ್ಟೇ ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ ಹಲವು ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ.

ಬಿಜೆಪಿಯ ಬಿ.ಶ್ರೀರಾಮುಲು ವಿರುದ್ಧ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ಇ.ತುಕಾರಾಂ, 7.30 ಲಕ್ಷ ಮತ ಪಡೆದು ಗೆಲುವು ಸಾಧಿಸಿದ್ದರು.

ಮುಖ್ಯಾಂಶಗಳು

- ಕಾಂಗ್ರೆಸ್‌ನ ಇ.ತುಕಾರಾಂ ಪರ ಮತ ಹಾಕಿಸಲು ಹಣ
- ಶಾಸಕರಾದ ಭರತ್ ರೆಡ್ಡಿ, ಕಂಪ್ಲಿ ಗಣೇಶ್, ಶ್ರೀನಿವಾಸ್ ಹೆಸರು ಉಲ್ಲೇಖ
- ಕಾರ್ಯಕರ್ತರಿಗೆ, ಮದ್ಯ ಖರೀದಿಗೆ, ಓಡಾಟ ವೆಚ್ಚಕ್ಕೂ ಬಳಕೆ

‘ಮನೆಗೆಲಸದವರಿಗೆ ವೇತನ’



ಬಿ.ನಾಗೇಂದ್ರ

‘ವಾಲ್ಮೀಕಿ ನಿಗಮದಿಂದ ದೋಚಲಾದ ಹಣವನ್ನು ನಾಗೇಂದ್ರ ಅವರು ತಮ್ಮ ವೈಯಕ್ತಿಕ ವೆಚ್ಚಗಳಿಗೂ ಬಳಸಿಕೊಂಡಿದ್ದಾರೆ’ ಎಂದು ಇ.ಡಿ ಮೂಲಗಳು ಹೇಳಿವೆ.

‘ಇದೇ ಹಣದಲ್ಲಿ ನಾಗೇಂದ್ರ ಮತ್ತು ಕುಟುಂಬದವರು ಹಲವು ಬಾರಿ ವಿಮಾನದ ಟಿಕೆಟ್ ಖರೀದಿಸಿದ್ದಾರೆ. ಮನೆಗೆಲಸದವರಿಗೆ ವೇತನ, ವಾಹನಗಳಿಗೆ ಡೀಸೆಲ್ ಖರೀದಿ, ಸರ್ವಿಸ್ ಶುಲ್ಕ ಮತ್ತು ಮನೆಯ ವಿದ್ಯುತ್ ಶುಲ್ಕವನ್ನೂ ಇದೇ ಹಣದಲ್ಲಿ ಭರಿಸಲಾಗಿದೆ. ಇದನ್ನು ದೃಢೀಕರಿಸುವ ಸಾಕ್ಷ್ಯಗಳು ಲಭ್ಯವಾಗಿದ್ದು, ಈಗಾಗಲೇ ಅವನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

₹97 ಕೋಟಿ ವಹಿವಾಟು ●ಆಕ್ಸಿಸ್‌ನ ನಾಲ್ವರು ಸೇರಿ ಎಂಟು ಮಂದಿ ಬಂಧನ

ಟ್ರೇಡಿಂಗ್ ವಂಚನೆ: ಬ್ಯಾಂಕ್ ನೌಕರರು ಶಾಮೀಲು

ಪ್ರಜಾವಾಣಿ ವಾರ್ತೆ




ಕಿಶೋರ್ ಸಾಹು



ಕಾರ್ತಿಕ್



ರಾಕೇಶ್



ಲಕ್ಷ್ಮಿಕಾಂತ್



ಕೆಂಗೇಗೌಡ



ಮನೋಹರ್



ಮಾಲಾ



ರಘುರಾಜ್

ಬೆಂಗಳೂರು: ಷೇರುಪೇಟೆ ವಹಿವಾಟಿನಲ್ಲಿ ಹಣ ಹೂಡಿದರೆ ದುಪ್ಪಟ್ಟು ವಾಪಸ್ ನೀಡುವುದಾಗಿ ಆಮಿಷವೊಡ್ಡಿ ವಂಚಿಸುತ್ತಿದ್ದ ಜಾಲವನ್ನು ಪತ್ತೆ ಹಚ್ಚಿರುವ ಸಿಸಿಬಿ ಪೊಲೀಸರು, ಆಕ್ಸಿಸ್ ಬ್ಯಾಂಕ್‌ನ ನಾಲ್ವರು ನೌಕರರೂ ಸೇರಿ ಎಂಟು ಮಂದಿಯನ್ನು ಬಂಧಿಸಿದ್ದಾರೆ.

ಆಕ್ಸಿಸ್ ಬ್ಯಾಂಕ್‌ನ ನಾಗರಬಾವಿ ಶಾಖೆಯ ವ್ಯವಸ್ಥಾಪಕ ಕಿಶೋರ್ ಸಾಹು, ಮಾರಾಟ ವಿಭಾಗದ ವ್ಯವಸ್ಥಾಪಕ ಮನೋಹರ್, ಮಾರಾಟ ವಿಭಾಗದ ಪ್ರತಿನಿಧಿಗಳಾದ ಕಾರ್ತಿಕ್, ರಾಕೇಶ್ ಹಾಗೂ ಚಿಕ್ಕಮಗಳೂರಿನ ಲಕ್ಷ್ಮಿಕಾಂತ್, ರಘುರಾಜ್, ಕೆಂಗೇಗೌಡ, ಮಾಲಾ ಬಂಧಿತರು.

ಪ್ರಕರಣದ ಪ್ರಮುಖ ಆರೋಪಿ ಸೇರಿ ಒಂಬತ್ತು ಮಂದಿ ತಲೆಮರೆಸಿಕೊಂಡಿದ್ದು ಅವರಿಗೆ ಶೋಧ ನಡೆಸಲಾಗುತ್ತಿದೆ. ಯಲಹಂಕದ ನಿವಾಸಿಯೊಬ್ಬರಿಗೆ ಆಮಿಷವೊಡ್ಡಿದ್ದ ಆರೋಪಿಗಳು ₹1.5 ಕೋಟಿ ವಂಚಿಸಿದ್ದರು.

‘ಹಣ ಕಳೆದುಕೊಂಡಿದ್ದ ವ್ಯಕ್ತಿ ನೀಡಿದ ದೂರು ಆಧರಿಸಿ, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು. ಆರೋಪಿಗಳು ತೆರೆದಿದ್ದ ಬ್ಯಾಂಕ್ ಖಾತೆಗಳಲ್ಲಿದ್ದ ₹ 28 ಲಕ್ಷದ ವಹಿವಾಟು ಸ್ಥಗಿತಗೊಳಿಸಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

‘ಯಲಹಂಕದ ವ್ಯಕ್ತಿಗೆ ಆಮಿಷವೊಡ್ಡಿ ಅವರಿಂದ ₹50 ಸಾವಿರ ಕಟ್ಟಿಸಿಕೊಂಡಿದ್ದರು. ಆರಂಭದಲ್ಲಿ ಆ ಹಣವನ್ನು ವಿಐಪಿ ಟ್ರೇಡಿಂಗ್ ಖಾತೆಗೆ ಜಮೆ ಮಾಡಲಾಗಿತ್ತು. ಕೆಲವು ದಿನಗಳ ಬಳಿಕ ಹಣ ದ್ವಿಗುಣ ಆಗಿರುವುದಾಗಿ ಸಂದೇಶ ಬಂದಿತ್ತು. ನಂತರ, ಪದೇ ಪದೇ ಕರೆ ಮಾಡುತ್ತಿದ್ದ ಆರೋಪಿಗಳು, ಮತ್ತಷ್ಟು ಹೂಡಿಕೆ ಮಾಡುವಂತೆ ಒತ್ತಡ ಹೇರುತ್ತಿದ್ದರು. ದೂರುದಾರ ಮಾರ್ಚ್‌ನಿಂದ ಜೂನ್‌ವರೆಗೆ ಒಟ್ಟು ₹1.5 ಕೋಟಿ ಹೂಡಿಕೆ ಮಾಡಿದ್ದರು’ ಎಂದು ಮಾಹಿತಿ ನೀಡಿದರು.

₹75 ಲಕ್ಷ ಪಾವತಿಸಿದರೆ ₹28 ಕೋಟಿ: ‘ವಿಐಪಿ ಟ್ರೇಡಿಂಗ್ ಖಾತೆಯಲ್ಲಿ ಹೂಡಿಕೆ ಮಾಡಿದ್ದ ಹಣವು ₹28 ಕೋಟಿಗೆ ಏರಿಕೆ ಆಗಿದೆ ಎಂಬುದಾಗಿ ವಾಟ್ಸ್‌ಆ್ಯಪ್‌ನಲ್ಲಿ ಆರೋಪಿಗಳು ತೋರಿಸಿದ್ದರು. ಆ ಹಣವನ್ನು ವಾಪಸ್ ಪಡೆಯಲು ನಿರ್ವಹಣೆ ಶುಲ್ಕವಾಗಿ ₹75 ಲಕ್ಷ ಪಾವತಿಸಬೇಕು. ಅಷ್ಟು ಹಣ ನೀಡಿದರಷ್ಟೇ ₹28 ಕೋಟಿಯನ್ನು ವಾಪಸ್ ಪಡೆದುಕೊಳ್ಳಬಹುದು ಎಂದು ಆರೋಪಿಗಳು ತಾಕೀತು ಮಾಡಿದ್ದರು. ಆರೋಪಿಗಳ ಆಮಿಷದ ಬಗ್ಗೆ ಅನುಮಾನಗೊಂಡ ವ್ಯಕ್ತಿ ದೂರು ನೀಡಿದ್ದರು’ ಎಂದು ಹೇಳಿದರು.

‘ಪ್ರಕರಣದ ತನಿಖೆ ನಡೆಸಿದ್ದ ಸಿಸಿಬಿ ಪೊಲೀಸರು, ದೂರುದಾರರು ಹೂಡಿಕೆ ಮಾಡಿದ್ದ ಖಾತೆಗಳ ವಿವರವನ್ನು ಪಡೆದುಕೊಂಡಿದ್ದರು. ಅದರಲ್ಲಿ ಎರಡು ಖಾತೆಗಳು ನಾಗರಬಾವಿ ಆಕ್ಸಿಸ್ ಬ್ಯಾಂಕ್ ಶಾಖೆಯಲ್ಲಿದ್ದವು. ಚಿಕ್ಕಮಗಳೂರಿನ ವ್ಯಕ್ತಿಗಳ ಹೆಸರಿನಲ್ಲಿ ಆ ಖಾತೆಗಳಿದ್ದವು. ಬ್ಯಾಂಕ್ ವ್ಯವಸ್ಥಾಪಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಯಾವುದೇ ದಾಖಲೆ ಪಡೆಯದೇ ಖಾತೆಗಳನ್ನು ಮಾಡಿಕೊಟ್ಟಿರುವುದು ಗೊತ್ತಾಗಿತ್ತು. ಆರೋಪಿಗಳು ಸ್ಥಳೀಯರು ಅಲ್ಲ ಎಂಬುದೂ ದೃಢಪಟ್ಟಿತ್ತು. ತನಿಖೆ ಮುಂದುವರಿಸಿದಾಗ ಅದೇ ರೀತಿ ಇನ್ನೂ ನಾಲ್ಕು ಖಾತೆಗಳನ್ನು ತೆರೆದಿರುವುದು ಗೊತ್ತಾಯಿತು. ಇದೇ ಬ್ಯಾಂಕ್‌ನಲ್ಲಿ ಆರು ಖಾತೆಗಳಲ್ಲಿ ಒಟ್ಟು ₹97 ಕೋಟಿ ವಹಿವಾಟು ನಡೆಸಿರುವುದು ಪತ್ತೆಯಾಗಿದೆ. ಇದರಲ್ಲಿ ಎಷ್ಟು ವಂಚನೆ ನಡೆದಿದೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ’ ಎಂದು ದಯಾನಂದ ಮಾಹಿತಿ ನೀಡಿದರು.

‘ಈ ಅಕ್ರಮದಲ್ಲಿ ಬ್ಯಾಂಕ್ ವ್ಯವಸ್ಥಾಪಕ ಸೇರಿದಂತೆ ನಾಲ್ವರು ಶಾಮೀಲಾಗಿರುವುದು ತನಿಖೆಯಿಂದ ದೃಢಪಟ್ಟಿದೆ. ಬ್ಯಾಂಕ್‌ನ ನಾಲ್ವರು ನೌಕರರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿದೆ’ ಎಂದು ತಿಳಿಸಿದರು.

254 ಪ್ರಕರಣ ದಾಖಲು

‘ಬಂಧಿತರಾಗಿರುವ ಚಿಕ್ಕಮಗಳೂರಿನ ನಾಲ್ವರು ಆರೋಪಿಗಳಿಗೆ ತಲೆಮರೆಸಿಕೊಂಡಿರುವ ಒಬ್ಬ ಆರೋಪಿ ನಾಗರಬಾವಿ ಬ್ಯಾಂಕ್ ಶಾಖೆಯಲ್ಲಿ ಖಾತೆ ಮಾಡಿಸಿಕೊಟ್ಟಿದ್ದ. ವಂಚನೆ ಕೃತ್ಯದಲ್ಲಿ ತೊಡಗಿಸಿಕೊಂಡರೆ ಕಮಿಷನ್ ನೀಡುವುದಾಗಿ ಆಮಿಷವೊಡ್ಡಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಕಮಿಷನರ್ ಮಾಹಿತಿ ನೀಡಿದರು.

‘ಆರೋಪಿತರ ಬ್ಯಾಂಕ್ ಖಾತೆ ಪರಿಶೀಲಿಸಿದಾಗ ಎನ್‌ಸಿಆರ್ ಪೋರ್ಟಲ್‌ನಲ್ಲಿ ವಂಚಕರ ವಿರುದ್ಧ 254 ಪ್ರಕರಣ ದಾಖಲಾಗಿದ್ದು, ಕೋಟ್ಯಂತರ ವ್ಯವಹಾರ ನಡೆಸಿರುವುದು ಗೊತ್ತಾಗಿದೆ. ದೇಶದ ವಿವಿಧ ರಾಜ್ಯಗಳಲ್ಲಿ ಆರೋಪಿಗಳು ಈ ಜಾಲವನ್ನು ವಿಸ್ತರಿಸಿಕೊಂಡಿದ್ದರು’ ಎಂದು ಹೇಳಿದರು.

ಜನರನ್ನು ಶೋಷಿಸಲು ಪಣ ತೊಟ್ಟ ರಾಜ್ಯ: ‘ಸುಪ್ರೀಂ’ ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ 5, 8 ಮತ್ತು 9ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆ ನಡೆಸಲು ಕರ್ನಾಟಕ ಸರ್ಕಾರಕ್ಕೆ ಅನುಮತಿಯಿಲ್ಲ ಎಂದಿರುವ ಸುಪ್ರೀಂಕೋರ್ಟ್, ‘ಜನರನ್ನು ಶೋಷಣೆ ಮಾಡಲು ರಾಜ್ಯ ಸರ್ಕಾರ ಪಣ ತೊಟ್ಟಿರುವುದು ಏಕೆ’ ಎಂದು ಮಂಗಳವಾರ ಪ್ರಶ್ನಿಸಿದೆ.

8, 9 ಮತ್ತು 10 ನೇ ತರಗತಿಗಳ 2024–25ನೇ ಸಾಲಿನ ವೇಳಾಪಟ್ಟಿಗೆ ಸಂಬಂಧಿಸಿದಂತೆ ಪರೀಕ್ಷೆ ನಡೆಸಲು ಸೆ. 4 ಮತ್ತು 15ರಂದು ಹೊರಡಿಸಿದ ಆದೇಶವನ್ನು ಹಿಂಪಡೆಯಲಾಗಿದೆ ಎಂದು ರಾಜ್ಯ ಸರ್ಕಾರವು ನ್ಯಾಯಾಲಯಕ್ಕೆ ಹೇಳಿಕೆ ನೀಡಿತು. ನಂತರ ನ್ಯಾಯ ಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮ ಅವರಿದ್ದ ವಿಭಾಗೀಯ ಪೀಠವು ಈ ಸಂಬಂಧ ಮಾಹಿತಿ ಪಡೆಯುವಂತೆ ಅರ್ಜಿದಾರರ ವಕೀಲ ಕೆ.ವಿ.ಧನಂಜಯರ್‌ಗೆ ಸೂಚನೆ ನೀಡಿತು.

‘ಪ್ರಕರಣ ಸಂಬಂಧ ನ್ಯಾಯಾಂಗ ನಿಂದನೆ ಅರ್ಜಿ ದಾಖಲಾಗುವ ಮೊದಲೇ ಸರ್ಕಾರ ಅಧಿಸೂಚನೆಯನ್ನು ಹಿಂಪಡೆದಿದೆ. ಯಾವುದಾದರೂ ಪರೀಕ್ಷೆ ನಡೆದಿದ್ದರೂ ಕೂಡ, ಅದರ ಫಲಿತಾಂಶ ಪ್ರಕಟಿಸುವುದಿಲ್ಲ’ ಎಂದು ಕರ್ನಾಟಕ ಸರ್ಕಾರದ ಪರವಾಗಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಾಲಯಕ್ಕೆ ಸ್ಪಷ್ಟಪಡಿಸಿದರು.


ಆದರೆ, ಅರ್ಜಿದಾರರ ಪರ ವಕೀಲರು, ‘ಮಧ್ಯಂತರ ತಡೆಯಾಜ್ಞೆ ಇದ್ದರೂ ಕರ್ನಾಟಕ ಸರ್ಕಾರವು ಪರೀಕ್ಷೆಗಳನ್ನು ನಡೆಸಿದೆ. ಈ ಸಂಬಂಧ ಫಲಿತಾಂಶ ಪ್ರಕಟಿಸಬೇಕಾದಲ್ಲಿ ಪೋಷಕರಿಗೆ ಮಾಹಿತಿ ನೀಡಬೇಕು’ ಎಂದರು.

ಆಗ ನ್ಯಾಯಪೀಠ, ‘ರಾಜ್ಯ ಸರ್ಕಾರವು ಜನರನ್ನು ಶೋಷಣೆ ಮಾಡಲು ಪಣ ತೊಟ್ಟಿದೆಯೇಕೆ. ಇಲ್ಲಿ ಅಹಂನ ಪ್ರಶ್ನೆ ಎದುರಾಗುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿತು.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 5,8 ಹಾಗೂ 9 ನೇ ತರಗತಿಗೆ ಬೋರ್ಡ್ ಪರೀಕ್ಷೆಗಳನ್ನು ನಡೆಸುವ ಪ್ರಸ್ತಾವನೆಯ ಕುರಿತು ಮಾಹಿತಿ ಇರುವುದಾಗಿ ತಿಳಿಸಿದ ನ್ಯಾಯಪೀಠ, ನ್ಯಾಯಾಲಯದ ಆದೇಶ ಉಲ್ಲಂಘಿಸುವಂತಹ ಯಾವುದೇ ಹೆಜ್ಜೆ ಇಡದಂತೆ ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿತು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಲಗ್ಗೆ ಇಡಲಿದೆ ದೇಸಿ ಭಾಷೆಗಳಲ್ಲಿ ಕೃತಕ ಬುದ್ಧಿಮತ್ತೆ



ಆಳ–ಅಗಲ
ಒಂದು ಹತ್ಯೆ, ಎರಡು ದೇಶಗಳ ಕಲಹ
ಎನ್‌ಸಿಪಿ ನಾಯಕ ಸಿದ್ದೀಕಿ ಹತ್ಯೆ ಪ್ರಕರಣ: ಮತ್ತೊಬ್ಬನ ಬಂಧನ 7
ಕಾನೂನು ಸಮರ; 'ಶಿಕ್ಷಕಿ' ಹುದ್ದೆ ಅತಂತ್ರ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,820	25,057	₹79,720 (ಬೆಂಗಳೂರು)	₹94,500 (ಬೆಂಗಳೂರು)	84.04

ಮಹಾರಾಷ್ಟ್ರ–ಜಾರ್ಖಂಡ್ ಚುನಾವಣಾ ವೇಳಾಪಟ್ಟಿ ಪ್ರಕಟ • ಉಪಚುನಾವಣೆಗೂ ದಿನ ನಿಗದಿ

'ಮಹಾ' ಚುನಾವಣೆಗೆ ಅಖಾಡ ಸಜ್ಜು

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾರಾಷ್ಟ್ರ ಹಾಗೂ ಜಾರ್ಖಂಡ್ ರಾಜ್ಯಗಳ ವಿಧಾನಸಭಾ ಚುನಾವಣೆಗೆ ಭಾರತೀಯ ಚುನಾವಣಾ ಆಯೋಗವು ಮುಹೂರ್ತ ನಿಗದಿ ಮಾಡಿದೆ. ಮಹಾರಾಷ್ಟ್ರದಲ್ಲಿ ನವೆಂಬರ್ 20ರಂದು ಮತದಾನ ನಡೆಯಲಿದೆ. ಜಾರ್ಖಂಡ್‌ನಲ್ಲಿ ಎರಡು ಹಂತಗಳಲ್ಲಿ (ನವೆಂಬರ್ 13 ಹಾಗೂ 20)ಮತದಾನ ಜರುಗಲಿದೆ.

ಮತ ಎಣಿಕೆ ನವೆಂಬರ್ 23ರಂದು ನಡೆಯಲಿದೆ.

ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಮಂಗಳವಾರ ಇಲ್ಲಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದರು. 'ಕರ್ನಾಟಕದ ಮೂರು ಸೇರಿದಂತೆ ವಿವಿಧ ರಾಜ್ಯಗಳ 47 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಹಾಗೂ ರಾಹುಲ್ ಗಾಂಧಿ ರಾಜೀನಾಮೆಯಿಂದ ತೆರವಾಗಿರುವ ವಯನಾಡ್ ಲೋಕಸಭಾ ಕ್ಷೇತ್ರದ ಉಪಚುನಾವಣೆ ನವೆಂಬರ್ 13ರಂದು ಜರುಗಲಿದೆ.

6ನೇ ಪುಟ ನೋಡಿ

ಮಹಾರಾಷ್ಟ್ರ

288 ಒಟ್ಟು ಕ್ಷೇತ್ರಗಳು
9.63 ಕೋಟಿ ಒಟ್ಟು ಮತದಾರರು
4.66 ಕೋಟಿ ಮಹಿಳೆಯರು
ಮತದಾನ ದಿನ 20 ನವೆಂಬರ್

ಮತಎಣಿಕೆ: ನವೆಂಬರ್ 23

ಜಾರ್ಖಂಡ್

81 ಒಟ್ಟು ಕ್ಷೇತ್ರಗಳು
2.6 ಕೋಟಿ ಒಟ್ಟು ಮತದಾರರು
1.29 ಕೋಟಿ ಮಹಿಳೆಯರು
ಮತದಾನ ದಿನ 13 & 20 ನವೆಂಬರ್

3 ಕ್ಷೇತ್ರ: ಮೂವರಿಗೂ ಸವಾಲು

ಬೆಂಗಳೂರು: ಮೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ರಾಜ್ಯದ ಮೂರೂ ರಾಜಕೀಯ ಪಕ್ಷಗಳಿಗೆ ಪ್ರತಿಷ್ಠೆಯ ಕಣವಾಗಿದ್ದು, ಪ್ರತಿನಿಧಿಸಿದ್ದ ಕ್ಷೇತ್ರದಲ್ಲಿ ಮತ್ತೆ ಗೆಲ್ಲುವ ಹಾಗೂ ಮತ್ತೊಬ್ಬರಿಂದ ಕಿತ್ತುಕೊಳ್ಳುವ ಹಣಾಹಣಿಗೆ ವೇದಿಕೆಯಾಗಲಿದೆ.

ಸಂಸದರಾಗಿ ಆಯ್ಕೆಯಾಗಿದ್ದ ಎಚ್.ಡಿ.ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ ಮತ್ತು ತುಕಾರಾಂ ಅವರು ರಾಜೀನಾಮೆ ನೀಡಿದ್ದರಿಂದ ಈ ಉಪ ಚುನಾವಣೆ ಎದುರಾಗಿದೆ. ಚನ್ನಪಟ್ಟಣ (ಜೆಡಿಎಸ್), ಶಿಗ್ಗಾವಿ (ಬಿಜೆಪಿ) ಹಾಗೂ ಸಂಡೂರು (ಕಾಂಗ್ರೆಸ್) ಕ್ಷೇತ್ರಗಳಿಗೆ ನವೆಂಬರ್ 13ರಂದು ಮತದಾನ ನಡೆಯಲಿದೆ.

ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಈಗಾಗಲೇ ತಯಾರಿ ನಡೆಸಿವೆ. ಜೆಡಿಎಸ್ ವಶದಲ್ಲಿದ್ದ ಚನ್ನಪಟ್ಟಣ ಕ್ಷೇತ್ರವನ್ನು ತೆಕ್ಕೆಗೆ ತೆಗೆದುಕೊಳ್ಳಲು ಮೈತ್ರಿಕೂಟದ ಪಕ್ಷಗಳಾದ ಬಿಜೆಪಿ–ಜೆಡಿಎಸ್ ಮಧ್ಯೆಯೇ ಪೈಪೋಟಿ ಎದುರಾಗಿದೆ.

6ನೇ ಪುಟ ನೋಡಿ

ಉಪಚುನಾವಣೆಯನ್ನು ಎದುರಿಸಲು ಕಾಂಗ್ರೆಸ್ ಪಕ್ಷ ಎಲ್ಲ ಸಿದ್ಧತೆ ಮಾಡಿಕೊಂಡಿದೆ. ಚುನಾವಣೆಯನ್ನು ಸಮರ್ಥವಾಗಿ ಎದುರಿಸಲಿದ್ದೇವೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಉಪಸಮರವು ರಾಜ್ಯದ ಅಭಿವೃದ್ಧಿ ಕಡೆಗಣಿಸಿದ ಕಾಂಗ್ರೆಸ್ ಸರ್ಕಾರಕ್ಕೆ ಪಾಠ ಕಲಿಸಲಿದೆ. ಜನವಿರೋಧಿ ಆಡಳಿತದ ವಿರುದ್ಧ ಜನಾದೇಶ ವ್ಯಕ್ತವಾಗಲಿದೆ
ಬಿ.ವೈ.ವಿಜಯೇಂದ್ರ
ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ನಿಜ್ಜರ್ ಹತ್ಯೆ– ಬಿಷ್ಣೋಯಿ ಗ್ಯಾಂಗ್ ನಂಟು: ಆರೋಪ ತಳ್ಳಿಹಾಕಿದ ಭಾರತ

ಭಾರತ–ಕೆನಡಾ ಬಿಕ್ಕಟ್ಟು ತಾರಕಕ್ಕೆ

ನವದೆಹಲಿ (ಪಿಟಿಐ): ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತ–ಕೆನಡಾ ನಡುವೆ ಉಂಟಾಗಿರುವ ರಾಜತಾಂತ್ರಿಕ ಬಿಕ್ಕಟ್ಟು ಮಂಗಳವಾರ ತೀವ್ರ ಸ್ವರೂಪ ಪಡೆದುಕೊಂಡಿದೆ.

'ಭಾರತ ಸರ್ಕಾರದ ಏಜೆಂಟ್‌ಗಳು ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಜತೆ ಸೇರಿಕೊಂಡು ನಮ್ಮ ನೆಲದಲ್ಲಿ ರಹಸ್ಯ ಕಾರ್ಯಾಚರಣೆಗಳನ್ನು ನಡೆಸುತ್ತಿವೆ' ಎಂದು ಕೆನಡಾ ಮಾಡಿರುವ ಆರೋಪವನ್ನು ಭಾರತ, ಸಾರಾಸಗಟಾಗಿ ತಳ್ಳಿಹಾಕಿದೆ.

ಭಾರತವು ರಾಜತಾಂತ್ರಿಕರನ್ನು ಬಳಸಿಕೊಂಡು ಸಂಘಟಿತ ಅಪರಾಧಗಳನ್ನು ನಡೆಸುವ ಮೂಲಕ ಕೆನಡಾ ಪ್ರಜೆಗಳಿಗೆ ತವರು ನೆಲದಲ್ಲೇ ಅಸುರಕ್ಷತೆಯ ಭಾವನೆ ಮೂಡುವಂತೆ ಮಾಡುತ್ತಿದೆ ಎಂದು ಅಲ್ಲಿನ ಪ್ರಧಾನಿ ಜಸ್ಟಿನ್ ಟ್ರುಡೊ ದೂರಿದ್ದಾರೆ.

10ನೇ ಪುಟ ನೋಡಿ

ನಿರ್ಬಂಧ: ಕೆನಡಾ ಚಿಂತನೆ

ಈ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಭಾರತದ ವಿರುದ್ಧ ನಿರ್ಬಂಧ ಹೇರುವ ಸುಳಿವನ್ನು ಕೆನಡಾ ವಿದೇಶಾಂಗ ಸಚಿವೆ ಮೆಲಾನಿ ಜೋಲಿ ನೀಡಿದ್ದಾರೆ.

ಭಾರತದ ಮೇಲೆ ನಿರ್ಬಂಧ ಹೇರುವ ಯೋಚನೆ ಇದೆಯೇ ಎಂಬ ಪ್ರಶ್ನೆಗೆ, 'ರಾಜತಾಂತ್ರಿಕರನ್ನು ದೇಶದಿಂದ ಹೊರಗೆ ಕಳುಹಿಸುವಂತಹ ಕಠಿಣ ನಿರ್ಧಾರ ತೆಗೆದುಕೊಂಡಿದ್ದೇವೆ. ಎಲ್ಲ ಆಯ್ಕೆಗಳೂ ನಮ್ಮ ಮುಂದಿವೆ' ಎಂದಿದ್ದಾರೆ. 'ಭಾರತದೊಂದಿಗೆ ರಾಜತಾಂತ್ರಿಕ ಸಂಘರ್ಷ ಬಯಸುವುದಿಲ್ಲ. ಪ್ರತಿ ವರ್ಷ ಕೆನಡಾದ ಸಾವಿರಾರು ಮಂದಿ ಭಾರತಕ್ಕೆ ಹೋಗುತ್ತಾರೆ. ಭಾರತದಿಂದ ಸಾಕಷ್ಟು ಜನರು ಕೆನಡಾಕ್ಕೂ ಬರುವರು. ಎರಡೂ ದೇಶಗಳ ಜನರ ನಡುವೆ ಆಳವಾದ ಸಂಬಂಧವಿದೆ. ನಿಜ್ಜರ್ ಹತ್ಯೆ ಪ್ರಕರಣದ ತನಿಖೆಗೆ ಸಹಕರಿಸುವಂತೆ ಭಾರತವನ್ನು ಕೇಳುತ್ತಲೇ ಇರುತ್ತೇವೆ. ಏಕೆಂದರೆ, ಈ ಪ್ರಕರಣದ ಸತ್ಯ ಹೊರಬರಬೇಕಿರುವುದು ಎರಡೂ ದೇಶಗಳ ಹಿತಾಸಕ್ತಿಗೆ ಸಂಬಂಧಿಸಿದ ವಿಚಾರ' ಎಂದಿದ್ದಾರೆ.

ಉದ್ಯಮಿ ಮನೆಯಲ್ಲಿ ಕಳ್ಳತನ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ



ಕೇಶವ ಪಾಟೀಲ್



ನಿತಿನ್ ಉತ್ತಮ್ ಕಾಳೆ

ಬೆಂಗಳೂರು: ನಗರದ ವಿಶ್ವೇಶ್ವರಪುರ ಪೊಲೀಸ್ ಠಾಣಾ ವ್ಯಾಪ್ತಿಯ ಉದ್ಯಮಿಯೊಬ್ಬರ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಕೇಶವ ಪಾಟೀಲ್ ಹಾಗೂ ಆತನ ಸ್ನೇಹಿತ ನಿತಿನ್ ಉತ್ತಮ್ ಕಾಳೆ ಬಂಧಿತರು. ಬಂಧಿತರಿಂದ 1 ಕೆ.ಜಿ. 579 ಗ್ರಾಂ. ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಇದರ ಮೌಲ್ಯ ₹1.22 ಕೋಟಿ ಎಂದು ಪೊಲೀಸರು ಹೇಳಿದರು.

ಕದ್ದಿದ್ದ ಚಿನ್ನಾಭರಣಗಳನ್ನು ಆರೋಪಿಗಳು ಸಂಬಂಧಿಕರು ಹಾಗೂ ಸ್ನೇಹಿತರ ಮನೆಯಲ್ಲಿ ಬಚ್ಚಿಡುತ್ತಿದ್ದರು ಎಂದು ಪೊಲೀಸರು ತಿಳಿಸಿದರು.

'ಉದ್ಯಮಿ ಮನೆಯಲ್ಲಿ ಆರೋಪಿ ಕೇಶವ ಪಾಟೀಲ್ ಕಾರು ಚಾಲಕನಾಗಿದ್ದ. ಆರು ತಿಂಗಳ ಹಿಂದೆ ಕೆಲಸ ಬಿಟ್ಟಿದ್ದ. ಮಾಲೀಕರ ಮನೆಯಲ್ಲಿ ಅಪಾರ ಹಣ ಹಾಗೂ ಚಿನ್ನ ಇರುವುದಾಗಿ ಸ್ನೇಹಿತ ನಿತಿನ್ ಕಾಳೆಗೆ ತಿಳಿಸಿದ್ದ. ಇಬ್ಬರೂ ಸೇರಿ ಕಳ್ಳತನ ಮಾಡಲು ಸಂಚು ರೂಪಿಸಿದ್ದರು' ಎಂದು ಪೊಲೀಸರು ಹೇಳಿದರು.

'ಕದ್ದ ಚಿನ್ನವನ್ನು ಅಮೃತಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ನೆಲಸಿದ್ದ ತನ್ನ ಮಾವ ಮೋಹನ್ ಮನೆಯಲ್ಲಿ ನಿತಿನ್ ಬಚ್ಚಿಟ್ಟಿದ್ದ. ಮೋಹನ್ ಮನೆ ಪರಿಶೀಲಿಸಿದಾಗ 650 ಗ್ರಾಂ. ಚಿನ್ನ ಪೊಲೀಸರಿಗೆ ಸಿಕ್ಕಿತ್ತು. ಇದರಿಂದ ಮೋಹನ್ ಆತಂಕಗೊಂಡಿದ್ದರು. ಪೊಲೀಸರು ತನ್ನನ್ನೂ ಬಂಧಿಸುತ್ತಾರೆ ಎನ್ನುವ ಭೀತಿಯಿಂದ ಚಾಕುವಿನಿಂದ ಕತ್ತು ಕೊಯ್ದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು' ಎಂದು ಮೂಲಗಳು ತಿಳಿಸಿವೆ.

ದ್ವಿಚಕ್ರ ವಾಹನಗಳ ಕಳವು: ಕಡಿವಾಣ ಹಾಕಲು ಪೊಲೀಸರ ಹರಸಾಹಸ • ಕದ್ದ ವಾಹನ ವಿಲೇವಾರಿಗೆ ನಾನಾ ಮಾರ್ಗ

ಎರಡೂವರೆ ವರ್ಷ: 13 ಸಾವಿರ ಬೈಕ್ ಕಳವು

• ಕೆ.ಎಸ್.ಸುನಿಲ್

ಬೆಂಗಳೂರು: ನಗರದಲ್ಲಿ ದ್ವಿಚಕ್ರ ವಾಹನಗಳ ಸಂಖ್ಯೆ ಹೆಚ್ಚುತ್ತಿದ್ದಂತೆ ಅವುಗಳ ಕಳವು ಪ್ರಕರಣಗಳೂ ಹೆಚ್ಚುತ್ತಿವೆ. ಎರಡೂವರೆ ವರ್ಷದಲ್ಲಿ 13 ಸಾವಿರಕ್ಕೂ ಅಧಿಕ ದ್ವಿಚಕ್ರ ವಾಹನಗಳನ್ನು ಕಳವು ಮಾಡಲಾಗಿದೆ. ದ್ವಿಚಕ್ರ ವಾಹನಗಳ ಕಳವು ನಿಯಂತ್ರಣ ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ.

ನಗರದಲ್ಲಿ ಸುಮಾರು 80 ಲಕ್ಷ ದ್ವಿಚಕ್ರ ವಾಹನಗಳಿವೆ. ನಿತ್ಯ ಸರಾಸರಿ ಒಂದೂವರೆ ಸಾವಿರದಿಂದ ಎರಡು ಸಾವಿರ ದ್ವಿಚಕ್ರ ವಾಹನಗಳು ಹೊಸದಾಗಿ ನೋಂದಣಿ ಅಗುತ್ತಿವೆ. ವಾಹನಗಳ ಸಂಖ್ಯೆ ಹೆಚ್ಚಿದ ವೇಗದಲ್ಲೇ ಕಳ್ಳತನ ಪ್ರಕರಣಗಳೂ ಏರಿಕೆಯಾಗುತ್ತಿವೆ.

ಪೊಲೀಸ್ ಇಲಾಖೆಯ ಮಾಹಿತಿ ಪ್ರಕಾರ, ನಗರದಲ್ಲಿ ನಿತ್ಯ ಸರಾಸರಿ 14ರಿಂದ 16 ದ್ವಿಚಕ್ರ ವಾಹನಗಳ ಕಳವು ಆಗುತ್ತಿದೆ. ಎರಡೂವರೆ ವರ್ಷದಲ್ಲಿ 13,628 ವಾಹನಗಳು ಕಳ್ಳತನವಾಗಿವೆ. ಪ್ರಸಕ್ತ ವರ್ಷ (ಆಗಸ್ಟ್ ಅಂತ್ಯಕ್ಕೆ) 3,263 ವಾಹನ ಕಳವಾಗಿವೆ. ಈ ಪೈಕಿ 779 ವಾಹನಗಳನ್ನು ಮಾತ್ರ ಪತ್ತೆ ಮಾಡಲಾಗಿದೆ.

ಎರಡೂವರೆ ವರ್ಷಗಳಲ್ಲಿ ಕಳವಾಗಿದ್ದ 13,628 ದ್ವಿಚಕ್ರ ವಾಹನಗಳಲ್ಲಿ 4,420 ವಾಹನಗಳನ್ನಷ್ಟೇ ಪೊಲೀಸರು ಪತ್ತೆ ಮಾಡಿದ್ದಾರೆ. ಈ ಎರಡೂವರೆ ವರ್ಷಗಳಲ್ಲಿ ಪತ್ತೆ ಪ್ರಮಾಣ ಶೇಕಡ 32ರಷ್ಟಿದೆ.

ಕದ್ದ ವಾಹನಗಳ ಭಾಗಗಳನ್ನು ಬೇರ್ಪಡಿಸಿ, ಎಂಜಿನ್ ಮತ್ತು ಚಾಸಿ ಸಂಖ್ಯೆಯನ್ನು ತಿರುಚಿ ಆನ್‌ಲೈನ್ ಮೂಲಕ ಮಾರಾಟ ಮಾಡಲಾಗುತ್ತಿದೆ. ಸರಗಳ್ಳತನ, ಮನೆ ಕಳವು, ದರೋಡೆ, ಕೊಲೆಯಂತಹ ಗಂಭೀರ ಅಪರಾಧ ಕೃತ್ಯಗಳಿಗೂ ಕದ್ದ ವಾಹನಗಳನ್ನೇ ಬಳಸುತ್ತಿರುವುದು ತನಿಖೆ ವೇಳೆ ಗೊತ್ತಾಗಿದೆ.

ರಸ್ತೆಬದಿ, ಪಾರ್ಕಿಂಗ್ ಸ್ಥಳ, ಶಾಪಿಂಗ್ ಮಾಲ್, ಉದ್ಯಾನ, ಬಸ್–ರೈಲು ನಿಲ್ದಾಣ, ಮನೆ–ಕಚೇರಿ ಮುಂದೆ ನಿಲ್ಲಿಸುತ್ತಿರುವ ದ್ವಿಚಕ್ರ ವಾಹನಗಳನ್ನೇ ಗುರಿಯಾಗಿಸಿ ಕಳವು ಮಾಡಲಾಗುತ್ತಿದೆ. ಈ ವಾಹನಗಳ ನೋಂದಣಿ ಸಂಖ್ಯೆ ಪ್ಲೇಟ್, ಎಂಜಿನ್ ನಂಬರ್ ಬದಲಿಸಿ, ನೆರೆಯ ತಮಿಳುನಾಡು, ಆಂಧ್ರಪ್ರದೇಶ, ಕೇರಳ ರಾಜ್ಯದಲ್ಲಿ ಮಾರಾಟ ಮಾಡುತ್ತಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಕಳ್ಳತನದ ವಿಧಾನ: ಹ್ಯಾಂಡಲ್ ಲಾಕ್ ಮುರಿದು ಕಳ್ಳತನ, ಒಎಲ್‌ಎಕ್ಸ್ ಜಾಹೀರಾತು ನೋಡಿ ಕಳವು, ಜಾಲಿ ರೈಡ್‌ಗಾಗಿ ಐಷಾರಾಮಿ ಬೈಕ್‌ಗಳ ಕಳ್ಳತನ, ಮಳೆ ಬರುವ ವೇಳೆ ಕಳ್ಳತನ... ಹೀಗೆ ಹತ್ತಾರು ನೆಪದಲ್ಲಿ ದ್ವಿಚಕ್ರ ವಾಹನಗಳ ಕಳ್ಳತನವಾಗುತ್ತಿವೆ.

ದುಶ್ಚಟಕ್ಕೆ ದಾಸರಾಗಿರುವವರು, ಅಪರಾಧ ಪ್ರಕರಣದಲ್ಲಿ ಜೈಲು ಸೇರಿ, ಜಾಮೀನಿನ ಮೇಲೆ ಹೊರ ಬಂದವರು, ಸಾಲ ತೀರಿಸಲು ಹಾಗೂ ವಿಲಾಸಿ ಜೀವನಕ್ಕೆ ಹಣ ಹೊಂದಿಸಲು ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿರುವುದು ತನಿಖೆ ಸಂದರ್ಭದಲ್ಲಿ ಗೊತ್ತಾಗಿದೆ.

ಮಳೆ ಸುರಿಯುವಾಗ ಜನರ ಓಡಾಟ ಕಡಿಮೆ ಇರುತ್ತದೆ ಎಂಬ ಕಾರಣಕ್ಕಾಗಿ ಅದೇ ಸಮಯದಲ್ಲಿ ದ್ವಿಚಕ್ರ ವಾಹನಗಳ ಕಳವು ಮಾಡುವುದನ್ನು ರೂಢಿ ಮಾಡಿಕೊಂಡಿದ್ದ ತಂಡವೊಂದನ್ನು ಈಚೆಗೆ ಪೊಲೀಸರು ಬಂಧಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುವ ವಾಹನಗಳ ಮಾರಾಟಕ್ಕೆ ಸಂಬಂಧಿಸಿದ ಜಾಹೀರಾತುಗಳನ್ನು ಗಮನಿಸಿ, ಟೆಸ್ಟ್ ಡ್ರೈವ್ ನೆಪದಲ್ಲಿ ವಾಹನ ಕದ್ದೊಯ್ದಿದ್ದವರೂ ಸಿಕ್ಕಿಬಿದ್ದಿದ್ದಾರೆ.

'ಎಂಜಿನಿಯರಿಂಗ್ ವಿದ್ಯಾರ್ಥಿಗಳಿಬ್ಬರು ದುಬಾರಿ ಬೆಲೆಯ ದ್ವಿಚಕ್ರ ವಾಹನಗಳನ್ನೇ ಗುರಿಯಾಗಿಸಿ ರಾತ್ರಿ ವೇಳೆ ಕಳ್ಳತನ ಮಾಡುತ್ತಿದ್ದರು. ಅವರಿಗಿದ್ದ ತಾಂತ್ರಿಕ ಜ್ಞಾನವನ್ನು ಇಂತಹ ಕೃತ್ಯಕ್ಕೆ ಬಳಕೆ ಮಾಡಿಕೊಂಡಿದ್ದರು' ಎಂದು ಪೊಲೀಸರು ಬೇಸರ ವ್ಯಕ್ತಪಡಿಸಿದರು.

'ಕೆಲ ಕಳ್ಳರು ಕಲರ್ ಪ್ರಿಂಟರ್ ಇಟ್ಟುಕೊಂಡು ನೋಂದಣಿ ಪ್ರಮಾಣ ಪತ್ರ, ವಿಮೆ ಸೇರಿದಂತೆ ಅಗತ್ಯ ದಾಖಲೆಗಳನ್ನು ಅನುಮಾನ ಬಾರದಂತೆ ಸೃಷ್ಟಿಸುತ್ತಿದ್ದರು. ಆರ್‌ಟಿಒ ನೀಡುವ ಸ್ಮಾರ್ಟ್ ಕಾರ್ಡ್‌ಗಳಂತೇ ನಕಲಿ ದಾಖಲೆಗಳು ಇರುತ್ತಿದ್ದವು. ಕಳ್ಳತನ ಮಾಡಿದ್ದ ವಾಹನಗಳ ಬಿಡಿಭಾಗಗಳನ್ನು ಬಿಚ್ಚಿ ಬೇರೊಂದು ವಾಹನಕ್ಕೆ ಜೋಡಿಸುತ್ತಿದ್ದರು. ಅಸಲಿ ಸ್ಟಿಕರ್ ಸಹ ಬದಲಾವಣೆ ಮಾಡುತ್ತಿದ್ದರು' ಎಂದು ತಿಳಿಸಿದ್ದಾರೆ.

'ಎಂಜಿನ್ ಮತ್ತು ಚಾಸಿ ಸಂಖ್ಯೆಯನ್ನು ತಿದ್ದುಪಡಿ ಮಾಡಿದ ನಂತರ ದ್ವಿಚಕ್ರ ವಾಹನಗಳ ಮಾರಾಟಕ್ಕೆ ಒಎಲ್‌ಎಕ್ಸ್ ನಲ್ಲಿ ಅಪ್‌ಲೋಡ್ ಮಾಡುತ್ತಿದ್ದರು. ಖರೀದಿಗೆ ಆಸಕ್ತಿ ತೋರಿದವರನ್ನು ಖುದ್ದು ಭೇಟಿ ಮಾಡಿ ನಕಲಿ ದಾಖಲೆಗಳನ್ನು ಅಸಲಿಯೆಂದು ತೋರಿಸುತ್ತಿದ್ದರು' ಎಂದು ಪೊಲೀಸರು ವಿವರಿಸಿದರು.

'ಎಚ್ಚರ ಅಗತ್ಯ': 'ದ್ವಿಚಕ್ರ ವಾಹನಗಳ ಕಳ್ಳತನ ತಡೆಗಟ್ಟಲು ಹಾಗೂ ದ್ವಿಚಕ್ರ ವಾಹನ ಸವಾರರ ಸುರಕ್ಷತೆಯ ದೃಷ್ಟಿಯಿಂದ ಅವುಗಳ ಮಾರಾಟದ ಸಂದರ್ಭದಲ್ಲಿಯೇ ಕೆಲವು ಕ್ರಮಗಳನ್ನು ಅನುಸರಿಸುವಂತೆ ತಯಾರಕರು ಹಾಗೂ ಮಾರಾಟಗಾರರಿಗೆ ಪತ್ರ ಬರೆಯಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

'ವಾಹನಗಳ ವಿನ್ಯಾಸ ಮಾತ್ರವಲ್ಲದೆ ಆರಂಭಿಕ ಹಂತದಲ್ಲೇ ದ್ವಿಚಕ್ರ ವಾಹನಗಳಿಗೆ ಜಿಪಿಎಸ್, ವ್ಹೀಲ್ ಲಾಕಿಂಗ್, ಗಟ್ಟಿಮುಟ್ಟಾದ ಹ್ಯಾಂಡಲ್ ಲಾಕಿಂಗ್ ಅಳವಡಿಸಲು ಒತ್ತು ನೀಡುವಂತೆ ಹಾಗೂ ಮಾರಾಟದ ಸಂದರ್ಭದಲ್ಲಿ ಕಳವು ತಡೆ ಸಾಧನ ಅಳವಡಿಸುವಂತೆ ಸಲಹೆ ನೀಡಲಾಗಿದೆ' ಎಂದು ಹೇಳಿದರು.

> ಸುರಕ್ಷತಾ ಕ್ರಮಗಳಿಲ್ಲದಿರುವ ಕಾರಣ ಇತ್ತೀಚಿನ ದಿನಗಳಲ್ಲಿ ದ್ವಿಚಕ್ರ ವಾಹನಗಳನ್ನು ಸುಲಭವಾಗಿ ಕಳ್ಳತನ ಮಾಡಲಾಗುತ್ತಿದೆ. ಕದ್ದ ವಾಹನಗಳನ್ನು ಗಂಭೀರ ಅಪರಾಧ ಕೃತ್ಯಗಳಿಗೆ ಬಳಸಿರುವ ನಿದರ್ಶನಗಳಿವೆ.
>
> **ಬಿ.ದಯಾನಂದ,** ಪೊಲೀಸ್ ಕಮಿಷನರ್

ವರ್ಷ	ದಾಖಲಾದ ಪ್ರಕರಣಗಳು	ಪತ್ತೆಯಾದ ಪ್ರಕರಣಗಳು
2022	4785	1848
2023	5580	1793
2024	3263	779
ಒಟ್ಟು	13628	4420



ಆರೋಪಿಗಳಿಂದ ಜಪ್ತಿ ಮಾಡಿರುವ ದ್ವಿಚಕ್ರ ವಾಹನಗಳನ್ನು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ವೀಕ್ಷಿಸಿದರು

ಕಳ್ಳತನ ಹೆಚ್ಚಲು ಕಾರಣಗಳು?

- ಮುನ್ನೆಚ್ಚರಿಕೆ ವಹಿಸದೆ ದ್ವಿಚಕ್ರ ವಾಹನಗಳನ್ನು ನಿಲ್ಲಿಸುವುದು
- ವಾಹನದಲ್ಲಿಯೇ ಕೀ ಬಿಟ್ಟು ಹೋಗುವುದು
- ಸುಲಭವಾಗಿ ಮುರಿಯುವಂತಹ ಹ್ಯಾಂಡಲ್ ಲಾಕ್ ಬಳಸುವುದು
- ಕತ್ತಲು ಪ್ರದೇಶಗಳಲ್ಲಿ ವಾಹನ ನಿಲುಗಡೆ

ವಾಹನ ಕಳ್ಳತನ ತಡೆಗೆ ಕ್ರಮ..

- ವಾಹನಗಳಿಗೆ ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ ಅಳವಡಿಸುವುದು
- ವ್ಹೀಲ್ ಲಾಕಿಂಗ್ ವ್ಯವಸ್ಥೆ ಅಳವಡಿಕೆ
- ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ಇರುವ ಸ್ಥಳಗಳಲ್ಲಿ ವಾಹನಗಳ ನಿಲುಗಡೆ
- ವಾಹನಗಳು ಲಾಕ್ ಆಗಿರುವುದನ್ನು ಖಚಿತ ಪಡಿಸಿಕೊಳ್ಳುವುದು
- ವಾಹನಗಳಲ್ಲಿ ಕೀ ಬಿಟ್ಟು ಹೋಗದಿರುವುದು
- ಗಟ್ಟಿಮುಟ್ಟಾದ ಹ್ಯಾಂಡ್ ಲಾಕ್‌ಗಳನ್ನು ಅಳವಡಿಸುವುದು
- ಕಳ್ಳತನಕ್ಕೆ ಪ್ರಯತ್ನಿಸಿದಾಗ ಸೈರನ್, ಮೊಬೈಲ್‌ಗೆ ಮಾಹಿತಿ ಬರುವಂತೆ ಮಾಡುವುದು

'ವಕ್ಫ್ ಕಾಯ್ದೆ ಎಂಬುದು ಲ್ಯಾಂಡ್ ಜಿಹಾದ್'

ವಿಜಯಪುರ: 'ಸುಲ್ತಾನರು ಜಾರಿಗೊಳಿಸಿದ ವಕ್ಫ್‌ನ್ನು ಕಾಂಗ್ರೆಸ್ ಸರ್ಕಾರ ಮರುಜೀವ ನೀಡುವ ಕುತಂತ್ರ ಮಾಡಿದೆ. ವಕ್ಫ್ ಕಾಯ್ದೆ ಒಂದರ್ಥದಲ್ಲಿ ಲ್ಯಾಂಡ್ ಜಿಹಾದ್' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಆರೋಪಿಸಿದರು.

ವಕ್ಫ್ ಕಾಯ್ದೆ ವಿರೋಧಿಸಿ ಮಂಗಳವಾರ ಸಿದ್ದೇಶ್ವರ ದೇವಾಲಯದ ಮುಂಭಾಗದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದರು.

ಫಹೀಂ 'ಎಟಿಎಂ' ತಂಡದ ಇಬ್ಬರ ಸೆರೆ

ಪಿಸ್ತೂಲ್ ತೋರಿಸಿ ದರೋಡೆ: ತಲೆಮರೆಸಿಕೊಂಡಿರುವ ಮೂವರಿಗೆ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರುವೇಷದಲ್ಲಿ ಮನೆಗಳಿಗೆ ನುಗ್ಗಿ ಪಿಸ್ತೂಲ್ ತೋರಿಸಿ ಬೆದರಿಸಿ ಚಿನ್ನಾಭರಣ, ನಗದು ದೋಚುತ್ತಿದ್ದ 'ಉತ್ತರ ಪ್ರದೇಶ ಗ್ಯಾಂಗ್'ನ ಇಬ್ಬರನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರಪ್ರದೇಶದ ಜಾಫರ್ ಅಸ್ಗರ್ ಅಲಿ ಹಾಗೂ ಅರ್ಮಾನ್ ಮಲ್ಲಿಕ್ ಬಂಧಿತರು. ಫಹೀಂ ಅಲಿಯಾಸ್ ಫಹೀಂ 'ಎಟಿಎಂ' ತಂಡದಲ್ಲಿ ಈ ಇಬ್ಬರೂ ಗುರುತಿಸಿಕೊಂಡಿದ್ದರು. ಕಳ್ಳತನ ಪ್ರಕರಣವೊಂದರಲ್ಲಿ ಇಬ್ಬರನ್ನೂ ಛತ್ತೀಸ್‌ಗಡ, ವಿಶಾಖಪಟ್ಟಣದ ಪೊಲೀಸರು ಇತ್ತೀಚೆಗೆ ಬಂಧಿಸಿ, ಜೈಲಿಗೆ ಕಳುಹಿಸಿದ್ದರು. ಬಾಡಿ ವಾರಂಟ್ ಮೇಲೆ ಆರೋಪಿಗಳನ್ನು ವಶಕ್ಕೆ ಪಡೆದು ಮತ್ತೆ ಬಂಧಿಸಲಾಗಿದೆ. ಇಬ್ಬರೂ ನಗರದ ವಿವಿಧೆಡೆ ಅಪರಾಧ ಕೃತ್ಯ ನಡೆಸಿದ್ದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದರು.

'ಫಹೀಂ ಸೇರಿದಂತೆ ಐವರು ಆರೋಪಿಗಳು, ಏಪ್ರಿಲ್ 24ರಂದು ಸಹಕಾರ ನಗರದ ನಿವಾಸಿ, ವೈದ್ಯ ಉಮಾಶಂಕರ್ ಅವರ ಮನೆಗೆ ನುಗ್ಗಿ ₹40 ಲಕ್ಷ ಮೌಲ್ಯದ ಚಿನ್ನಾಭರಣ ದರೋಡೆ ಮಾಡಿದ್ದರು. ಈ ಸಂಬಂಧ ದೂರು ದಾಖಲಾಗಿತ್ತು. ತನಿಖೆ ಕೈಗೊಂಡಿದ್ದ ಪೊಲೀಸರಿಗೆ 'ಉತ್ತರ ಪ್ರದೇಶದ ಗ್ಯಾಂಗ್' ಕೃತ್ಯ ಎಸಗಿರುವುದು ಗೊತ್ತಾಗಿತ್ತು. ಪ್ರಕರಣದಲ್ಲಿ ಮಹಿಳೆ ಸೇರಿದಂತೆ ಇನ್ನೂ ಮೂವರು ತಲೆಮರೆಸಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಫಹೀಂ ಎಟಿಎಂಗಳನ್ನೇ ದರೋಡೆ ಮಾಡುತ್ತಿದ್ದ ಕಾರಣಕ್ಕೆ ಆತನಿಗೆ ಫಹೀಂ 'ಎಟಿಎಂ' ಹೆಸರು ಬಂದಿತ್ತು.

'ಆರೋಪಿಗಳು ಬೆಂಗಳೂರು ಸೇರಿ ದೇಶದ ವಿವಿಧ ನಗರಗಳಲ್ಲಿ ಪಿಸ್ತೂಲ್ ತೋರಿಸಿ ದರೋಡೆ ನಡೆಸಿದ್ದಾರೆ. ಮಾರುವೇಷದಲ್ಲಿ ಚಿನ್ನಾಭರಣ ದೋಚಿ ಪರಾರಿ ಆಗುತ್ತಿದ್ದರು. ಮನೆ ಮಾಲೀಕರು ಎದುರಾದರೆ ಪಿಸ್ತೂಲ್ ತೋರಿಸಿ ಬೆದರಿಸುತ್ತಿದ್ದರು. ಕೊಡಿಗೇಹಳ್ಳಿಯಲ್ಲಿ ಎರಡು ಹಾಗೂ ಎಲೆಕ್ಟ್ರಾನಿಕ್ ಸಿಟಿ ಠಾಣಾ ವ್ಯಾಪ್ತಿಯಲ್ಲಿ ಮೂರು ಮನೆಗಳಲ್ಲಿ ದರೋಡೆ ನಡೆಸಿದ್ದರು' ಎಂದು ಪೊಲೀಸರು ಹೇಳಿದರು.

'ದರೋಡೆ ಮಾಡಿದ ಹಣದಲ್ಲಿ ಗೋವಾಕ್ಕೆ ತೆರಳಿ ಕ್ಯಾಸಿನೊದಲ್ಲಿ ಮೋಜು ಮಾಡುತ್ತಿದ್ದರು. ಹಣ ಖಾಲಿ ಆದ ಮೇಲೆ ಮತ್ತೆ ದರೋಡೆ ನಡೆಸುತ್ತಿದ್ದರು. ಬಂಧಿತರ ವಿರುದ್ಧ ಮಹಾರಾಷ್ಟ್ರ, ಆಂಧ್ರಪ್ರದೇಶ, ಛತ್ತೀಸ್‌ಗಡ ಸೇರಿ ವಿವಿಧ ರಾಜ್ಯಗಳಲ್ಲಿ ಪ್ರಕರಣ ದಾಖಲಾಗಿವೆ' ಎಂದು ಪೊಲೀಸರು ತಿಳಿಸಿದರು.

ಭಜನೆ ಮಾಡುತ್ತಿದ್ದ ಮಹಿಳೆಯ ಚಿನ್ನದ ಸರ ಕಳ್ಳತನ

ಬೆಂಗಳೂರು: ನಗರದ ನಂದಿನಿ ಲೇಔಟ್‌ನ ಶಂಕರಪುರದ ವಿನಾಯಕ ದೇವಸ್ಥಾನದಲ್ಲಿ ಕಿಟಕಿ ಕುಳಿತು ಮಹಿಳೆ ಭಜನೆ ಮಾಡುವ ವೇಳೆ ಕಳ್ಳನೊಬ್ಬ ಕಿಟಕಿಯಿಂದಲೇ ಕುತ್ತಿಗೆಗೆ ಕೈಹಾಕಿ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ.

ಈ ದೃಶ್ಯ ಭಕ್ತರೊಬ್ಬರ ಮೊಬೈಲ್‌ನಲ್ಲಿ ಸೆರೆಯಾಗಿದೆ.

ಮಹಿಳೆ ಜೋರಾಗಿ ಕಿರುಚಿಕೊಂಡಿದ್ದರಿಂದ ಭಜನೆ ಮಾಡುತ್ತಿದ್ದ ಮಹಿಳೆಯರು ಹೊರ ಬಂದು ಕಳ್ಳನನ್ನು ಹಿಡಿಯಲು ಪ್ರಯತ್ನಿಸಿದರು. ಅಷ್ಟರಲ್ಲಿ ಆತ ಓಡಿ ಹೋಗಿದ್ದ. ಕಿತ್ತುಕೊಳ್ಳುವ ವೇಳೆ ಬಿಗಿಯಾಗಿ ಹಿಡಿದುಕೊಂಡಿದ್ದ ಪರಿಣಾಮ 70 ಗ್ರಾಂ. ಸರ ತುಂಡಾಗಿ 30 ಗ್ರಾಂ.ನ ಸರದ ತುಂಡು ಕಳ್ಳನ ಪಾಲಾಗಿದೆ. ಮಂಗಳಾ ಅವರ ದೂರು ಆಧರಿಸಿ ನಂದಿನಿ ಲೇಔಟ್ ಪೊಲೀಸರಿಗೆ ದೂರು ನೀಡಿದ್ದಾರೆ.

ಆನ್‌ಲೈನ್ ಗೇಮ್‌ನಲ್ಲಿ ನಷ್ಟ ಕಳ್ಳತನಕ್ಕಿಳಿದ ಯುವಕ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಆನ್‌ಲೈನ್ ಗೇಮ್‌ನಲ್ಲಿ ಕಳೆದುಕೊಂಡಿದ್ದ ಹಣವನ್ನು ಸರಿದೂಗಿಸಿಕೊಳ್ಳಲು ಮನೆ ಕಳ್ಳತನಕ್ಕೆ ಇಳಿದಿದ್ದ ಆರೋಪಿಯನ್ನು ಬೆಳ್ಳಂದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೂಲತಃ ಗುಜರಾತ್‌ನ ಭಾವೇಶ್ (30) ಬಂಧಿತ ಆರೋಪಿ. ಈತನಿಂದ ₹22 ಲಕ್ಷ ಮೌಲ್ಯದ 322 ಗ್ರಾಂ. ಚಿನ್ನಾಭರಣ ಹಾಗೂ 71 ಗ್ರಾಂ. ನಕಲಿ ಆಭರಣವನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಭಾವೇಶ್ ಕೆಲ ವರ್ಷಗಳ ಹಿಂದೆ ಕುಟುಂಬಸ್ಥರ ಜೊತೆಗೆ ನಗರಕ್ಕೆ ಬಂದು ನೆಲಸಿದ್ದು, ಸಹೋದರನ ಪ್ಲೈವುಡ್ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ. ಆನ್‌ಲೈನ್ ಗೇಮ್‌ನಲ್ಲಿ ಕಳೆದುಕೊಂಡಿದ್ದ ಹಣ ಸರಿದೂಗಿಸಲು ಕಳವು ಮಾಡುತ್ತಿದ್ದ. ಕಸವನಹಳ್ಳಿಯ ಅಪಾರ್ಟ್‌ಮೆಂಟ್‌ನ ನಿವಾಸಿ ದೇವಸ್ಥಾನಕ್ಕೆ ತೆರಳಿದ್ದಾಗ 320 ಗ್ರಾಂ. ಚಿನ್ನಾಭರಣ ಕಳವು ಮಾಡಿದ್ದ' ಎಂದು ಪೊಲೀಸರು ಹೇಳಿದರು.

'ಕದ್ದಿದ್ದ ಚಿನ್ನವನ್ನು ಗ್ರೀನ್‌ಗ್ಲೇನ್ ಲೇಔಟ್‌ನ ಅಪಾರ್ಟ್‌ಮೆಂಟ್ ಬಳಿಯ ಖಾಲಿ ಪ್ರದೇಶದ ಪೊದೆಯಲ್ಲಿ ಬಚ್ಚಿಟ್ಟಿರುವುದಾಗಿ ವಿಚಾರಣೆ ವೇಳೆ ತಿಳಿಸಿದ್ದ. ಆನ್‌ಲೈನ್ ಗೇಮ್‌ನಲ್ಲಿ ಆರೋಪಿ ಸುಮಾರು ₹40 ಲಕ್ಷ ಕಳೆದುಕೊಂಡಿದ್ದ' ಎಂದು ಪೊಲೀಸರು ತಿಳಿಸಿದರು.

ಕೆಲಸ ಮಾಡುತ್ತಿದ್ದ ಅಂಗಡಿಯಲ್ಲಿ ಚಿನ್ನ ಕಳವು: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಮಾಡುತ್ತಿದ್ದ ಅಂಗಡಿಯಲ್ಲೇ ಚಿನ್ನಾಭರಣ ಕಳವು ಮಾಡಿದ್ದ ಕೆಲಸಗಾರ ಸೇರಿದಂತೆ ಮೂವರು ಆರೋಪಿಗಳನ್ನು ಸಂಪಂಗಿರಾಮನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನಗರ್ತಪೇಟೆಯ ನಿವಾಸಿ ರಾಹುಲ್ ಕುಮಾರ್(32), ಹೊಸೂರಿನ ವಿಷ್ಣುದೇವಸಿ(34) ಮತ್ತು ತೆಲಂಗಾಣದ ದೇವಸಿ ಭದ್ರಿ(30) ಬಂಧಿತರು.

ಆರೋಪಿಗಳಿಂದ ₹51.80 ಲಕ್ಷ ಮೌಲ್ಯದ 740 ಗ್ರಾಂ. ಚಿನ್ನದ ಗಟ್ಟಿ ಮತ್ತು ಒಂದು ನೆಕ್ಲೆಸ್ ಜಪ್ತಿ ಮಾಡಲಾಗಿದೆ. ಆರೋಪಿಗಳು, ಸಂಪಂಗಿರಾಮನಗರದ 5ನೇ ಕ್ರಾಸ್‌ನಲ್ಲಿ ಇರುವ ಅಂಗಡಿಯಲ್ಲಿ ಹಂತ ಹಂತವಾಗಿ 1 ಕೆ.ಜಿ 764 ಗ್ರಾಂ. ಚಿನ್ನಾಭರಣ ದೋಚಿದ್ದರು ಎಂದು ಪೊಲೀಸರು ತಿಳಿಸಿದರು.

'ಬಂಧಿತರ ಪೈಕಿ ರಾಹುಲ್ ಕುಮಾರ್ ಎಂಬಾತ ದೂರು ನೀಡಿದ ವ್ಯಕ್ತಿಯ ಚಿನ್ನಾಭರಣ ಮಳಿಗೆಯಲ್ಲಿ ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದ. ಮಾಲೀಕರ ಮನೆಯಲ್ಲೇ ವಾಸವಿದ್ದ. ಈ ವೇಳೆ ಆರೋಪಿ, ಮಳಿಗೆ ಹಾಗೂ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ.

'ಕದ್ದಿದ್ದ ಚಿನ್ನವನ್ನು ವಿಷ್ಣುದೇವಸಿ, ದೇವಸಿ ಭದ್ರಿಗೆ ನೀಡಿದ್ದ. ವಿಷ್ಣುದೇವಸಿ ಎಲ್ಲ ಚಿನ್ನವನ್ನು ಕರಗಿಸಿ ಚಿನ್ನದ ಗಟ್ಟಿಗಳನ್ನಾಗಿ ಪರಿವರ್ತಿಸಿ ಹೊಸೂರು ಸಮೀಪದ ಚಿನ್ನದ ಅಂಗಡಿಗಳಿಗೆ ಮಾರಾಟ ಮಾಡಿದ್ದ. ಬಂದ ಹಣದಲ್ಲಿ ರಾಹುಲ್ ಕುಮಾರ್‌ಗೆ ಹೆಚ್ಚಿನ ಪಾಲು ನೀಡಿದ್ದ' ಎಂದು ಪೊಲೀಸರು ತಿಳಿಸಿದರು.

ಚಿನ್ನಾಭರಣ ಕಳವು: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಆವರಣದಲ್ಲಿ ಮಾಲೀಕರು ಬಚ್ಚಿಡುತ್ತಿದ್ದ ಕೀ ಬಳಸಿ, ಚಿನ್ನಾಭರಣ ದೋಚಿ ಪರಾರಿ ಆಗುತ್ತಿದ್ದ ಆರೋಪಿಯನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ವೈಟ್‌ಫೀಲ್ಡ್ ನಿವಾಸಿ ಪ್ರದೀಪ್ (30) ಬಂಧಿತ.

ಆರೋಪಿಯಿಂದ ₹10 ಲಕ್ಷ ಮೌಲ್ಯದ 152 ಗ್ರಾಂ. ಚಿನ್ನಾಭರಣ ಹಾಗೂ ಒಂದು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಡೆಲಿವರಿ ಬಾಯ್ ಆಗಿ ಆರೋಪಿ ಕೆಲಸ ಮಾಡುತ್ತಿದ್ದ. ಮನೆಗಳಿಗೆ ಹೋದಾಗ ಮಾಲೀಕರು ಯಾವ ಜಾಗದಲ್ಲಿ ಕೀ ಇಡುತ್ತಾರೆ ಎಂದು ಗಮನಿಸುತ್ತಿದ್ದ. ಯಾರೂ ಇಲ್ಲದಾಗ ಬಂದು ಚಿನ್ನಾಭರಣ, ನಗದು ದೋಚಿ ಪರಾರಿಯಾಗುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಜ್ಯೂಸ್ ಅಂಗಡಿ ಮಾಲೀಕರೊಬ್ಬರು ಸೆ.27ರಂದು ಮನೆಗೆ ಬೀಗ ಹಾಕಿ, ಹೊರಗಡೆಯ ಪ್ಲಾಸ್ಟಿಕ್ ಬಾಕ್ಸ್‌ನಲ್ಲಿ ಕೀ ಇಟ್ಟು ಹೋಗಿದ್ದರು. ಪ್ರದೀಪ್ ಆ ಕೀ ಬಳಸಿ ಬೀಗ ತೆಗೆದು ಮನೆಗೆ ನುಗ್ಗಿ 8 ಗ್ರಾಂ. ಚಿನ್ನ ಹಾಗೂ ₹10 ಸಾವಿರ ನಗದು ದೋಚಿದ್ದ. ಈತನ ಬಂಧನದಿಂದ ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಆರು ಕಳ್ಳತನ ಪ್ರಕರಣಗಳು ಪತ್ತೆ ಆಗಿವೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಕಡತಗಳ ಕಳವು; ಪಿಡಿಒ ದೂರು

ನೆಲಮಂಗಲ: ತಾಲ್ಲೂಕಿನ ಕಳಲುಘಟ್ಟ ಪಂಚಾಯಿತಿ ಪಿಡಿಒ ಗೀತಾರಾಣಿ ಅವರು ಸೋಮವಾರ ಸಂಜೆ ಪಂಚಾಯಿತಿ ನಡಾವಳಿಗಳ ಕಡತವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಬಳಿಗೆ ಕೊಂಡೊಯ್ಯುವ ಸಮಯದಲ್ಲಿ ವ್ಯಕ್ತಿಯೊಬ್ಬ, ಕಡತಗಳನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದಾನೆ.

ತಾಲ್ಲೂಕಿನ ಹನುಮಂತಪುರದ ನಮಸ್ತೆ ಬೆಂಗಳೂರು ಹೋಟೆಲ್ ಬಳಿ ಈ ಘಟನೆ ನಡೆದಿದೆ. ಕಳವು ಮಾಡಿರುವ ವ್ಯಕ್ತಿ ಗುಂಡೇನಹಳ್ಳಿ ಗ್ರಾಮದ ಅರುಣ್ ಕುಮಾರ್ ಎಂದು ತಿಳಿದು ಬಂದಿದೆ.

ಘಟನೆ ಸಂಬಂಧ ಗೀತಾರಾಣಿ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿ ಪತ್ತೆಗಾಗಿ ಶೋಧ ನಡೆಸುತ್ತಿದ್ದಾರೆ.

ಬಂಜಾರರ ಸಂಸ್ಕೃತಿ ಅನನ್ಯ: ಸಣ್ಣರಾಮ

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಬಂಜಾರರ ಸಂಸ್ಕೃತಿ ಮತ್ತು ಕಲೆ ವೈವಿಧ್ಯತೆಯಿಂದ ಕೂಡಿದ್ದು, ಬಂಜಾರರ ಪರಂಪರೆ ಕ್ರಿ.ಪೂ. 10ನೇ ಶತಮಾನದಲ್ಲಿಯೇ ಅಸ್ತಿತ್ವ ದಲ್ಲಿತ್ತು' ಎಂದು ಸಾಹಿತಿ ಸಣ್ಣರಾಮ ಹೇಳಿದರು.

ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ನಗರದಲ್ಲಿ ಹಮ್ಮಿಕೊಂಡಿದ್ದ 'ಕಳತಾವೂರ್ ಮಳಾವ್-02 (ಸಜ್ಜನರ ಸಲ್ಲಾಪ-02) ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿ, ಮಾತನಾಡಿದರು.

'ಜಾನಪದ ಮತ್ತು ಮೌಖಿಕ ಪರಂಪರೆಯ ಪ್ರಕಾರ ಬಂಜಾರರ ಮೂಲ ಪುರುಷ ದಾದಾಮೋಲ. ತ್ರೇತಾಯುಗದಲ್ಲಿ ಶ್ರೀಕೃಷ್ಣನ ಗೋವುಗಳನ್ನು ಪಾಲನೆ ಮಾಡುತ್ತಿದ್ದರು. ಅನನ್ಯವಾದ ಬಂಜಾರ ಕಲೆ ಹಾಗೂ ಸಂಸ್ಕೃತಿಯನ್ನು ಸಂರಕ್ಷಿಸಬೇಕಿದೆ' ಎಂದು ಅಭಿಪ್ರಾಯಪಟ್ಟರು.

ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ, 'ಬಂಜಾರ ಕಲೆ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ಅಕಾಡೆಮಿಯು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಸೂರಪ್ಪ ನಾಯಕ, ಅಕಾಡೆಮಿ ರಿಜಿಸ್ಟ್ರಾರ್ ಬಿ. ನೀಲಮ್ಮ ಉಪಸ್ಥಿತರಿದ್ದರು.



ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಣ್ಣರಾಮ ಮಾತನಾಡಿದರು. ಎ.ಆರ್. ಗೋವಿಂದಸ್ವಾಮಿ, ಸೂರಪ್ಪ ನಾಯಕ, ಬಿ. ನೀಲಮ್ಮ ಉಪಸ್ಥಿತರಿದ್ದರು

'₹39 ಸಾವಿರ ಕೋಟಿ ಸಾಲ ಅಪಾಯಕಾರಿ'

ಬೆಂಗಳೂರು: 'ನಗರದ ಅಭಿವೃದ್ಧಿಗೆ ಬಿಬಿಎಂಪಿ ಬಜೆಟ್ ಗಾತ್ರಕ್ಕಿಂತಲೂ ಐದಾರು ಪಟ್ಟು ಹೆಚ್ಚು ಮೊತ್ತದ ಸಾಲವನ್ನು ತರುತ್ತಿರುವುದು ಅಪಾಯಕಾರಿ. ಇದರ ಸಾಧಕ ಬಾಧಕಗಳು, ದೀರ್ಘಕಾಲೀನ ಪರಿಣಾಮಗಳ ಬಗ್ಗೆ ವಿಸ್ತೃತ ಅಧ್ಯಯನ ನಡೆಸಬೇಕು' ಎಂದು ಆಮ್ ಆದ್ಮಿ ಪಕ್ಷದ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, 'ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ₹39 ಸಾವಿರ ಕೋಟಿಯಷ್ಟು ಬೃಹತ್ ಮೊತ್ತವನ್ನು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಮುಂದಾಗಿರುವುದು ಅತ್ಯಂತ ಕಳವಳಕಾರಿ ಎಂದು ಹೇಳಿದ್ದಾರೆ.

'ಬಿಬಿಎಂಪಿಯ 2024-25ರ ಬಜೆಟ್ ಗಾತ್ರವೇ ಕೇವಲ ₹12,371 ಕೋಟಿ. ಇಷ್ಟು ದೊಡ್ಡ ಮೊತ್ತವನ್ನು ಸಾಲ ತೆಗೆದುಕೊಳ್ಳುವುದರಿಂದ ಸ್ಥಳೀಯ ಸಂಸ್ಥೆಯು ಆರ್ಥಿಕ ಬಿಕ್ಕಟ್ಟಿಗೆ ಸಿಲುಕುವ ಸಾಧ್ಯತೆಯೇ ಹೆಚ್ಚು. ಬೆಂಗಳೂರಿನಲ್ಲಿ ಮೊದಲು ರಸ್ತೆಗಳ ಗುಂಡಿ ಮುಚ್ಚುವುದು, ರಸ್ತೆಗಳ ಮರು ಡಾಂಬರೀಕರಣ, ದುರಸ್ತಿ, ಸುರಕ್ಷಿತ ಪಾದಚಾರಿ ಮಾರ್ಗಗಳ ನಿರ್ಮಾಣದಂತಹ ಕೆಲಸಗಳಿಗೆ ಆದ್ಯತೆ ನೀಡಬೇಕಾದ ತುರ್ತು ಇದೆ. ಹೊಸ ಯೋಜನೆಗಳ ಬದಲಿಗೆ ನನೆಗುದಿಗೆ ಬಿದ್ದಿರುವ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಆದ್ಯತೆ ನೀಡಬೇಕು' ಎಂದಿದ್ದಾರೆ.

'ಸ್ಕೈಡೆಕ್ ಯೋಜನೆಯಂತಹ ಆಡಂಬರ ಪ್ರದರ್ಶನದ ಯೋಜನೆಗಳು ಜನಸಾಮಾನ್ಯರಿಗೆ ಯಾವ ರೀತಿಯಲ್ಲಿಯೂ ಪ್ರಯೋಜನವಾಗುವುದಿಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ.

ರಾಜಧಾನಿಗೆ ಹಂಚಿಕೆಯಾಗಿರುವ ನೀರಿನ ಪೂರ್ಣ ಬಳಕೆಗೆ ಯೋಜನೆ –ಡಿಸಿಎಂ ಡಿ.ಕೆ.ಶಿವಕುಮಾರ್

ಕಾವೇರಿ ಆರನೆಯ ಹಂತ: ಡಿಪಿಆರ್ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಧಾನಿಗೆ ನೀರು ಪೂರೈಸುವ ಕಾವೇರಿ 5ನೇ ಹಂತದ ಕಾಮಗಾರಿ ಯಶಸ್ವಿಯಾಗಿ ಪೂರ್ಣಗೊಂಡಿದೆ. ಈಗ ಕಾವೇರಿ 6ನೇ ಹಂತದ ಯೋಜನೆಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧವಾಗಿದೆ' ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕಾವೇರಿ 5ನೇ ಹಂತದ ಯೋಜನೆಯಡಿ ನೀರು ಪೂರೈಕೆಗೆ ಬುಧವಾರ ಚಾಲನೆ ನೀಡುತ್ತಿರುವುದರ ಪ್ರಯುಕ್ತ ಅವರು 'ಪ್ರಜಾವಾಣಿ' ಜೊತೆ ಮಂಗಳವಾರ ಮಾತನಾಡಿದರು.

'ಬೆಂಗಳೂರು ನಗರಕ್ಕೆ ಹಂಚಿಕೆಯಾಗಿರುವ ನೀರನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವುದಕ್ಕೆ ಯೋಜನೆ ರೂಪಿಸಿದ್ದೇವೆ. ಜಲಮಂಡಳಿ ಡಿಪಿಆರ್ ಪರಿಶೀಲಿಸುತ್ತಿದೆ' ಎಂದು ತಿಳಿಸಿದರು.

5ನೇ ಹಂತದ ಯೋಜನೆಯಡಿ ನಗರಕ್ಕೆ ನಿತ್ಯವೂ 775 ಕೋಟಿ ಲೀಟರ್ ನೀರು ಪೂರೈಕೆಯಾಗಲಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರಿರುವ 110 ಹಳ್ಳಿಗಳಿಗೆ ಇದರಿಂದ ಅನುಕೂಲವಾಗಲಿದೆ. ಏಳು ವಿಧಾನಸಭಾ ಕ್ಷೇತ್ರಗಳಿಗೆ ಕಾವೇರಿ ಐದನೇ ಹಂತದ ಯೋಜನೆಯಿಂದ ಕುಡಿಯುವ ನೀರು ಪೂರೈಕೆಯಾಗಲಿದೆ ಎಂದರು.

'ಈವರೆಗೆ ನಿತ್ಯ 1,500 ಕೋಟಿ ಲೀಟರ್ ಕಾವೇರಿ ನೀರು ನಗರಕ್ಕೆ ಪೂರೈಕೆಯಾಗುತ್ತಿತ್ತು. ಇನ್ನು ಮುಂದೆ ಪ್ರತಿ ದಿನ 2,225 ಕೋಟಿ ಲೀಟರ್ ನೀರು ಪೂರೈಕೆಯಾಗಲಿದೆ. ಇದರಿಂದ ಭವಿಷ್ಯದ ಹತ್ತು ವರ್ಷಗಳ ಕುಡಿಯುವ ನೀರಿನ ಅಗತ್ಯವನ್ನು ನಿಭಾಯಿಸುವುದು ಸಾಧ್ಯ' ಎಂದು ತಿಳಿಸಿದರು.

'ಐದನೇ ಹಂತದಲ್ಲಿ ನೀರಿನ ಸೋರಿಕೆ ತಡೆಗೆ ಸ್ಕಾಡಾ ತಂತ್ರಜ್ಞಾನ ಬಳಸಿಕೊಳ್ಳಲಾಗಿದೆ. ಏಳು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ತಲಾ ಎರಡು ದಿನ ಕಾರ್ಯಕ್ರಮ ಆಯೋಜಿಸಲಾಗುವುದು. ಅಲ್ಲಿಯೇ ಸಹಾಯ ಕೇಂದ್ರ ತೆರೆದು, ನೀರಿನ ಸಂಪರ್ಕಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು' ಎಂದು ಹೇಳಿದರು.

ಕಾವೇರಿ ಕಣಿವೆಯಲ್ಲಿ ಹಂಚಿಕೆಯಾಗದೇ ಉಳಿದಿದ್ದ 6 ಟಿಎಂಸಿ ಅಡಿ ನೀರನ್ನು ಬೆಂಗಳೂರು ನಗರಕ್ಕೆ ಹಂಚಿಕೆ ಮಾಡಲಾಗಿದೆ. ಅದೂ ಸೇರಿ ಬಳಕೆಗೆ ಲಭ್ಯವಿರುವ ನೀರಿನ ಪ್ರಮಾಣವನ್ನು ಆಧರಿಸಿ ಮುಂದಿನ ಯೋಜನೆಯನ್ನು ರೂಪಿಸಲಾಗುವುದು. ಈಗಾಗಲೇ ಅಳವಡಿಸಿರುವ ಕೊಳವೆಗಳ ಪಕ್ಕದಲ್ಲೇ ಹೊಸ ಕೊಳವೆ ಅಳವಡಿಸುವುದೂ ಸೇರಿದಂತೆ ಹಲವು ಆಯ್ಕೆಗಳು ಪರಿಶೀಲನೆಯಲ್ಲಿವೆ ಎಂದು ತಿಳಿಸಿದರು.

ಕೆರೆಗಳ ನೀರಿನ ಬಳಕೆಗೆ ಯೋಜನೆ: ಬೆಂಗಳೂರಿನಲ್ಲಿರುವ ಎಲ್ಲ ಕೆರೆಗಳ ನೀರನ್ನು ಕಟ್ಟಡ ನಿರ್ಮಾಣ, ಇತರ ಉದ್ದೇಶಗಳಿಗೆ ಬಳಸುವ ಯೋಚನೆ ಇದೆ. ಇದಕ್ಕಾಗಿ ಯೋಜನೆಯೊಂದನ್ನು ರೂಪಿಸಲಾಗುವುದು. 5ನೇ ಹಂತದಲ್ಲಿ ಪೂರೈಕೆಯಾಗುವ ನೀರಿನ ಪ್ರಮಾಣ ಆಧರಿಸಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು. ಸಂಸ್ಕರಿಸಿದ ನೀರಿನ ಬಳಕೆಯನ್ನೂ ಹೆಚ್ಚಿಸಲಾಗುವುದು ಎಂದು ವಿವರಿಸಿದರು.

ಬಿಲ್ ಪಾವತಿಸದಿದ್ದರೆ ಕ್ರಮ: 'ಜಲಮಂಡಳಿ ಆರ್ಥಿಕವಾಗಿ ಸಂಕಷ್ಟದಲ್ಲಿದೆ. ನೀರಿನ ಬಿಲ್ ಬಾಕಿ ಪಾವತಿಸದೇ ಇರುವವರಿಗೆ ನೋಟಿಸ್ ಜಾರಿಗೊಳಿಸಲಾಗುವುದು. ಗಡುವಿನೊಳಗೆ ಬಿಲ್ ಪಾವತಿಸದವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಕಾವೇರಿ ಐದನೇ ಹಂತದ ಯೋಜನೆಯಡಿ ನೀರು ಪೂರೈಕೆ ಉದ್ಘಾಟನೆಗೆ ಮಂಡ್ಯ ಜಿಲ್ಲೆಯ ತೊರೆಕಾಡನಹಳ್ಳಿಯಲ್ಲಿ ನಡೆದಿರುವ ಸಿದ್ಧತೆ

'ದೃಢವಾದ ಪ್ರಯತ್ನದಿಂದ ಯಶಸ್ಸು'

'ಕಾವೇರಿ 5ನೇ ಹಂತದ ಕಾಮಗಾರಿ ಪೂರ್ಣಗೊಳಿಸಲು ಹಲವು ಅಡೆತಡೆಗಳಿದ್ದವು. ನಾನು ಬೆಂಗಳೂರು ಅಭಿವೃದ್ಧಿ ಸಚಿವನಾದ ಬಳಿಕ ಸಮಸ್ಯೆಗಳಿರುವ ಸ್ಥಳಕ್ಕೆ ಭೇಟಿ ನೀಡಿದೆ. ಸಮಸ್ಯೆ ಅರಿತು ಪರಿಹಾರಕ್ಕೆ ದೃಢವಾಗಿ ಪ್ರಯತ್ನಿಸಿದೆ. ಆದ್ದರಿಂದ ಬೇಗ ಕಾಮಗಾರಿ ಪೂರ್ಣಗೊಳಿಸುವುದು ಸಾಧ್ಯವಾಯಿತು' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು. 'ಮೇಕೆದಾಟು ಸಮಾನಾಂತರ ಜಲಾಶಯ ನಿರ್ಮಾಣ ನನ್ನ ಕನಸು. ನ್ಯಾಯಾಲಯದಲ್ಲಿ ರಾಜ್ಯಕ್ಕೆ ನ್ಯಾಯ ದೊರಕುವ ವಿಶ್ವಾಸವಿದೆ' ಎಂದರು.



ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಲಭ್ಯವಿರುವ ನೀರನ್ನು ಬಳಸಿಕೊಳ್ಳಲು ಯೋಜನೆ ಸಿದ್ಧವಾಗಿದೆ. ಎತ್ತಿನಹೊಳೆ ಯೋಜನೆಯಿಂದ ಅಲ್ಲಿಗೆ 2.5 ಟಿಎಂಸಿ ಅಡಿ ನೀರನ್ನು ಬಳಸಿಕೊಳ್ಳುವ ಯೋಜನೆ ತಯಾರಾಗುತ್ತಿದೆ

ಡಿ.ಕೆ.ಶಿವಕುಮಾರ್, ಬೆಂಗಳೂರು ಅಭಿವೃದ್ಧಿ ಸಚಿವ, ಉಪಮುಖ್ಯಮಂತ್ರಿ

ಇಂದು '5ನೇ ಹಂತ' ಲೋಕಾರ್ಪಣೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ 110 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಕಾವೇರಿ 5ನೇ ಹಂತದ ಯೋಜನೆಗೆ ಬುಧವಾರ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಟಿ.ಕೆ.ಹಳ್ಳಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಲಿದ್ದಾರೆ.

ಟಿ.ಕೆ.ಹಳ್ಳಿಯಲ್ಲಿರುವ ಬೆಂಗಳೂರು ಜಲಮಂಡಳಿ ಆವರಣದಲ್ಲಿ ಬೆಳಿಗ್ಗೆ 10.30ಕ್ಕೆ ನಡೆಯಲಿರುವ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಳವಳ್ಳಿ ಕ್ಷೇತ್ರದ ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಕೇಂದ್ರ/ರಾಜ್ಯ ಸಚಿವರು ಹಾಗೂ ಸಂಸದರು, ಶಾಸಕರು ಹಾಗೂ ಎಲ್ಲ ಚುನಾಯಿತ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಯೋಜನೆಗೆ ಆರ್ಥಿಕ ಸಹಕಾರ ನೀಡಿರುವ ಜೈಕಾ ಇಂಡಿಯಾ ಕಚೇರಿಯ ಮುಖ್ಯ ಪ್ರತಿನಿಧಿ ಟೇಕುಚಿ ಟಕುರೋ, ಕೌನ್ಸಲ್ ಜನರಲ್ ಆಫ್ ಜಪಾನ್ ಇನ್ ಇಂಡಿಯಾದ ಟ್ಸುಟೋಮು, ಭಾರತದಲ್ಲಿರುವ ಜಪಾನ್ ರಾಯಭಾರ ಕಚೇರಿಯ ಆರ್ಥಿಕ ಸಚಿವ (ಆರ್ಥಿಕ ಮತ್ತು ಅಭಿವೃದ್ಧಿ) ಹೊಕುಗೋ ಕ್ಯೋಕು ಹಾಗೂ ಕೇಂದ್ರ ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ಅಜಯ್ ಸೇಠ್ ಅವರು ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ.

₹ 4,336 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ಯೋಜನೆಗೆ ಜಪಾನ್ ಸಂಸ್ಥೆ ಜೈಕಾದಿಂದ ಸಾಲ ಪಡೆಯಲಾಗಿದೆ. ಈ ಯೋಜನೆಯಿಂದ, ನಾಲ್ಕು ಲಕ್ಷ ಮನೆಗಳಿಗೆ ಕುಡಿಯುವ ನೀರು ಪೂರೈಸುವ ಉದ್ದೇಶವಿದೆ. ಈ ಯೋಜನೆಯಿಂದ ನಗರಕ್ಕೆ ಹೆಚ್ಚುವರಿಯಾಗಿ 775 ಎಂಎಲ್‌ಡಿ ನೀರು ಪೂರೈಕೆಯಾಗಲಿದೆ.

ಎಲ್ಲೆಲ್ಲಿಗೆ ನೀರು ಪೂರೈಕೆ?: ಯಶವಂತಪುರ ವಿಧಾನಸಭಾ ಕ್ಷೇತ್ರದ 13 ಹಳ್ಳಿಗಳಲ್ಲಿ 48,000 ಸಂಪರ್ಕ, ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ 6 ಹಳ್ಳಿಗಳಲ್ಲಿ 37,500 ಸಂಪರ್ಕ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ 26 ಹಳ್ಳಿಗಳಲ್ಲಿ 73,500 ಸಂಪರ್ಕ, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ 32 ಹಳ್ಳಿಗಳಲ್ಲಿ 96,750 ಸಂಪರ್ಕ, ಮಹದೇವಪುರ ಕ್ಷೇತ್ರದ 33 ಹಳ್ಳಿಗಳಲ್ಲಿ 93,100 ನೀರಿನ ಸಂಪರ್ಕ, ರಾಜರಾಜೇಶ್ವರಿ ನಗರ, ಬೊಮ್ಮನಹಳ್ಳಿ ಹಾಗೂ ಕೆ.ಆರ್.ಪುರ ವಿಧಾನ ಸಭಾ ಕ್ಷೇತ್ರದ ವಿವಿಧ ಹಳ್ಳಿಗಳಿಗೆ ನೀರಿನ ಸಂಪರ್ಕ ಸಿಗಲಿದೆ.

ಸುದ್ದಿ 2 ನಿಮಿಷ

ಜಂಬೂ ಸವಾರಿ: 'ಸತ್ತಿಗೆ ಕುಣಿತ' ಕಲಾತಂಡಕ್ಕೆ ಪ್ರಥಮ ಬಹುಮಾನ

ಮೈಸೂರು: ದಸರಾ ಮಹೋತ್ಸವದ ಅಂಗವಾಗಿ ಇಲ್ಲಿ ಶನಿವಾರ ನಡೆದ ವಿಜಯದಶಮಿ ಮೆರವಣಿಗೆಯಲ್ಲಿ ಉತ್ತಮ ಪ್ರದರ್ಶನ ನೀಡಿದ ಕಲಾತಂಡಗಳಿಗೆ ಬಹುಮಾನ ಘೋಷಿಸಲಾಗಿದೆ.

ವಿಜಯಪುರ ಜಿಲ್ಲೆ ತಿಕೋಟಾ ತಾಲ್ಲೂಕಿನ ಸಿದ್ದಾಪುರ (ಕಾರಿಕೊಳ್ಳ)ದ ಸಂಜೀತ ಸಿ.ಕೋತ ನೇತೃತ್ವದ ರೇವಣಸಿದ್ದೇಶ್ವರ ಯುವಕ ಕಲಾಸಂಘದ 'ಸತ್ತಿಗೆ ಕುಣಿತ'ಕ್ಕೆ ಪ್ರಥಮ ಬಹುಮಾನ (₹ 15ಸಾವಿರ) ದೊರೆತಿದೆ.

ಯಾದಗಿರಿಯ ವಿಶ್ವಾಸಪುರ ತಾಂಡಾದ ಮನೋಹರ ಖೇಮು ಪವಾರ ಸಾರಥ್ಯದ ಲಂಬಾಣಿ ನೃತ್ಯ ಕಲಾ ತಂಡ, ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕ್ಯಾತಘಟ್ಟದ ಕೀರ್ತಿನಿ ಮತ್ತು ಪ್ರಮೋದಿನಿ ನೇತೃತ್ವದ ಪೂಜಾಕುಣಿತ ಕಲಾವಿದರ ತಂಡ, ಮದ್ದೂರು ತಾಲ್ಲೂಕು ಚಿಕ್ಕರಸಿನಕೆರೆಯ ಕಾಲಭೈರವೇಶ್ವರ (ಪೂಜಾಕುಣಿತ) ಯುವಕರ ತಂಡಗಳು ದ್ವಿತೀಯ ಸ್ಥಾನ ಪಡೆದು ತಲಾ ₹ 5ಸಾವಿರ ಬಹುಮಾನ ಗಳಿಸಿವೆ.

ಹಾವೇರಿ ಜಿಲ್ಲೆಯ ವೀರಭದ್ರೇಶ್ವರ ಪುರವಂತಿಕೆ ಕಲಾತಂಡ ಹಾಗೂ ಕೋಲಾರ ಜಿಲ್ಲೆಯ ಸುಳದೇನಹಳ್ಳಿಯ ಮಾರುತಿ ಕಲಾವಿದರ ಸಂಘ (ಗಾರುಡಿ ಗೊಂಬೆ) ತೃತೀಯ ಬಹುಮಾನ ಗಳಿಸಿದ್ದು, ತಲಾ ₹ 2,500 ಪಡೆದಿವೆ.

ತೀರ್ಪುಗಾರರ ಆಯ್ಕೆಯಂತೆ ಕಲಾತಂಡಗಳನ್ನು ಬಹುಮಾನಕ್ಕೆ ಪರಿಗಣಿಸಲಾಗಿದೆ. ಒಟ್ಟು ₹ 35ಸಾವಿರವನ್ನು ಬಹುಮಾನವಾಗಿ ನೀಡಲಾಗಿದೆ ಎಂದು ದಸರಾ ಮೆರವಣಿಗೆ ಉಪ ಸಮಿತಿಯ ಉಪ ವಿಶೇಷಾಧಿಕಾರಿ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'2026ಕ್ಕೆ ಮಂಗನ ಕಾಯಿಲೆಗೆ ಲಸಿಕೆ'



ನವದೆಹಲಿ: ಮಂಗನ ಕಾಯಿಲೆಗೆ (ಕೆಎಫ್‌ಡಿ) ಲಸಿಕೆ ಹಾಗೂ ಇತರ ವಿಷಯಗಳ ಕುರಿತು ಐಸಿಎಂಆರ್ ಮಹಾ ನಿರ್ದೇಶಕ ರಾಜೀವ್ ಬಹ್ಲ್ ಅವರೊಂದಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಮಂಗಳವಾರ ಇಲ್ಲಿ ಸಮಾಲೋಚನೆ ನಡೆಸಿದರು.

'ಕೆಎಫ್‌ಡಿ ಲಸಿಕೆಯು ಮೊದಲ ಹಂತದಲ್ಲಿ ಭರವಸೆಯ ಫಲಿತಾಂಶ ನೀಡಿದೆ. ಮಂಗಗಳ ಮೇಲಿನ ಪ್ರಾಯೋಗಿಕ ಬಳಕೆ ಎರಡನೇ ಹಂತದಲ್ಲಿದೆ. ಮಾನವರ ಮೇಲೆ ಈ ಲಸಿಕೆಯ ಪ್ರಯೋಗ 2025ರ ಏಪ್ರಿಲ್‌ನಲ್ಲಿ ನಡೆಯಲಿದೆ. 2026ಕ್ಕೆ ಲಸಿಕೆ ಲಭ್ಯವಾಗಲಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಸಹಕಾರ ನೀಡಬೇಕು' ಎಂದು ರಾಜೀವ್ ಬಹ್ಲ್ ಕೋರಿದರು.

ರಾಜ್ಯ ಸರ್ಕಾರ ಎಲ್ಲ ಅಗತ್ಯ ನೆರವು ನೀಡಲಿದೆ ಎಂದು ದಿನೇಶ್ ಗುಂಡೂರಾವ್ ಭರವಸೆ ನೀಡಿದರು. ಡೆಂಗಿ ನಿಯಂತ್ರಣಕ್ಕೆ ಕರ್ನಾಟಕ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ಐಸಿಎಂಆರ್‌ಗೆ ಸಚಿವರು ಮಾಹಿತಿ ನೀಡಿದರು. ಈ ಮಾದರಿಯನ್ನು ಇತರ ರಾಜ್ಯಗಳಲ್ಲಿ ಜಾರಿ ಮಾಡಲು ಐಸಿಎಂಆರ್ ಅಧಿಕಾರಿಗಳು ಉತ್ಸುಕತೆ ತೋರಿದರು ಎಂದು ಸಚಿವರು ತಿಳಿಸಿದರು.

ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಹಾಗೂ ಎನ್‌ಎಚ್‌ಎಂ ವ್ಯವಸ್ಥಾಪಕ ನಿರ್ದೇಶಕ ನವೀನ್ ಭಟ್ ಇದ್ದರು.

ಎ.ಐ ಧ್ವನಿ ಆಧಾರಿತ ಪ್ರತಿಕ್ರಿಯೆ ವ್ಯವಸ್ಥೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಂಕರ ಐ ಫೌಂಡೇಶನ್ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ನೆರವಿನಿಂದ ರೋಗಿಗಳಿಗೆ ಧ್ವನಿ ಆಧಾರಿತ ಪ್ರತಿಕ್ರಿಯೆ ವ್ಯವಸ್ಥೆ ಪ್ರಾರಂಭಿಸಿದೆ. ಫೌಂಡೇಶನ್ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಇದಕ್ಕೆ ಚಾಲನೆ ನೀಡಲಾಯಿತು.

ಶಂಕರ ಕಣ್ಣಿನ ಆಸ್ಪತ್ರೆಯ ಕಾರ್ಯಾಚರಣೆ ಮತ್ತು ಆಡಳಿತ ವಿಭಾಗದ ಅಧ್ಯಕ್ಷ ಭರತ್ ಬಾಲಸುಬ್ರಮಣ್ಯಂ, 'ಎಐ ಆಧಾರಿತ 'ಸಹಾಯ್' ಹೆಸರಿನ ವ್ಯವಸ್ಥೆಯು 20 ಭಾರತೀಯ ಭಾಷೆಗಳಲ್ಲಿ ಕಾರ್ಯನಿರ್ವಹಿಸಲಿದೆ. ಇದು ಭಾಷಾ ಮಾದರಿಗಳನ್ನು ಒಳಗೊಂಡಿದ್ದು, ರೋಗಿಯ ಆದ್ಯತೆಯ ಭಾಷೆಯಲ್ಲಿ ಪ್ರತಿಕ್ರಿಯಿಸಲಿದೆ. ಇದರಿಂದ ಗುಣಮಟ್ಟದ ವೈದ್ಯಕೀಯ ಸೇವೆ ಸಾಕಾರವಾಗಲಿದೆ' ಎಂದರು.

'ಈಗಾಗಲೇ ಹೊರರೋಗಿ ಮತ್ತು ಒಳರೋಗಿ ಸೇವೆಗಳಿಂದ 17,350 ಧ್ವನಿ ಮಾದರಿ ಸೇರಹಿಡಿಯಲಾಗಿದೆ. ಗುಂಟೂರು ಘಟಕದಿಂದ ಗರಿಷ್ಠ 3,816 ಧ್ವನಿ ಮಾದರಿಗಳನ್ನು ಸಂಗ್ರಹಿಸಲಾಗಿದೆ. ನೈಜ ಸಮಯದಲ್ಲಿ ಪ್ರತಿಕ್ರಿಯೆ ಪಡೆಯುವ ಮೂಲಕ ಸೇವೆಯ ಗುಣಮಟ್ಟ ಹೆಚ್ಚಿಸಲು ಈ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ' ಎಂದರು.

ಆರೋಗ್ಯ ಸಂತೆಯಲ್ಲಿ ರಂಗಕರ್ಮಿ ಅರುಂಧತಿ ನಾಗ್ ಅಭಿಮತ

'ಉತ್ತಮ ಹವ್ಯಾಸದಿಂದ ಮಾನಸಿಕ ಆರೋಗ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವನದಲ್ಲಿ ಉತ್ತಮ ಹವ್ಯಾಸ ಬೆಳೆಸಿಕೊಂಡರೆ ಮಾನಸಿಕ ಸಮಸ್ಯೆಗಳಿಂದ ಹೊರ ಬರಲು ಸಹಕಾರಿಯಾಗಲಿದೆ ಎಂದು ರಂಗಕರ್ಮಿ ಅರುಂಧತಿ ನಾಗ್ ಅಭಿಪ್ರಾಯಪಟ್ಟರು.

ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ಆತ್ಮಹತ್ಯೆ ತಡೆಯುವ ಉದ್ದೇಶದಿಂದ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಮಂಗಳವಾರ ಹಮ್ಮಿಕೊಂಡಿದ್ದ ಮಾನಸಿಕ ಆರೋಗ್ಯ ಸಂತೆ ಉದ್ಘಾಟಿಸಿ ಮಾತನಾಡಿದರು.

'ಪ್ರತಿಯೊಬ್ಬರೂ ಒಂದು ರೀತಿಯಲ್ಲಿ ಮಾನಸಿಕ ಸಮಸ್ಯೆಗೆ ಒಳಗಾಗಿರುತ್ತಾರೆ. ಕೆಲವರು ಹೊರ ಬರುತ್ತಾರೆ. ಮತ್ತೆ ಕೆಲವರು ಸಿಲುಕಿಕೊಂಡು ನರಳುತ್ತಾರೆ. ಸಮಸ್ಯೆ ಉಂಟಾದಾಗ ವೈದ್ಯರ ಬಳಿ ತೆರಳಿ ಸೂಕ್ತ ಚಿಕಿತ್ಸೆ ಪಡೆಯಬೇಕು' ಎಂದರು.

'ನನ್ನ 34ನೇ ವಯಸ್ಸಿನಲ್ಲಿ ರಸ್ತೆ ಅಪಘಾತದಲ್ಲಿ ಪತಿಯನ್ನು ಕಳೆದುಕೊಂಡೆ, ದೇಹದ ಹಲವು ಭಾಗಗಳಿಗೆ ಬಲವಾದ ಪೆಟ್ಟು ಬಿದ್ದಿತ್ತು. ಒಂದು ವರ್ಷ ಗಾಲಿ ಕುರ್ಚಿ ಬಳಸಿದೆ. ಆ ಸಂದರ್ಭದಲ್ಲಿ ಕುಟುಂಬದವರು, ಸ್ನೇಹಿತರು, ಒಡನಾಡಿಗಳು ಹಾಗೂ ವೈದ್ಯರು ನೀಡಿದ ಸಹಕಾರ ಮರೆಯುವಂತಿಲ್ಲ' ಎಂದು ಹೇಳಿದರು.

'ರಂಗಶಂಕರ ನಿರ್ಮಾಣ ಸಂದರ್ಭದಲ್ಲೇ ಮಗಳು ಹಾಸ್ಟೆಲ್ ಸೇರಬೇಕಾಯಿತು. ಹಲವು ದಿನ ಏಕಾಂಗಿಯಾಗಿದ್ದೆ. ರಂಗಭೂಮಿಯೊಂದಿಗೆ ಐದು ದಶಕದ ನಂಟು. ಅಡುಗೆ ಮಾಡುವುದು, ಹೊಲಿಗೆ ಹಾಕುವುದು, ಕೈ ತೋಟದಲ್ಲಿ ತೊಡಗಿಸಿಕೊಂಡರೆ ಸಮಸ್ಯೆಯಿಂದ ಹೊರ ಬರಬಹುದು. ಆದರೆ, ಜನರು ಒಳ್ಳೆಯ ಹವ್ಯಾಸದಲ್ಲಿ ತೊಡಗಿಸಿಕೊಳ್ಳುವುದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಜೀವನದಲ್ಲಿ ಹಣ ಗಳಿಸಲು ಆರಂಭಿಸುತ್ತಿದ್ದಂತೆ ನಮ್ಮನ್ನೇ ನಾವು ಮರೆಯುತ್ತೇವೆ. ಒಳ್ಳೆಯ ಹವ್ಯಾಸಗಳು ನೆನಪು ಆಗುವುದಿಲ್ಲ. ಹಣ ಸಂಪಾದನೆ ಜೊತೆಗೆ ಉತ್ತಮ ಹವ್ಯಾಸಗಳು ಇರಬೇಕು' ಎಂದು ಹೇಳಿದರು.

ಮಾನಸಿಕ ಆರೋಗ್ಯ ಶಿಕ್ಷಣ ವಿಭಾಗದ ಮುಖ್ಯಸ್ಥೆ ಡಾ.ಕೆ.ಎಸ್. ಮೀನಾ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿಮ್ಹಾನ್ಸ್ ನಿರ್ದೇಶಕಿ ನಿರ್ವೇಶಕಿ ಡಾ. ಪ್ರತಿಮಾ ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ಮಾನಸಿಕ ಆರೋಗ್ಯ ಮತ್ತು ಆತ್ಮಹತ್ಯೆ ತಡೆ ಕುರಿತು ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಗಣ್ಯರು ಬಹುಮಾನ ವಿತರಿಸಿದರು. ಆತ್ಮಹತ್ಯೆ ತಡೆ ಕುರಿತು ವಿವಿಧ ಸಂಘ ಸಂಸ್ಥೆಗಳು ನಾಟಕ ಪ್ರದರ್ಶಿಸಿ ಜಾಗೃತಿ ಮೂಡಿಸಿದವು.



ನಿಮ್ಹಾನ್ಸ್‌ನಲ್ಲಿ ಏರ್ಪಡಿಸಿದ್ದ ಮಾನಸಿಕ ಆರೋಗ್ಯ ಸಂತೆ ಕಾರ್ಯಕ್ರಮದ ಮಳಿಗೆಗೆ ರಂಗಕರ್ಮಿ ಅರುಂಧತಿ ನಾಗ್ ಭೇಟಿ ನೀಡಿದ್ದರು. ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ಡಾ. ಕೆ.ಎಸ್.ಮೀನಾ ಇದ್ದರು

ಮಾನಸಿಕ ಸಮಸ್ಯೆ: 14416ಕ್ಕೆ ಕರೆ ಮಾಡಿ

'ಮಾನಸಿಕ ಕಾಯಿಲೆ, ಆತ್ಮಹತ್ಯೆ ಯೋಚನೆ, ಕೆಲಸದ ಒತ್ತಡ, ಪರೀಕ್ಷೆಯ ಭಯ, ಏಕಾಂಗಿತನ, ಖಿನ್ನತೆ ಇನ್ನಿತರ ಸಮಸ್ಯೆಗಳಿಂದ ಬಳಲುತ್ತಿದ್ದರೆ 'ಟೆಲಿ ಮನಸ್' ಸಹಾಯವಾಣಿ ಸಂಖ್ಯೆ 14416ಕ್ಕೆ ಕರೆ ಮಾಡಿ ಮಾಡಿ, ಉಚಿತ ಸಲಹೆ ಪಡೆಯಬಹುದು' ಎಂದು ನಿಮ್ಹಾನ್ಸ್ ವೈದ್ಯರು ತಿಳಿಸಿದರು.

'ಟೆಲಿ ಮನಸ್‌ಗೆ ಕರೆ ಮಾಡಿದರೆ ಆಪ್ತ ಸಮಾಲೋಚಕರು ಸಮಸ್ಯೆ ಆಲಿಸಿ ಸೂಕ್ತ ಸಲಹೆ ನೀಡುತ್ತಾರೆ. ಅಗತ್ಯವೆನಿಸಿದರೆ ವೈದ್ಯರು ಔಷಧ ಸೂಚಿಸುತ್ತಾರೆ. ಹಲವು ಮಂದಿ ಇದರ ಪ್ರಯೋಜನ ಪಡೆದುಕೊಂಡಿದ್ದಾರೆ' ಎಂದು ವೈದ್ಯಾಧಿಕಾರಿ ಡಿ. ಯತೀಶ್ ಹೇಳಿದರು.

'ಮಾನಸಿಕ ಕಾಯಿಲೆಗೆ ಕೌನ್ಸೆಲಿಂಗ್, ಥೆರಪಿ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. ನಂತರ ಕಂಪ್ಯೂಟರ್ ತರಬೇತಿ, ಜೀವನ ಕೌಶಲ, ಅಡಿಕೆ ತಟ್ಟೆ ತಯಾರಿಕೆ ತರಬೇತಿ ನೀಡಲಿದ್ದೇವೆ' ಎಂದು ಕ್ಷೇಮ ಮೈಂಡ್ ಕೇರ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಶ್ರೀಪತಿ ತಿಳಿಸಿದರು.

ನಗರದಲ್ಲಿ ಇಂದು

ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ: ಜೆ.ರಾಜ ಗುಂಡಾಪುರ, ಮುಖ್ಯ ಅತಿಥಿ: ಬಿ.ಎಂ. ಪಟೇಲ್ ಪಾಂಡು, ಅಧ್ಯಕ್ಷತೆ: ಎನ್. ಕಾಮರಾಜು, ಆಯೋಜನೆ ಹಾಗೂ ಸ್ಥಳ: ಶ್ರೀ ಶಾರದಾ ಪ್ರಥಮದರ್ಜೆ ಕಾಲೇಜು, ಬ್ಯಾಟರಾಯನಪುರ, ಬೆಳಿಗ್ಗೆ 10

ಪಿ.ಜಿ. ಮಾಲೀಕರ ಜಾಗೃತಿ ಸಮಾವೇಶ: ಅತಿಥಿಗಳು: ಸುರಳ್ಕರ್ ವಿಕಾಸ್ ಕಿಶೋರ್, ಎಸ್.ಕೆ. ಉಮೇಶ್, ಗಂಗಾಂಬಿಕೆ ಮಲ್ಲಿಕಾರ್ಜುನ್, ಆಯೋಜನೆ: ಪಿ.ಜಿ. ಮಾಲೀಕರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಬೆಳಿಗ್ಗೆ 10.30

ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿಗಳು: ಎನ್. ಶಿವಶೈಲಂ, ಶ್ರೀನಿವಾಸುಲು, ಗೌರವ ಅತಿಥಿ: ಕೆ.ಚಂದ್ರಶೇಖರ್, ಆಯೋಜನೆ: ಭಗವಾನ್ ಬುದ್ಧ ಹೋಮಿಯೋಪಥಿಕ್ ವೈದ್ಯಕೀಯ ಕಾಲೇಜು, ಸ್ಥಳ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಯುನಾನಿ ಮೆಡಿಸಿನ್, ಕೊಟ್ಟಿಗೆಪಾಳ್ಯ, ಬೆಳಿಗ್ಗೆ 11

'ಪ್ರಚಂಡ ರಾವಣ' ಪೌರಾಣಿಕ ನಾಟಕ ಪ್ರದರ್ಶನ: ಉದ್ಘಾಟನೆ: ರಾಜು ಡಿ., ಅಧ್ಯಕ್ಷ: ಜಗದೀಶ್ ಗೌಡ, ಆಯೋಜನೆ: ಏಕಲವ್ಯ ಫೌಂಡೇಶನ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ನಾಡಹಬ್ಬ ದಸರಾ ಪ್ರಯುಕ್ತ ಕವಿಗೋಷ್ಠಿ ಮತ್ತು ನಾಟಕ ಪ್ರದರ್ಶನ: ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಮುಖ್ಯ ಅತಿಥಿಗಳು: ಸಾ.ರಾ. ಗೋವಿಂದು, ಸಿ.ಕೆ. ರಾಮೇಗೌಡ, ಕವಿಗೋಷ್ಠಿ ಅಧ್ಯಕ್ಷತೆ: ಕೋಟಿಗಾನಹಳ್ಳಿ ರಾಮಯ್ಯ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ರಾಜರಾಜೇಶ್ವರಿ ಸೇವಾ ಟ್ರಸ್ಟ್, ಕರ್ನಾಟಕ ಸ್ವಾಭಿಮಾನಿ ವೇದಿಕೆ, ಸ್ಥಳ: ನಯನ ಸಭಾಂಗಣ, ಜೆ.ಸಿ.ರಸ್ತೆ, ಸಂಜೆ 4.30



ಕೋಟಿಗಾನಹಳ್ಳಿ ರಾಮಯ್ಯ

ವಿಶ್ವ ಆಹಾರ ದಿನಾಚರಣೆ ಪ್ರಯುಕ್ತ ಆಹಾರದ ಮಹತ್ವದ ಬಗ್ಗೆ ಜಾಗೃತಿ: ಆಯೋಜನೆ: ಆಹಾರ ಸಂರಕ್ಷಣಾ ಜನಜಾಗೃತಿ ಅಭಿಯಾನ ಕೊಡಗು–ಬೆಂಗಳೂರು, ಸ್ಥಳ: ಪುರಭವನದ ಮುಂಭಾಗ (ಟೌನ್ ಹಾಲ್), ಸಂಜೆ 5.30

ಎ.ವಿ. ನಾವಡ ಅವರು ಸಂಪಾದಿಸಿರುವ 'ಮುದ್ದಣ ಕೃತಿ ಕರಜನ' ಕಾವ್ಯ ಸಂಪುಟ ಬಿಡುಗಡೆ: ಹಂ.ಪ. ನಾಗರಾಜಯ್ಯ, ಮೊದಲ ಪ್ರತಿ ಸ್ವೀಕಾರ: ಯು.ಟಿ. ಖಾದರ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಮುಖ್ಯ ಅತಿಥಿ: ಮಲ್ಲೇಪುರಂ ಜಿ. ವೆಂಕಟೇಶ, ಕೃತಿ ಬಗ್ಗೆ ಮಾತು: ಪುರುಷೋತ್ತಮ ಬಿಳಿಮಲೆ, ಆಯೋಜನೆ ಹಾಗೂ ಸ್ಥಳ: ಶೇಷಾದ್ರಿಪುರಂ ಸಂಜೆ ಕಾಲೇಜು, ಶೇಷಾದ್ರಿಪುರ, ಸಂಜೆ 6

ಓದು ಮತ್ತು ಸಂವಾದ ಉದ್ಘಾಟನಾ ಸಮಾರಂಭ: ಸಂಪನ್ಮೂಲ ವ್ಯಕ್ತಿಗಳು: ರೇಖಾ ಕೌಶಿಕ್, ನಟರಾಜ್ ತಲಘಟ್ಟಪುರ, ಅಧ್ಯಕ್ಷತೆ: ಕೆ.ಎಸ್. ಗೋಪಾಲಕೃಷ್ಣ, ಆಯೋಜನೆ ಹಾಗೂ ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ಜಯನಗರ, ಸಂಜೆ 6.30

ಕಾರ್ಯಕ್ರಮಗಳ ಆಮಂತ್ರಣವನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ: nagaradalli_indu@prajavani.co.in

ಮಹಾಬಲ ಶೆಟ್ಟಿ, ಶ್ರದ್ಧಾಗೆ ಪ್ರಶಸ್ತಿ

ಬೆಂಗಳೂರು: ಷಡ್ಜ ಕಲಾ ಕೇಂದ್ರ ಟ್ರಸ್ಟ್ ನೀಡುವ 'ಕೀರ್ತನ ಸೇವಾ ರತ್ನ ಪುರಸ್ಕಾರ'ಕ್ಕೆ ಕೀರ್ತನಕಾರ ಕೆ.ಮಹಾಬಲ ಶೆಟ್ಟಿ ಹಾಗೂ 'ಶ್ರೀ ಲಕ್ಷ್ಮಣದಾಸ ವೇಲಣಕರ್ ಮೆಮೋರಿಯಲ್ ಯುವ ಪುರಸ್ಕಾರ'ಕ್ಕೆ ಹರಿಕಥಾ ಕಲಾವಿದೆ ಶ್ರದ್ಧಾ ಗುರುದಾಸ್ ಆಯ್ಕೆಯಾಗಿದ್ದಾರೆ.

ಹರಿಕಥಾ ಕ್ಷೇತ್ರಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿದವರಿಗೆ ಹಾಗೂ ಪ್ರತಿಭಾವಂತ ಯುವ ಕೀರ್ತನಕಾರರಿಗೆ ಈ ಪುರಸ್ಕಾರ ನೀಡಲಾಗುತ್ತಿದೆ. ಮಂಗಳೂರಿನ ಮಹಾಬಲ ಶೆಟ್ಟಿ ಅವರು ವೃತ್ತಿಯಲ್ಲಿ ವಕೀಲರಾಗಿದ್ದು, 50 ವರ್ಷಗಳಿಂದ ಹರಿಕಥಾ ಕಲೆಗೆ ಕೊಡುಗೆ ನೀಡುತ್ತಿದ್ದಾರೆ. ಶ್ರದ್ಧಾ ಗುರುದಾಸ್ ಅವರು ರಾಜ್ಯದ ವಿವಿಧೆಡೆ ಪ್ರದರ್ಶನ ನೀಡಿದ್ದಾರೆ.

ಇದೇ 20ರಂದು ಸಂಜೆ 4.30ಕ್ಕೆ ಭಾರತೀಯ ವಿದ್ಯಾಭವನದಲ್ಲಿ 'ಕಥಾ ಕೀರ್ತನ ವೈಭವ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದೇ ವೇಳೆ ಪುರಸ್ಕಾರ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.


सत्यमेव जयते
Government of Gujarat
India's Largest
Shopping Festival
AHMEDABAD
SHOPPING FESTIVAL
Something for everyone!
12th Oct, 2024 to 14th Jan, 2025
(From Dussehra to Uttarayan)
Get ready for the Ahmedabad Shopping Festival where you can shop, celebrate, and experience Ahmedabad like never before! From big bargains to thrilling events and unmissable shows, there's something for everyone, every day!
Up to
50%*
Discount
at 1000+ Stores
& On Products by Local Artisans
04 Exclusive Shopping Districts
• Sindhu Bhavan Road
• C. G. Road
• Maninagar – Kankaria Rambaug Road
• Nikol – Modern Street and Naroda Area
14 Exciting Hotspots
• Sabarmati Riverfront
• Manek Chowk
• Gujari Bazaar
• Law Garden
• Shivranjani
• Science City
• Bhadra Plaza
• Ahmedabad One Mall - Vastrapur
• Prahlad Nagar Road
• Palladium Mall
• ISCON Mega Mall
• Kesari Nandan Chowk - Khodiyar Mandir
• Visat - Chandkheda
• Ashram Road
05 Thrilling Themes
KALA NAGRI
Shopping & Art Zone
SWAAD STREET
Food Zone
MASTI JUNCTION
Game Zone
RANGMANCH
Cultural Activity Zone
KHEL GULLY
Sports Zone
300+ Jewellery Shops
05 Malls
Spectacular Events
Laser Shows
Street Carnivals
Live Performances by Top Artists and more
Join the Celebration
Visit www.ahmedabadshoppingfestival2024.com, enter your details and receive your exclusive QR Code to unlock all the offers of the festival.
Scan QR Code for Website
* Conditions Apply. Offers are for limited period and available at partner stores only. Offers are subject to change without prior notice.

ವಿವಿಧ ರಸ್ತೆಗಳು ಜಲಾವೃತ ● ವಾಹನಗಳ ಸಂಚಾರಕ್ಕೆ ಸಂಚಕಾರ ● ಪರದಾಡಿದ ನಾಗರಿಕರು

ದಿನವಿಡೀ ಮಳೆ; ಜನಜೀವನ ಅಸ್ತವ್ಯಸ್ತ



ರಾಜಾಜಿನಗರದ ಓಕಳೀಪುರ ರಸ್ತೆಯಲ್ಲಿ ಮಂಗಳವಾರ ಕಂಡುಬಂದ ವಾಹನಗಳ ದಟ್ಟಣೆ –ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.



ಓಕಳೀಪುರ ರೈಲ್ವೆ ಅಂಡರ್‌ಪಾಸ್‌ನಲ್ಲಿ ಮಳೆಯ ನೀರಲ್ಲೇ ಸಾಗಿದ ವಾಹನಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ರಾತ್ರಿಯಿಂದ ಮಂಗಳವಾರ ರಾತ್ರಿಯವರೆಗೆ ಅಬ್ಬರಿಸಿ ಸುರಿದ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿತು. ಬಹುತೇಕ ಪ್ರದೇಶಗಳಲ್ಲಿ ವಾಹನ ಸಂಚಾರಕ್ಕೆ ಅಡಚಣೆಯಾಗಿದ್ದು, ಹಲವೆಡೆ ಮನೆಗಳು, ಅಪಾರ್ಟ್‌ಮೆಂಟ್‌ಗಳಿಗೆ ನೀರು ನುಗ್ಗಿದೆ.

ಮೂರು ದಿನದಿಂದ ಆಗಾಗ್ಗೆ ಬೀಳುತ್ತಿದ್ದ ಮಳೆ, ಸೋಮವಾರ ರಾತ್ರಿಯಿಂದ ಆರಂಭವಾಗಿ ಮಂಗಳವಾರ ಮುಂಜಾನೆಯಿಂದ ಬಿರುಸಾಯಿತು. ತಗ್ಗುಪ್ರದೇಶಗಳ ನಿವಾಸಿಗಳು ಪರಿತಪಿಸಿದರು.

ಮಂಗಳವಾರ ಮಧ್ಯಾಹ್ನದವರೆಗೂ ಮಳೆ ನಿರಂತರವಾಗಿ ಸುರಿದಿದ್ದರಿಂದ, ಶಾಲಾ–ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳು ಪರದಾಡಿದರು. ಕಚೇರಿ ಹಾಗೂ ಇತರೆ ಕಾರ್ಯಗಳಿಗೆ ಹೊರಟಿದ್ದ ನಾಗರಿಕರು ಮಳೆಯಲ್ಲೇ ಸಂಚರಿಸಬೇಕಾಯಿತು.

ಯಲಹಂಕ, ಕೆ.ಆರ್. ಪುರದ ಕೆಲವು ಬಡಾವಣೆ, ಮನೆ ಹಾಗೂ ಅಪಾರ್ಟ್‌ಮೆಂಟ್‌ಗಳಿಗೆ ಮಳೆ ನೀರಿನ ಜೊತೆಗೆ ಒಳಚರಂಡಿ ನೀರೂ ನುಗ್ಗಿ ನಿವಾಸಿಗಳು ಪರದಾಡುವಂತಾಗಿದೆ.

ಸೋಮವಾರ ಬೆಳಿಗ್ಗೆ 8.30ರಿಂದ ಮಂಗಳವಾರ ಬೆಳಿಗ್ಗೆ 8.30ರವರೆಗೆ ಸರಾಸರಿ 3.7 ಸೆಂಟಿ ಮೀಟರ್ ಮಳೆಯಾಗಿತ್ತು. ಮಂಗಳವಾರ ಬೆಳಿಗ್ಗೆ 8.30ರಿಂದ ಮಧ್ಯಾಹ್ನ 3.30ರವರೆಗೆ ಸರಾಸರಿ 6.5 ಸೆಂ.ಮೀಟರ್ ಮಳೆಯಾಗಿದೆ. ಯಲಹಂಕ, ಪಶ್ಚಿಮ ಹಾಗೂ ಪೂರ್ವ ವಲಯದಲ್ಲಿ ಅತಿಹೆಚ್ಚು ಮಳೆ ಸುರಿದಿದೆ.

ಯಲಹಂಕ ವಲಯದಲ್ಲಿ 142 ಮನೆಗಳಿಗೆ ನೀರು ನುಗ್ಗಿದ್ದು, 102 ಮನೆಗಳಲ್ಲಿ ಬಿಬಿಎಂಪಿ ಸಿಬ್ಬಂದಿ ಪರಿಹಾರ ಕಾರ್ಯ ಕೈಗೊಂಡಿದ್ದರು. ಮಳೆ ನೀರಿನ ಜೊತೆಗೆ ರಾಜಕಾಲುವೆ ನೀರು ಹಾಗೂ ಒಳಚರಂಡಿ ಕಲ್ಮಶವೂ ಮನೆಗಳಿಗೆ ನುಗ್ಗಿ ಜನರು ಸಂಕಷ್ಟ ಅನುಭವಿಸಿದರು.

39 ಮರಗಳು ಧರೆಗೆ: ಸಿಎಂಟಿಐ ಜಂಕ್ಷನ್ ಬಳಿ ಎಫ್‌ಟಿಐ ರಸ್ತೆಯಲ್ಲಿ ಮರ ಬಿದ್ದು, ವಾಹನ ಸಂಚಾರಕ್ಕೆ ಅಡಚಣೆಯಾಯಿತು. ಪರ್ಯಾಯ ಮಾರ್ಗದಲ್ಲಿ ವಾಹನ ಸಂಚಾರಕ್ಕೆ ಪೊಲೀಸರು ಅನುವು ಮಾಡಿಕೊಟ್ಟರು.

ಲಾವೆಲ್ಲೆ ರಸ್ತೆಯಿಂದ ರಿಚ್ಮಂಡ್ ಸರ್ಕಲ್ ಕಡೆಗೆ ಹೋಗುವ ಮಾರ್ಗದಲ್ಲಿ ಮರ ಬಿದ್ದು, ರಸ್ತೆಯಲ್ಲಿ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿತ್ತು. ಎಚ್‌ಎಂಟಿ ಬಡಾವಣೆಯಲ್ಲಿ ಮರ ಉರುಳಿಬಿದ್ದು ಕಾರಿಗೆ ಹಾನಿಯಾಗಿದೆ.

ಒಟ್ಟು 39 ಮರಗಳು ಧರೆಗುರುಳಿದ್ದು, ಯಲಹಂಕ ವಲಯದಲ್ಲಿ ಅತಿ ಹೆಚ್ಚು (10) ಮರಗಳು ಬಿದ್ದಿವೆ. 55 ಕಡೆ ಕೊಂಬೆಗಳು ಬಿದ್ದಿದ್ದು, ಪೂರ್ವ (22) ಹಾಗೂ ಬೊಮ್ಮನಹಳ್ಳಿ (16) ವಲಯದಲ್ಲಿ ಹೆಚ್ಚು ಬಿದ್ದಿದ್ದವು.

ಹೆಚ್ಚಾದ ಪ್ರಯಾಣ ದರ: ನಗರದಲ್ಲಿ ದಿನವಿಡಿ ಸುರಿದ ಮಳೆಯಿಂದ, ಆಟೊ ಹಾಗೂ ಟ್ಯಾಕ್ಸಿ ಪ್ರಯಾಣ ದರ ದಿಢೀರನೇ ದುಪ್ಪಟ್ಟಿಗಿಂತ ಹೆಚ್ಚಾಯಿತು. ₹100 ದರಕ್ಕೆ ₹400ರವರೆಗೂ ಆಟೊ ಮತ್ತು ಟ್ಯಾಕ್ಸಿ ಚಾಲಕರು ಬೇಡಿಕೆ ಇರಿಸಿದರು.

ಮಳೆ ಸುರಿಯುತ್ತಿದ್ದುದರಿಂದ ಅನ್ಯ ಮಾರ್ಗವಿಲ್ಲದೆ ಪ್ರಯಾಣಿಕರು ಹೆಚ್ಚಿನ ಮೊತ್ತ ನೀಡಿ ಪ್ರಯಾಣಿಸಿದರು. 'ಕೆಲವು ಸಂದರ್ಭದಲ್ಲಿ ಬುಕ್ ಮಾಡಿದ ದರಕ್ಕಿಂತ ಹೆಚ್ಚು ಮೊತ್ತವನ್ನೂ ನೀಡಬೇಕಾಯಿತು' ಎಂದು ನಾಗರಿಕರು ದೂರಿದರು.

ಸಂಚಾರ ದಟ್ಟಣೆ: ಹಲವು ರಸ್ತೆಗಳಲ್ಲಿ ಮಳೆ ನೀರು ನಿಂತಿದ್ದರಿಂದ ಸಂಚಾರ ದಟ್ಟಣೆ ಉಂಟಾಯಿತು. ನಾಲ್ಕೈದು ಕಿ.ಮೀ ಪ್ರಯಾಣಕ್ಕೆ ಒಂದು ಗಂಟೆಗೂ ಹೆಚ್ಚು ಸಮಯ ಬೇಕಾಯಿತು.



ಬೆಂಗಳೂರಿನಲ್ಲಿ ಮಂಗಳವಾರ ದಿನವಿಡೀ ಸುರಿದ ತುಂತುರು ಮಳೆಗೆ ಟಾರ್ಪಲ್ ಹಿಡಿದು ಸಾಗಿದ ವಿದ್ಯಾರ್ಥಿಗಳು

ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ಎಲ್ಲಿ ಎಷ್ಟು ಮನೆಗಳಿಗೆ ನೀರು?

ವಲಯ	ಪ್ರದೇಶಗಳಿಗೆ ನೀರು	ಮನೆಗಳಿಗೆ ನೀರು	ಬಿದ್ದ ಮರ	ಬಿದ್ದ ಕೊಂಬೆ
ಪೂರ್ವ	14	0	4	22
ಪಶ್ಚಿಮ	1	0	2	3
ದಕ್ಷಿಣ	0	0	7	6
ಮಹದೇವಪುರ	12	20	3	2
ಬೊಮ್ಮನಹಳ್ಳಿ	4	0	5	16
ರಾಜರಾಜೇಶ್ವರಿನಗರ	8	0	4	1
ಯಲಹಂಕ	12	118	10	5
ದಾಸರಹಳ್ಳಿ	1	4	4	0
ಒಟ್ಟು	52	142	39	55

ಎಲ್ಲಿ ಅತಿಹೆಚ್ಚು ಮಳೆ? (ಸೆಂ.ಮೀನಲ್ಲಿ)

ಚೌಡೇಶ್ವರಿ ಯಲಹಂಕ	8.5
ಎಚ್‌ಎಎಲ್ ವಿಮಾನ ನಿಲ್ದಾಣ	8.3
ವಿದ್ಯಾರಣ್ಯಪುರ	8.0
ಜಕ್ಕೂರು	7.2
ಮಾರತ್‌ಹಳ್ಳಿ	6.6.
ಹೊರಮಾವು	6.4
ದೊಡ್ಡನೆಕ್ಕುಂದಿ	6.2
ಪುಲಕೇಶಿನಗರ	6.0
ಸಂಪಂಗಿರಾಮನಗರ	5.6
ಬಾಣಸವಾಡಿ	5.6
ಬಸವೇಶ್ವರನಗರ	5.3
ವಿಶ್ವನಾಥ ನಾಗೇನಹಳ್ಳಿ	5.2
ರಾಜಮಹಲ್ ಗುಟ್ಟಹಳ್ಳಿ	5.1
ನಾಗಪುರ	5.0
ಹಂಪನಗರ	4.8
ಕೋರಮಂಗಲ	4.4
ವನ್ನಾರ್‌ಪೇಟೆ	4.4
ಮಾರುತಿ ಮಂದಿರ	4.3
ದೊರೆಸಾನಿಪಾಳ್ಯ	4.0
ನಂದಿನಿಲೇಔಟ್	4.0
ಪೀಣ್ಯ ಕೈಗಾರಿಕೆ ಪ್ರದೇಶ	3.9
ರಾಮಮೂರ್ತಿನಗರ	3.8
ಎಚ್‌ಎಸ್‌ಆರ್ ಲೇಔಟ್	3.4
ಚಾಮರಾಜಪೇಟೆ	3.4
ಕೆಂಗೇರಿ	3.4
ಗರುಡಾಚಾರ್‌ಪಾಳ್ಯ	3.3
ಶೆಟ್ಟಿಹಳ್ಳಿ	3.3
ಹೊಯ್ಸಳನಗರ	3.3
ಬೊಮ್ಮನಹಳ್ಳಿ	3.2
ಕೆ.ಆರ್. ಪುರ	3.1
ಹಗದೂರು	3.1
ಬಿಟಿಎಂ ಲೇಔಟ್	3.1
ವಿಶ್ವನಾಥಪುರ	3.1
ದೊಡ್ಡಬಿದರಕಲ್ಲು	3.0



ಕನಕನಪಾಳ್ಯ ರಸ್ತೆಯ ಆರ್‌.ವಿ. ಶಿಕ್ಷಕರ ಕಾಲೇಜು ಎದುರು ಉರುಳಿದ ಮರ

ಮಳೆ ನಂತರದ ಚಿತ್ರಗಳು



ಎಂಇಐ ಹೌಸಿಂಗ್ ಕಾಲೊನಿಯಲ್ಲಿ ಬಿದ್ದಿರುವ ಮರ



ಶೆಟ್ಟಿಹಳ್ಳಿ ವಾರ್ಡ್ ಎಜಿಬಿ ಬಡಾವಣೆಯಲ್ಲಿ ಬಿದ್ದಿರುವ ಮರ



ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆಯಲ್ಲಿ ವಾಹನಗಳು ಮಂದಗತಿಯಲ್ಲಿ ಸಾಗಿದವು

ಪ್ರಜಾವಾಣಿ ಚಿತ್ರಗಳು

ಗಾಣಿಗರಹಳ್ಳಿ ಕೆರೆ ಕೋಡಿ: ಮನೆಗೆ ನುಗ್ಗಿದ ನೀರು



ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಸತತ ಮಳೆಯಿಂದಾಗಿ ಗಾಣಿಗರಹಳ್ಳಿ ಕೆರೆ ತುಂಬಿ ಕೋಡಿ ಹರಿಯಿತು. ರಾಜಕಾಲುವೆಯಿಂದ ನೀರು ಹರಿಯದೆ, ಅಕ್ಕಪಕ್ಕದ ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಯಿತು.

ಶೆಟ್ಟಿಹಳ್ಳಿಯ ನಿಸರ್ಗ ಲೇಔಟ್, ಚಿಕ್ಕಬಾಣಾವರದ ಮಾರುತಿ ನಗರದ ಮನೆಗಳಿಗೆ ಹಾಗೂ ಚಿಕ್ಕಬಾಣಾವರದ ಮಾರುತಿ ನಗರದ ಆರು ಮನೆಗಳಿಗೆ ನೀರು ನುಗ್ಗಿತ್ತು. ಸುತ್ತಮುತ್ತಲ ರಸ್ತೆಗಳು, ಪ್ರದೇಶ ಜಲಾವೃತಗೊಂಡು ವಾಹನ ಸವಾರರು ಪರದಾಡುವಂತಾಯಿತು. ಸುತ್ತಮುತ್ತಲಿನ ಅಂಗಡಿಗಳಿಗೂ ನೀರು ನುಗ್ಗಿತ್ತು.

ಚಿಕ್ಕಬಾಣಾವರ ಪುರಸಭೆ ಎಂಜಿನಿಯರ್ ಸುಮತಿ ಪ್ರತಿಕ್ರಿಯಿಸಿ, 'ಗಾಣಿಗರಹಳ್ಳಿ ಕೆರೆ ಕೋಡಿಯಾಗಿ ದಿಢೀರನೆ ಬಂದ ನೀರಿನಿಂದ ರಾಜಕಾಲುವೆಗೆ ಒತ್ತಡ ಹೆಚ್ಚಾಯಿತು. ಈ ನೀರು ಮನೆಗಳಿಗೆ ನುಗ್ಗಿದೆ. ನಿವಾಸಿಗಳು ಸದ್ಯ ಸಂಬಂಧಿಕರ ಮನೆಗಳಿಗೆ ಹೋಗಿದ್ದು, ಅವರಿಗೆ ಊಟ, ತಿಂಡಿ ವ್ಯವಸ್ಥೆ ಕೂಡ ಮಾಡಲಾಗಿದೆ' ಎಂದರು.

ರಸ್ತೆಯಲ್ಲಿ ನೀರು ನಿಲ್ಲದಂತೆ ಕ್ರಮ

ಸರ್ವ ರೀತಿಯೂ ಸನ್ನದ್ಧರಾಗಿರಲು ಆಯುಕ್ತ ತುಷಾರ್ ಗಿರಿನಾಥ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಳೆ ನೀರು ರಸ್ತೆಯಲ್ಲಿ ನಿಲ್ಲದಂತೆ ಕ್ರಮ ಕೈಗೊಂಡು, ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ಬೆಳಿಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, 'ಮುಂದಿನ ಮೂರು ದಿನವೂ ನಿರಂತರ ಮಳೆಯಾಗುವ ನಿರೀಕ್ಷೆ ಇದೆ. ವಲಯ ವ್ಯಾಪ್ತಿಯ ಅಧಿಕಾರಿಗಳು ಸನ್ನದ್ಧರಾಗಿದ್ದು, ಮುಂಜಾಗ್ರತೆಯಿಂದ ಕಾರ್ಯನಿರ್ವಹಿಸಬೇಕು' ಎಂದು ತಿಳಿಸಿದರು.

'ಯಾವುದೇ ಸಮಸ್ಯೆಯಾಗದಂತೆ ಅಗತ್ಯಕ್ರಮ ಕೈಗೊಳ್ಳಬೇಕು. ಬಾಧಿತ ಪ್ರದೇಶಗಳ ಬಳಿ ನಿಗಾ ವಹಿಸಬೇಕು. ಸಮಸ್ಯೆಯಾಗುವ ಸಂಭವವಿದ್ದರೆ ಸ್ಥಳೀಯ ನಿವಾಸಿಗಳನ್ನು ಕೂಡಲೆ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯುವ ವ್ಯವಸ್ಥೆ ಮಾಡಬೇಕು' ಎಂದು ಸೂಚಿಸಿದರು.

'ಮಳೆಯಿಂದಾಗಿ ರಸ್ತೆಗಳು ಜಲಾವೃತವಾಗುವ ಕಾರಣ ಹೆಚ್ಚು ಸಂಚಾರ ದಟ್ಟಣೆಯಾಗಲಿದೆ. ಈ ಸಂಬಂಧ ರಸ್ತೆ ಮೂಲಸೌಕರ್ಯ ವಿಭಾಗದ ಅಧಿಕಾರಿಗಳು ಎಲ್ಲ ಪ್ರಮುಖ ರಸ್ತೆಗಳಲ್ಲಿ ಪರಿಶೀಲನೆ ನಡೆಸಿ, ನೀರು ನಿಲ್ಲದಂತೆ ಸೂಕ್ತ ಕ್ರಮ ವಹಿಸಬೇಕು. ಪಾಲಿಕೆ ಸಿಬ್ಬಂದಿಯ ಸಹಯೋಗದೊಂದಿಗೆ ಗ್ರೇಟಿಂಗ್ಸ್‌ಗಳ ಬಳಿ ತ್ಯಾಜ್ಯವನ್ನು ಸ್ವಚ್ಛಗೊಳಿಸಿ ಬದಿಯ ಕಾಲುವೆಗಳಿಗೆ ಸರಾಗವಾಗಿ ಮಳೆ ನೀರು ಹರಿದು ಹೋಗುವಂತೆ ನೋಡಿಕೊಳ್ಳಬೇಕು. ರಾಜಕಾಲುವೆಗಳಲ್ಲಿ ಸರಾಗವಾಗಿ ನೀರು ಹರಿಯುವಂತೆ ವ್ಯವಸ್ಥೆ ಮಾಡಬೇಕು' ಎಂದರು.

ಮಳೆ ನೀರು ನಿಂತಿರುವ, ಜಲಾವೃತವಾಗಿರುವ, ಮರ, ಮರದ ರೆಂಬೆ-ಕೊಂಬೆಗಳು ಧರೆಗುರುಳಿರುವುದು ಸೇರಿ ಸಮಸ್ಯೆಗಳ ಕುರಿತು ನಾಗರಿಕರಿಂದ ನಿಯಂತ್ರಣ ಕೊಠಡಿಗೆ ಬರುವ ದೂರುಗಳಿಗೆ ಕೂಡಲೆ ಸ್ಪಂದಿಸಿ ಪರಿಹಾರ ಒದಗಿಸಲು ಅಧಿಕಾರಿಗಳಿಗೆ ಸೂಚಿಸಿದರು.



ವಿಂಡ್ಸರ್ ಮ್ಯಾನರ್ ಅಂಡರ್‌ಪಾಸ್‌ನಲ್ಲಿ ನಿಂತಿದ್ದ ಮಳೆ ನೀರನ್ನು ಚರಂಡಿಗೆ ಹರಿಸಲು ಬಿಬಿಎಂಪಿ ಸಿಬ್ಬಂದಿ ಮಳೆಯಲ್ಲಿಯೇ ಕಾರ್ಯನಿರ್ವಹಿಸಿದರು

1533ಗೆ ಕರೆ ಮಾಡಿ

ಎಂಟು ವಲಯ ವ್ಯಾಪ್ತಿಯಲ್ಲಿ ನಿಯಂತ್ರಣ ಕೊಠಡಿಗಳಿದ್ದು, ಪಾಲಿಕೆ ಕೇಂದ್ರ ಕಚೇರಿಯಲ್ಲಿ ನಿಯಂತ್ರಣ ಕೊಠಡಿಯಿದೆ. ಮಳೆಯಿಂದಾಗಿ ಏನಾದರೂ ಸಮಸ್ಯೆಗಳಿದ್ದರೆ ನಾಗರಿಕರು ಕೂಡಲೆ ಪಾಲಿಕೆಯ ಸಹಾಯವಾಣಿ 1533ಗೆ ಕರೆ ಮಾಡಿ, ದೂರು ನೀಡಬಹುದು. ಶೀಘ್ರವಾಗಿ ಸಮಸ್ಯೆ ಬಗೆಹರಿಸುವ ಕೆಲಸ ಮಾಡಲಾಗುತ್ತದೆ ಎಂದು ತುಷಾರ್ ಗಿರಿನಾಥ್ ಅವರು ತಿಳಿಸಿದರು.



ವಿದ್ಯಾರಣ್ಯಪುರ ಎಚ್‌ಎಂಟಿ ಲೇಔಟ್‌ನಲ್ಲಿ ಧರೆಗುರುಳಿದ ಮರವನ್ನು ಬಿಬಿಎಂಪಿ ಸಿಬ್ಬಂದಿ ಮಂಗಳವಾರ ತೆರವುಗೊಳಿಸಿದರು

ನಿರಂತರ ಮಳೆ; ಹೊಲದಲ್ಲಿ ನೀರು

ಪ್ರಜಾವಾಣಿ ವಾರ್ತೆ

ದಾಬಾಸ್‌ಪೇಟೆ: ಸೋಂಪುರ ಹೋಬಳಿಯಾದ್ಯಂತ ಎರಡು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿದ್ದು ಜನಜೀವನಕ್ಕೆ ತೊಂದರೆ ಉಂಟು ಮಾಡಿದೆ.

ವಾರದಿಂದ ಆಗಾಗ ಬರುತ್ತಿದ್ದ ಮಳೆ, ಸೋಮವಾರ ರಾತ್ರಿ 11 ಗಂಟೆಗೆ ಆರಂಭವಾಗಿ ಮಂಗಳವಾರ ರಾತ್ರಿಯವರೆಗೂ ಬಿಡದೆ ಸುರಿದಿದೆ. ಕೆಲವೊಮ್ಮೆ ಜೋರು, ಕೆಲವೊಮ್ಮೆ ಜಡಿ ಮಳೆ ಸುರಿದು ಭೂಮಿಯೆಲ್ಲಾ ತಂಪಾಗಿ ಕಾಲುವೆ ಮೂಲಕ ಹಳ್ಳ ಕೊಳ್ಳಗಳಿಗೆ ಒಂದಷ್ಟು ನೀರು ಹರಿದಿದೆ.

ದಾಬಸ್ ಪೇಟೆ ಪಟ್ಟಣದ ಸರ್ಕಾರಿ ಬಸ್ ನಿಲ್ದಾಣ ಹಾಗೂ ಶಿವಗಂಗೆ ವೃತ್ತದಲ್ಲಿ ಮಳೆಯಿಂದ ನೀರು ನಿಂತು ಸಂಚಾರಕ್ಕೆ ಅಡಚಣೆ ಉಂಟು ಮಾಡಿತ್ತು. ಮಳೆಯ ಪರಿಣಾಮ ರಾಗಿ ಹೊಲಗಳಲ್ಲಿ ನೀರು ತುಂಬಿದ್ದರೆ, ಕೆಲವೆಡೆ ರಾಗಿ ಪೈರು, ತೊಗರಿ ಗಿಡಗಳು ಮಳೆಯಿಂದ ನೆಲ ಕಚ್ಚಿವೆ.

ತೊಗರಿ, ಹಲಸಂದೆ, ರಾಗಿ ಪೈರುಗಳು ಹೂ ಬಿಟ್ಟಿದ್ದು, ಹೂ ಕಚ್ಚುವ ಹಂತದಲ್ಲಿ ಒಂದೇ ಸಮನೆ ಸುರಿದ ಮಳೆಯಿಂದ ಹೂ ಉದುರುವ, ಇಳುವರಿ ಕುಸಿಯುವ ಆತಂಕ ರೈತರದು.

ಬಳಗೆರೆ ಮುಖ್ಯರಸ್ತೆ ಜಲಾವೃತ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವರ್ತೂರು ಸಮೀಪದ ಬಳಗೆರೆ ಮುಖ್ಯ ರಸ್ತೆ ಹಾಗೂ ವಾಗ್ದೇವಿ ಶಾಲೆಯ ರಸ್ತೆ ನಿರಂತರ ಮಳೆಯಿಂದಾಗಿ ಜಲಾವೃತಗೊಂಡು ಸಾರ್ವಜನಿಕರು ಹಾಗೂ ವಾಹನ ಸವಾರರು ಹೈರಾಣಾದರು.

ಬಳಗೆರೆಯ ಎಸ್‌.ಟಿ.ಪಿ ಸಮೀಪ ರಾಜಕಾಲುವೆ ತುಂಬಿ ಹರಿಯಿತು. ಮುಖ್ಯರಸ್ತೆಯಲ್ಲಿ ಎರಡು ಅಡಿಗೂ ಹೆಚ್ಚು ನೀರು ತುಂಬಿತ್ತು. ನೀರು ತುಂಬಿದ ರಸ್ತೆಯಲ್ಲಿ ಶಾಲಾ ಮಕ್ಕಳನ್ನು ಮನೆಗೆ ತಲುಪಿಸಲು ವಾಹನ ಚಾಲಕರು ಹರಸಾಹಸಪಟ್ಟರು.

ಖಾಸಗಿ ಶಾಲಾ ಬಸ್ಸೊಂದು ರಸ್ತೆಯಲ್ಲಿ ಮಳೆ ನೀರಿನ ಮಧ್ಯೆ ಕೆಟ್ಟು ಹೋಗಿ, ಟ್ರ್ಯಾಕ್ಟರ್‌ನಲ್ಲಿ ಮಕ್ಕಳನ್ನು ಮನೆಗೆ ತಲುಪಿಸಲಾಯಿತು. ಆಂಬುಲೆನ್ಸ್ ವಾಹನಕ್ಕೂ ಸಾಗಲೂ ದಾರಿ ಸಿಗಲಿಲ್ಲ.



ಬಳಗೆರೆ ಮುಖ್ಯರಸ್ತೆ ಜಲಾವೃತಗೊಂಡಿರುವುದು

ಬಳಗೆರೆ ರಸ್ತೆಯಲ್ಲಿ ಮಳೆ ನೀರು ತುಂಬಿ ವಾಹನ ಸಂಚಾರ ಸ್ಥಗಿತಗೊಂಡಿದ್ದರಿಂದ, ಉದ್ಯೋಗಿಗಳು, ಸಾರ್ವಜನಿಕರು ಪರ್ಯಾಯ ರಸ್ತೆಗಳಲ್ಲಿ ತೆರಳಬೇಕಾಯಿತು. ಇದರಿಂದ ಪಣತ್ತೂರು ದಿಣ್ಣೆ, ಗುಂಜೂರು ಪಾಳ್ಯ, ವರ್ತೂರು ಮುಖ್ಯ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿ, ವಾಹನ ಸವಾರರು ಪರದಾಡಿದರು.

'ಮಳೆ ಬಂದಾಗ ವರ್ತೂರು ಸುತ್ತಮುತ್ತಲಿನ ರಸ್ತೆಗಳು ಜಲಾವೃತಗೊಳ್ಳುವುದು ಸಾಮಾನ್ಯ. ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ' ಎಂದು ಸ್ಥಳೀಯ ನಿವಾಸಿ ಅಶಿಶ್ ಸಾಹು ದೂರಿದರು.

ಮಳೆ: ತಪ್ಪದ ಸಂಕಟ

ಕೆ.ಆರ್.ಪುರ: ಮಂಗಳವಾರ ಸುರಿದ ಮಳೆಗೆ ಹೊರಮಾವು ಅಗರದಿಂದ ಹೆಣ್ಣೂರು ಬಂಡೆ ಕಡೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಬಹುತೇಕ ಜಲಾವೃತಗೊಂಡು ಸಂಚಾರ ಅಸ್ತವ್ಯಸ್ಥಗೊಂಡಿತ್ತು.

ಅಗರದ ಶಿಲ್ಪಾ ಬೇಕರಿ ಬಳಿಯ ಮುಖ್ಯರಸ್ತೆಯಲ್ಲಿ ಮೂರು ಅಡಿಗೂ ಹೆಚ್ಚು ನೀರು ನಿಂತು ವಾಹನಗಳು ಸ್ಥಗಿತಗೊಂಡಿದ್ದವು. ನಿಂತ ವಾಹನಗಳನ್ನು ಸವಾರರು ತಳ್ಳಿಕೊಂಡ ಮುಂದಕ್ಕೆ ಸಾಗಿಸಿದರು.

ಅಗರದಿಂದ ಹೆಣ್ಣೂರು ಬಂಡೆ ಕಡೆಗೆ ಸಾಗುವ ಮುಖ್ಯರಸ್ತೆಗೆ ಚರಂಡಿ ನಿರ್ಮಿಸದಿರುವುದರಿಂದ ಚರಂಡಿ ನೀರು ರಸ್ತೆಯ ಮೇಲೆ ಹರಿದು ಅವಾಂತರ ಸೃಷ್ಟಿಸಿತ್ತು.



ಹೊರಮಾವು ಅಗರದಿಂದ ಹೆಣ್ಣೂರು ಬಂಡೆ ಕಡೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಜಲಾವೃತಗೊಂಡಿತ್ತು

ಜನರ ಸಮಸ್ಯೆಗಳಿಗೆ ತುರ್ತಾಗಿ ಸ್ಪಂದಿಸಲು ಬಿಬಿಎಂಪಿ ಅಧಿಕಾರಿಗಳಿಗೆ ತಾಕೀತು

ನಿಯಂತ್ರಣ ಕೊಠಡಿಗೆ ಡಿಸಿಎಂ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ ನಿಯಂತ್ರಣ ಕೊಠಡಿಗೆ ಮಂಗಳವಾರ ಸಂಜೆ ಭೇಟಿ ನೀಡಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಳೆ ಹಾಗೂ ಹಾನಿ ಕುರಿತ ಮಾಹಿತಿ ಪಡೆದರು.

ವಲಯ ಅಧಿಕಾರಿಗಳ ಜೊತೆ ವರ್ಚ್ಯುವಲ್ ಸಭೆ ನಡೆಸಿ, ಮಳೆ ವೇಳೆ ನಿಯಂತ್ರಣ ಕೊಠಡಿಯಲ್ಲಿದ್ದು ದಿನದ 24 ಗಂಟೆ ಕಾರ್ಯನಿರ್ವಹಿಸಬೇಕು. ಸ್ವಚ್ಛತಾ ಅಭಿಯಾನ ನಡೆಸಬೇಕು ಎಂದು ಸೂಚಿಸಿದರು.

'ಪಾದಚಾರಿ ಮಾರ್ಗ ಹಾಗೂ ಮಳೆ ನೀರು ಹರಿಯುವ ಕಾಲುವೆಗಳಲ್ಲಿ ಸೇರಿರುವ ಕಸ ತೆಗೆಯಲು ಕಾರ್ಯಕ್ರಮ ರೂಪಿಸಲಾಗುವುದು. ಬೀದಿ ಬದಿಯ ವ್ಯಾಪಾರಿಗಳಲ್ಲಿ ಕೆಲವರು ಅಲ್ಲೇ ಕಸ ಬಿಟ್ಟು ಹೋಗುತ್ತಾರೆ. ಇದರಿಂದ ನೀರು ಹರಿಯಲು ಸಾಧ್ಯವಾಗುತ್ತಿಲ್ಲ. ಈ ಎಲ್ಲಾ ಅಂಶಗಳನ್ನು ನಾವು ಗಮನಿಸಿದ್ದೇವೆ. ಮಳೆಯ ನಡುವೆ ರಸ್ತೆಗುಂಡಿ ಮುಚ್ಚಲು ಆಗುವುದಿಲ್ಲ. ಹೀಗಾಗಿ ಮಳೆ ನಿಲ್ಲಲಿ. ನಂತರ ಅಗತ್ಯ ಕ್ರಮ ಕೈಗೊಳ್ಳುತ್ತೇವೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಬಿಬಿಎಂಪಿ ಆಡಳಿತಾಧಿಕಾರಿ ಉಮಾಶಂಕರ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಉಪಸ್ಥಿತರಿದ್ದರು.

ರಾಜ್ಯೋತ್ಸವ ಆಚರಣೆ: 'ನವೆಂಬರ್ 1ರಂದು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಎಲ್ಲಾ ಉದ್ದಿಮೆ, ಕಂಪನಿಗಳು ಕನ್ನಡ ರಾಜ್ಯೋತ್ಸವ ಆಚರಿಸಬೇಕು ಎಂದು ಸರ್ಕಾರದ ವತಿಯಿಂದ ಮನವಿ ಮಾಡುತ್ತಿದ್ದೇವೆ. ಶಾಲಾ ಕಾಲೇಜುಗಳಲ್ಲಿ ರಾಜ್ಯೋತ್ಸವದ ಜತೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಬೇಕು. ಬೆಂಗಳೂರಿನಲ್ಲಿರುವ ಜನರು ಹಾಗೂ ಮಕ್ಕಳಿಗೆ ಕನ್ನಡದ ಮಹತ್ವ ಅರಿಯುವಂತೆ ಮಾಡಬೇಕು' ಎಂದು ತಿಳಿಸಿದರು.

'ಕನ್ನಡ ಸಂಘಟನೆಗಳು ಯಾವುದೇ ಸಂಸ್ಥೆಗಳ ಮೇಲೆ ದಾಳಿ ಮಾಡಿ ಒತ್ತಾಯ ಮಾಡಬಾರದು. ಈ ವಿಚಾರವನ್ನು ಸರ್ಕಾರ ನಿಭಾಯಿಸಲಿದೆ. ಇದರಲ್ಲಿ ಯಾರೂ ಹಸ್ತಕ್ಷೇಪ ಮಾಡುವಂತಿಲ್ಲ' ಎಂದರು. 'ದಾಳಿ, ಒತ್ತಾಯದಲ್ಲಿ ತೊಡಗಿದರೆ ಕಾನೂನು ಕ್ರಮ ಜರುಗಿಸಲಾಗುವುದು. ರಾಷ್ಟ್ರಧ್ವಜಕ್ಕೆ ಗೌರವ ನೀಡುವಂತೆ ನಮ್ಮ ನಾಡಧ್ವಜಕ್ಕೂ ಗೌರವ ನೀಡಬೇಕು' ಎಂದು ಹೇಳಿದರು.



ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ ನಿಯಂತ್ರಣ ಕೊಠಡಿಗೆ ಮಂಗಳವಾರ ಸಂಜೆ ಭೇಟಿ ನೀಡಿ ನಗರದಲ್ಲಿ ಮಳೆ ಹಾಗೂ ಆದರಿಂದಾದ ಹಾನಿ ಕುರಿತ ಮಾಹಿತಿ ಪಡೆದರು

ದೇವೇಗೌಡರ ಕುಟುಂಬದ ಕಾರಣಕ್ಕೆ ನೈಸ್ ರಸ್ತೆ ಆಗಲಿಲ್ಲ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಮತ

ಬೆಂಗಳೂರು–ಮೈಸೂರು ಮಧ್ಯೆ ನೈಸ್ ರಸ್ತೆ ಅಗತ್ಯ

• ನವೀನ್ ಮೆನೇಜಸ್


ಶಿವಕುಮಾರ್

ದೇವೇಗೌಡರ ಕುಟುಂಬದ ವಿರೋಧ ಇಲ್ಲದಿದ್ದರೆ, ರಾಮನಗರ, ಚನ್ನಪಟ್ಟಣ, ಕನಕಪುರ, ಮಳವಳ್ಳಿ, ಮದ್ದೂರು, ಮಂಡ್ಯ ಅಭಿವೃದ್ಧಿ ಹೊಂದುತ್ತಿದ್ದವು. ಕೈಗಾರಿಕೆಗಳು ಸ್ಥಾಪನೆ ಆಗುತ್ತಿದ್ದವು
ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಬೆಂಗಳೂರು: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಕುಟುಂಬದ ಕಾರಣಕ್ಕೆ ಬೆಂಗಳೂರು–ಮೈಸೂರು ಮಧ್ಯೆ ನೈಸ್ ಹೆದ್ದಾರಿ ನಿರ್ಮಾಣ ಪೂರ್ಣಗೊಳ್ಳಲಿಲ್ಲ. ಬೆಂಗಳೂರು– ಮೈಸೂರು ಮಧ್ಯೆ ನೈಸ್ (ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್) ರಸ್ತೆಯ ನಿರ್ಮಾಣದ ಅಗತ್ಯವಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಪಾದಿಸಿದ್ದಾರೆ.

ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈಗಿನ ಬೆಂಗಳೂರು– ಮೈಸೂರು ಹೆದ್ದಾರಿಯನ್ನು ಕೆಟ್ಟದಾಗಿ ವಿನ್ಯಾಸಗೊಳಿಸಲಾಗಿದೆ. ವಾಹನದಲ್ಲಿ ಪ್ರಯಾಣಿಸುವವರಿಗೆ ಕನಿಷ್ಠ ಮೂತ್ರ ವಿಸರ್ಜನೆಗೂ ವ್ಯವಸ್ಥೆ ಮಾಡಿಲ್ಲ' ಎಂದು ಹರಿಹಾಯ್ದರು.

ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ ನೈಸ್ ಯೋಜನೆಗೆ ಒಪ್ಪಿಗೆ ನೀಡಲಾಯಿತು. ಬಿಡದಿ ಬಳಿ ಮತ್ತು ದೇವಗಿರಿ ಸಮೀಪ ಸುಮಾರು 400 ಎಕರೆಗಳಷ್ಟು ಜಮೀನು ಇದ್ದ ಕಾರಣ ಅವರು ಬೆಂಗಳೂರು–ಮೈಸೂರು ಹೆದ್ದಾರಿ ಯೋಜನೆಯನ್ನು ವಿರೋಧಿಸಲಾರಂಭಿಸಿದರು. ಅವರು ಅಧಿಕಾರಿಗಳನ್ನು 'ಬ್ಲ್ಯಾಕ್ ಮೇಲ್' ಮಾಡಿದ ಕಾರಣ, ಅಧಿಕಾರಿಗಳು ಹೆದರಿದರು ಎಂದು ಹೇಳಿದರು.

'ಈಗಲೂ ನಾನು ನೈಸ್ ಯೋಜನೆ ಪರವಾಗಿದ್ದೇನೆ' ಎಂದು ಹೇಳಿದ ಶಿವಕುಮಾರ್, 'ಆರು ಪಥಗಳ ಹೆದ್ದಾರಿಯಿಂದ ಒಕ್ಕಲಿಗರೇ ಹೆಚ್ಚಿನ ಸಂಖ್ಯೆಯಲ್ಲಿರುವ ಬೆಂಗಳೂರು ಗ್ರಾಮಾಂತರ ಮತ್ತು ಮಂಡ್ಯ ಜಿಲ್ಲೆಗಳ ಅಭಿವೃದ್ಧಿಗೆ ಸಹಾಯಕವಾಗಲಿದೆ' ಎಂದರು.

'ನಮ್ಮ ಸರ್ಕಾರ ಇದನ್ನು ಕೈಗೆತ್ತಿಕೊಳ್ಳುತ್ತದೆಯೇ ಗೊತ್ತಿಲ್ಲ. ಆದರೆ, ಮತ್ತೊಂದು ರಸ್ತೆಯ ಅಗತ್ಯವಿದೆ ಎಂಬುದು ನನ್ನ ಅನಿಸಿಕೆ. ನೈಸ್ ಹಲವು ಉಪನಗರಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಹೊಂದಿತ್ತು. ಇದರಿಂದ ಸಾಕಷ್ಟು ಉದ್ಯೋಗಾವಕಾಶ ಸೃಷ್ಟಿಯಾಗುತ್ತಿತ್ತು. ಬಿಡದಿಯಲ್ಲಿ ಕೆಲಸ ಮಾಡುವವರು ಬೆಂಗಳೂರಲ್ಲಿ ನೆಲೆಸಿದ್ದಾರೆ. ಹಲವು ಉಪನಗರಗಳನ್ನು ಸೃಷ್ಟಿಸುವ ಆಗತ್ಯವಿದೆ' ಎಂದು ಪ್ರತಿಪಾದಿಸಿದರು.

ಪೆರಿಫೆರಲ್ ರಿಂಗ್ ರೋಡ್ ಯೋಜನೆ ನಿರ್ಮಾಣಕ್ಕೆ ನೈಸ್ ಪ್ರಸ್ತಾವ ಸಲ್ಲಿಸಿರುವ ಬಗ್ಗೆ ಪ್ರಶ್ನಿಸಿದಾಗ, 'ಆ ಪ್ರಸ್ತಾವ ಬಂದಿರುವುದು ನಿಜ. ಆದರೆ, ನಮ್ಮ ಅಧಿಕಾರಿಗಳು ಹೆದರಿದ್ದಾರೆ. ನಕಾರಾತ್ಮಕ ಧೋರಣೆ ಇದ್ದರೆ, ಯಾವುದೇ ಯೋಜನೆ ಮುನ್ನಡೆಸಲು ಸಾಧ್ಯವಾಗುವುದಿಲ್ಲ' ಎಂದು ಹೇಳಿದರು.

'ನೈಸ್ ಬಳಿ ಅಧಿಕ ಜಮೀನು ಇದ್ದರೆ ಅದು ನಮ್ಮ ಅಧಿಕಾರಿಗಳ ತಪ್ಪಿನ ಕಾರಣಕ್ಕಾಗಿ ಆಗಿದೆ. ನಾವು ಒಪ್ಪಂದವನ್ನು ಗೌರವಿಸಬೇಕು. ಇಲ್ಲವಾದರೆ ಅವರು ನ್ಯಾಯಾಲಯಕ್ಕೆ ಹೋಗುತ್ತಾರೆ' ಎಂದೂ ಅವರು ಅಭಿಪ್ರಾಯಪಟ್ಟರು.

ಕುಸುಮ್– ಸಿ: 'ಮೊದಲ ಹಂತ ಡಿಸೆಂಬರ್‌ಗೆ ಪೂರ್ಣಗೊಳಿಸಿ'

ಬೆಂಗಳೂರು: 'ಕುಸುಮ್– ಸಿ' ಯೋಜನೆಯ ಮೊದಲ ಹಂತದಲ್ಲಿ ಸ್ಥಾಪಿಸುತ್ತಿರುವ ಫೀಡರ್ ಮಟ್ಟದ ಸೋಲಾರ್ ವಿದ್ಯುತ್ ಘಟಕಗಳನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಇಂಧನ ಸಚಿವ ಕೆ.ಜೆ. ಜಾರ್ಜ್ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಬೆಸ್ಕಾಂ ಕೇಂದ್ರ ಕಚೇರಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 'ಮುಂದಿನ ಜನವರಿಯಿಂದಲೇ ವಿದ್ಯುತ್ ಬೇಡಿಕೆ ಹೆಚ್ಚಾಗುವ ನಿರೀಕ್ಷೆ ಇದೆ. ಅದಕ್ಕೆ ಪೂರಕವಾಗಿ ಕುಸುಮ್–ಸಿ ಅಡಿ ಪ್ರಗತಿಯಲ್ಲಿರುವ ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಬೇಗ ಪೂರ್ಣಗೊಳಿಸಿ, ಫೀಡರ್‌ಗಳಿಗೆ ವಿದ್ಯುತ್ ಒದಗಿಸಲು ಕ್ರಮ ಕೈಗೊಳ್ಳಬೇಕು' ಎಂದರು.

'ಯೋಜನೆಯಡಿ ರಾಜ್ಯಕ್ಕೆ 40 ಸಾವಿರ ಸೋಲಾರ್ ಪಂಪ್‌ಸೆಟ್‌ಗಳು ಮಂಜೂರಾಗಿವೆ. ಗುರಿ ತಲುಪಲು ಫೀಡರ್‌ಗಳಿಂದ 500 ಮೀಟರ್‌ಗೂ ಹೆಚ್ಚು ದೂರವಿರುವ ಅನಧಿಕೃತ ಪಂಪ್‌ಸೆಟ್‌ಗಳ ಸಮೀಕ್ಷೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಅರ್ಜಿ ಸಲ್ಲಿಸಿದವರಿಗೆ ಆದ್ಯತೆ ಮೇರೆಗೆ ಸೋಲಾರ್ ಪಂಪ್‌ಸೆಟ್ ಅಳವಡಿಸಲು ಕ್ರಮ ಕೈಗೊಳ್ಳಬೇಕು' ಎಂದರು.



ಪಥ ಸಂಚಲನ ಮಂಗಳವಾರ ಜಾಲಹಳ್ಳಿಯ ವಾಯುನೆಲೆಯಲ್ಲಿ ಅಗ್ನಿವೀರ ತಂಡದ ನಿರ್ಗಮನ ಪಥ ಸಂಚಲನ ನಡೆಯಿತು.

ಕೆಪಿಟಿಸಿಎಲ್: 2,975 ಹುದ್ದೆಗಳಿಗೆ ನೇಮಕಾತಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು (ಕೆಪಿಟಿಸಿಎಲ್) 2,975 ವಿವಿಧ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಿದೆ.

433 ಕಿರಿಯ ಸ್ಟೇಷನ್ ಪರಿಚಾರಕ ಮತ್ತು 2,542 ಕಿರಿಯ ಪವರ್‌ಮ್ಯಾನ್ ಹುದ್ದೆಗಳ ಭರ್ತಿಗೆ ಆನ್‌ಲೈನ್‌ಲ್ಲಿ ಅರ್ಜಿ ಆಹ್ವಾನಿಸಿದೆ. ಅಕ್ಟೋಬರ್ 21ರಿಂದ ಮತ್ತು ನವೆಂಬರ್ 20ರವರೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ.

ಅರ್ಜಿಗಳನ್ನು ಕೆಪಿಟಿಸಿಎಲ್ ಮತ್ತು ವಿವಿಧ ಎಸ್ಕಾಂಗಳ ಜಾಲತಾಣಗಳ ಮೂಲಕ ಸಲ್ಲಿಸಬಹುದು ಎಂದು ತಿಳಿಸಿದೆ.

ಹರಾಜು ಬಿಡ್ ತಿರಸ್ಕರಿಸುವ ಬಿಡಿಎ ಅಧಿಕಾರ ಎತ್ತಿಹಿಡಿದ ಹೈಕೋರ್ಟ್

ನಿವೇಶನ: ಬಿಡಿಎ ಮೇಲ್ಮನವಿ ಪುರಸ್ಕೃತ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಾಣಿಜ್ಯ ನಿವೇಶನಗಳ ನಿಯಮದಡಿ ಕಾರಣಗಳನ್ನು ನೀಡದೆಯೇ, ನಿವೇಶನಗಳ ಹರಾಜು ಬಿಡ್ ತಿರಸ್ಕರಿಸುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

'ಏಕಸದಸ್ಯ ನ್ಯಾಯಪೀಠದ ಆದೇಶವನ್ನು ರದ್ದುಗೊಳಿಸಬೇಕು' ಎಂದು ಕೋರಿ ಬಿಡಿಎ ಸಲ್ಲಿಸಿದ್ದ ರಿಟ್ ಮೇಲ್ಮನವಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ಜಿ.ಬಸವರಾಜು ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಬಿಡಿಎ ಕ್ರಮದಲ್ಲಿ ಯಾವುದೇ ಏಕಪಕ್ಷೀಯ, ಪೂರ್ವಗ್ರಹ ಪೀಡಿತ ಭಾವನೆ ಅಥವಾ ತರತಮ ನೀತಿ ಅನುಸರಣೆ ಕಂಡು ಬಂದಿಲ್ಲ. ಅದು ನಿಯಮಾನುಸಾರವೇ ಕ್ರಮ ಕೈಗೊಂಡಿದೆ. ಟೆಂಡರ್‌ದಾರರು ಇತರೆ ಬಿಡ್‌ದಾರರ ಜತೆ ಸೇರಿ ತಮ್ಮದೇ ವ್ಯೂಹ ರಚಿಸಿಕೊಂಡು ವಂಚನೆ ಮಾಡಲು ಯತ್ನಿಸಿರುವುದನ್ನು ಸಾಬೀತುಪಡಿಸುವ ಯಾವುದೇ ಅಂಶಗಳು ಇಲ್ಲಿ ಕಂಡು ಬಂದಿಲ್ಲ' ಎಂದು ಸ್ಪಷ್ಟಪಡಿಸಿದೆ.

'ಬಿಡಿಎ ಹೊರಡಿಸಿರುವ ಇ-ಹರಾಜು ಅಧಿಸೂಚನೆಯ ನಿಯಮ ಮತ್ತು ನಿಬಂಧನೆಗಳಡಿ, ಬಿಡ್ ತಿರಸ್ಕರಿಸುವ ಮುನ್ನ ಯಾವುದೇ ವಿಚಾರಣೆ ನಡೆಸಲು ಅವಕಾಶವಿಲ್ಲ. ನಿಯಮಗಳ ಪ್ರಕಾರ ಯಾವುದೇ ಯಶಸ್ವಿ ಬಿಡ್ ಅನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರ ಬಿಡಿಎಗೆ ಇದೆ. ಹಾಗಾಗಿ, ಬಿಡಿಎ ಆದೇಶದಲ್ಲಿ ಯಾವುದೇ ಲೋಪವಾಗಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಏಕಸದಸ್ಯ ನ್ಯಾಯಪೀಠವು ನಾಗರಭಾವಿಯ ಸಚಿನ್ ನಾಗರಾಜಪ್ಪ ಎಂಬುವರ ರಿಟ್ ಅರ್ಜಿಯನ್ನು ಪುರಸ್ಕರಿಸಿತ್ತು. ಬಿಡ್ ತಿರಸ್ಕರಿಸಿ ಬಿಡಿಎ ಕಳುಹಿಸಿದ್ದ ನೋಟಿಸ್ ಅನ್ನು ರದ್ದುಗೊಳಿಸಿತ್ತು. 'ಟೆಂಡರ್‌ನಲ್ಲಿ ನಮೂದು ಮಾಡಿರುವಂತೆ 1,54,000 ಚದರ ಮೀಟರ್ ಜಾಗವನ್ನು ಅರ್ಜಿದಾರರಿಗೆ ಒಪ್ಪಿಸಿ' ಎಂದು ಆದೇಶಿಸಿತ್ತು.

'ಏಕಸದಸ್ಯ ನ್ಯಾಯಪೀಠದ ಈ ತೀರ್ಪು ಬಿಡಿಎ ವಾಣಿಜ್ಯ ನಿವೇಶನಗಳು ಮತ್ತು ಮೂಲೆ ನಿವೇಶಗಳ ವಿಲೇವಾರಿ ನಿಯಮ–1984ಕ್ಕೆ ವಿರುದ್ಧವಾಗಿದೆ. ರಾಜ್ಯ ಸರ್ಕಾರ ಅದಕ್ಕಾಗಿಯೇ ನಿಯಮಗಳನ್ನು ರೂಪಿಸಿದೆ ಮತ್ತು ಬಿಡಿಎಗೆ ಕಾರಣಗಳನ್ನು ನೀಡದೆ ಬಿಡ್ ಅನ್ನು ತಿರಸ್ಕರಿಸುವ ಅಥವಾ ಒಪ್ಪಿಕೊಳ್ಳುವ ಅಧಿಕಾರವಿದೆ' ಎಂದು ವಿಭಾಗೀಯ ಪೀಠದಲ್ಲಿ ಬಿಡಿಎ ರಿಟ್ ಮೇಲ್ಮನವಿ ಸಲ್ಲಿಸಿತ್ತು.

ಕದ್ದ ಮಾಲು ವಿಲೇವಾರಿ: ಹೈಕೋರ್ಟ್ ಮಾರ್ಗಸೂಚಿ

ಬೆಂಗಳೂರು: ಕಳ್ಳತನದ ಪ್ರಕರಣಗಳಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದ ವಸ್ತುಗಳನ್ನು ಮಾಲೀಕರಿಗೆ ಬಿಡುಗಡೆ ಮಾಡುವಾಗ ವಿಚಾರಣಾ ನ್ಯಾಯಾಲಯ ಅನುಸರಿಸಬೇಕಾದ ನಿಯಮಗಳೇನು ಎಂಬ ಬಗ್ಗೆ ಹೈಕೋರ್ಟ್, ಮಾರ್ಗಸೂಚಿ ಹೊರಡಿಸಿದೆ.

'ಅಂಗಡಿಯಲ್ಲಿ ಕದ್ದ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಉಪಕರಣಗಳ ಬಿಡುಗಡೆಗೆ ನಿರ್ದೇಶಿಸಬೇಕು' ಎಂದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣಾ ನ್ಯಾಯಾಲಯ ವಜಾಗೊಳಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ವಿಶಾಲ್ ಖಟ್ವಾನಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಾರ್ಗಸೂಚಿ ಹೊರಡಿಸಿದೆ.

'ಈ ಸಂಬಂಧ ಸರ್ಕಾರ ಸೂಕ್ತ ನಿಯಮಗಳನ್ನು ರೂಪಿಸುವತನಕ ಈ ಮಾರ್ಗಸೂಚಿ ಅನ್ವಯವಾಗಲಿದೆ ಮತ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರಿಂದ 40 ಲಕ್ಷ ಮೊತ್ತದ ಬಾಂಡ್ ಪಡೆದು ಎಲ್ಲ ವಸ್ತುಗಳನ್ನು ಬಿಡುಗಡೆ ಮಾಡಬೇಕು' ಎಂದು ಆದೇಶಿಸಿದೆ.

'ವಿದ್ಯುನ್ಮಾನ ಉಪಕರಣಗಳು, ಡಿಜಿಟಲ್ ಸಾಧನಗಳು, ವೈದ್ಯಕೀಯ ಮಾದರಿಗಳು, ಆಹಾರ ಪದಾರ್ಥಗಳು, ಪೆಟ್ರೋಲಿಯಂ ಉತ್ಪನ್ನಗಳು, ಶೀಘ್ರದಲ್ಲಿ ಹಾಳಾಗುವಂತಹ ವಸ್ತುಗಳು, ಚಿನ್ನ ಮತ್ತು ಬೆಳ್ಳಿಯಂತಹ ಬೆಲೆ ಬಾಳುವಂತಹ ವಸ್ತುಗಳನ್ನು ವಶಪಡಿಸಿಕೊಂಡು ಅವುಗಳನ್ನು ಬಿಡುಗಡೆ ಮಾಡುವ ಸಂಬಂಧ ರಾಜ್ಯ ಸರ್ಕಾರ ಅಗತ್ಯ ನಿಯಮಾವಳಿ ರೂಪಿಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ಅಮಾನತು: ಸರ್ಕಾರಿ ಆದೇಶ ಎತ್ತಿಹಿಡಿದ ಕೆಎಟಿ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್‌ಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಶೇಷ ಸೌಲಭ್ಯ ಕಲ್ಪಿಸಿದ ಆರೋಪದಡಿ ಜೈಲು ಅಧೀಕ್ಷಕ ಹುದ್ದೆಯಿಂದ ಮಲ್ಲಿಕಾರ್ಜುನ ಬಿ.ಸ್ವಾಮಿ ಅವರನ್ನು ಅಮಾನತು ಪಡಿಸಿದ್ದ ರಾಜ್ಯ ಸರ್ಕಾರದ ಆದೇಶವನ್ನು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಎತ್ತಿ ಹಿಡಿದಿದೆ.

'ಸರ್ಕಾರದ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಮಲ್ಲಿಕಾರ್ಜುನ ಬಿ.ಸ್ವಾಮಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿ ಕೆಎಟಿ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಆರ್.ಬಿ. ಬೂದಿಹಾಳ್ ಮತ್ತು ಆಡಳಿತಾತ್ಮಕ ಸದಸ್ಯ ರಾಘವೇಂದ್ರ ಔರಾದ್ಕರ್ ಅವರಿದ್ದ ವಿಭಾಗೀಯ ಪೀಠ ಈ ಕುರಿತಂತೆ ಆದೇಶಿಸಿದೆ.

'ಪ್ರಕರಣದ ದಾಖಲೆಗಳನ್ನು ಪರಿಶೀಲಿಸಿದರೆ ಸರ್ಕಾರದ ಆದೇಶ ಸೂಕ್ತವಾಗಿದೆ ಎಂದು ಕಂಡು ಬರು ತ್ತಿದೆ. ಹಾಗಾಗಿ, ಅರ್ಜಿಯನ್ನು ವಜಾ ಗೊಳಿಸಲಾಗುತ್ತಿದೆ' ಎಂದು ಹೇಳಿದೆ.

ನಾಮಫಲಕ: ಕನ್ನಡ ಬಳಸದ ಮಳಿಗೆಗಳ ಮಾಲೀಕರಿಗೆ ಕಾನೂನು ಅರಿವು

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪರಿವೀಕ್ಷಣೆ

• ವರುಣ ಹೆಗಡೆ



ನಿಗದಿತ ಸಮಯದಲ್ಲಿ ನಾಮಫಲಕದಲ್ಲಿ ಕನ್ನಡ ಬಳಸದ ಉದ್ದಿಮೆಗಳ ಪರವಾನಗಿ ನವೀಕರಣ ಮಾಡದಂತೆ ಬಿಬಿಎಂಪಿಗೆ ಶಿಫಾರಸು ಮಾಡಲಾಗುತ್ತದೆ
ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು: ಮಳಿಗೆಗಳ ನಾಮಫಲಕದಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಗರದಲ್ಲಿ ಶೀಘ್ರದಲ್ಲಿಯೇ ಪರಿವೀಕ್ಷಣೆ ನಡೆಸಲಿದ್ದು, ಶೇ 60ರಷ್ಟು ಕನ್ನಡ ಅಳವಡಿಸಿ ಕೊಳ್ಳದ ಮಳಿಗೆಗಳಿಗೆ ಕಾನೂನು ಅರಿವು ಮೂಡಿಸಲಿದೆ.

ನಾಮಫಲಕಗಳಲ್ಲಿ ಕನ್ನಡ ಭಾಷೆ ಅಳವಡಿಕೆಗೆ ಸಂಬಂಧ ನಡೆದ ಹೋರಾಟದ ಬಳಿಕ ಸರ್ಕಾರವು ನಾಮಫಲಕಗಳಲ್ಲಿ ಶೇ 60 ರಷ್ಟು ಕನ್ನಡ ಭಾಷೆ ಬಳಸಲು ಗಡುವು ನೀಡಿತ್ತು. ಗಡುವಿನೊಳಗೆ ಫಲಕ ಅಳವಡಿಸದ ಮಳಿಗೆಗಳ ಮಾಲೀಕರಿಗೆ ನೋಟಿಸ್ ನೀಡಿ, ಕಾನೂನು ಅನುಸಾರ ನಾಮಫಲಕಗಳಲ್ಲಿ ಕನ್ನಡ ಅಳವಡಿಸಿಕೊಳ್ಳುವಂತೆ ಪಾಲಿಕೆ ಸೂಚಿಸಿತ್ತು. ನಂತರವೂ ಕನ್ನಡ ಅಳವಡಿಸಿಕೊಳ್ಳದ ಮಳಿಗೆಗಳಿಗೆ ತಾತ್ಕಾಲಿಕವಾಗಿ ಬಿಬಿಎಂಪಿ ಬೀಗ ಹಾಕಿತ್ತು. ಕೆಲ ಮಳಿಗೆಗಳಲ್ಲಿ ಈಗಲೂ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಅಳವಡಿಸದಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿದೆ.

ಈ ಬಗ್ಗೆ ಮಹಾತ್ಮ ಗಾಂಧಿ ರಸ್ತೆ (ಎಂ.ಜಿ. ರಸ್ತೆ) ಸೇರಿ ನಗರದ ವಿವಿಧೆಡೆ ಕರ್ನಾಟಕ ರಾಜ್ಯೋತ್ಸವದೊಳಗೆ ಜಾಗೃತಿ ಪ್ರಾರಂಭಿಸಲು ಪ್ರಾಧಿಕಾರ ಯೋಜನೆ ರೂಪಿಸಿದೆ. 'ಎಲ್ಲೆಲ್ಲೂ ಕನ್ನಡ; ಎಲ್ಲೆಡೆ ಕನ್ನಡ' ಎಂಬ ಜಾಗೃತಿ ಜಾಥಾ ಅಭಿಯಾನವನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲು ಸಿದ್ಧತೆ ನಡೆಸಿದೆ. ಈ ಜಾಥಾದಲ್ಲಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಸದಸ್ಯರ ಜತೆಗೆ ಸಾಹಿತಿಗಳು, ಕನ್ನಡ ಪರ ಹೋರಾಟಗಾರರು ಮತ್ತು ಕನ್ನಡ ಕಾರ್ಯಕರ್ತರು ಪಾಲ್ಗೊಳ್ಳುತ್ತಾರೆ.

ಮಳಿಗೆಗಳಿಗೆ ಆದೇಶ ಪ್ರತಿ: ತೆರೆದ ವಾಹನದಲ್ಲಿ ಜಾಥಾ ಸಾಗಲಿದೆ. ಸೂಚನೆ ಪಾಲಿಸದ ಮಳಿಗೆಗಳ ಪ್ರತಿನಿಧಿಗಳಿಗೆ ಸರ್ಕಾರಿ ಆದೇಶದ ಪ್ರತಿ ಹಾಗೂ ಕರಪತ್ರಗಳನ್ನು ವಿತರಿಸಿ, ನಾಮಫಲಕಗಳಲ್ಲಿ ಕನ್ನಡ ಬಳಸಲು ಮನವಿ ಮಾಡಿಕೊಳ್ಳಲಾಗುತ್ತದೆ. ಧ್ವನಿವರ್ಧಕಗಳ ಮೂಲಕವೂ ಮನವಿ, ಕನ್ನಡ ಗೀತೆಗಳ ಗಾಯನವೂ ನಡೆಯಲಿದೆ.

'ಎಂ.ಜಿ. ರಸ್ತೆಯಿಂದ ಜಾಗೃತಿ ಜಾಥಾ ಪ್ರಾರಂಭವಾಗಲಿದೆ. ವಿವಿಧೆಡೆ ನಡೆಯುವ ಜಾಥಾಕ್ಕೆ ಗಣ್ಯರು ಚಾಲನೆ ನೀಡುತ್ತಾರೆ. ನಾಮಫಲಕಗಳಲ್ಲಿ ಶೇ 60 ರಷ್ಟು ಕನ್ನಡ ಅಳವಡಿಕೆಯ ಸರ್ಕಾರಿ ಆದೇಶವನ್ನು ಕೆಲ ಮಳಿಗೆಗಳು ಇನ್ನೂ ಗಂಭೀರವಾಗಿ ಪರಿಗಣಿಸಿಲ್ಲ. ಆದ್ದರಿಂದ ಈ ಬಗ್ಗೆ ಜಾಗೃತಿ ಜಾಥಾದ ಯೋಜನೆ ರೂಪಿಸಿದ್ದೇವೆ' ಎಂದು ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಪ್ರಮುಖ ಸ್ಥಳಗಳಲ್ಲಿ ಜಾಗೃತಿ

ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಎಂ.ಜಿ.ರಸ್ತೆ, ಜೆ.ಸಿ.ರಸ್ತೆ, ಎಸ್.ಪಿ.ರಸ್ತೆ, ಕೆ.ಆರ್. ಮಾರುಕಟ್ಟೆ, ಕಲಾಸಿಪಾಳ್ಯ, ಕೆಂಪೇಗೌಡ ರಸ್ತೆ, ಸುಬೇದಾರ್ ಛತ್ರಮ್ ರಸ್ತೆ, ಬಳೆಪೇಟೆ, ಉಪ್ಪಾರಪೇಟೆ, ಬಿವಿಕೆ ಅಯ್ಯಂಗಾರ್ ರಸ್ತೆ, ಅವೆನ್ಯೂ ರಸ್ತೆ, ಜಯನಗರ, ಡಿವಿಜಿ ರಸ್ತೆ, ದೊಡ್ಡಬಸವಣ್ಣನ ಗುಡಿ ಮುಖ್ಯರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರ, ಕೋರಮಂಗಲ ಮುಖ್ಯರಸ್ತೆ ಸೇರಿ ನಗರದ ಪ್ರಮುಖ ರಸ್ತೆ ಹಾಗೂ ಸ್ಥಳಗಳಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ಜಾಗೃತಿ ಜಾಥಾ ನಡೆಯಲಿದೆ.

ದೂರಸಂಪರ್ಕ ನೀತಿಗೆ ಸಿದ್ಧತೆ: ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ


ಪ್ರಿಯಾಂಕ್ ಖರ್ಗೆ

ನವದೆಹಲಿ: 'ಸಾರ್ವಜನಿಕ ಸೇವೆಗಳ ಸಂಪೂರ್ಣ ಡಿಜಿಟಲೀಕರಣಕ್ಕೆ ದೂರಸಂಪರ್ಕ ಕ್ಷೇತ್ರದ ಪ್ರಗತಿಗೆ ಅನುಕೂಲವಾಗುವಂತೆ ಪ್ರತ್ಯೇಕ ನೀತಿಯನ್ನು ಕರ್ನಾಟಕ ಸರ್ಕಾರ ಸಿದ್ಧಪಡಿಸುತ್ತಿದೆ' ಎಂದು ರಾಜ್ಯ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಇಲ್ಲಿನ ಪ್ರಗತಿ ಮೈದಾನದಲ್ಲಿ ನಡೆಯುತ್ತಿರುವ, 'ಇಂಡಿಯಾ ಮೊಬೈಲ್ ಕಾಂಗ್ರೆಸ್–ಐಎಂಸಿ' ತಂತ್ರಜ್ಞಾನ ಪ್ರದರ್ಶನ ಮೇಳವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮೇಳದ ಭಾಗವಾಗಿ ನಡೆದ ದುಂಡು ಮೇಜಿನ ಸಭೆಯಲ್ಲಿ ಮಾತನಾಡಿದ ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, 'ಮಾಹಿತಿ ತಂತ್ರಜ್ಞಾನ ಮತ್ತು ದೂರಸಂಪರ್ಕ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಅನ್ವೇಷಣೆ ಕೈಗೊಳ್ಳುವ ರಾಜ್ಯಗಳಷ್ಟೇ ಪ್ರಗತಿ ಸಾಧಿಸುತ್ತವೆ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, 'ಕರ್ನಾಟಕ ಸರ್ಕಾರವು ಪಂಚಮಿತ್ರ 2.0 ಜಾರಿಗೆ ತರುವ ಮೂಲಕ, ರೈತರಿಗೂ ತಂತ್ರಜ್ಞಾನದ ಪ್ರಯೋಜನ ಸಿಗುವಂತೆ ಮಾಡಿದೆ. ಹಲವು ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸಲಾಗತ್ತಿದ್ದು, ರೈತರು ಅಗತ್ಯ ದಾಖಲೆ ಪತ್ರಗಳನ್ನು ಆನ್‌ಲೈನ್ ಮೂಲಕವೇ ಪಡೆದುಕೊಳ್ಳಬಹುದು' ಎಂದರು.

'ಕರ್ನಾಟಕದಲ್ಲಿ ಈಗಾಗಲೇ ಸೈಬರ್ ಭದ್ರತಾ ನೀತಿ, ದತ್ತಾಂಶ ನೀತಿ ಜಾರಿಯಲ್ಲಿದೆ. ದೂರಸಂಪರ್ಕ ಕ್ಷೇತ್ರದಲ್ಲೂ ಮಹತ್ವದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಕೇಂದ್ರ ಸರ್ಕಾರವು ದೂರಸಂಪರ್ಕ ಶೃಂಗಸಭೆ ನಡೆಸಬೇಕು. ಪ್ರತಿ ರಾಜ್ಯದಲ್ಲೂ ಅಂತಹ ಶೃಂಗಸಭೆಗಳು ನಡೆಯಬೇಕು' ಎಂದು ಸಲಹೆ ನೀಡಿದರು. ಹಲವು ರಾಜ್ಯಗಳ ಮಾಹಿತಿ ತಂತ್ರಜ್ಞಾನ ಸಚಿವರು ಈ ಸಲಹೆಯನ್ನು ಅನುಮೋದಿಸಿದರು.

ವೈದ್ಯರಿಂದ ಉಪವಾಸ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲ್ಕತ್ತದಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ, ಕೊಲೆ ಪ್ರಕರಣದಲ್ಲಿ ನ್ಯಾಯ ದೊರಕಿಸುವಂತೆ ಆಗ್ರಹಿಸಿ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆ ನೇತೃತ್ವದಲ್ಲಿ ವೈದ್ಯರು ನಗರದಲ್ಲಿ ಸಾಂಕೇತಿಕವಾಗಿ ಪ್ರತಿಭಟನೆ ಹಾಗೂ ಉಪವಾಸ ಸತ್ಯಾಗ್ರಹ ನಡೆಸಿದರು.

ಚಾಮರಾಜಪೇಟೆಯಲ್ಲಿರುವ ಐಎಂಐ ಕರ್ನಾಟಕ ಶಾಖೆಯ ಸಭಾಂಗಣದಲ್ಲಿ ಮಂಗಳವಾರ ಬೆಳಿಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು ಸತ್ಯಾಗ್ರಹ ನಡೆಸಿದರು. ಮಳೆಯ ಕಾರಣ ಸಭಾಂಗಣದಲ್ಲಿಯೇ ಪ್ರತಿಭಟನೆ ನಡೆಸಿ, ವೈದ್ಯರಿಗೆ ಕೆಲಸದ ಸ್ಥಳದಲ್ಲಿ ಸುರಕ್ಷತೆ ಒದಗಿಸಲು ಆಗ್ರಹಿಸಿದರು.

'ವೈದ್ಯರ ಮೇಲೆ ಹಿಂಸೆ, ದೌರ್ಜನ್ಯ ನಡೆಯದಂತೆ ನೀತಿ ರೂಪಿಸಬೇಕು. ಆಸ್ಪತ್ರೆಗಳಿಗೆ ರಕ್ಷಣೆ ನೀಡಲು ಈಗಿರುವ ಕಾಯ್ದೆಗೆ ತಿದ್ದುಪಡಿ ತರಬೇಕು. ಆಸ್ಪತ್ರೆಗಳನ್ನು ಸುರಕ್ಷಿತ ವಲಯವೆಂದು ಘೋಷಿಸಿ, ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು.ಅಗತ್ಯ ಭದ್ರತಾ ಸಿಬ್ಬಂದಿ ನಿಯೋಜನೆ ಮಾಡಬೇಕು. ವಿಶ್ರಾಂತಿ ಕೊಠಡಿಗಳನ್ನು ಹೆಚ್ಚಿಸಬೇಕು' ಎಂದು ಪ್ರತಿಭಟನಾ ನಿರತ ವೈದ್ಯರು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

'ಇದು ಪ್ರತಿಭಟನೆ ಮಾತ್ರ ಆಗಿರದೆ, ನ್ಯಾಯಕ್ಕಾಗಿ ನಡೆಸಿದ ಹೋರಾಟವಾಗಿದೆ. ವೈದ್ಯರ ಮೇಲೆ ನಿರಂತರ ಹಲ್ಲೆ ನಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕಲು ಕಾನೂನು ಬಲಗೊಳ್ಳಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಹೋರಾಟದ ಸ್ವರೂಪ ನಿರ್ಧರಿಸಲಾಗುತ್ತದೆ' ಎಂದು ಐಎಂಎ ಕರ್ನಾಟಕ ಶಾಖೆ ಅಧ್ಯಕ್ಷ ಡಾ.ಎಸ್. ಶ್ರೀನಿವಾಸ್ ಎಚ್ಚರಿಸಿದರು.



ಕೋಲ್ಕತ್ತದಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ, ಕೊಲೆ ಪ್ರಕರಣ ಖಂಡಿಸಿ ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಉಪವಾಸ ಸತ್ಯಾಗ್ರಹ ನಡೆಸಿದರು

ಮೈತೇಯಿ, ಕುಕಿ ಶಾಸಕರ ಸಭೆ ಒಮ್ಮತದ ನಿರ್ಣಯ

ಹಿಂಸಾಚಾರ ತೊರೆಯಲು ಮನವಿ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಉಂಟಾಗಿರುವ ಜನಾಂಗೀಯ ಸಂಘರ್ಷವನ್ನು ಪರಿಹರಿಸಲು ಕೇಂದ್ರ ಗೃಹ ಸಚಿವಾಲಯವು ಮೈತೇಯಿ, ಕುಕಿ ಹಾಗೂ ನಾಗಾ ಸಮುದಾಯಗಳಿಗೆ ಸೇರಿದ ಶಾಸಕರೊಂದಿಗೆ ಮಂಗಳವಾರ ಮಹತ್ವದ ಸಭೆ ನಡೆಸಿತು. ಜನರ ಪ್ರಾಣ ಹಾನಿ ತಡೆಯಲು, ಹಿಂಸಾಚಾರ ಮಾರ್ಗದಿಂದ ದೂರವಿರುವಂತೆ ಎಲ್ಲ ಸಮುದಾಯಗಳಿಗೆ ಮನವಿ ಮಾಡಲು ಒಮ್ಮತದ ನಿರ್ಣಯವನ್ನು ಸಭೆಯಲ್ಲಿ ತೆಗೆದುಕೊಳ್ಳಲಾಗಿದೆ.

'ಕುಕಿ– ಜೋ- ಹಮಾರ್– ಮೈತೇಯಿ ಹಾಗೂ ನಾಗಾ ಸಮುದಾಯಗಳನ್ನು ಪ್ರತಿನಿಧಿಸುವ ಮಣಿಪುರ ಶಾಸಕರೊಂದಿಗೆ ರಾಜ್ಯದ ಪ್ರಸ್ತುತ ಸನ್ನಿವೇಶವನ್ನು ಚರ್ಚಿಸಲು ನವದೆಹಲಿಯಲ್ಲಿ ಸಭೆ ನಡೆಸಲಾಯಿತು. ಎಲ್ಲ ಸಮುದಾಯಗಳು ಹಿಂಸಾಚಾರದ ಮಾರ್ಗದಿಂದ ದೂರವಿರಬೇಕು. ಇದರಿಂದ ಅಮಾಯಕ ನಾಗರಿಕರ ಅಮೂಲ್ಯ ಜೀವಗಳು ಹಾನಿಯಾಗುವುದಿಲ್ಲ. ಇದಕ್ಕಾಗಿ ರಾಜ್ಯದ ಜನರಿಗೆ ಮನವಿ ಮಾಡಲು ಸಭೆಯು ಸರ್ವಾನುಮತದಿಂದ ನಿರ್ಧರಿಸಿತು' ಎಂದು ಗೃಹ ಸಚಿವಾಲಯ ಹೊರಡಿಸಿದ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ಮಣಿಪುರ ವಿಧಾನಸಭೆಯ ಸ್ಪೀಕರ್ ಥೋಕ್‌ಚೋಮ್ ಸತ್ಯವ್ರತ ಸಿಂಗ್ ಹಾಗೂ ಶಾಸಕರಾದ ತೋಂಗ್‌ಬ್ರಂ ರೊಬಿಂದ್ರೊ, ಬಸಂತ್ ಕುಮಾರ್ ಸಿಂಗ್ ಅವರು ಮೈತೇಯಿ ಸಮುದಾಯದ ಪರ ಸಭೆಯಲ್ಲಿ ಭಾಗವಹಿಸಿದ್ದರು. ಕುಕಿ ಸಮುದಾಯದ ಪರ ಶಾಸಕರಾದ ಲೆತ್‌ಪಾವೊ ಹಾವೊಕಿಪ್ ಹಾಗೂ ನೆಮ್ಚಾ ಕಿಪಗೆನ್ ಅವರು ಹಾಜರಿದ್ದರು. ಶಾಸಕರಾದ ರಾಮ್ ಮುಯಿವಾ, ಅವಾಗ್ಬೊ ನ್ಯೂಮೈ ಹಾಗೂ ಎಲ್. ದಿಖೊ ಅವರು ನಾಗಾ ಸಮುದಾಯವನ್ನು ಪ್ರತಿನಿಧಿಸಿದ್ದರು.

ಮೈತೇಯಿ ಮತ್ತು ಕುಕಿ ಸಮುದಾಯದ ಸುಮಾರು 20 ಶಾಸಕರು ಮತ್ತು ನಾಗಾ ಸಮುದಾಯದ ಮೂವರು ಶಾಸಕರು ಈ ಸಭೆಯಲ್ಲಿ ಭಾಗವಹಿಸಿದ್ದರು. ಗೃಹ ಸಚಿವ ಅಮಿತ್ ಶಾ ಮತ್ತು ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಸಭೆಯಲ್ಲಿ ಪಾಲ್ಗೊಂಡಿರಲಿಲ್ಲ.

ಮಣಿಪುರದಲ್ಲಿ 2023ರ ಮೇನಲ್ಲಿ ಜನಾಂಗೀಯ ಹಿಂಸಾಚಾರ ಭುಗಿಲೆದ್ದ ನಂತರ ಮಣಿಪುರದ ಬುಡಕಟ್ಟು ಸಮುದಾಯಗಳಿಗೆ ಸೇರಿದ 20ಕ್ಕೂ ಹೆಚ್ಚು ಶಾಸಕರು ಮೊದಲ ಬಾರಿಗೆ ಭೇಟಿಯಾಗಿ, ಚರ್ಚಿಸಿರುವುದು ಮಹತ್ವದ ಬೆಳವಣಿಗೆಯಾಗಿದೆ.

ಸತೀಶ್ ಹಂಪಿಹೊಳಿ, ವಸುಂಧರಾ ಭೂಪತಿಗೆ 'ಆರೋಹಣ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ


ಸತೀಶ್ ಹಂಪಿಹೊಳಿ


ಡಾ.ವಸುಂಧರಾ ಭೂಪತಿ

ಬೆಂಗಳೂರು: ಆರೋಹಣ ಸಂಸ್ಥೆ ನೀಡುವ 'ಆರೋಹಣ ಕಲಾ ರೂಪ ಪ್ರಶಸ್ತಿ'ಗೆ ತಬಲಾ ವಾದಕ ಸತೀಶ್ ಹಂಪಿಹೊಳಿ ಹಾಗೂ ಆಯುರ್ವೇದ ವೈದ್ಯೆ, ಲೇಖಕಿ ಡಾ. ವಸುಂಧರಾ ಭೂಪತಿ ಆಯ್ಕೆಯಾಗಿದ್ದಾರೆ.

ಸಂಸ್ಥೆಯು ಇದೇ 19ರಂದು ಬಿ.ಪಿ.ವಾಡಿಯಾ ರಸ್ತೆಯಲ್ಲಿರುವ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಆರನೇ ವಾರ್ಷಿಕೋತ್ಸವ ಹಮ್ಮಿಕೊಂಡಿದೆ. ಸಮಾರಂಭವನ್ನು ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್ ಉದ್ಘಾಟಿಸಲಿದ್ದಾರೆ. ಇಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಂಸ್ಥೆಯ ಅಧ್ಯಕ್ಷ ಸುಧೀಂದ್ರ ತಿಳಿಸಿದ್ದಾರೆ.

ಜೈಲಿನಲ್ಲಿ ವಿಡಿಯೊ ಕಾಲ್ 10 ದಿನದಲ್ಲಿ ವರದಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಕೇಂದ್ರ ಕಾರಾಗೃಹದಲ್ಲಿ ಕೆಲ ಕೈದಿಗಳು ಸ್ಮಾರ್ಟ್‌ಫೋನ್ ಬಳಸಿ ಸ್ನೇಹಿತರಿಗೆ ವಿಡಿಯೊ ಕರೆ ಮಾಡಿದ್ದ ಪ್ರಕರಣ ಸಂಬಂಧ ಕಾರಾಗೃಹಗಳು ಹಾಗೂ ಸುಧಾರಣಾ ಸೇವೆಗಳ ಇಲಾಖೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕಿ (ಎಡಿಜಿಪಿ) ಮಾಲಿನಿ ಕೃಷ್ಣಮೂರ್ತಿ ಅವರು ಮಂಗಳವಾರ ಜೈಲಿಗೆ ಭೇಟಿ ನೀಡಿ ಪರಿಶೀಲಿಸಿದರು.

ಜೈಲಿನ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಅವರು, 'ಪರಪ್ಪನ ಅಗ್ರಹಾರದಲ್ಲಿ ದರ್ಶನ್ ಪ್ರಕರಣ ನಡೆದ ಬಳಿಕವೂ ಎಚ್ಚೆತ್ತುಕೊಂಡಿಲ್ಲವಾ? ಕೈದಿಗಳಿಂದ ವಿಡಿಯೊ ಕಾಲ್ ಹೋಗುತ್ತಿದೆ ಎಂದರೆ ಏನರ್ಥ?' ಎಂದು ಪ್ರಶ್ನಿಸಿದರು.

ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಅವರೊಂದಿಗೆ ಜೈಲು ತಪಾಸಣೆ ಮಾಡಿ, ಅಧೀಕ್ಷಕರ ಜತೆಗೆ ಚರ್ಚಿಸಿದರು. ಬಳಿಕ ಮಾತನಾಡಿದ ಅವರು, 'ವಿಡಿಯೊ ಕಾಲ್ ಪ್ರಕರಣದಲ್ಲಿ ಪ್ರಾಥಮಿಕ ತನಿಖೆಗೆ ಆದೇಶಿಸಿದ್ದು, 10 ದಿನದಲ್ಲಿ ವರದಿ ಸಲ್ಲಿಸಲು ಸೂಚಿಸಲಾಗಿದೆ. ಅಧಿಕಾರಿಗಳ ಪಾತ್ರ ಕಂಡುಬಂದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

'ಜೈಲಿನ ಮುಖ್ಯ ಅಧೀಕ್ಷಕಿಯಾಗಿ ಆರ್.ಅನಿತಾ ಅವರು ಸೋಮವಾರ ಅಧಿಕಾರ ವಹಿಸಿಕೊಂಡಿದ್ದಾರೆ. ಭದ್ರತೆ, ತಪಾಸಣೆ ಬಿಗಿಗೊಳಿಸಲು ಸೂಚಿಸಿದ್ದೇನೆ. ಈಗಿರುವ 2ಜಿ ಜಾಮರ್ ಬದಲಿಗೆ 5ಜಿ ಜಾಮರ್ ಅಳವಡಿಸಲಾಗುವುದು' ಎಂದು ತಿಳಿಸಿದರು.

'ರಾಜ್ಯದಲ್ಲಿ 54 ಜೈಲುಗಳಿದ್ದು ಮೇಲ್ವಿಚಾರಣೆಗೆ ಸಿಬ್ಬಂದಿ ಕೊರತೆ ಇದೆ. ಒಬ್ಬೊಬ್ಬ ಡಿಐಜಿಗೆ 26ರಿಂದ 28 ಜೈಲುಗಳು ಬರುತ್ತವೆ. ಹೀಗಾಗಿ, ಮೇಲ್ವಿಚಾರಣೆ ಹಾಗೂ ಸಿಬ್ಬಂದಿ ಸಂಖ್ಯೆ ಹೆಚ್ಚಿಸಿ, ತರಬೇತಿ ಕೊಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದರು. ಕೈದಿಗಳಾದ ಸಾಗರ್ ಶಿವಪ್ಪ, ಸುನೀಲ್ ದೇವದಾಸ್, ನಾಗೇಶ ಕರಬಸಪ್ಪ, ವಿಚಾರಣಾಧೀನ ಕೈದಿಗಳಾದ ವಿಶಾಲ್, ಜುಲ್ಫಿಕರ್, ಜಮೀರ್ ಸೇರಿ ಇತರರ ವಿರುದ್ಧ ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಎಐನಲ್ಲಿ ಇಂಟರ್ನ್‌ಶಿಪ್: ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾರತೀಯ ವಿಮಾನನಿಲ್ದಾಣ ಪ್ರಾಧಿಕಾರದಲ್ಲಿ (ಎಎಐ) ಇಂಟರ್ನ್‌ಶಿಪ್ ತೆಗೆದುಕೊಳ್ಳಬಹುದು.

ವಿದ್ಯಾರ್ಥಿಗಳಿಗೆ ಪ್ರಸ್ತುತ ಶೈಕ್ಷಣಿಕ ವರ್ಷದಿಂದಲೇ ಇಂಟರ್ನ್‌ಶಿಪ್ ಅವಕಾಶಗಳನ್ನು ಒದಗಿಸಲು ಬೆಂಗಳೂರು ವಿಶ್ವವಿದ್ಯಾಲಯ ಎಎಐ ಜತೆ ಒಪ್ಪಂದ ಮಾಡಿಕೊಂಡಿದೆ.

'ಆರಂಭದಲ್ಲಿ ಈ ಅವಕಾಶವನ್ನು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ನೀಡಲು ನಿರ್ಧರಿಸಲಾಗಿತ್ತು. ಆದರೆ, ವಿಜ್ಞಾನ ಮತ್ತು ನಿರ್ವಹಣಾ ವಿಭಾಗದ ವಿದ್ಯಾರ್ಥಿಗಳಿಗೂ ಅವಕಾಶ ನೀಡಲು ಎಎಐ ಅಧಿಕಾರಿಗಳು ಒಪ್ಪಿಗೆ ನೀಡಿದ್ದಾರೆ. ಮೊದಲ ವರ್ಷ ಇಂಟರ್ನ್‌ಶಿಪ್ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಪಟ್ಟಿ ಸಿದ್ಧಪಡಿಸಲಾಗುವುದು' ಎಂದು ಕೌಶಲ ಅಭಿವೃದ್ಧಿ ನಿರ್ದೇಶಕಿ ಕೆ. ನಿರ್ಮಲಾ ಹೇಳಿದರು.

ಗೌಡರ ಕಾಯಕನಿಷ್ಠೆ, ಸಾಮಾಜಿಕ ಕಳಕಳಿ ಸ್ಮರಿಸಿದ ಒಡನಾಡಿಗಳು

ಪುಟ್ಟೇಗೌಡರಿಗೆ 'ಚುಂಚಶ್ರೀ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಹಾಗೂ ಸಮಾಜ ಸೇವಕ ಕೆ.ಎನ್.ಪುಟ್ಟೇಗೌಡ ಅವರ ಜೀವಮಾನ ಸಾಧನೆಯನ್ನು ಗುರುತಿಸಿ ಆಂದಿಚುಂಚನಗಿರಿ ಮಹಾಸಂಸ್ಥಾನ ಮಠದಿಂದ 'ಚುಂಚಶ್ರೀ ಪ್ರಶಸ್ತಿ'ಯನ್ನು ಮಂಗಳವಾರ ಪ್ರದಾನ ಮಾಡಲಾಯಿತು.

ನಂತರ ಮಾತನಾಡಿದ, ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್, 'ಪುಟ್ಟೇಗೌಡರದ್ದು ಕಠೋರ ವ್ಯಕ್ತಿತ್ವ, ಆದರೆ ಮಗುವಿನಂತಹ ಮನಸ್ಸು. ವೃತ್ತಿ ವಿಷಯದಲ್ಲಿ ನಿಷ್ಠುರ' ಎಂದು ಬಣ್ಣಿಸಿದರು.

'ಪುಟ್ಟೇಗೌಡರು ಬೇರೆಯವರ ಜೇಬಿಗೆ ಕೈ ಹಾಕಿದವರಲ್ಲ. ಪ್ರಾಮಾಣಿಕವಾಗಿ ವಕೀಲ ವೃತ್ತಿ ನಡೆಸಿದವರು. ಸಮಾಜಕ್ಕಾಗಿ ದುಡಿದವರು. ಈಗಿನ ವಕೀಲರು, ನ್ಯಾಯಾಧೀಶರಿಗೆ ನೈತಿಕತೆಯ ಮೂರ್ತರೂಪ ಅವರು' ಎಂದು ಶ್ಲಾಘಿಸಿದರು.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಮಾತನಾಡಿ, '38 ವರ್ಷಗಳು ಬಿಬಿಎಂಪಿ ಪರ ವಕೀಲರಾಗಿ ಕೆಲಸ ಮಾಡಿದ ಪುಟ್ಟೇಗೌಡರು, ಮಹಾನಗರದಲ್ಲಿ ಸಾಕಷ್ಟು ಸಾರ್ವಜನಿಕ ಆಸ್ತಿ ಉಳಿಸಿಕೊಟ್ಟಿದ್ದಾರೆ' ಎಂದು ಶ್ಲಾಘಿಸಿದರು.

'ಅಧಿಕಾರಕ್ಕಾಗಿ ಎಂದೂ ತಮ್ಮ ತತ್ವ ಸಿದ್ಧಾಂತದೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ. ನಿಷ್ಠೆ, ಪ್ರಾಮಾಣಿಕತೆ ಜೊತೆಗೆ ಸಾಮಾಜಿಕ ಕಳಕಳಿಯೊಂದಿಗೆ ವಕೀಲ ವೃತ್ತಿಯನ್ನು ನಡೆಸಿದ ಅವರ ಸೇವೆಯನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವುದು ಅರ್ಥಪೂರ್ಣವಾಗಿದೆ' ಎಂದು ಹೇಳಿದರು.

ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಮಾತನಾಡಿ, 'ಪುಟ್ಟೇಗೌಡರಿಗೆ ಸಾವಿರಾರು ಶಿಷ್ಯರಿದ್ದಾರೆ. ಅದರಲ್ಲಿ ನಾನೂ ಒಬ್ಬ ಎಂಬ ಹೆಮ್ಮೆ ಇದೆ. ಅವರ ಪ್ರೋತ್ಸಾಹದ ನುಡಿಗಳು ನನ್ನನ್ನು ಇಂದು ಇಲ್ಲಿಯವರೆಗೂ ಕರೆತಂದಿವೆ' ಎಂದರು.

ಹಿರಿಯ ವಕೀಲ ಅಶೋಕ್ ಹಾರನಹಳ್ಳಿ ಅವರು, ಪುಟ್ಟೇಗೌಡರ ಪರಿಚಯದ ಜೊತೆಗೆ, ಅವರೊಂದಿಗಿನ ಮೂರು ದಶಕಗಳ ಒಡನಾಟವನ್ನು ನೆನಪಿಸಿಕೊಂಡರು.


ಪ್ರಶಸ್ತಿ ಪುರಸ್ಕೃತ ಪುಟ್ಟೇಗೌಡರು 'ನನ್ನ ಸಾಮಾಜಿಕ ಸೇವೆಯನ್ನು ಗುರುತಿಸಿ ಆದಿಚುಂಚನಗಿರಿ ಮಠ ಚುಂಚಶ್ರೀ ಪ್ರಶಸ್ತಿ ನೀಡಿರುವುದು ಸಂತಸ ತಂದಿದೆ. ಪ್ರಶಸ್ತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಪ್ರಶಸ್ತಿಯೊಂದಿಗೆ ₹50 ಸಾವಿರ ನಗದು ನೀಡಿದ್ದಾರೆ. ಅದನ್ನು ಸ್ವೀಕರಿಸಿ, ಆ ಹಣವನ್ನು ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕೆಲಸ ಮಾಡುತ್ತಿರುವ ಆದಿಚುಂಚನಗಿರಿ ಮಠದ ಟ್ರಸ್ಟ್‌ಗೆ ನೀಡುತ್ತಿದ್ದೇನೆ' ಎಂದು ಪ್ರಕಟಿಸಿದರು.


ಸಾನ್ನಿಧ್ಯ ವಹಿಸಿದ್ದ ನಿರ್ಮಲಾನಂದ ಸ್ವಾಮೀಜಿ ಮಾತನಾಡಿದರು. ಪುಟ್ಟೇಗೌಡರು ಬರೆದಿರುವ 'ಮರೆಯುವ ಮುನ್ನ'– ಆತ್ಮಕಥೆಯನ್ನು ವೇದಿಕೆಯಲ್ಲಿದ್ದ ಗಣ್ಯರು ಬಿಡುಗಡೆ ಮಾಡಿದರು. ಆದಿಚುಂಚನಗಿರಿ ಮಠದ ವಿವಿಧ ಶಾಖಾ ಮಠಗಳ ಸ್ವಾಮೀಜಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.



'ಆದಿಚುಂಚನಗಿರಿ ಮಹಾಸಂಸ್ಥಾನ ಮಠ' ಆಯೋಜಿಸಿದ್ದ ಸಮಾರಂಭದಲ್ಲಿ ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಕೆ.ಎನ್.ಪುಟ್ಟೇಗೌಡ ಅವರಿಗೆ 'ಚುಂಚಶ್ರೀ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ತಂತ್ರಜ್ಞಾನ





ಕ್ಷುದ್ರಗ್ರಹಗಳಿಂದ ಭೂಮಿಯ ರಕ್ಷಣೆ!

ಸೂರ್ಯನಾರಾಯಣ ವಿ.

ಅಮೆರಿಕದ ಫ್ಲಾರಿಡಾದ ಕೇಪ್ ಕೆನರಾವಲ್‌ನಲ್ಲಿರುವ ನಾಸಾದ ಬಾಹ್ಯಾಕಾಶ ಕೇಂದ್ರದಿಂದ ಯುರೋಪಿನ ಬಾಹ್ಯಾಕಾಶ ಸಂಸ್ಥೆ (ಇಎಸ್‌ಎ) ನಿರ್ಮಿಸಿರುವ 'ಹೀರಾ' (HERA) ಎಂಬ ಗಗನನೌಕೆಯನ್ನು ಹೊತ್ತೊಯ್ದ ಸ್ಪೇಸ್- ಎಕ್ಸ್ ರಾಕೆಟ್ ಅಕ್ಟೋಬರ್ 7 ಸೋಮವಾರ ನಭಕ್ಕೆ ಚಿಮ್ಮಿ ಯಶಸ್ವಿಯಾಗಿ ಕಕ್ಷೆ ತಲುಪಿತು.

ಇದರಲ್ಲೇನು ವಿಶೇಷ ಎಂದು ನೀವು ಪ್ರಶ್ನಿಸಬಹುದು. ಖಂಡಿತವಾಗಿಯೂ ವಿಶೇಷ ಇದೆ. ಇದು ಸಾಮಾನ್ಯವಾದ ಬಾಹ್ಯಾಕಾಶ ಯೋಜನೆಯಲ್ಲ. ಇಡೀ ಭೂಮಿಯನ್ನು ಆಕಾಶಕಾಯಗಳಿಂದ ಅದರಲ್ಲೂ ಮುಖ್ಯವಾಗಿ ಕ್ಷುದ್ರಗ್ರಹಗಳು/ ಧೂಮಕೇತುಗಳ ಅಪ್ಪಳಿಸುವಿಕೆಯಿಂದ ರಕ್ಷಿಸುವುದರ ಮೂಲಕ ಮನುಕುಲವನ್ನು ಉಳಿಸುವ ಮಹತ್ವಾಕಾಂಕ್ಷಿಯ ಯೋಜನೆ.

6.5 ಕೋಟಿ ವರ್ಷಗಳಿಗೂ ಮೊದಲು ಭೂಮಿಯಲ್ಲಿ ಡೈನೋಸರ್‌ಗಳು ನೆಲಸಿದ್ದವು ಎಂಬ ಸಂಗತಿ ಎಲ್ಲರಿಗೂ ತಿಳಿದಿರುವಂತಹದ್ದು. ಗಾತ್ರದಲ್ಲಿ ಬೃಹತ್ತಾಗಿದ್ದ ಡೈನೋಸರ್‌ಗಳು ಹಾಗೂ ಆ ಕುಲಕ್ಕೆ ಸೇರಿದ ಇತರ ಪ್ರಾಣಿಗಳು ಸಂಪೂರ್ಣವಾಗಿ ಅಳಿದಿದ್ದವು. ಇದಕ್ಕೆ ಕಾರಣ, ಕ್ಷುದ್ರಗ್ರಹ ಅಥವಾ ಧೂಮಕೇತು ಭೂಮಿಗೆ ಅಪ್ಪಳಿಸಿದ್ದು ಎಂದು ಹೇಳಲಾಗುತ್ತಿದೆ.

ಒಂದು ಕಿ.ಮೀಕ್ಕಿಂತ ಹೆಚ್ಚು ಅಗಲದ ಕ್ಷುದ್ರಗ್ರಹ ಭೂಮಿಗೆ ಅಪ್ಪಳಿಸಿದರೆ ಜಾಗತಿಕ ಮಟ್ಟದಲ್ಲಿ ಮಹಾ ವಿನಾಶ ಸಂಭವಿಸಬಹುದು ಎಂದು ವಿಜ್ಞಾನಿಗಳು ಊಹಿಸಿದ್ದಾರೆ. ಪ್ರತಿ ಐದು ಲಕ್ಷ ವರ್ಷಗಳಿಗೊಮ್ಮೆ ಇಂತಹ ವಿದ್ಯಮಾನ ಘಟಿಸಬಹುದು ಎಂಬ ಲೆಕ್ಕಾಚಾರ ಖಗೋಳ ವಿಜ್ಞಾನ ಕ್ಷೇತ್ರದಲ್ಲಿದೆ.

140 ಮೀಟರ್ ಅಂದರೆ 460 ಅಡಿ ಅಗಲದ ಕ್ಷುದ್ರಗ್ರಹ ಭೂಮಿಗೆ ಅಪ್ಪಳಿಸಿದರೂ ಸಾಕು; ಪ್ರಮುಖ ನಗರ ಅಥವಾ ವಿಸ್ತಾರವಾದ ಪ್ರದೇಶ ಸರ್ವನಾಶ ಮಾಡಬಲ್ಲುದು. ಪ್ರತಿ 20 ಸಾವಿರ ವರ್ಷಗಳಿಗೊಮ್ಮೆ ಇಂತಹ ಘಟನೆ ಜರುಗಬಹುದು ಎಂಬುದು ವಿಜ್ಞಾನಿಗಳ ಊಹೆ.

ಯಾವುದಾದರೂ ಕ್ಷುದ್ರಗ್ರಹ ಅಥವಾ ಧೂಮಕೇತು ಭೂಮಿಗೆ ಅಪ್ಪಳಿಸುವ ಸಂದರ್ಭ ಇದ್ದರೆ ಅದನ್ನು ಹೇಗೆ ತಡೆಯಬಹುದು ಎಂಬುದರ ಬಗ್ಗೆ ಖಗೋಳ ವಿಜ್ಞಾನಿಗಳು ದಶಕಕ್ಕೂ ಹೆಚ್ಚು ಸಮಯದಿಂದ ಅಧ್ಯಯನ ನಡೆಸುತ್ತಿದ್ದಾರೆ. ಐದಾರು ವರ್ಷಗಳಿಂದ ಈ ಪ್ರಯತ್ನಕ್ಕೆ ಸ್ಪಷ್ಟ ರೂಪುರೇಷೆ ಸಿಕ್ಕಿದೆ. ಆಕಾಶಕಾಯಗಳಿಂದ ವಸುಂಧರೆಯನ್ನು ರಕ್ಷಿಸುವ ಪ್ರಯತ್ನಕ್ಕೆ ಮೊದಲ ಯಶಸ್ಸು ಕೂಡ ಸಿಕ್ಕಿದೆ. 'ಹೀರಾ' ಯೋಜನೆ ಈ ಪ್ರಯತ್ನದ ಮುಂದುವರಿದ ಭಾಗ.



ಡಿಮೊರ್ಫೋಸ್ ಕ್ಷುದ್ರಗ್ರಹ (ನಾಸಾ ಚಿತ್ರ)

'ಹೀರಾ' ಏನು ಮಾಡುತ್ತದೆ?

ಸೋಮವಾರ ನಭಕ್ಕೆ ಚಿಮ್ಮಿದ 'ಹೀರಾ' ನೌಕೆಯು ಡಿಮೊರ್ಫೋಸ್ ಕ್ಷುದ್ರಗ್ರಹದ ಬಳಿ ತೆರಳಿ, ಅಲ್ಲಿ ಅಧ್ಯಯನ ನಡೆಸಲಿದೆ. ಇದೊಂದು ರೀತಿ, ಅಪರಾಧ ನಡೆದ ಸ್ಥಳದಲ್ಲಿ ಪೊಲೀಸರು ನಡೆಸುವ ತನಿಖೆಯಂತೆ. ಕ್ಷುದ್ರ ಗ್ರಹಕ್ಕೆ ಅಪ್ಪಳಿಸಿದ ನೌಕೆ ಮಾಡಿರುವ ಪರಿಣಾಮವೇನು? ಅಪ್ಪಳಿಸಿದ ರಭಸಕ್ಕೆ ಕುಳಿ ನಿರ್ಮಾಣವಾಗಿದೆಯೇ ಅಥವಾ ಕ್ಷುದ್ರಗ್ರಹದ ಸ್ವರೂಪವನ್ನು ಬದಲಾಯಿಸಿದೆಯೇ ಎಂಬ ಮಾಹಿತಿಗಳನ್ನು 'ಹೀರಾ' ಭೂಮಿಗೆ ಮಾಹಿತಿ ರವಾನಿಸಲಿದೆ. ಈ ನೌಕೆಯೊಂದಿಗೆ ಎರಡು ಮಿನಿ ಉಪಗ್ರಹಗಳು ಕೂಡ ಇವೆ.

ನೌಕೆಯು 2026ರ ಅಂತ್ಯದ ವೇಳೆಗೆ ಡಿಮೊರ್ಫೋಸ್ ಬಳಿ ತಲುಪಲಿದೆ. ಆ ಸಂದರ್ಭದಲ್ಲಿ ಅದು ಭೂಮಿಯಿಂದ 1.95 ಕೋಟಿ ಕಿ.ಮೀಗಳಷ್ಟು ದೂರದಲ್ಲಿರಲಿದೆ. ಜರ್ಮನಿಯ ವಿಜ್ಞಾನಿಗಳು ನೌಕೆಯ ಪ್ರಯಾಣದ ಮೇಲ್ವಿಚಾರಣೆ ನಡೆಸಲಿದ್ದಾರೆ. ನೌಕೆಯು ಆರು ತಿಂಗಳ ಕಾಲ ಕ್ಷುದ್ರಗ್ರಹದ ಆಗಸದಲ್ಲಿದ್ದುಕೊಂಡು, ಅದರ, ಗಾತ್ರ, ಸ್ವರೂಪ, ಕಕ್ಷೆ ಸೇರಿದಂತೆ ಚಲನವಲನಗಳ ಮೇಲೆ ನಿಗಾ ಇಡಲಿದೆ. ಬಳಿಕ ನೌಕೆಯಲ್ಲಿರುವ ಪುಟ್ಟ ಉಪಗ್ರಹಗಳು ಕ್ಷುದ್ರಗ್ರಹದ ಇನ್ನಷ್ಟು ಸಮೀಪಕ್ಕೆ ತೆರಳಿ ಮಾಹಿತಿ ಕಲೆಹಾಕಲಿವೆ. ಸಮೀಕ್ಷಾ ಕಾರ್ಯ ಮುಗಿದ ಬಳಿಕ ಕ್ಷುದ್ರಗ್ರಹದಲ್ಲಿ ಇಳಿಯಲೂ ಯತ್ನಿಸಲಿವೆ.

ಅಂದ ಹಾಗೆ, ಭೂಮಿಗೆ ಹತ್ತಿರದಲ್ಲಿ 36 ಸಾವಿರದಷ್ಟು ಕ್ಷುದ್ರಗ್ರಹಗಳು/ಧೂಮಕೇತುಗಳು ಇವೆ. ನಾಸಾದ ಪ್ರಕಾರ, ಇವುಗಳಲ್ಲಿ 2,400 ರಷ್ಟು ಆಕಾಶಕಾಯಗಳು ಭೂಮಿಗೆ ಆಪತ್ತು ಉಂಟು ಮಾಡಬಹುದು.

ಏನದು ಮೊದಲ ಯಶಸ್ಸು?

ನಾಸಾವು, ಭೂಮಿಯಿಂದ 1.1 ಕೋಟಿ ಕಿ.ಮೀ ದೂರದಲ್ಲಿದ್ದ ಡಿಮೊರ್ಫೋಸ್ ಎಂಬ ಪುಟ್ಟದಾದ ಕ್ಷುದ್ರ ಗ್ರಹಕ್ಕೆ ಫ್ರಿಜ್ ಗಾತ್ರದ ನೌಕೆಯನ್ನು (ಇಂಪ್ಯಾಕ್ಟರ್) 2022ರ ಸೆ.26ರಂದು ಡಿಕ್ಕಿ ಹೊಡೆಸಿತ್ತು. ಇದು ಒಂದು ಪರೀಕ್ಷೆ. ಅದನ್ನು 'ಡಾರ್ಟ್' (ಡಬಲ್ ಆಸ್ಟಿರಾಯ್ಡ್ ರಿಡೈರೆಕ್ಷನ್ ಟೆಸ್ಟ್) ಎಂದು ಕರೆಯಲಾಗಿದೆ. ಮಾನವ ನಿರ್ಮಿತ ನೌಕೆಯನ್ನು ಕ್ಷುದ್ರಗ್ರಹಕ್ಕೆ ಡಿಕ್ಕಿ ಹೊಡೆಯುವಂತೆ ಮಾಡಿ, ಕ್ಷುದ್ರಗ್ರಹದ ಕಕ್ಷೆಯನ್ನು ಬದಲಾಯಿಸುವುದು ಈ ಪರೀಕ್ಷೆಯ ಉದ್ದೇಶ. ಇದು ಒಂದು ಹಂತಕ್ಕೆ ಯಶಸ್ವಿಯಾಗಿದೆ.

ಡಿಮೊರ್ಫೋಸ್ 525 ಅಡಿ ವ್ಯಾಸದ (160) ಮೀಟರ್‌ನ ಪುಟ್ಟ ಕ್ಷುದ್ರಗ್ರಹ. 2003ರಲ್ಲಿ ಇದನ್ನು ಪತ್ತೆ ಮಾಡಲಾಗಿತ್ತು. ಈ ಕ್ಷುದ್ರಗ್ರಹವು ಡಿಡೈಮಸ್ ಎಂಬ ಇನ್ನೊಂದು ಕ್ಷುದ್ರಗ್ರಹದ ನೈಸರ್ಗಿಕ ಉಪಗ್ರಹ (ಭೂಮಿಗೆ ಚಂದ್ರ ಇದ್ದಂತೆ). ಡಿಡೈಮಸ್ ಕೂಡ ಚಿಕ್ಕದೇ. 780 ಮೀಟರ್ ವ್ಯಾಸವನ್ನು ಹೊಂದಿರುವ ಇದನ್ನು1996ರಲ್ಲಿ ಗುರುತಿಸಲಾಗಿತ್ತು. ಡಿಮೊರ್ಫೋಸ್ ಕ್ಷುದ್ರಗ್ರಹವು ಡಿಡೈಮಸ್ ಸುತ್ತ ನಿರ್ದಿಷ್ಟ ಕಕ್ಷೆಯಲ್ಲಿ ಸುತ್ತುತ್ತಿದೆ.

ನಾಸಾವು ನೌಕೆಯನ್ನು ಡಿಕ್ಕಿ ಹೊಡೆಸಿದ ಬಳಿಕ ಡಿಮೊರ್ಫೋಸ್‌ನ ಕಕ್ಷೆಯಲ್ಲಿ ಬದಲಾವಣೆಯಾಗಿದೆ.

2022ರ ಸೆ.26ರ ಮೊದಲು ಈ ಕ್ಷುದ್ರಗ್ರಹವು ಡಿಡೈಮಸ್‌ಗೆ ಒಂದು ಸುತ್ತು ಬರಲು 11 ಗಂಟೆ 55 ನಿಮಿಷ ತೆಗೆದುಕೊಳ್ಳುತ್ತಿತ್ತು. ಆದರೆ, 'ಡಾರ್ಟ್' ಪರೀಕ್ಷೆಯ ನಂತರ ಈ ಅವಧಿ 11 ಗಂಟೆ 23 ನಿಮಿಷಗಳಿಗೆ ಇಳಿದಿದೆ. ಅಂದರೆ, ಮೊದಲಿಗಿಂತ 32 ನಿಮಿಷಗಳಷ್ಟು ಕಡಿಮೆ ಸಮಯದಲ್ಲಿ ಒಂದು ಸುತ್ತು ಹಾಕುತ್ತದೆ. ಕ್ಷುದ್ರಗ್ರಹದ ಕಕ್ಷೆ ಬದಲಾಗಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ನಾಸಾ ವಿಜ್ಞಾನಿಗಳ ಯೋಚನೆ ಏನು ಎಂಬುದು ನಿಮಗೆ ಅರ್ಥವಾಗಿರಬಹುದು. ಒಂದು ವೇಳೆ ಯಾವುದಾದರೂ ಕ್ಷುದ್ರಗ್ರಹ ಭೂಮಿಗೆ ಅಪ್ಪಳಿಸುವ ಸಂದರ್ಭ ಬಂದರೆ, ಅಂತಹ ಕ್ಷುದ್ರಗ್ರಹವನ್ನು ಮೊದಲೇ ಗುರುತಿಸಿ ಅದರ ಕಕ್ಷೆಯನ್ನು ಬದಲಾಯಿಸುವುದು ಯೋಜನೆ. ಅದು ಕಾರ್ಯಸಾಧುವೇ ಎಂಬುದನ್ನು ಪರೀಕ್ಷಿಸಲು ನಡೆಸಿದ್ದೇ 'ಡಾರ್ಟ್' ಪ್ರಯೋಗ.

ಲಗ್ಗೆ ಇಡಲಿದೆ ದೇಸಿ ಎಐ

ಜಗದೀಶ

ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವು ಇತರ ರಾಷ್ಟ್ರಗಳಿಗೆ ಸದಾ ಪೈಪೋಟಿ ನೀಡುತ್ತಿದೆ. ಇದೀಗ ಜಾಗತಿಕವಾಗಿ ಪ್ರಾಮುಖ್ಯತೆ ಹೊಂದಿರುವ ಎಐ ಅನ್ನು ದೇಸಿ ರೂಪದಲ್ಲಿ ಸ್ಥಳೀಯ ಭಾಷೆಗಳಲ್ಲಿ ರೂಪಿಸುವ ಮಹತ್ತರ ಯೋಜನೆಗೆ ಭಾರತ ಮುಂದಡಿ ಇಟ್ಟಿದೆ.

ಹೌದು, 'ಭಾರತ್ ಜೆನ್' ಎಂಬ ಹೊಸ ಯೋಜನೆಯೊಂದು ಇತ್ತೀಚೆಗಷ್ಟೇ ಚಾಲನೆಗೊಂಡಿದ್ದು, ಇದು ಭಾರತದ ಸಂಸ್ಕೃತಿ, ಜೀವನ ಕ್ರಮ, ವ್ಯವಸ್ಥೆಗಳನುಗುಣವಾಗಿ ದೇಸಿ ಭಾಷೆಗಳಲ್ಲಿ ಪ್ರತಿಕ್ರಿಯೆ ನೀಡಬಲ್ಲ ಎಐ ಮಾದರಿಗಳನ್ನು ರೂಪಿಸುವ ಯೋಜನೆ. ಇಂಟರ್ ಡಿಸಿಪ್ಲಿನರಿ ಸೈಬರ್ ಫಿಸಿಕಲ್ ಸಿಸ್ಟೆಮ್ ಎಂಬ ರಾಷ್ಟ್ರೀಯ ಅಭಿಯಾನದಡಿಯಲ್ಲಿ ಐಐಟಿ ಬಾಂಬೆಯು ಈ ಯೋಜನೆಯನ್ನು ಕಾರ್ಯಗತಗೊಳಿಸಲಿದೆ. ಎರಡು ವರ್ಷದಲ್ಲಿ ಈ ಯೋಜನೆ ಪೂರ್ಣಗೊಳ್ಳಲಿದ್ದು, ಬಳಿಕ ದೇಶದ ಸರ್ಕಾರಿ, ಖಾಸಗಿ, ಶಿಕ್ಷಣ ಮತ್ತು ಸಂಶೋಧನಾ ವಲಯಗಳು ಎಐ ಅನ್ನು ಪರಿಣಾಮಕಾರಿಯಾಗಿ ಬಳಸಬಹುದು.

ಪ್ರಸ್ತುತ ಇರುವ ಎಐ ಮಾದರಿಗಳು ಜಾಗತಿಕ ವಿಚಾರಗಳನ್ನು ಕೇಂದ್ರೀಕರಿಸಿಕೊಂಡು ರಚನೆಯಾಗಿರುವಂತದ್ದು, ಇದು ಭಾರತದ ವಿಷಯಗಳನ್ನು ಅಷ್ಟು ನಿಖರವಾಗಿ ಹೇಳುವುದಿಲ್ಲ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಮಾತ್ರ ನಿಖರ ಪ್ರತಿಕ್ರಿಯೆ ನೀಡುತ್ತವೆ. ಆದರೆ ಭಾರತ್ ಜೆನ್ ಅಡಿಯಲ್ಲಿ ತಯಾರಾಗುವ ಎಐ ಮಾದರಿಗಳು ಭಾರತ ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ ಸೇರಿದಂತೆ ಎಲ್ಲ ವಿಷಯಗಳನ್ನು ಸ್ಥಳೀಯ ಭಾಷೆಗಳಲ್ಲಿ ಹೇಳಬಲ್ಲದು.

ಸರ್ಕಾರದ ಸಹಯೋಗದಲ್ಲಿ ಇಂತಹ ಯೋಜನೆ ರೂಪುಗೊಳ್ಳುತ್ತಿರುವುದು ವಿಶ್ವದಲ್ಲಿ ಇದೆ ಮೊದಲು.

ಮುಂಬರುವ ವರ್ಷಗಳಲ್ಲಿ ಎಐ ಉಪಕ್ರಮಗಳಿಗಾಗಿ ಹೂಡಿಕೆಗಳು ಮತ್ತು ಬಜೆಟ್ ಹಂಚಿಕೆಯು ಹೆಚ್ಚಳವಾಗವ ಸಾಧ್ಯತೆಗಳಿವೆ ಎಂದು ಅಧ್ಯಯನವು ತಿಳಿಸುತ್ತದೆ.

ಮೂವಿ ಜೆನ್ ಎಂಬ ಹೊಸ ಮಾದರಿ

ಜಗತ್ತಿನ ತಂತ್ರಜ್ಞಾನ ವಲಯದಲ್ಲಿ ಸಂಚಲನ ಸೃಷ್ಟಿಸಿರುವ ಎಐ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಟೆಕ್ ದಿಗ್ಗಜರು ಎಐನ ಹೊಸಸಾಧ್ಯತೆಗಳನ್ನು ಹುಡುಕುತ್ತ ಯಶಸ್ಸು ಕಾಣುತ್ತಿದ್ದಾರೆ.

ಇದೀಗ ಸಾಮಾಜಿಕ ಜಾಲತಾಣ ಫೇಸ್‌ಬುಕ್ ನ ಮಾತೃ ಸಂಸ್ಥೆ ಮೆಟಾವು ಮೂವಿ ಜೆನ್ ಎಂಬ ಹೊಸ ಎಐ ಮಾದರಿಯನ್ನು ನಿರ್ಮಿಸಿದೆ. ಈ ಹೊಸ ಮಾದರಿಯು ಬಳಕೆದಾರರ ಬೇಡಿಕೆಗಳಿಗೆ ಪ್ರತಿಯಾಗಿ ನೈಜವಾಗಿ ಕಾಣುವ ವೀಡಿಯೊ ಮತ್ತು ಆಡಿಯೊ ಕ್ಲಿಪ್‌ಗಳನ್ನು ಸೃಷ್ಟಿಸಬಲ್ಲ ಸಾಮರ್ಥ್ಯವನ್ನು ಹೊಂದಿದೆ.

ಇದು ಓಪನ್ ಎಐ ಮತ್ತು ಇಲೆವೆನ್‌ಲ್ಯಾಬ್‌ಗಳಂತಹ ಪ್ರಮುಖ ಎಐ ಮಾದರಿಗಳಿಗೆ ಪ್ರತಿಸ್ಪರ್ಧಿಯಾಗಬಹುದು ಎಂದು ತಂತಜ್ಞಾನ ಕ್ಷೇತ್ರದ ಪರಿಣಿತರು ಅಭಿಪ್ರಾಯಪಟ್ಟಿದ್ದಾರೆ.

ಉದಾಹರಣೆಗೆ ಮೆಟಾದ ಮೂವಿ ಜೆನ್ ಅನ್ನು ಬಳಸಿಕೊಂಡು ಪ್ರಾಣಿಗಳು ಈಜು ಹೊಡೆಯುತ್ತಿರುವ ಮತ್ತು ಸರ್ಫಿಂಗ್ ಮಾಡುತ್ತಿರುವ ವೀಡಿಯೊಗಳನ್ನು ಸೃಷ್ಟಿಸಬಹುದು, ನೈಜ್ಯ ಫೋಟೋಗಳನ್ನು ಬಳಸಿಕೊಂಡು ಕ್ಯಾನ್ವಾಸ್‌ನಲ್ಲಿ ಪೇಂಟಿಂಗ್ ಮಾಡುತ್ತಿರುವಂತ ವೀಡಿಯೊಗಳನ್ನು ನಿರ್ಮಿಸಬಹುದು.

ಮೂವಿ ಜೆನ್ ವಿಡಿಯೊದಲ್ಲಿನ ವಿಷಯಕ್ಕೆ ಹೊಂದುವ ಹಿನ್ನೆಲೆ ಸಂಗೀತ ಮತ್ತು ಧ್ವನಿಗಳನ್ನು ಅಳವಡಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ಮೆಟಾ ತಿಳಿಸಿದೆ.

ಎಐ ಪಾಠ ಹೇಳಲಿದ್ದಾನೆ ಸಮರ್ಥ

ದಿನಕಳೆದಂತೆ ಎಐ ತಂತ್ರಜ್ಞಾನವು ಎಲ್ಲ ವಲಯಗಳನ್ನು ಆಕ್ರಮಿಸಿಕೊಳ್ಳುತ್ತದೆ. ಎಲ್ಲರೂ ಎಐ ಅನ್ನು ಅರಿತುಕೊಳ್ಳುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಸೆಂಟ್ರಲ್ ಸ್ಕ್ವೇರ್ ಫೌಂಡೇಶನ್ (ಸಿಎಸ್‌ಎಫ್) ಗೂಗಲ್ ಸಹಯೋಗದೊಂದಿಗೆ ಎಐ ಪಾಠ ಹೇಳುವ ಯೋಜನೆಯೊಂದನ್ನು ರೂಪಿಸಿದೆ. ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರಿಗೆ ಎಐ ನ ಬಗ್ಗೆ ಶಿಕ್ಷಣ ನೀಡುವ ಉದ್ದೇಶದಿಂದ ಸೇವಾ ಸಂಸ್ಥೆ (ಸಿಎಸ್‌ಎಫ್) ಗೂಗಲ್ ಸಹಯೋಗದೊಂದಿಗೆ 'ಎಐ ಸಮರ್ಥ್' ಅನ್ನು ಪ್ರಾರಂಭಿಸುವುದಾಗಿ ಘೋಷಿಸಿದೆ. 'ಮುಂದಿನ ನಾಲ್ಕು ವರ್ಷಗಳಲ್ಲಿ ಐದು ಮಿಲಿಯನ್ ವ್ಯಕ್ತಿಗಳಿಗೆ ಎಐ ಬಗ್ಗೆ ಅರಿವು ಮೂಡಿಸುವುದು ಮತ್ತು ಸಮರ್ಪಕ ಬಳಕೆಯ ಬಗ್ಗೆ ಕಲಿಸುವುದು 'ಎಐ ಸಮರ್ಥ್' ನ ಪ್ರಮುಖ ಗುರಿಯಾಗಿದೆ' ಎಂದು ಸಿಎಸ್‌ಎಫ್ ಸಂಸ್ಥೆಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಶ್ವೇತ ಶರ್ಮ ಕುಕ್ರೇಜಾ ಹೇಳುತ್ತಾರೆ

ಎಐ ವ್ಯಾಪ್ತಿ ವಿಸ್ತಾರ

ಇತ್ತೀಚಿಗೆ ಬಿಡುಗಡೆಯಾದ ವರದಿಯೊಂದರ ಪ್ರಕಾರ ಭಾರತದ ಶೇ 81ರಷ್ಟು ಕಂಪನಿಗಳು ಜನರೇಟಿವ್ ಎಐ ಅನ್ನು ಬಳಸುತ್ತಿದ್ದಾವೆ. ಎಐ ತಂತ್ರಜ್ಞಾನ ಬಳಕೆಯಲ್ಲಿ ಭಾರತವು ಅಗ್ರಸ್ಥಾನಕ್ಕೆ ಏರುತ್ತಿದೆ. ವರದಿಯ ಪ್ರಕಾರ, ಮಾಹಿತಿ ತಂತ್ರಜ್ಞಾನ (ಐಟಿ) ಸೇವಾ ಪೂರೈಕೆದಾರರು ತಮ್ಮ ಪ್ರಮುಖ ಪ್ರಕ್ರಿಯೆಗಳಲ್ಲಿ GenAI ಅನ್ನು ಹೆಚ್ಚು ಅಳವಡಿಸಿಕೊಳ್ಳುತ್ತಿದ್ದಾರೆ. ಈ ತಂತ್ರಜ್ಞಾನವು ಡೆವಲಪರ್‌ಗಳಿಗೆ ಹೆಚ್ಚು ಪರಿಣಾಮಕಾರಿಯಾದ ಕೋಡ್ ಅನ್ನು ತಯಾರಿಸಲು, ವಿವಿಧ ಕಾರ್ಯಗಳನ್ನು ಸ್ವಯಂಚಾಲಿತಗೊಳಿಸಲು ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

ತಂತ್ರಜ್ಞಾನ ಲೋಕದಲ್ಲಿ ಎಐ ಬಗ್ಗೆ ನಿತ್ಯ ಸಂಶೋಧನೆ ನಡೆಯುತ್ತಿದ್ದು, ಎಲ್ಲ ವ್ಯವಸ್ಥೆಗಳನ್ನು ಮತ್ತಷ್ಟು ಸರಳೀಕರಿಸುವ ನಿಟ್ಟಿನಲ್ಲಿ ಎಐ ಅನ್ನು ರೂಪಿಸುವ ಪ್ರಯತ್ನ ನಡೆಯುತ್ತಿದೆ.


ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ವಿದ್ಯುಚ್ಛಕ್ತಿ ಪ್ರವಾಹದ ಕಾಂತೀಯ ಪರಿಣಾಮಗಳು

17) ವಿದ್ಯುತ್ ಮೋಟಾರ್ ಬಗ್ಗೆ ಬರೆಯಿರಿ

ಉತ್ತರ:–



(.......ಹಿಂದಿನ ಸಂಚಿಕೆಯಿಂದ)

ಅಂದರೆ, ವಿದ್ಯುತ್ AB ಬಾಹುವಿನಲ್ಲಿನ ದಿಕ್ಕಿನ ವಿರುದ್ಧ ದಿಕ್ಕಿನಲ್ಲಿ ಹರಿಯುತ್ತದೆ. ಫ್ಲೆಮಿಂಗನ ಎಡಗೈ ನಿಯಮವನ್ನು ಅನ್ವಯಿಸಿದಾಗ ಕಾಂತಕ್ಷೇತ್ರದಲ್ಲಿ ವಿದ್ಯುತ್ ಪ್ರವಹಿಸುತ್ತಿರುವ ವಾಹಕದ ಮೇಲೆ ಉಂಟಾಗುವ ಬಲದ ದಿಕ್ಕು ತಿಳಿಯುತ್ತದೆ (ಚಿತ್ರ ನೋಡಿ). ಸುರುಳಿಯ ಒಂದು ಬಾಹು ABಯ ಮೇಲೆ ಕಾರ್ಯನಿರ್ವಹಿಸುವ ಬಲವು ಅದನ್ನು ಕೆಳಕ್ಕೆ ತಳ್ಳುತ್ತದೆ. ಆದರೆ ಬಾಹು CDಯ ಮೇಲೆ ಉಂಟಾಗುವ ಬಲವು ಅದನ್ನು ಮೇಲಕ್ಕೆ ತಳ್ಳುತ್ತದೆ ಎಂದು ನಮಗೆ ತಿಳಿಯುತ್ತದೆ. ಆದ್ದರಿಂದ ಸುರುಳಿ ಮತ್ತು ದಂಡ Oಗಳು ಅಕ್ಷದ (axis) ಮೇಲೆ ಮುಕ್ತವಾಗಿ ಅಪ್ರದಕ್ಷಿಣಾಕಾರವಾಗಿ ತಿರುಗುತ್ತವೆ. ಅರ್ಧ ಪರಿಭ್ರಮಣೆಯ ಸಮಯದಲ್ಲಿ Qಯು ಕುಂಚ X ನೊಂದಿಗೆ ಮತ್ತು Pಯು ಕುಂಚ Y ನೊಂದಿಗೆ ಸಂಪರ್ಕ ಹೊಂದುತ್ತದೆ. ಆದ್ದರಿಂದ ಸುರುಳಿಯಲ್ಲಿನ ವಿದ್ಯುತ್ ಪ್ರವಾಹವು ಹಿಮ್ಮುಖಗೊಳ್ಳುತ್ತದೆ ಮತ್ತು ಆಅಂ ಮಾರ್ಗದಲ್ಲಿ ಪ್ರವಹಿಸುತ್ತದೆ. ಒಂದು ಮಂಡಲದಲ್ಲಿ ವಿದ್ಯುತ್ ಪ್ರವಾಹದ ದಿಕ್ಕನ್ನು ಹಿಮ್ಮುಖಗೊಳಿಸುವ ಸಾಧನವನ್ನು ದಿಕ್ಪರಿವರ್ತಕ (commutator) ಎಂದು ಕರೆಯುತ್ತಾರೆ. ವಿದ್ಯುತ್ ಮೋಟಾರ್‌ಗಳಲ್ಲಿ ಒಡಕು ಉಂಗುರಗಳು (split rings) ದಿಕ್ಪರಿವರ್ತಕಗಳಾಗಿ ಕಾರ್ಯನಿರ್ವಹಿಸುತ್ತವೆ. ಹಿಮ್ಮುಖವಾದ ವಿದ್ಯುತ್‌ಪ್ರವಾಹವು ಎರಡೂ ಬದಿಗಳಾದ AB ಮತ್ತು CD ಮೇಲೆ ವರ್ತಿಸುವ ಬಲದ ದಿಕ್ಕನ್ನು ಕೂಡ ಹಿಮ್ಮುಖಗೊಳಿಸುತ್ತದೆ. ಹೀಗೆ, ಮೊದಲು ಕೆಳಕ್ಕೆ ತಳ್ಳಲ್ಪಟ್ಟ ಸುರುಳಿಯ AB ಬದಿಯು ಈಗ ಮೇಲಕ್ಕೆ ತಳ್ಳಲ್ಪಡುತ್ತದೆ. ಮತ್ತು ಮೊದಲು ಮೇಲಕ್ಕೆ ತಳ್ಳಲ್ಪಟ್ಟ CD ಬದಿಯು ಈಗ ಕೆಳ್ಳಕ್ಕೆ ತಳ್ಳಲ್ಪಡುತ್ತದೆ. ಆದ್ದರಿಂದ ಸುರುಳಿ ಮತ್ತು ದಂಡವು ಅದೇ ದಿಕ್ಕಿನಲ್ಲಿ ಅರ್ಧಸುತ್ತು ಹೆಚ್ಚು ಸುತ್ತುತ್ತವೆ. ಪ್ರತಿ ಅರ್ಧಸುತ್ತಿನ ತಿರುಗುವಿಕೆಯಲ್ಲಿ ವಿದ್ಯುತ್ ಪ್ರವಾಹದ ದಿಕ್ಕು ಹಿಮ್ಮುಖವಾಗುತ್ತದೆ. ಇದು ಸುರುಳಿ ಮತ್ತು ದಂಡದ ನಿರಂತರ ಸುತ್ತುವಿಕೆಗೆ ಕಾರಣವಾಗುತ್ತದೆ. ವಾಣಿಜ್ಯ ಮೋಟಾರ್‌ಗಳಲ್ಲಿ (i) ಸ್ಥಿರವಾದ ಕಾಂತದ ಸ್ಥಳದಲ್ಲಿ ವಿದ್ಯುತ್ಕಾಂತವನ್ನು (ii) ವಿದ್ಯುತ್ ವಾಹಕ ಸುರುಳಿಯಲ್ಲಿ ಹೆಚ್ಚಿನ ಸಂಖ್ಯೆಯ ಸುತ್ತುಗಳನ್ನು ಹೊಂದಿರುವ ತಂತಿಗಳನ್ನು ಮತ್ತು (iii) ಸುರುಳಿಯಿಂದ ಸುತ್ತಲ್ಪಟ್ಟ ಮೃದು ಕಬ್ಬಿಣವನ್ನು ಬಳಸಲಾಗುತ್ತದೆ. ಮೃದುವಾದ ಕಬ್ಬಿಣದ ಮೇಲೆ ತಂತಿ ಸುರುಳಿಯನ್ನು ಸುತ್ತಿರುವುದು ಮತ್ತು ಸುರುಳಿಗಳನ್ನು ಒಳಗೊಂಡ ರಚನೆಯನ್ನು ಆರ್ಮೇಚರ್ ಎಂದು ಕರೆಯುವರು. ಇದು ಮೋಟಾರಿನ ಶಕ್ತಿಯನ್ನು ಹೆಚ್ಚಿಸುತ್ತದೆ.

18) ಮಂಡಲದಲ್ಲಿನ ವಿದ್ಯುತ್‌ಪ್ರವಾಹದ ಉಪಸ್ಥಿತಿಯನ್ನು ಕಂಡುಹಿಡಿಯುವ ಒಂದು ಸಾಧನ ಯಾವುದು?

ಉತ್ತರ:– ಗ್ಯಾಲ್ವನೋಮೀಟರ್

19) ಮೈಕಲ್ ಫ್ಯಾರಡೆ ಬಗ್ಗೆ ಬರೆಯಿರಿ

ಉತ್ತರ:– ಮೈಕಲ್ ಫ್ಯಾರಡೆ ಒಬ್ಬ ಪ್ರಯೋಗ ನಿರತ ಭೌತ ವಿಜ್ಞಾನಿಯಾಗಿದ್ದರು. ಅವರಿಗೆ ಯಾವುದೇ ರೀತಿಯ ಔಪಚಾರಿಕ ಶಿಕ್ಷಣವಿರಲಿಲ್ಲ. ಅವರು ಜೀವನದ ಆರಂಭದ ಕಾಲದಲ್ಲಿ ಪುಸ್ತಕ ಬೈಂಡ್ ಮಾಡುವ ಅಂಗಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅವರು ಬೈಂಡ್ ಮಾಡಲು ಬಂದ ಎಲ್ಲಾ ಪುಸ್ತಕಗಳನ್ನೂ ಓದುತ್ತಿದ್ದರು. ಈ ರೀತಿ ಫ್ಯಾರಡೆಯವರು ವಿಜ್ಞಾನದಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡರು. ಅವರಿಗೆ ರಾಯಲ್ ಇನ್ಸಟಿಟ್ಯೂಟ್‌ನ ಸರ್ ಹಂಫ್ರಿ ಡೇವಿಯವರ ಕೆಲವು ಸಾರ್ವಜನಿಕ ಉಪನ್ಯಾಸಗಳನ್ನು ಕೇಳುವ ಅವಕಾಶ ಸಿಕ್ಕಿತು. ಅವರು ಡೇವಿಯವರ ಉಪನ್ಯಾಸಗಳ ಉಪಯುಕ್ತ ಟಿಪ್ಪಣಿಗಳನ್ನು ತಯಾರಿಸಿ ಅವುಗಳನ್ನು ಡೇವಿಯವರಿಗೆ ಕಳುಹಿಸಿದರು. ಶ್ರೀಘ್ರದಲ್ಲೇ ಅವರನ್ನು ಸರ್ ಹಂಫ್ರಿ ಡೇವಿಯವರ ರಾಯಲ್ ಇನ್ಸ್‌ಟಿಟ್ಯೂಟ್‌ನ ಪ್ರಯೋಗಾಲಯದಲ್ಲಿ ಸಹಾಯಕರನ್ನಾಗಿ ನೇಮಿಸಲಾಯಿತು.

ಫ್ಯಾರಡೆಯವರು ಹಲವು ಅಭೂತಪೂರ್ವ ಸಂಶೋಧನೆಗಳನ್ನು ಮಾಡಿದರು. ಅವುಗಳಲ್ಲಿ ವಿದ್ಯುತ್ಕಾಂತೀಯ ಪ್ರೇರಣೆ ಹಾಗೂ ವಿದ್ಯುದ್ವಿಭಜನೆಯ ನಿಯಮಗಳು ಸೇರಿವೆ. ಹಲವು ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಪದವಿಗಳನ್ನು ಪ್ರಧಾನ ಮಾಡಿದವು. ಆದರೆ, ಅವರು ಅಂತಹ ಪದವಿಗಳನ್ನು ತಿರಸ್ಕರಿಸಿದರು. ಫ್ಯಾರಡೆಯವರು ಯಾವುದೇ ಸನ್ಮಾನಗಳಿಗಿಂತ ವಿಜ್ಞಾನದ ಕೆಲಸವನ್ನು ಹೆಚ್ಚು ಪ್ರೀತಿಸುತ್ತಿದ್ದರು .

10) ಫ್ಲೆಮಿಂಗನ ಬಲಗೈ ನಿಯಮವನ್ನು ಬರೆಯಿರಿ.

ಉತ್ತರ:–



"ಬಲಗೈನ ಹೆಬ್ಬೆರಳು, ತೋರು ಬೆರಳು ಮತ್ತು ಮಧ್ಯದ ಬೆರಳು ಇವುಗಳನ್ನು ಪರಸ್ಪರ ಲಂಬವಾಗಿರುವಂತೆ ಹೊಂದಿಸಿದರೆ, ತೋರುಬೆರಳು ಕಾಂತಕ್ಷೇತ್ರದ ನೇರವನ್ನೂ, ಹೆಬ್ಬೆರಳು ವಾಹಕದ ಚಲನೆಯ ನೇರವನ್ನೂ, ಮಧ್ಯದ ಬೆರಳು ಪ್ರೇರಿತ ವಿದ್ಯತ್ ಪ್ರವಾಹದ ನೇರವನ್ನು ಸೂಚಿಸುತ್ತದೆ".

(ಮುಂದುವರಿಯುವುದು)

II PUC BIOLOGY

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

EVOLUTION

9. Write a note on theory of Special Creation.

Ans:- (.......Contd)

Several new varieties of crop plants and domesticated animals are being developed by human efforts. Mutations occur in all organisms. Non-functional remnants of vestigial organs are found in organisms, e.g., vermiform appendix, tail vertebrae, ear muscles and plica semilunaris in humans.

Theory of Eternity - Different living beings, planets, stars, etc. existed as such from the beginning and would continue to exist till eternity.

Theory of Catastrophism - World has experienced several ages. At the end of each age all or most organisms die while at the beginning of next new age they are recreated by the almighty.

Cosmozoic Theory - Both living and nonliving matters were formed simultaneously. Early living objects were resistant spores called cosmozoa. Cosmozoa gave rise to different types of living beings on earth.

Theory of Panspermia (Extraterrestrial Origin)- Primitive life or **panspermia** came to earth from some other planet in the form of microbes or spores. Meteorites have been reported to contain organic substances, e.g., Murray (U.S.A), Orgnel (Paris), Murchison (Australia). Murchison meteorite of Australia has been found to contain a number of left handed or laevorotatory amino acids as are found in living beings. Hoove (2011) has found remains of bacteria in meteorites lying in Alaska, Siberia and Antarctica. However, it is very difficult to believe that life came from some other planet because of –

(i) Long distance.
(ii) Lethal radiations in interstellar space.
(iii) Very high temperature in space and outer part of atmosphere.
(iv) Absence of life on nearby planets.
(v) The theory can explain presence of life but cannot explain origin of life.

Theory of Spontaneous Generation - This theory believes that under certain conditions nonliving substances give rise to living beings spontaneously. It was supported by many old scholars like Thales, Anaximander, Empedocles, Aristotle, Plato, Epicurus, etc.

Anaximander propounded origin of living beings from mud warmed by sun rays. Aristotle thought plants to directly come from soil, worms and snails from products of putrefaction. Plutarch proposed the origin of human beings from goats, mares and asses. Van Helmont propounded origin of mice from human sweat and wheat grains kept in dark for 21 days. However, living beings are neither produced spontaneously nor created. Instead, life comes from pre-existing life or omne vivum e vivo. The phenomenon is called biogenesis. It was proved by the work of three scientists – Redi, Spallanzani and Pasteur.

Oparin - Haldane Theory of Chemical Evolution of Life - It was proposed by Russian scientist Alexander Ivanovich Oparin (1924) and British turned Indian scientist J.B.S. Haldane (1928). Oparin expounded his theory in his book "The Origin of life on the Earth". Prior to him Darwin (1871) had expressed similar view about the origin of life.

Oparin-Haldane theory of chemical evolution of life or theory of protobiogenesis believes that life originated on early earth through physicochemical process of atoms combining to form molecules, molecules reacting to produce inorganic and nonliving organic compounds, organic compounds interacting to produce all types of macromolecules which organized to form the first living systems or cells. The theory is also called primary abiogenesis. It occurred only once-abiogenesis first but biogenesis ever since.

10. Which are the various steps involved in the origin of life?

Ans:- The various steps involved in the origin of life are - **(1) Early Earth** - Earth originated about 4.5-5.0 billion years ago from ylem or cosmic cloud of dust and gases having radioactive elements. The temperature was 4000-8000° C.

(Contd...)

ಜಾತಿ ಪ್ರಮಾಣ ಪತ್ರ ಗೊಂದಲ ನಿವಾರಣೆಗೆ ಸುತ್ತೋಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲವರು ಸುಳ್ಳು ಜಾತಿ ಪತ್ರಗಳನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ, ಜಾತಿ ಪ್ರಮಾಣ ಪತ್ರದ ಬಗ್ಗೆ ಇರುವ ಗೊಂದಲಗಳನ್ನು ನಿವಾರಿಸಲು ಸುತ್ತೋಲೆ ಹೊರಡಿಸುವಂತೆ ಸಮಾಜ ಕಲ್ಯಾಣ ಮತ್ತು ಕಾನೂನು ಇಲಾಖೆಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಧಾನಸೌಧದಲ್ಲಿ ನಡೆದ ಪರಿಶಿಷ್ಟ ಪಂಗಡದ ಸಮುದಾಯ ಪ್ರಗತಿ ಪರಿಶೀಲನಾ ಸಭೆ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

₹13 ಕೋಟಿ ವಸೂಲಿ ಬಾಕಿ: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಸುಮಾರು ₹89.63 ಕೋಟಿ ಮೊತ್ತದಷ್ಟು ಅಕ್ರಮ ವಹಿವಾಟಾಗಿತ್ತು. ಇದರಲ್ಲಿ ₹5 ಕೋಟಿ ವಾಪಸ್ ಪಡೆಯಲಾಗಿದೆ. ಉಳಿದ ₹84.63 ಕೋಟಿಯಲ್ಲಿ ₹71.54 ಕೋಟಿ ವಸೂಲಿ ಮಾಡಲಾಗಿದೆ. ಉಳಿದ ₹13 ಕೋಟಿಯನ್ನು ವಸೂಲಿ ಮಾಡಿ ಕೊಡುವುದಾಗಿ ಎಸ್‌ಐಟಿ ತಿಳಿಸಿದೆ ಎಂದು ಸಿದ್ದರಾಮಯ್ಯ ಅವರು ಹೇಳಿದರು.

ಕಾರ್ಮಿಕರ ಮಂಡಳಿ 186 ಹುದ್ದೆ ಭರ್ತಿ 28ರಿಂದ ದಾಖಲೆಗಳ ಪರಿಶೀಲನೆ


ಬೆಂಗಳೂರು: ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಖಾಲಿ ಇದ್ದ 186 ವಿವಿಧ ಹುದ್ದೆಗಳ ನೇಮಕಾತಿಗೆ ನಡೆಸಿದ್ದ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳ ಪಟ್ಟಿಯನ್ನು 1:3ರ ಅನುಪಾತದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿದ್ಧಪಡಿಸಿದೆ.

ಆಯಾ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಸಿದ್ಧಪಡಿಸಲಾದ ಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳು ಬನ್ನೇರುಘಟ್ಟ ರಸ್ತೆಯಲ್ಲಿರುವ ಕಾರ್ಮಿಕರ ಕಲ್ಯಾಣ ಮಂಡಳಿಯ ಕಲ್ಯಾಣ ಸುರಕ್ಷಾ ಭವನದಲ್ಲಿ ನಡೆಯುವ ದಾಖಲೆಗಳ ಪರಿಶೀಲನೆಗೆ ಹಾಜರಾಗಬೇಕು ಎಂದು ಮಂಡಳಿ ಕಾರ್ಯದರ್ಶಿ ಹೇಳಿದ್ದಾರೆ. ಕಲ್ಯಾಣ ಅಧಿಕಾರಿ, ಕ್ಷೇತ್ರ ನಿರೀಕ್ಷಕ, ಆಪ್ತ ಸಹಾಯಕ, ಪ್ರಥಮ ದರ್ಜೆ ಸಹಾಯಕ ಹುದ್ದೆಗಳಿಗೆ ಅ.28ರಂದು ಹಾಗೂ ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳಿಗೆ ಅ. 29ರಂದು ಬೆಳಿಗ್ಗೆ 10ರಿಂದ ದಾಖಲೆಗಳ ಪರಿಶೀಲನೆ ನಡೆಯಲಿದೆ.

ವರ್ಷವಾದರೂ ಬಗೆಹರಿಯದ ತಂದೆ–ಪತಿ ಆದಾಯ ಪ್ರಮಾಣ ಪತ್ರ ವಿವಾದ • ಸುಪ್ರೀಂಕೋರ್ಟ್‌ನತ್ತ ಚಿತ್ತ

ಕಾನೂನು ಸಮರ; 'ಶಿಕ್ಷಕಿ' ಹುದ್ದೆ ಅತಂತ್ರ

• ಚಂದ್ರಹಾಸ ಹಿರೇಮಳಲಿ



ಬೆಂಗಳೂರು: ಪದವೀಧರ ಪ್ರಾಥಮಿಕ ಶಿಕ್ಷಕ ವೃಂದದ ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸಿದ್ದ ಒಂದು ಸಾವಿರಕ್ಕೂ ಹೆಚ್ಚು ವಿವಾಹಿತ ಮಹಿಳೆಯರ ಉದ್ಯೋಗದ ಕನಸು, ಕಾನೂನು ಹೋರಾಟಕ್ಕೆ ಸಿಲುಕಿ ಅತಂತ್ರವಾಗಿದೆ.

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ (6ರಿಂದ 8ನೇ ತರಗತಿ) ಖಾಲಿ ಇರುವ 15 ಸಾವಿರ ಶಿಕ್ಷಕರ ಹುದ್ದೆಗಳ ನೇಮಕಾತಿಗೆ 2022ರ ಮಾರ್ಚ್‌ನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧಿಸೂಚನೆ ಹೊರಡಿಸಿತ್ತು.

ಮೀಸಲಾತಿ ಅನ್ವಯ ಹುದ್ದೆಗಳಿಗೆ ಆಯ್ಕೆ ಬಯಸುವವರು ಜಾತಿ ಮತ್ತು ಆದಾಯ ಪ್ರಮಾಣಪತ್ರ ಸಲ್ಲಿಸುವುದು ನಿಯಮ. 'ಅವಿವಾಹಿತೆಯರು ತಂದೆಯ ಆದಾಯ, ವಿವಾಹಿತೆಯರು ಗಂಡನ ಆದಾಯ ಪ್ರಮಾಣಪತ್ರ ಸಲ್ಲಿಸ ಬೇಕಿತ್ತು. ಆದರೆ, ಮದುವೆಯಾಗಿದ್ದರೂ ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿದ್ದಾರೆ' ಎಂಬ ಕಾರಣ ನೀಡಿ ಒಂದು ಸಾವಿರಕ್ಕೂ ಹೆಚ್ಚು ಮಹಿಳಾ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಿ, ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಲಾಗಿತ್ತು.

ನೇಮಕಾತಿಗೆ ಹೊರಡಿಸಿದ್ದ ಅಧಿಸೂಚನೆಯಲ್ಲಿ ಮದುವೆಯಾದ ಮಹಿಳೆಯರು ಗಂಡನ ಆದಾಯ ಪ್ರಮಾಣ ಪತ್ರವನ್ನೇ ಸಲ್ಲಿಸಬೇಕು ಎನ್ನುವ ಕುರಿತು ಯಾವುದೇ ಸ್ಪಷ್ಟ ನಿರ್ದೇಶನ ಇರಲಿಲ್ಲ. ಈ ಅಂಶವನ್ನು ಇಟ್ಟುಕೊಂಡು ವಿವಾಹಿತೆಯರು ಹೈಕೋರ್ಟ್ ಮೊರೆ ಹೋಗಿದ್ದರು.

'ಮಹಿಳೆ ಇತರೆ ಯಾವುದೇ ಜಾತಿಯ ಪುರುಷನನ್ನು ಮದುವೆಯಾದರೂ, ಜಾತಿ ತಂದೆಯದೇ ಆಗಿರುತ್ತದೆ. ಹಾಗಾಗಿ, ತಂದೆಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸ ಬೇಕಾಗುತ್ತದೆ ಎಂದು ಉದ್ಯೋಗ, ಚುನಾವಣೆ ಉಮೇದುವಾರಿಕೆಯ ಹಲವು ಪ್ರಕರಣಗಳಲ್ಲಿ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳು ತೀರ್ಪು ನೀಡಿವೆ. ಹಿಂದೆ ನಡೆದ ಶಿಕ್ಷಕರ ನೇಮಕಾತಿಯಲ್ಲೂ ಈ ಸಮಸ್ಯೆ ಇರಲಿಲ್ಲ' ಎನ್ನುವುದನ್ನು ಮಹಿಳಾ ಅಭ್ಯರ್ಥಿಗಳು ಪ್ರತಿಪಾದಿಸಿದ್ದರು.

ಎಲ್ಲರೂ ಹಿಂದುಳಿದ ವರ್ಗದವರು

ಸುಪ್ರೀಂಕೋರ್ಟ್‌ನ ಮಧ್ಯಂತರ ಆದೇಶದಂತೆ 11,494 ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿ ಆದೇಶ ನೀಡಿದ್ದ ಶಿಕ್ಷಣ ಇಲಾಖೆ, ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಿ, ಸ್ಥಳ ಆಯ್ಕೆ ಮಾಡಿಕೊಂಡಿದ್ದರೂ, ಅಂಕಪಟ್ಟಿ, ಪೊಲೀಸ್ ದೃಢೀಕರಣ, ಸಿಂಧುತ್ವ ಪ್ರಮಾಣಪತ್ರ ಪರಿಶೀಲನೆ ಪೂರ್ಣಗೊಳಿಸದ ಅಭ್ಯರ್ಥಿಗಳ ನೇಮಕಾತಿ ಆದೇಶಗಳನ್ನು ತಡೆಹಿಡಿದಿತ್ತು.

ಸಾಮಾನ್ಯ ವರ್ಗದ ಅಂತಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಸುಪ್ರೀಂಕೋರ್ಟ್ ಇದೇ ಅ.10ರಂದು ಸೂಚಿಸಿತ್ತು. ಅಂಥವರಿಗೆ ಈಗ ಸ್ಥಳ ನಿಯುಕ್ತಿ ಆದೇಶ ನೀಡುವ ಪ್ರಕ್ರಿಯೆ ಆರಂಭಿಸಲಾಗಿದೆ. ಆದರೆ, ಮೆರಿಟ್ ಇದ್ದರೂ ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿ, ಅವಕಾಶ ವಂಚಿತರಾಗಿರುವ ವಿವಾಹಿತ ಮಹಿಳೆಯರು ಸುಪ್ರೀಂಕೋರ್ಟ್‌ನ ಅಂತಿಮ ತೀರ್ಪಿನ ನಿರೀಕ್ಷೆಯಲ್ಲಿದ್ದಾರೆ. ಈ ಎಲ್ಲರೂ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು.

ವಿಚಾರಣೆ ನಡೆಸಿದ ಹೈಕೋರ್ಟ್ ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿರುವ ವಿವಾಹಿತ ಮಹಿಳೆಯರನ್ನೂ ಮೆರಿಟ್ ಆಧಾರದಲ್ಲಿ ಗಣನೆಗೆ ತೆಗೆದುಕೊಂಡು ಆಯ್ಕೆಪಟ್ಟಿ ಪ್ರಕಟಿಸಲು ಸೂಚಿಸಿತ್ತು. ಕೋರ್ಟ್ ಸೂಚನೆಯಂತೆ 2023ರ ಜನವರಿಯಲ್ಲಿ ಅಂತಿಮಪಟ್ಟಿ ಪ್ರಕಟಿಸಲಾಗಿತ್ತು.

ಸುಪ್ರೀಂಕೋರ್ಟ್ ಮೆಟ್ಟಿಲೇರಿದ ವಿವಾದ: ಹೈಕೋರ್ಟ್ ಆದೇಶದಂತೆ ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿದ್ದ ವಿವಾಹಿತ ಮಹಿಳೆಯರನ್ನು ನೇಮಕಾತಿಗೆ ಪರಿಗಣಿಸಿ, ಅಂತಿಮಪಟ್ಟಿ ಪ್ರಕಟಿಸಿದ್ದರಿಂದಾಗಿ ಪತಿಯ ಆದಾಯ ಸಲ್ಲಿಸಿದ್ದ ಅಷ್ಟೇ ಸಂಖ್ಯೆಯ ಮಹಿಳಾ ಅಭ್ಯರ್ಥಿಗಳನ್ನು ಕೈಬಿಡಲಾಯಿತು. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದ ತಮ್ಮನ್ನು ಅಂತಿಮಪಟ್ಟಿಯಿಂದ ಕೈಬಿಡಲಾಗಿದೆ ಎಂದು ಅವರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಈ ಪ್ರಕರಣದ ವಿಚಾರಣೆ 10 ತಿಂಗಳಿನಿಂದ ನಡೆಯುತ್ತಿದೆ.

ಈ ಮಧ್ಯೆ ಶಾಲೆಗಳು ಪುನರಾರಂಭವಾಗುತ್ತಿದ್ದು, ಶಿಕ್ಷಕರ ಕೊರತೆಯಿಂದ ಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗುತ್ತದೆ ಎಂದು ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ಗೆ ಮನವರಿಕೆ ಮಾಡಿಕೊಟ್ಟಿತು. ಹಾಗಾಗಿ, ತಾತ್ಕಾಲಿಕ ಆಯ್ಕೆಪಟ್ಟಿ ಮತ್ತು ಅಂತಿಮ ಪಟ್ಟಿಯಲ್ಲಿ ವ್ಯತ್ಯಾಸವಾಗಿದ್ದ ವಿವಾಹಿತ ಮಹಿಳೆಯರನ್ನು ಹೊರತುಪಡಿಸಿ, ಉಳಿದವರಿಗೆ ಅಂತಿಮ ತೀರ್ಪಿನ ಷರತ್ತಿಗೆ ಒಳಪಟ್ಟು ನೇಮಕಾತಿ ಆದೇಶ ನೀಡಲು ಕೋರ್ಟ್ ಸಮ್ಮತಿಸಿತು. ನಂತರ 11,494 ಅಭ್ಯರ್ಥಿಗಳನ್ನು ಸ್ಥಳ ನಿಯುಕ್ತಿ ಮಾಡಲಾಗಿತ್ತು. ವಿಚಾರಣೆ ಪೂರ್ಣಗೊಳ್ಳದ ಕಾರಣ ವಿವಾಹಿತ ಮಹಿಳೆಯರ ನೇಮಕಾತಿ ಅತಂತ್ರವಾಗಿಯೇ ಇದೆ.

ಅಂಕಿ ಅಂಶಗಳು

15,000 ಅಧಿಸೂಚನೆ ಹೊರಡಿಸಿದ್ದ ಖಾಲಿ ಹುದ್ದೆಗಳು

13,351 ಅಂತಿಮ ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳು

11,494 ಮೊದಲ ಹಂತದಲ್ಲಿ ನೇಮಕಗೊಂಡವರು

1,857 ನೇಮಕಾತಿ ಆದೇಶಕ್ಕೆ ಕಾಯುತ್ತಿರುವವರು

ಅಧಿಸೂಚನೆಯಲ್ಲಿ ಸ್ಪಷ್ಟತೆ ಇಲ್ಲದ ಕಾರಣ ತಂದೆಯ ಆದಾಯ ಪ್ರಮಾಣಪತ್ರವನ್ನೇ ಸಲ್ಲಿಸಿದ್ದೆ. ತಂದೆಗಿಂತ ಕಡಿಮೆ ಇರುವ ಪತಿಯ ಆದಾಯ ಪ್ರಮಾಣಪತ್ರವನ್ನೂ ಪರಿಶೀಲನೆ ವೇಳೆ ಸಲ್ಲಿಸಿದ್ದರೂ ನೇಮಕಾತಿ ಆದೇಶ ನೀಡಿಲ್ಲ

ಕೆ.ಪಿ. ರತ್ನಾ, ವಿವಾಹಿತ ಮಹಿಳಾ ಅಭ್ಯರ್ಥಿ

ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿದ್ದ ನನಗೆ ಮೆರಿಟ್ ಆಧಾರದಲ್ಲಿ ಸಾಮಾನ್ಯ ವರ್ಗದಡಿ ಸ್ಥಳ ನಿಯುಕ್ತಿ ಆದೇಶ ನೀಡಲಾಗಿತ್ತು. 2 ತಿಂಗಳು ಕೆಲಸ ಮಾಡಿದ ನಂತರ ಮತ್ತೆ ರದ್ದು ಮಾಡಿದರು

ಚೈತ್ರಾ, ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿದ್ದ ಅಭ್ಯರ್ಥಿ

ಬಿಜೆಪಿ ಜನಪ್ರತಿನಿಧಿಗಳ ಸಮಾವೇಶದಲ್ಲಿ ಬಿ.ವೈ.ವಿಜಯೇಂದ್ರ ವ್ಯಂಗ್ಯ

ಸಿದ್ದರಾಮಯ್ಯಗಿಂತ ಪ್ರಾಮಾಣಿಕ ಸಿ.ಎಂ ಸಿಗಲು ಸಾಧ್ಯವೇ?

ಪ್ರಜಾವಾಣಿ ವಾರ್ತೆ

ಬಂಟ್ವಾಳ: 'ಸಿದ್ದರಾಮಯ್ಯ ಅವರಿಗಿಂತ ಪ್ರಾಮಾಣಿಕ ಮುಖ್ಯಮಂತ್ರಿ ಸಿಗಲು ಸಾಧ್ಯವೇ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ವ್ಯಂಗ್ಯವಾಡಿದರು.

ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ನಡೆಯುತ್ತಿರುವ ಉಪ ಚುನಾವಣೆ ಸಲುವಾಗಿ ಇಲ್ಲಿನ ತುಂಬೆಯಲ್ಲಿ ಮಂಗಳವಾರ ಏರ್ಪಡಿಸಿದ್ದ ಜನಪ್ರತಿನಿಧಿಗಳ ಸಮಾವೇಶದಲ್ಲಿ ಅವರು ಮಾತನಾಡಿದರು.

'ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡಾಗ ನಿಗಮದಲ್ಲಿ ಭ್ರಷ್ಟಾಚಾರವೇ ನಡೆದಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದರು. ಬಳಿಕ ₹187 ಕೋಟಿಯಲ್ಲ, ₹87 ಕೋಟಿ ಹಗರಣ ನಡೆದಿದೆ ಎಂದು ಸದನದಲ್ಲೇ ಒಪ್ಪಿಕೊಂಡರು. ಮುಡಾ ಹಗರಣ ನಡೆದೇ ಇಲ್ಲ ಎಂದು ಮೊದಲು ಹೇಳಿದ್ದರು. ನಮ್ಮ ಪಾದಯಾತ್ರೆ ಮಾಡಿದ ಬಳಿಕ ಪ್ರಾಮಾಣಿಕವಾಗಿ 14 ನಿವೇಶನಗಳನ್ನೂ ಹಿಂತಿರುಗಿಸಿ, ಪರಿಹಾರವೂ ಬೇಡವೆಂದು ಹೇಳಿದರು' ಎಂದು ವಿಜಯೇಂದ್ರ ತಿಳಿಸಿದರು.


'ಅಹಿಂದ ಹೆಸರು ಹೇಳಿಕೊಂಡು ಅಧಿಕಾರ ಪಡೆದ ಅವರು ಆ ಸಮುದಾಯಕ್ಕೆ, ಪರಿಶಿಷ್ಟ ಪಂಗಡದವರಿಗೆ ಅನ್ಯಾಯ ಮಾಡಿದ್ದಾರೆ, ಅವರಿಗೆ ನಾಚಿಕೆ ಆಗಬೇಕು' ಎಂದರು.

ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಸಿದ್ದರಾಮಯ್ಯ ಕುಂಕುಮ ಇಡಲು, ಪತ್ನಿ ಹೆಸರಿನಲ್ಲಿ ಅರ್ಚನೆ ಮಾಡಿಸಲು ಶುರು ಮಾಡಿದ್ದಾರೆ ಎಂದರೆ, ಅವರಿಗೆ ಕೇಡುಗಾಲ ಬಂದಿದೆ ಎಂದೇ ಅರ್ಥ. ಆರೇಳು ತಿಂಗಳುಗಳಲ್ಲೇ ಸರ್ಕಾರ ಬಿದ್ದುಹೋಗಲಿದೆ' ಎಂದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, 'ಕದ್ದ ಮಾಲು ವಾಪಾಸ್ ಕೊಟ್ಟವರು ಅಪರಾಧಿಗಳಲ್ಲ ಎಂದರೆ, ಒಪ್ಪಲು ಸಾಧ್ಯವಿದೆಯೇ' ಎಂದು ಪ್ರಶ್ನಿಸಿದರು.

ಪಕ್ಷದ ರಾಜ್ಯದ ಸಹ ಪ್ರಭಾರಿ ಸುಧಾಕರ ರೆಡ್ಡಿ, ಅಭ್ಯರ್ಥಿ ಕಿಶೋರ್ ಕುಮಾರ್, ಪಕ್ಷದ ಸಂಸದರು, ಶಾಸಕರು ಭಾಗವಹಿಸಿದ್ದರು.

'ಸರ್ಕಾರ ವಜಾಕ್ಕೆ ರಾಷ್ಟ್ರಪತಿಗೆ ಮನವಿ'



'ರಾಜ್ಯ ಸರ್ಕಾರವು ಜನರ ಪಾಲಿಗೆ ಬದುಕಿದ್ದೂ ಸತ್ತಂತೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಶೀಘ್ರವೇ ಭೇಟಿ ಮಾಡಿ ಸರ್ಕಾರವನ್ನು ವಜಾ ಮಾಡುವಂತೆ ಒತ್ತಾಯಿಸಲಿದ್ದೇವೆ' ಎಂದು ಬಿ.ವೈ. ವಿಜಯೇಂದ್ರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಹುಬ್ಬಳ್ಳಿ ಗಲಭೆಕೋರರ ಮೇಲಿನ ಪ್ರಕರಣ ಹಿಂಪಡೆದಿದ್ದನ್ನು ಖಂಡಿಸಿ ಹುಬ್ಬಳ್ಳಿಯಲ್ಲಿ ಇದೇ 25ರಂದು ಪ್ರತಿಭಟನೆ ಹಮ್ಮಿಕೊಳ್ಳಲಿದ್ದೇವೆ' ಎಂದರು.

'ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆಯ ಅಭ್ಯರ್ಥಿ ಯಾರೆಂಬುದು ಇನ್ನೂ ತೀರ್ಮಾನವಾಗಿಲ್ಲ. ಸಿ.ಪಿ. ಯೋಗೇಶ್ವರ ಸ್ಪರ್ಧೆ ಬಗ್ಗೆ ಪಕ್ಷದ ರಾಷ್ಟ್ರೀಯ ನಾಯಕರು ತೀರ್ಮಾನಿಸಲಿದ್ದಾರೆ' ಎಂದರು.

'ಪಾಕಿಸ್ತಾನಕ್ಕೆ ಜೈ ಎನ್ನುವವರ ಮಂಡೆ ಒಡೆಯುತ್ತಾರೆ'



'ರಕ್ತದ ಕಣಕಣದಲ್ಲಿ ಬಿಜೆಪಿ, ಆರ್‌ಎಸ್‌ಎಸ್, ಭಾರತ್ ಮಾತಾ ಕಿ ಜೈ ಎನ್ನುವ ಗುಣ ಇರುವವರನ್ನು ಪರಿಷತ್ತಿಗೆ ಕಳುಹಿಸಿದರೆ ಪಕ್ಷಕ್ಕೆ ಬಲಬರಲಿದೆ. ಹಿಂದುತ್ವದ ಕಟ್ಟಾಳುವಾಗಿರುವ ಬಿಜೆಪಿ ಅಭ್ಯರ್ಥಿ ಕಿಶೋರ್ ಕುಮಾರ್ ಖಂಡಿತಾ ಗೆಲ್ಲುತ್ತಾರೆ. ವಿಧಾನಸೌಧದಲ್ಲಿ ಇನ್ನು ಯಾರಾದರೂ ಪಾಕಿಸ್ತಾನಕ್ಕೆ ಜೈ ಎಂದರೆ, ಅವರ ಮಂಡೆಯನ್ನು ಒಡೆಯುತ್ತಾರೆ ಎಂಬ ವಿಶ್ವಾಸವಿದೆ' ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಹೇಳಿದರು.



ಗಜ ಸ್ನಾನ

ಕೊಡಗು ಜಿಲ್ಲೆಯ ಗೋಣಿಕೊಪ್ಪಲು ಬಳಿಯ ಶ್ರೀಮಂಗಲ ವೆಸ್ಟ್ ನೆಮ್ಮಲೆಯಲ್ಲಿ ಮಂಗಳವಾರ ಹುಲಿ ಸೆರೆ ಕಾರ್ಯಾಚರಣೆಗೆ ಬಳಸಿಕೊಂಡಿದ್ದ ಮತ್ತಿಗೋಡು ಸಾಕಾನೆ ಶಿಬಿರದ 'ಶ್ರೀರಾಮ' ಮತ್ತು 'ಅಜಯ' ಆನೆಗಳನ್ನು ಮಾವುತರು ಹಾಗೂ ಕಾವಾಡಿಗರು ಕಿರುಹೊಳೆಯಲ್ಲಿ ತೊಳೆದರು
– ಪ್ರಜಾವಾಣಿ ಚಿತ್ರ

ಮಾದಕವಸ್ತು ನಿಯಂತ್ರಣಕ್ಕೆ ಕಾನೂನು ತಿದ್ದುಪಡಿ

ಬೆಂಗಳೂರು: ಮಾದಕ ವಸ್ತುಗಳ ಪರಿಣಾಮಕಾರಿ ನಿಯಂತ್ರಣಕ್ಕಾಗಿ ಕಾನೂನಿಗೆ ತಿದ್ದುಪಡಿ ತರಲು ಸರ್ಕಾರ ಚಿಂತನೆ ನಡೆಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ರಾಜ್ಯ ಕೋಶ, ಆರೋಗ್ಯ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಭಾಗಿತ್ವದಲ್ಲಿ ಮಂಗಳವಾರ ಆಯೋಜಿಸಿದ್ದ ತಂಬಾಕು ಮುಕ್ತ ಯುವ ಅಭಿಯಾನದ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಯುವಜನರು ಮಾದಕವಸ್ತುಗಳ ಚಟಕ್ಕೆ ಬಲಿಯಾಗದಂತೆ ದಂಧೆಯನ್ನು ಸಂಪೂರ್ಣ ನಿಗ್ರಹಿಸುವುದೇ ಸರ್ಕಾರದ ಗುರಿ. ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಯುವ ಜನರಲ್ಲಿ ಜಾಗೃತಿ ಮೂಡಿಸಬೇಕು. ಆರೋಗ್ಯಕ್ಕೆ ಮಾರಕವಾದ, ಜೀವಕ್ಕೆ ಕುತ್ತು ತರುವ ಮಾದಕ ವಸ್ತುಗಳನ್ನು ಸೇವಿಸುವುದಿಲ್ಲ ಎಂದು ಯುವಜನರು ಪ್ರತಿಜ್ಞೆ ಮಾಡಬೇಕು. ಮಾಡಿದ ಪ್ರತಿಜ್ಞೆಯನ್ನು ಅಕ್ಷರಶಃ ಪಾಲಿಸಬೇಕು ಎಂದರು.

ತಂಬಾಕು ಸೇವಿಸುವ ಶೇ 50ರಷ್ಟು ಜನರಿಗೆ ಕ್ಯಾನ್ಸರ್: ವಿಶ್ವ ಆರೋಗ್ಯ ಸಂಸ್ಥೆಯ ವರದಿಯಂತೆ ಭಾರತದಲ್ಲಿ ಪ್ರತಿ ವರ್ಷ 13.5 ಲಕ್ಷ ಜನರು ತಂಬಾಕು ಸೇವನೆಯಿಂದ ಮೃತಪಡುತ್ತಿದ್ದಾರೆ. ತಂಬಾಕು ಸೇವಿಸುವ ಶೇ 50ರಷ್ಟು ಜನರಲ್ಲಿ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ ಎಂದರು.

ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡದಲ್ಲಿ ಮಾದಕ ವಸ್ತುಗಳ ಮಾರಾಟ, ಸೇವನೆ ಹಾವಳಿ ಹೆಚ್ಚಾಗಿದೆ. ನಿಯಂತ್ರಣಕ್ಕೆ ಈಗಾಗಲೇ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ರಚಿಸಲಾಗಿದೆ ಎಂದರು.

'ಕೃಷ್ಣ ಬೈರೇಗೌಡರಂಥವರು ಸಿ.ಎಂ ಆದರೆ ಒಳ್ಳೆಯದೇ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರ ಬಗ್ಗೆ ಕೀಳರಿಮೆ ಇರುವ ಕೃಷ್ಣ ಬೈರೇಗೌಡರು ಐದು ವರ್ಷ ಕೃಷಿ ಸಚಿವರಾಗಿದ್ದು, ಈ ರಾಜ್ಯದ ದೌರ್ಭಾಗ್ಯ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಎಂದು ಹೇಳಿದ್ದಾರೆ.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ತಮ್ಮ ಕುರಿತು ನೀಡಿರುವ ಹೇಳಿಕೆ ಬಗ್ಗೆ 'ಎಕ್ಸ್' ಮೂಲಕ ಪ್ರತಿಕ್ರಿಯಿಸಿದ್ದಾರೆ.



ಆರ್.ಅಶೋಕ

'ನನ್ನನ್ನು ನಿಂದಿಸುವ ಭರದಲ್ಲಿ ಕಡಲೆಕಾಯಿ ಬೆಳೆಯುವ ಸಾಮಾನ್ಯ ರೈತನ ಜ್ಞಾನವನ್ನು ಪ್ರಶ್ನಿಸಿದ್ದಾರೆ. ರೈತನದು 'ಕನಿಷ್ಠ ಜ್ಞಾನ' ಎಂದೂ ಹೀಯಾಳಿಸಿದ್ದಾರೆ. ಎಲ್ಲರಿಗೂ ಅವರಂತೆ ವಿದೇಶಕ್ಕೆ ಹೋಗಿ ವಿದ್ಯಾಭ್ಯಾಸ ಮಾಡಿಕೊಂಡು ಬರುವ ಅನುಕೂಲ ಇರುವುದಿಲ್ಲ. ರಾಜಕಾರಣದಲ್ಲಿ ಕುಟುಂಬದ ಹಿನ್ನೆಲೆ ಇಲ್ಲದಂತಹ ನಮ್ಮಂತ ಸಾಮಾನ್ಯರೂ ಇದ್ದೇವೆ' ಎಂದು ಹೇಳಿದ್ದಾರೆ.

'ಕೃಷ್ಣ ಬೈರೇಗೌಡರು ಅತಿ ಬುದ್ಧಿವಂತಿಕೆ ಪ್ರದರ್ಶನ ಮಾಡುವ ಮೂಲಕ ಹೈಕಮಾಂಡ್ ಗಮನ ಸೆಳೆದು ಮುಖ್ಯಮಂತ್ರಿ ಕುರ್ಚಿಗೆ ನನ್ನದೂ ಒಂದು ಇರಲಿ ಎಂದು ಟವಲ್ ಹಾಕುತ್ತಿರಬಹುದು. ದುರಾಡಳಿತದಿಂದ ಬೇಸತ್ತಿರುವ ಕರ್ನಾಟಕಕ್ಕೆ ನಿಮ್ಮಂತ ಸುಶಿಕ್ಷಿತ, ಸಭ್ಯ, ಬುದ್ಧಿವಂತ ನಾಯಕರು ಮುಖ್ಯಮಂತ್ರಿ ಆದರೆ ಒಳ್ಳೆಯದೇ. ಆದರೆ, ನಿಮ್ಮ ಕಾಂಗ್ರೆಸ್ ಹೈಕಮಾಂಡ್‌ಗೆ ಬೇಕಾಗಿರುವುದು ಸಂಪನ್ಮೂಲ ಒದಗಿಸುವ ಮಹಾನಾಯಕರೇ ಹೊರತು ನಿಮ್ಮಂತಹ ಸಂಪನ್ಮೂಲ ವ್ಯಕ್ತಿಗಳಲ್ಲ' ಎಂದು ವ್ಯಂಗ್ಯವಾಡಿದ್ದಾರೆ.

ಬಿಜೆಪಿ ಕಚೇರಿಯಲ್ಲಿದ್ದ ಬ್ಯಾನರ್ ತೆರವು

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಪಟ್ಟಣದ ಕುವೆಂಪು ನಗರದಲ್ಲಿರುವ ತಾಲ್ಲೂಕು ಬಿಜೆಪಿ ಕಚೇರಿಯಲ್ಲಿದ್ದ ಕೇಂದ್ರ ಸಚಿವ ಹಾಗೂ ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ಅವರಿದ್ದ ಬಿಜೆಪಿ-ಜೆಡಿಎಸ್ ಮೈತ್ರಿ ಬ್ಯಾನರ್ ತೆರವು ಮಾಡಲಾಗಿದೆ.

ಲೋಕಸಭೆಯ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಏರ್ಪಟ್ಟಿದ್ದ ವೇಳೆ ಕುಮಾರಸ್ವಾಮಿ ಮತ್ತು ಬಿಜೆಪಿ ನಾಯಕರಿದ್ದ ಬ್ಯಾನರ್ ಅಳವಡಿಸಲಾಗಿತ್ತು.

ಆ ಜಾಗದಲ್ಲಿ ಈಗ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಹಾಗೂ ಬಿಜೆಪಿ ನಾಯಕರು ಮಾತ್ರ ಇರುವ ಬ್ಯಾನರ್ ಅಳವಡಿಸಲಾಗಿದೆ.

ಮೂರು ದಿನದ ಹಿಂದೆ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಬಿಡದಿಯ ಕೇತಗಾನಹಳ್ಳಿಯ ತೋಟದ ಮನೆಯಲ್ಲಿ ಕ್ಷೇತ್ರದ ಮುಖಂಡರು ಹಾಗೂ ಕಾರ್ಯಕರ್ತರ ಸಭೆ ನಡೆಸಿ ಚುನಾವಣೆಗೆ ಸಿದ್ಧರಾಗುವಂತೆ ಕರೆ ನೀಡಿದ್ದರು.

ಅದಾದ ಮಾರನೇ ದಿನವೇ ಬಿಜೆಪಿ ಕಚೇರಿಯಲ್ಲಿ ಅಳವಡಿಸಿದ್ದ ಕುಮಾರಸ್ವಾಮಿ ಅವರ ಭಾವಚಿತ್ರವಿದ್ದ ಮೈತ್ರಿ ಬ್ಯಾನರ್‌ಗೆ ಕೊಕ್ ನೀಡಲಾಗಿದೆ.



ಚನ್ನಪಟ್ಟಣದ ಕುವೆಂಪುನಗರದಲ್ಲಿರುವ ತಾಲ್ಲೂಕು ಬಿಜೆಪಿ ಕಚೇರಿಯಲ್ಲಿದ್ದ 'ಮೈತ್ರಿ' ಬ್ಯಾನರ್ ತೆರವುಗೊಳಿಸಿ, ಅಳವಡಿಸಿರುವ ಬಿಜೆಪಿ ಬ್ಯಾನರ್

ಯೋಗೇಶ್ವರ್ ಬಿಜೆಪಿಗೆ ಸೇರಿದ ದಿನದಿಂದ ಕುವೆಂಪು ನಗರದಲ್ಲಿರುವ ತಮ್ಮ ಮನೆಯ ತಳಮಹಡಿಯನ್ನು ಬಿಜೆಪಿ ಕಚೇರಿಯನ್ನಾಗಿ ಮಾಡಿಕೊಂಡಿದ್ದಾರೆ. ಪಕ್ಷಕ್ಕೆ ಸಂಬಂಧಿಸಿದ ಸಭೆ, ಸುದ್ದಿಗೋಷ್ಠಿ, ಮುಖಂಡರ ಭೇಟಿ ಸೇರಿದಂತೆ ಪಕ್ಷದ ಎಲ್ಲಾ ಚಟುವಟಿಕೆ ಇಲ್ಲೇ ನಡೆಯುತ್ತವೆ.

ಕಣ್ಣೂರಿನ ಎ.ಡಿ.ಸಿ ಆತ್ಮಹತ್ಯೆ

ಕಾಸರಗೋಡು: ಕಾಸರಗೋಡಿನಿಂದ ವರ್ಗಾವಣೆಗೊಂಡು, ಕಣ್ಣೂರಿನ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿದ್ದ (ಎ.ಡಿ.ಸಿ) ನವೀನ್ ಬಾಬು ಅಲ್ಲಿನ ಪಳ್ಳಿಕುನ್ನು ಎಂಬಲ್ಲಿನ ಅವರ ಮನೆಯಲ್ಲಿ ಮಂಗಳವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪತ್ತನಂತಿಟ್ಟಕ್ಕೆ ವರ್ಗಾವಣೆಗೊಂಡ ಸಂಬಂಧ ಸೋಮವಾರ ಅವರಿಗೆ ಕಣ್ಣೂರು ಜಿಲ್ಲಾಡಳಿತದಿಂದ ವಿದಾಯ ಕೂಟ ಹಮ್ಮಿಕೊಳ್ಳಲಾಗಿತ್ತು. ಈ ಸಭೆಯಲ್ಲಿ ಕಣ್ಣೂರು ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಪಿ.ಪಿ. ದಿವ್ಯಾ ಅವರು ಪೆಟ್ರೋಲ್ ಬಂಕ್ ಒಂದಕ್ಕೆ ಸಂಬಂಧಿಸಿ, 'ನವೀನ್ ಬಾಬು ಅವರು ಭ್ರಷ್ಟಾಚಾರ ನಡೆಸಿದ್ದಾರೆ' ಎಂದು ಆರೋಪಿಸಿದ್ದರು. ಕಾಸರಗೋಡಿನಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿದ್ದ ಅವರು ಕಳೆದ ಲೋಕಸಭೆ ಚುನಾವಣೆಗೆ ಮುನ್ನ ವರ್ಗಾವಣೆಗೊಂಡು ಕಣ್ಣೂರಿಗೆ ತೆರಳಿದ್ದರು.

'ಗಂಭೀರ ಅಪರಾಧ ಪ್ರಕರಣ ರದ್ದುಪಡಿಸಿದ್ದ ಬಿಎಸ್‌ವೈ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಬಿಜೆಪಿ ಸರ್ಕಾರವು ಒಟ್ಟು 385 ಪ್ರಕರಣಗಳನ್ನು ವಾಪಸ್ ಪಡೆದಿತ್ತು. ಅವುಗಳಲ್ಲಿ 168 ಅಪರಾಧ ಮತ್ತು ಗಂಭೀರ ಅಪರಾಧ ಪ್ರಕರಣಗಳಾಗಿದ್ದವು. ಅದರಿಂದ ಸಿ.ಟಿ.ರವಿ, ಪ್ರಲ್ಹಾದ ಜೋಶಿ, ರಮೇಶ ಜಾರಕಿಹೊಳಿ ಸೇರಿ ಬಿಜೆಪಿಯ ಹಲವು ನಾಯಕರಿಗೆ ಅನುಕೂಲವಾಗಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರಗಳ ಅವಧಿಯಲ್ಲಿ ವಾಪಸ್ ಪಡೆದ ಪ್ರಕರಣಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಬಿಡುಗಡೆ ಮಾಡಿದರು.

'ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅವರ ಸರ್ಕಾರದಲ್ಲಿ ಕೋಮುದ್ವೇಷ, ದ್ವೇಷ ಭಾಷಣ, ಮತೀಯ ಗೂಂಡಾಗಿರಿ, ಹೆಣ್ಣುಮಕ್ಕಳ ಮೇಲೆ ಹಲ್ಲೆ ನಡೆಸಿದ ಪ್ರಕರಣಗಳನ್ನು ವಾಪಸ್ ಪಡೆಯಲಾಗಿದೆ. ಶ್ರೀರಾಮ ಸೇನೆ, ಬಜರಂಗದಳ, ಹಿಂದೂ ಜಾಗರಣ ವೇದಿಕೆ, ಎಸ್‌ಡಿಪಿಐ ಮತ್ತು ಪಿಎಫ್‌ಐ ವಿರುದ್ಧ ಇದ್ದ ಪ್ರಕರಣಗಳನ್ನೂ ಅವರು ವಾಪಸ್ ಪಡೆದಿದ್ದಾರೆ' ಎಂದರು.

'ನಾವು ಭಾಷೆ, ನೀರು ಮತ್ತು ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಿದವರ ವಿರುದ್ಧ ದಾಖಲಾಗಿದ್ದ ಪ್ರಕರಣಗಳನ್ನು ವಾಪಸ್ ಪಡೆಯಲು ಕ್ರಮ ತೆಗೆದುಕೊಂಡಿದ್ದೇವೆ. ಗಂಭೀರ ಅಪರಾಧ ಪ್ರಕರಣಗಳನ್ನು ವಾಪಸ್ ಪಡೆದ ಬಿಜೆಪಿಗೆ ನಮ್ಮ ನಡೆಯನ್ನು ಪ್ರಶ್ನಿಸುವ ನೈತಿಕತೆ ಇಲ್ಲ' ಎಂದರು.

'ಕೆ.ಜೆ.ಹಳ್ಳಿ ಗಲಭೆ ಪ್ರಕರಣದ ತನಿಖೆ ಎನ್‌ಐಎ ನಡೆಸುತ್ತಿದೆ. ಆ ಪ್ರಕರಣ ನಮ್ಮ ವ್ಯಾಪ್ತಿಗೆ ಬರುವುದೇ ಇಲ್ಲ' ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಪ್ರಕರಣ ವಾಪಸಾತಿ ಪ್ರಕ್ರಿಯೆ ನ್ಯಾಯಾಲಯದ ಹಂತದಲ್ಲಿದೆ. ನ್ಯಾಯಾಲಯ ಒಪ್ಪಿದರಷ್ಟೇ ಅವು ರದ್ದಾಗುತ್ತವೆ. ಇಲ್ಲದಿದ್ದರೆ ಪ್ರಕರಣ ಮುಂದುವರೆಯುತ್ತವೆ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ನಾನು ಪೊಲೀಸ್ ಇಲಾಖೆ ಬಲಪಡಿಸಿದ್ದೆ...'



ಪೊಲೀಸರ ಮೇಲಿನ ದಾಳಿ ಪ್ರಕರಣಗಳನ್ನು ವಾಪಸ್ ಪಡೆದರೆ ಪೊಲೀಸರ ನೈತಿಕತೆ ಕುಗ್ಗುವುದಿಲ್ಲವೇ ಎಂಬ ಪ್ರಶ್ನೆಗೆ, 'ನಾನು ಗೃಹ ಸಚಿವನಾಗಿದ್ದಾಗ ಪೊಲೀಸರಿಗೆ ಹೆಚ್ಚು ಸ್ವಾತಂತ್ರ್ಯ ನೀಡಿದ್ದೆ. ಅವರ ನೈತಿಕತೆ ಉತ್ತುಂಗ ಸ್ಥಿತಿಯಲ್ಲಿತ್ತು' ಎಂದು ರಾಮಲಿಂಗಾರೆಡ್ಡಿ ಉತ್ತರಿಸಿದರು.

ಇದಕ್ಕೆ ಮರುಪ್ರಶ್ನೆ ಎಸೆದ ಸುದ್ದಿಗಾರರು, 'ಹಾಗಿದ್ದಲ್ಲಿ ಈಗಿನ ಗೃಹಸಚಿವರ ಆಡಳಿತದಲ್ಲಿ ಪೊಲೀಸರ ನೈತಿಕತೆ ಕುಸಿದಿದೆ ಎಂದರ್ಥವೇ' ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, 'ನನ್ನ ಅವಧಿ ಮುಗಿದ ಮೇಲೆ ಬಿಜೆಪಿ ನಾಲ್ಕು ವರ್ಷ ಆಡಳಿತ ನಡೆಸಿತ್ತು. ಆ ಅವಧಿಯಲ್ಲಿ ಪೊಲೀಸರ ನೈತಿಕತೆ ಕುಸಿದಿತ್ತು ಎಂದರ್ಥ' ಎಂದರು.

ರಾಷ್ಟ್ರಪತಿ, ಪ್ರಧಾನಿಗೆ ಛಲವಾದಿ ಪತ್ರ

ಬೆಂಗಳೂರು: 'ಹುಬ್ಬಳ್ಳಿ ಗಲಭೆ ಪ್ರಕರಣದಲ್ಲಿ ಸಮಾಜಘಾತುಕ ಶಕ್ತಿಗಳ ಮೇಲಿನ ಕೇಸು ಹಿಂದಕ್ಕೆ ಪಡೆದಿರುವ ಮೂಲಕ ಕಾಂಗ್ರೆಸ್ ಸರ್ಕಾರ ಸಂವಿಧಾನ ಉಲ್ಲಂಘಿಸಿದೆ. ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ವಿಧಾನಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ರಾಷ್ಟ್ರಪತಿ, ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವರಿಗೆ ಪತ್ರ ಬರೆದಿದ್ದಾರೆ.

ರಾಜ್ಯ ಸಚಿವ ಸಂಪುಟ ತೆಗೆದುಕೊಂಡಿರುವ ನಿರ್ಣಯವನ್ನು ಮರು ಪರಿಶೀಲಿಸುವಂತೆ ಕರ್ನಾಟಕ ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದೂ ಒತ್ತಾಯಿಸಿದ್ದಾರೆ. ಸರ್ಕಾರದ ಈ ನಿರ್ಧಾರದ ಪರಿಣಾಮವಾಗಿ, ದೇಶ ವಿರೋಧಿ ಸಂಘಟಿತ ಅಪರಾಧದಲ್ಲಿ ತೊಡಗಿದವರು ಮುಂದೆಯೂ ಇಂತಹ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವ ಅಪಾಯಕ್ಕೆ ದಾರಿ ಮಾಡಿಕೊಡಲಿದೆ ಎಂದು ನಾರಾಯಣಸ್ವಾಮಿ ಹೇಳಿದ್ದಾರೆ.

'ಹೊಸದಾಗಿ ಜಾತಿ ಗಣತಿ ಮಾಡಲಿ'

ಹುಬ್ಬಳ್ಳಿ: 'ಈ ಹಿಂದೆ ಸರ್ಕಾರ ಮಾಡಿದ್ದು ಆರ್ಥಿಕ- ಸಾಮಾಜಿಕ ಸಮೀಕ್ಷೆಯೇ ಹೊರತು ಜಾತಿ ಗಣತಿ ಅಲ್ಲ. ಎಲ್ಲ ಜಾತಿಯ ಜನರ ನಿಖರ ಸಂಖ್ಯೆ ತಿಳಿಯಲು ವೈಜ್ಞಾನಿಕ ಗಣತಿ ಅಗತ್ಯವಿದೆ. ಸರ್ಕಾರ ಹೊಸದಾಗಿ ಜಾತಿ ಗಣತಿ ಮಾಡಲಿ' ಎಂದು ಕೂಡಲಸಂಗಮ ಪಂಚಮಸಾಲಿ ಪೀಠಾಧ್ಯಕ್ಷ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.



ಬಸವಜಯ ಮೃತ್ಯುಂಜಯ ಸ್ವಾಮೀಜಿ

'ನಾವು ಜಾತಿ ಗಣತಿ ವಿರೋಧಿಸಲ್ಲ. ಸಂವಿಧಾನ ಬದ್ಧ ವೈಜ್ಞಾನಿಕ ರೀತಿ ಗಣಪತಿ ಪ್ರಕ್ರಿಯೆ ನಡೆಯಬೇಕು ಎಂಬುದಷ್ಟೇ ನಮ್ಮ ಆಶಯ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ನಿಖಿಲ್ ಕುಮಾರಸ್ವಾಮಿ ಹೆಸರು ಮುನ್ನೆಲೆಗೆ: ಕಾಂಗ್ರೆಸ್‌ನಿಂದ ಕಾದು ನೋಡುವ ತಂತ್ರ

ಪಕ್ಷದಿಂದಲೋ, ಸ್ವತಂತ್ರವೋ... ಸ್ಪರ್ಧೆ ಖಚಿತ

• ಓದೇಶ ಸಕಲೇಶಪುರ

ರಾಮನಗರ: 'ಮೈತ್ರಿ ಅಭ್ಯರ್ಥಿಯಾಗಿ ಪಕ್ಷ ನನ್ನ ಹೆಸರು ಘೋಷಿಸುವ ಸಂಪೂರ್ಣ ವಿಶ್ವಾಸವಿದೆ. ಟಿಕೆಟ್ ಸಿಗದಿದ್ದರೆ ಸ್ವತಂತ್ರವಾಗಿ ಕಣಕ್ಕಿಳಿಯುವಂತೆ ಬೆಂಬಲಿಗರು ಒತ್ತಡ ಹೇರುತ್ತಿದ್ದಾರೆ. ಸ್ಪರ್ಧೆಯಂತೂ ಖಚಿತ. ಆದರೆ, ಮೈತ್ರಿ ಅಭ್ಯರ್ಥಿಯಾಗಿಯೋ ಅಥವಾ ಸ್ವತಂತ್ರ ಅಭ್ಯರ್ಥಿಯಾಗಿಯೋ ಎಂದು ಕಾದು ನೋಡಬೇಕು'

ಚನ್ನಪಟ್ಟಣ ಉಪ ಚುನಾವಣೆ ಮೈತ್ರಿ ಟಿಕೆಟ್ ಪ್ರಬಲ ಆಕಾಂಕ್ಷಿ, ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ 'ಪ್ರಜಾವಾಣಿ'ಗೆ ನೀಡಿದ ಪ್ರತಿಕ್ರಿಯೆ ಇದು.

'ಮೈತ್ರಿ' ಟಿಕೆಟ್ ಸಾಧ್ಯತೆ ಕ್ಷೀಣಿಸಿರುವುದರಿಂದ ಯೋಗೇಶ್ವರ್ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಸುದ್ದಿ ಬಹುತೇಕ ಖಚಿತವಾಗಿದೆ. ಈ ಬೆಳವಣಿಗೆ ಕುರಿತು ಚರ್ಚಿಸಲು ಬುಧವಾರ (ಅ.16) ಅವರು ಬೆಂಬಲಿಗರ ಸಭೆ ಕರೆದಿದ್ದಾರೆ.

ಬಿಜೆಪಿ ಜಿಲ್ಲಾ ಘಟಕ ಆರಂಭದಿಂದಲೂ ಯೋಗೇಶ್ವರ್ ಬೆನ್ನಿಗೆ ನಿಂತಿದೆ. ಯೋಗೇಶ್ವರ್ ಅವರಿಗೆ ಟಿಕೆಟ್ ನೀಡುವಂತೆ ಜಿಲ್ಲಾ ಬಿಜೆಪಿ ಮುಖಂಡರು ಐದು ದಿನದ ಹಿಂದೆ ಪಕ್ಷದ ನಾಯಕರನ್ನು ಒತ್ತಾಯಿಸಿದ್ದಾರೆ.

'ಸ್ವಾಭಿಮಾನಿ ಸಂಕಲ್ಪ ಸಮಾವೇಶಕ್ಕೆ ಮುಂದಾಗಿದ್ದ ನಮ್ಮ ನಾಯಕರನ್ನು ಪಕ್ಷದ ಹೈಕಮಾಂಡ್ ಕರೆದು ಸ್ವಲ್ಪ ದಿನ ಸುಮ್ಮನಿರುವಂತೆ ಸಲಹೆ ನೀಡಿತ್ತು. ಈ ಚುನಾವಣೆ ಅವರ ಅಳಿವು, ಉಳಿವಿನ ಪ್ರಶ್ನೆ. ಕ್ಷೇತ್ರ ಬಿಜೆಪಿ ನೆಲೆಯಾಗಿದ್ದು ಜನಾಭಿಪ್ರಾಯವೂ ಯೋಗೇಶ್ವರ್ ಪರವಾಗಿದೆ' ಎಂದು ಅವರ ಬೆಂಬಲಿಗರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಕ್ಷೇತ್ರದ ಮೇಲೆ ಕಣ್ಣಿಟ್ಟಿರುವ ಡಿ.ಕೆ ಸಹೋದರರನ್ನು ಎದುರಿಸಲು ಯೋಗೇಶ್ವರ್ ಅವರೇ ಸೂಕ್ತ ಅಭ್ಯರ್ಥಿ. ಹಾಗಾಗಿಯೇ, ಮೈತ್ರಿ ಬದಿಗಿಟ್ಟು ಫ್ರೆಂಡ್ಲಿ ಫೈಟ್ ಮಾಡೋಣ ಎಂದಿದ್ದೆವು. ಈಗ ಜೆಡಿಎಸ್‌ನಿಂದ ನಿಖಿಲ್ ಹೆಸರು ಅಂತಿಮವಾಗುವ ಹಂತದಲ್ಲಿದೆ. ಹೀಗಾಗಿ, ಯೋಗೇಶ್ವರ್ ಸ್ವತಂತ್ರ ಸ್ಪರ್ಧೆಗೆ ಸಿದ್ಧರಾಗುತ್ತಿದ್ದಾರೆ' ಎಂದು ದೃಢಪಡಿಸಿದರು.

ಬಿಜೆಪಿ-ಜೆಡಿಎಸ್ ಟಿಕೆಟ್ ಗುದ್ದಾಟವನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಡಿ.ಕೆ ಸಹೋದರರು ಕಾಂಗ್ರೆಸ್ ಅಭ್ಯರ್ಥಿ ಗುಟ್ಟು ಬಿಡದೆ ಕಾದು ನೋಡುವ ತಂತ್ರ ಅನುಸರಿಸುತ್ತಿದ್ದಾರೆ.

ನಿಖಿಲ್ ಅಭ್ಯರ್ಥಿಯಾಗಿ, ಯೋಗೇಶ್ವರ್ ಸ್ವತಂತ್ರವಾಗಿ ಕಣಕ್ಕಿಳಿದರೆ ಸುರೇಶ್ ಅವರನ್ನು ಅಭ್ಯರ್ಥಿ ಮಾಡುವ ಆಲೋಚನೆ ಡಿ.ಕೆ. ಶಿವಕುಮಾರ್ ಅವರಿಗಿದೆ. ಇಲ್ಲದಿದ್ದರೆ ಸ್ಥಳೀಯವಾಗಿ ಅಚ್ಚರಿ ಅಭ್ಯರ್ಥಿಯನ್ನು ಕಣಕ್ಕಿಳಿಸಿ, ನಿಖಿಲ್ ಸೋಲುವಂತೆ ಮಾಡಿ ಲೋಕಸಭಾ ಚುನಾವಣೆಯಲ್ಲಿ ಸಹೋದರನಿಗಾದ ಸೇಡು ತೀರಿಸಿಕೊಳ್ಳಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಕ್ಷೇತ್ರಕ್ಕೆ ಸದ್ಯ ಕಾಂಗ್ರೆಸ್‌ನಿಂದ ಸುರೇಶ್ ಅವರ ಹೆಸರು ಹೊರತುಪಡಿಸಿದರೆ ಮಾಜಿ ಶಾಸಕ ಎಂ.ಸಿ. ಅಶ್ವಥ್ ಮತ್ತು ಬಿಎಂಐಸಿಪಿಎ ಅಧ್ಯಕ್ಷ ರಘುನಂದನ ರಾಮಣ್ಣ ಹೆಸರು ಚಾಲ್ತಿಯಲ್ಲಿವೆ ಎನ್ನುತ್ತವೆ ಪಕ್ಷದ ಮೂಲಗಳು.

ಪುತ್ರನ ಕಣಕ್ಕಿಳಿಸಲು ಎಚ್‌ಡಿಕೆ ತಯಾರಿ

ತಾವು ಎರಡು ಸಲ ಪ್ರತಿನಿಧಿಸಿರುವ ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟು ಕೊಡಲು ಎಚ್.ಡಿ. ಕುಮಾರಸ್ವಾಮಿ ಅವರಿಗೆ ಇಷ್ಟವಿಲ್ಲ.




ಯೋಗೇಶ್ವರ್ ಎಷ್ಟೇ ಕಸರತ್ತು ನಡೆಸಿದರೂ ಅವರ ಪರ ಎಚ್‌ಡಿಕೆ ಇದುವರೆಗೂ ಒಂದೇ ಒಂದು ಮಾತೂ ಆಡಿಲ್ಲ. ಎರಡು ಸಲ ಪುತ್ರನೊಂದಿಗೆ ಕ್ಷೇತ್ರ ಪ್ರವಾಸ ಮಾಡಿರುವ ಎಚ್‌ಡಿಕೆ, ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ಸರಣಿ ಸಭೆ ನಡೆಸಿದ್ದಾರೆ.

ಹೋದಲ್ಲೆಲ್ಲಾ 'ಇದು ಜೆಡಿಎಸ್ ಭದ್ರಕೋಟೆ' ಎನ್ನುತ್ತಾ ತಮ್ಮ ಪುತ್ರನೇ ಇಲ್ಲಿ ಅಭ್ಯರ್ಥಿ ಎಂಬ ಸುಳಿವು ನೀಡಿ ಚುನಾವಣೆಗೆ ತಯಾರಿ ನಡೆಸುತ್ತಿದ್ದಾರೆ.

'ಜಿಲ್ಲೆಯಲ್ಲಿರುವ ನಾಲ್ಕು ಕ್ಷೇತ್ರಗಳ ಪೈಕಿ ಜೆಡಿಎಸ್ ಗೆದ್ದಿದ್ದ ಏಕೈಕ ಕ್ಷೇತ್ರ ಚನ್ನಪಟ್ಟಣ. ಕುಮಾರಸ್ವಾಮಿ ಅವರೇ ಗೆದ್ದಿರುವ ಕ್ಷೇತ್ರವನ್ನು ಉಪ ಚುನಾವಣೆಯಲ್ಲಿ ಬಿಜೆಪಿಗೆ ಬಿಟ್ಟರೆ ಜಿಲ್ಲೆಯಲ್ಲಿ ಜೆಡಿಎಸ್ ಅಸ್ತಿತ್ವಕ್ಕೆ ಧಕ್ಕೆಯಾಗುತ್ತದೆ. ಹಾಗಾಗಿ ಕ್ಷೇತ್ರ ತ್ಯಾಗ ಮಾಡುವ ಪ್ರಶ್ನೆಯೇ ಇಲ್ಲ. ಮೈತ್ರಿ ಧಿಕ್ಕರಿಸಿ ಯೋಗೇಶ್ವರ್ ಸ್ವತಂತ್ರವಾಗಿ ನಿಂತರೂ ಸೋಲು ಖಚಿತ' ಎಂದು ಜೆಡಿಎಸ್ ಮುಖಂಡರೊಬ್ಬರು 'ಪ್ರಜಾವಾಣಿ' ಜೊತೆ ಅಭಿಪ್ರಾಯ ಹಂಚಿಕೊಂಡರು.

ಸಂಕ್ಷಿಪ್ತ ಸುದ್ದಿ

ಚಿಂತನ–ಮಂಥನ ಸಮಾವೇಶ ಅ.20ಕ್ಕೆ: ಈಶ್ವರಪ್ಪ


ಕೆ.ಎಸ್.ಈಶ್ವರಪ್ಪ

ಶಿವಮೊಗ್ಗ: ಉತ್ತರ ಕರ್ನಾಟಕ ಭಾಗದ ಕಾರ್ಯಕರ್ತರ ಚಿಂತನ–ಮಂಥನ ಸಮಾವೇಶವನ್ನು ಅಕ್ಟೋಬರ್ 20ರಂದು ಬಾಗಲಕೋಟೆಯ ಶಿವಾನುಭವ ಮಂಟಪದಲ್ಲಿ ಏರ್ಪಡಿಸಲಾಗಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.

‘ಉತ್ತರ ಕರ್ನಾಟಕ ಭಾಗದ ಎಲ್ಲ ಸಮುದಾಯದ 25ಕ್ಕೂ ಅಧಿಕ ಸಾಧು–ಸಂತರು ಹಾಗೂ 2500ಕ್ಕೂ ಅಧಿಕ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಸಂಘಟನೆಗೆ (ಬ್ರಿಗೇಡ್‌ಗೆ) ಏನು ಹೆಸರು ಇರಿಸಬೇಕು? ಮುಂದಿನ ಕಾರ್ಯಕ್ರಮವನ್ನು ಎಲ್ಲಿ ಆಯೋಜಿಸಬೇಕು? ಭವಿಷ್ಯದ ರೂಪುರೇಷೆಗಳೇನು? ಎಂಬುದರ ಬಗ್ಗೆ ಸಾಧು–ಸಂತರು ಘೋಷಿಸಲಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಕರ್ನಾಟಕದಲ್ಲಿ ಯಾವ ರೀತಿಯಿಂದ ಸಂಘಟನೆ ಮಾಡಬೇಕು ಎಂಬುದರ ಕುರಿತು ಸಹ ಚರ್ಚೆ ಮಾಡಲಾಗುವುದು ಎಂದು ಹೇಳಿದರು.

ಸ್ನೇಹಮಯಿ ಕೃಷ್ಣ ಬಂಧನಕ್ಕೆ ಕಾಂಗ್ರೆಸ್ ಒತ್ತಾಯ

ಮೈಸೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದೂರು ನೀಡಿರುವ ಸ್ನೇಹಮಯಿ ಕೃಷ್ಣ ನಿತ್ಯವೂ ಮೈಸೂರು ಲೋಕಾಯುಕ್ತ ಎಸ್.ಪಿ. ಕಚೇರಿಗೆ ತೆರಳಿ, ಅಧಿಕಾರಿಗಳಿಗೆ ಒತ್ತಡ ಹೇರುತ್ತಿದ್ದಾರೆ. ಬ್ಲಾಕ್‌ಮೇಲ್ ತಂತ್ರ ಅನುಸರಿಸುತ್ತಿರುವ ಅವರನ್ನು ಬಂಧಿಸಬೇಕು’ ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಒತ್ತಾಯಿಸಿದರು.

‘ಅಧಿಕಾರಿಗಳು ಕರೆದಾಗ ಹೋಗಿ ಮಾಹಿತಿ ನೀಡುವುದು ಸಾಮಾನ್ಯ. ಅದನ್ನು ಬಿಟ್ಟು, ದೂರುದಾರ ಯಾವಾಗ ಬೇಕಾದರೂ ಬಂದು ದಾಖಲೆ ಕೊಡಬಹುದೆ? ಅಧಿಕಾರಿಗಳೇನಾದರೂ ಬ್ಲ್ಯಾಕ್‌ಮೇಲ್‌ಗೆ ಸಿಕ್ಕಿಹಾಕಿಕೊಂಡಿದ್ದೀರೆಯೇ?’ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಕೇಳಿದರು.

‘ಈ ಪ್ರಕರಣದಲ್ಲಿ ಸ್ನೇಹಮಯಿ ಕೃಷ್ಣ ಕೇವಲ ಪಾತ್ರಧಾರ; ಸೂತ್ರಧಾರರು ಬಿಜೆಪಿ- ಜೆಡಿಎಸ್‌ನಲ್ಲಿ ಇದ್ದಾರೆ. ಕೃಷ್ಣ ಬಳಿ ಇರುವ ದಾಖಲೆಗಳಲ್ಲಿ ಶೇ 50ರಷ್ಟು ನಕಲಿ. ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಬುಧವಾರ ಲೋಕಾಯುಕ್ತ ಎಸ್.ಪಿ.ಗೆ ದೂರು ನೀಡುತ್ತೇವೆ’ ಎಂದರು.

ಎಚ್‌ಎಂಟಿ: 443 ಎಕರೆಯಲ್ಲಿ ಲಾಲ್‌ಬಾಗ್ ಮಾದರಿ ಸಸ್ಯೋದ್ಯಾನ – ಅರಣ್ಯ ಸಚಿವ ಖಂಡ್ರೆ

‘ಮಧ್ಯಂತರ ಅರ್ಜಿಯೇ ನಿಯಮ ಬಾಹಿರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸ್ತುತ ಎಚ್‌ಎಂಟಿ ವಶದಲ್ಲಿರುವ ಪೀಣ್ಯ ಪ್ಲಾಂಟೇಷನ್‌ನ 443 ಎಕರೆ ಅರಣ್ಯ ಭೂಮಿಯ ಡಿನೋಟಿಫಿಕೇಷನ್‌ಗೆ ಅನುಮತಿ ಕೋರಿ ಸುಪ್ರೀಂಕೋರ್ಟ್‌ಗೆ ಅಧಿಕಾರಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿಯೇ ನಿಯಮ ಬಾಹಿರ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

‘ಇದೇ ಸೆಪ್ಟೆಂಬರ್ 25ರಂದು ಸ್ಥಳ ಪರಿಶೀಲನೆ ನಡೆಸಿದಾಗ ನೂರಾರು ಎಕರೆ ಪ್ರದೇಶ ದಟ್ಟ ಅರಣ್ಯದಂತೆ ಇರುವುದನ್ನು ಕಂಡಿದ್ದೇನೆ. ಆದರೆ, ಇದು ಅರಣ್ಯ ಸ್ವರೂಪ ಕಳೆದುಕೊಂಡಿದೆ ಎಂದು ವರದಿ ತಯಾರಿಸಿ, ಡಿನೋಟಿಫಿಕೇಷನ್‌ಗೆ 2020ರಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಇಡೀ ಪ್ರಕ್ರಿಯೆಯೇ ಕಾನೂನು ಬಾಹಿರ. ಹೀಗಾಗಿ ಮಧ್ಯಂತರ ಅರ್ಜಿ ಹಿಂಪಡೆಯಲು ಸೂಚಿಸಲಾಗಿದೆ’ ಎಂದು ಖಂಡ್ರೆ ಸ್ಪಷ್ಟನೆ ನೀಡಿದ್ದಾರೆ.

‘ವಿವಿಧ ಇಲಾಖೆ, ಸರ್ಕಾರಿ ಸ್ವಾಮ್ಯದ ಕಂಪನಿಗಳ ವಶದಲ್ಲಿರುವ ಮತ್ತು ಡಿನೋಟಿಫಿಕೇಷನ್ ಆಗದ ಅರಣ್ಯ ಭೂಮಿಯ ಕುರಿತು 2015ರಲ್ಲಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಉನ್ನತಮಟ್ಟದ ಸಮಿತಿ ರಚಿಸಲಾಗಿತ್ತು. ಎಚ್‌ಎಂಟಿ ಅನಧಿಕೃತವಾಗಿ ತನ್ನ ಬಳಿ ಇರುವ ಅರಣ್ಯ ಭೂಮಿಯನ್ನು ಮಾರಾಟ ಮಾಡುತ್ತಿದೆ. ಅಲ್ಲಿ ಹಸಿರು ಹೊದಿಕೆ ಉಳಿದಿದ್ದು, ಇದು ಬೆಂಗಳೂರಿಗೆ ಜೀವರಕ್ಷಕ ಮತ್ತು ಅತ್ಯಗತ್ಯವಾದ ಶ್ವಾಸತಾಣವಾಗಿದೆ ಎಂದು ಸಮಿತಿ 2018ರ ಜುಲೈ 17ರಂದು ನಡೆದ ಸಭೆಯಲ್ಲಿ ಉಲ್ಲೇಖಿಸಿದೆ’ ಎಂದಿದ್ದಾರೆ.

ಮುಖ್ಯಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ 2020ರಲ್ಲಿ ನಡೆದ ಸಭೆಯಲ್ಲಿ 1980ರ ಪೂರ್ವದಲ್ಲಿ ವಿವಿಧ ಸರ್ಕಾರಿ ಸಂಸ್ಥೆಗಳಿಗೆ ನೀಡಿದ್ದ ಜಮೀನು ಮಂಜೂರಾತಿಗಳ ಬಗ್ಗೆ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯಪಡೆದು, ಅಂತಹ ಅರಣ್ಯ-ಪ್ರದೇಶಗಳ ಡಿನೋಟಿಫಿಕೇಶನ್ ಪ್ರಸ್ತಾವವನ್ನು ಸಚಿವ ಸಂಪುಟದ ನಿರ್ಧಾರಕ್ಕಾಗಿ ಸಲ್ಲಿಸಲು ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಲಾಗಿತ್ತು. ಆದರೆ, ಸಂಪುಟದ ಗಮನಕ್ಕೆ ತಾರದೇ ಡಿನೋಟಿಫಿಕೇಷನ್‌ಗೆ ಅನುಮತಿ ಕೋರಿ ಸುಪ್ರೀಂಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಲಾಗಿದೆ. ಇದು ಕರ್ನಾಟಕ ಸರ್ಕಾರದ ಕಾರ್ಯ ಕಲಾಪಗಳ ನಿರ್ವಹಣಾ ನಿಯಮಾವಳಿ 1977ರ ಉಲ್ಲಂಘನೆಯೂ ಆಗಿದೆ. ಈ ಎಲ್ಲ ಕಾರಣಗಳಿಂದ ಮಧ್ಯಂತರ ಅರ್ಜಿ ಹಿಂಪಡೆಯಲು ಸೂಚಿಸಲಾಗಿದೆ. ಕರ್ತವ್ಯ ಲೋಪಕ್ಕೆ ಕಾರಣ ಕೇಳಿ ಅಧಿಕಾರಿಗಳಿಗೂ ನೋಟಿಸ್ ನೀಡಲಾಗಿದೆ. ಇದರ ಹಿಂದೆ ಯಾವುದೇ ರಾಜಕೀಯ ಕಾರಣ, ದ್ವೇಷವೂ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಗೆಜೆಟ್ ಅಧಿಸೂಚನೆಯೇ ಇಲ್ಲ: ಎಚ್‌ಎಂಟಿಗೆ ನೀಡಿದ 400 ಎಕರೆಗೂ ಹೆಚ್ಚು ಭೂಮಿಗೆ ಗೆಜೆಟ್ ಅಧಿಸೂಚನೆಯೇ ಆಗಿಲ್ಲ. 64 ಎ ಪ್ರಕ್ರಿಯೆ ಆದೇಶಕ್ಕೆ ಅರಣ್ಯಾಧಿಕಾರಿ ಅಲ್ಲದ ಐಎಎಸ್ ಅಧಿಕಾರಿ ತಡೆ ನೀಡಿದ್ದಾರೆ. ಇದೂ ಕೂಡ ಕಾನೂನು ಬಾಹಿರ. ಹೀಗಾಗಿ ಅರಣ್ಯೇತರ ಉದ್ದೇಶಕ್ಕೆ ಪರಿವರ್ತನೆ ಆಗದ ಎಚ್‌ಎಂಟಿ ಜಮೀನು ಅರಣ್ಯವೇ ಆಗಿದೆ ಎಂದಿದ್ದಾರೆ.

165 ಎಕರೆ ಅಕ್ರಮ ಪರಭಾರೆ



ಎಚ್‌ಎಂಟಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ₹14,300 ಕೋಟಿ ಬೆಲೆ ಬಾಳುವ ಜಮೀನು ಎಂದು ಹೇಳಿಕೊಂಡಿದೆ.

ಆದರೆ, ಈಗಾಗಲೇ 165 ಎಕರೆ ಅರಣ್ಯ ಭೂಮಿಯನ್ನು ₹300 ಕೋಟಿಗೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಿಗೆ ಮಾರಾಟ ಮಾಡಿದೆ.

ಡಿನೋಟಿಫಿಕೇಷನ್ ಆಗದ ಅರಣ್ಯ ಭೂಮಿ ಮಾರಾಟ ಮಾಡಿರುವುದೂ ಅಕ್ರಮ ಮತ್ತು ಕಾನೂನು ಬಾಹಿರ ಎಂದು ಈಶ್ವರ ಖಂಡ್ರೆ ಟೀಕಿಸಿದ್ದಾರೆ.

ಎಚ್‌ಎಂಟಿ ಭೂಮಿ ಕನ್ನಡಿಗರ ಆಸ್ತಿ

ಭೂಮಿಯನ್ನು ದಾನದ ಮೂಲಕ ಮಂಜೂರು ಮಾಡಲಾಗಿದೆ. ಅರಣ್ಯ ಭೂಮಿಯನ್ನು ದಾನ ನೀಡಲು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಯಾವ ಅಧಿಕಾರವಿದೆ. ಎಚ್‌ಎಂಟಿ ವಶದಲ್ಲಿರುವ ಭೂಮಿ ಕನ್ನಡಿಗರ ಆಸ್ತಿ. ಅಲ್ಲಿ ಲಾಲ್‌ಬಾಗ್ ಮಾದರಿಯಲ್ಲಿ ಸಸ್ಯೋದ್ಯಾನ ಮಾಡಿ, ಹಸಿರು ಹೊದಿಕೆ ಹೆಚ್ಚಳ ಮಾಡಲಾಗುವುದು. ರಿಯಲ್ ಎಸ್ಟೇಟ್ ಪಾಲಾಗಲು ಬಿಡುವುದಿಲ್ಲ ಎಂದು ಸಚಿವ ಖಂಡ್ರೆ ಹೇಳಿದ್ದಾರೆ.

3 ಕ್ಷೇತ್ರ: ಮೂವರಿಗೂ ಸವಾಲು


ಒಂದನೇ ಪುಟದಿಂದ...

ಏತನ್ಮಧ್ಯೆ, ತಮ್ಮ ರಾಜಕೀಯ ಎದುರಾಳಿಯಾದ ಎಚ್.ಡಿ. ಕುಮಾರಸ್ವಾಮಿ ಅವರಿಂದ ಕ್ಷೇತ್ರವನ್ನು ಕಿತ್ತುಕೊಂಡು, ಲೋಕಸಭಾ ಚುನಾವಣೆಯಲ್ಲಿ ತನ್ನ ತಮ್ಮ ಡಿ.ಕೆ. ಸುರೇಶ್ ಅವರನ್ನು ಸೋಲಿಸಿದ್ದಕ್ಕೆ ಪ್ರತೀಕಾರ ತೀರಿಸಲೇಬೇಕು ಎಂಬ ಹಟಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿದ್ದಿದ್ದಾರೆ. ಹೀಗಾಗಿ, ಶಿಗ್ಗಾವಿ, ಸಂಡೂರಿಗಿಂತ ಈ ಕ್ಷೇತ್ರ ಭಾರಿ ಕುತೂಹಲ ಕೆರಳಿಸಿದೆ.

ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿ ಆಯ್ಕೆ ವಿಚಾರ ಮೈತ್ರಿಕೂಟಕ್ಕೆ ಕಗ್ಗಂಟಾಗಿದೆ. 2023ರಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ, ಪರಾಭವಗೊಂಡಿದ್ದ ವಿಧಾನ ಪರಿಷತ್ತಿನ ಹಾಲಿ ಸದಸ್ಯ ಸಿ.ಪಿ. ಯೋಗೇಶ್ವರ್ ಮತ್ತೆ ಸ್ಪರ್ಧಿಸುವ ಇರಾದೆಯಲ್ಲಿದ್ದಾರೆ. ಜೆಡಿಎಸ್ ಎರಡು ಬಾರಿ ಸತತವಾಗಿ ಗೆದ್ದಿರುವುದರಿಂದಾಗಿ, ಕ್ಷೇತ್ರ ಉಳಿಸಿಕೊಳ್ಳಲೇಬೇಕು ಎಂಬ ತವಕದಲ್ಲಿ ಕುಮಾರಸ್ವಾಮಿ ಇದ್ದಾರೆ. ಈ ಜಿದ್ದಾಜಿದ್ದಿ, ಮೈತ್ರಿ ನಾಯಕರಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿ ಪರಿಣಮಿಸಿದೆ.

ಕುಮಾರಸ್ವಾಮಿ ರಾಜೀನಾಮೆ ಕೊಟ್ಟ ದಿನದಿಂದಲೇ, ಚನ್ನಪಟ್ಟಣವನ್ನೇ ಕೇಂದ್ರವಾಗಿರಿಸಿಕೊಂಡು ರಾಮನಗರದ ರಾಜಕಾರಣವನ್ನು ಕಟ್ಟುತ್ತಿರುವ ಡಿ.ಕೆ. ಶಿವಕುಮಾರ್, ತೀವ್ರ ಪೈಪೋಟಿ ನೀಡುವ ತಯಾರಿ ನಡೆಸಿದ್ದಾರೆ.

ಸಂಡೂರು ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ತಮ್ಮ ಕುಟುಂಬದವರನ್ನೇ ಕಣಕ್ಕೆ ಇಳಿಸಲು ಬಳ್ಳಾರಿ ಸಂಸದ ಇ. ತುಕಾರಾಂ ಸಿದ್ಧತೆ ನಡೆಸಿದ್ದಾರೆ. ತಮ್ಮ ಪಕ್ಷದ ನಾಯಕರನ್ನು ಕರೆಯಿಸಿಕೊಂಡು, ಬೃಹತ್ ಕಾರ್ಯಕ್ರಮವನ್ನೂ ನಡೆಸಿದ್ದಾರೆ. ಈ ಕ್ಷೇತ್ರವನ್ನು ಕಿತ್ತುಕೊಳ್ಳಲು ಬಿಜೆಪಿ ನಾಯಕರು ಭರ್ಜರಿ ತಯಾರಿಯಲ್ಲಿದ್ದಾರೆ.



ಚುನಾವಣೆ ವೇಳಾಪಟ್ಟಿ	
ಅಧಿಸೂಚನೆ	18.10.2024
ನಾಮಪತ್ರ ಸಲ್ಲಿಕೆಗೆ ಕೊನೆ ದಿನಾಂಕ	25.10.2024
ನಾಮಪತ್ರ ಪರಿಶೀಲನೆ	28.10.2024
ನಾಮಪತ್ರ ವಾಪಸ್‌ಗೆ ಕಡೆಯ ದಿನ	30.10.2024
ಮತದಾನ	13.11.2024
ಮತಎಣಿಕೆ	23.11.2024

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಿಡಿತದಲ್ಲಿದ್ದ ಶಿಗ್ಗಾವಿಯನ್ನು ಈ ಬಾರಿಯಾದರೂ ಕಸಿದುಕೊಳ್ಳಬೇಕೆಂಬ ಹವಣಿಕೆ ಕಾಂಗ್ರೆಸ್ ನಾಯಕರಲ್ಲಿದೆ. ತಮ್ಮ ಪುತ್ರ ಭರತ್ ಅವರು ಈ ಬಾರಿ ಸ್ಪರ್ಧಿಸುವುದಿಲ್ಲ ಎಂದು ಬೊಮ್ಮಾಯಿ ಸ್ಪಷ್ಟಪಡಿಸಿದ್ದರೂ, ಅವರ ಹೆಸರೂ ಪಕ್ಷದ ಪರಿಶೀಲನಾ ಪಟ್ಟಿಯಲ್ಲಿದೆ. ಹಿಂದೆ ಬೀಳಗಿಯಲ್ಲಿ ಸೋತಿದ್ದ ಮಾಜಿ ಸಚಿವ ಮುರುಗೇಶ ನಿರಾಣಿ ಶಿಗ್ಗಾವಿ ಕಡೆ ಮುಖ ಮಾಡಿದ್ದಾರೆ.

ಕಾಂಗ್ರೆಸ್‌ನಲ್ಲಿ ಆಕಾಂಕ್ಷಿಗಳ ದೊಡ್ಡ ದಂಡೇ ಇದೆ. ಗೆಲುವು ತಂದುಕೊಡುವ ಆಧಾರದ ಮೇಲೆ ಅಭ್ಯರ್ಥಿ ಆಯ್ಕೆ ಅಖೈರಾಗಲಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಚನ್ನಪಟ್ಟಣ ಕ್ಷೇತ್ರ: ‘ಮೈತ್ರಿ’ಯಲ್ಲಿ ಜಗ್ಗಾಟ

ಚನ್ನಪಟ್ಟಣ ಕ್ಷೇತ್ರದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಾಗುತ್ತದೆ ಎಂದು ಎರಡೂ ಪಕ್ಷಗಳ ನಾಯಕರು ಹೇಳುತ್ತಲೇ ಬಂದಿದ್ದಾರೆ. ಆದರೆ ಕ್ಷೇತ್ರವನ್ನು ಬಿಟ್ಟುಕೊಡಲು ಎರಡೂ ಪಕ್ಷಗಳು ಸಿದ್ಧರಿಲ್ಲ.

ಜೆಡಿಎಸ್‌ಗೆ ಅಭ್ಯರ್ಥಿ ಸ್ಥಾನ ಬಿಟ್ಟುಕೊಡಲು ಸಾಧ್ಯವಿಲ್ಲ ಎಂದು ಬಿಜೆಪಿಯ ಸಿ.ಪಿ.ಯೋಗೇಶ್ವರ್ ಸೋಮವಾರವಷ್ಟೇ ಹೇಳಿಕೆ ನೀಡಿದ್ದರು. ಅದರ ಬೆನ್ನಲ್ಲೇ ಚನ್ನಪಟ್ಟಣ ಬಿಜೆಪಿ ಘಟಕದ ಕಚೇರಿಯಲ್ಲಿದ್ದ ಬಿಜೆಪಿ–ಜೆಡಿಎಸ್ ಮೈತ್ರಿ ಬ್ಯಾನರ್ ಅನ್ನು ತೆರವು ಮಾಡಲಾಗಿದೆ. ಬಿಜೆಪಿಯ ಹೊಸ ಬ್ಯಾನರ್ ಹಾಕಲಾಗಿದೆ.

ಚುನಾವಣೆ ಘೋಷಣೆಯಾದ ಬೆನ್ನಲ್ಲೇ ಹೇಳಿಕೆ ನೀಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ‘ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕೆ ಇಳಿಸಬೇಕು ಎಂದು ಒತ್ತಡವಿದೆ. ಕುಮಾರಸ್ವಾಮಿ ಮತ್ತು ಬಿಜೆಪಿ ನಾಯಕರು ಕೂತು ಅಭ್ಯರ್ಥಿ ಆಯ್ಕೆಯನ್ನು ಅಂತಿಮಗೊಳಿಸಲಿದ್ದಾರೆ. ಎರಡೂ ಪಕ್ಷಗಳ ಒಮ್ಮತವಿಲ್ಲದೆ ಯೋಗೀಶ್ವರ್ ಹೇಗೆ ಸ್ಪರ್ಧಿಸುತ್ತಾರೆ’ ಎಂದಿದ್ದಾರೆ.

ಆಕಾಂಕ್ಷಿಗಳು ಯಾರು

ಕಾಂಗ್ರೆಸ್

- **ಕ್ಷೇತ್ರ: ಶಿಗ್ಗಾವಿ**
  ಯಾಸೀರಖಾನ್ ಪಠಾಣ್, ಸೋಮಣ್ಣ ಬೇವಿನಮರದ, ಅಜ್ಜಂಪೀರ್ ಖಾದ್ರಿ, ಆರ್. ಶಂಕರ್, ವಿನೋದ್ ಅಸೂಟಿ, ರಾಜೇಶ್ವರಿ ಪಾಟೀಲ, ಸಂಜಯ್
- **ಕ್ಷೇತ್ರ: ಸಂಡೂರು**
  ಅನ್ನಪೂರ್ಣಾ ತುಕಾರಾಂ, ಸೌಪರ್ಣಿಕಾ ತುಕಾರಾಂ
- **ಕ್ಷೇತ್ರ: ಚನ್ನಪಟ್ಟಣ**
  ರಘುನಂದನ್ ರಾಮಣ್ಣ, ಪುಟ್ಟಣ್ಣ

ಬಿಜೆಪಿ

- **ಕ್ಷೇತ್ರ: ಶಿಗ್ಗಾವಿ**
  ಮುರುಗೇಶ ನಿರಾಣಿ, ಭರತ್ ಬೊಮ್ಮಾಯಿ, ಶ್ರೀಕಾಂತ ದುಂಡಿಗೌಡ
- **ಕ್ಷೇತ್ರ:ಸಂಡೂರು**
  ವೈ. ದೇವೇಂದ್ರಪ್ಪ, ದಿವಾಕರ, ಬಿ. ಶ್ರೀರಾಮುಲು
- **ಕ್ಷೇತ್ರ: ಚನ್ನಪಟ್ಟಣ**
  ಜೆಡಿಎಸ್– ಬಿಜೆಪಿ ಮಧ್ಯೆ ಸೀಟು ಹಂಚಿಕೆಗೆ ಜಗ್ಗಾಟ

ಸುದ್ದಿ 2 ನಿಮಿಷ

ಮಸೀದಿ ಬಳಿ ಜೈ ಶ್ರೀರಾಮ್ ಕೂಗಿದರೆ ತಪ್ಪಲ್ಲ: ಹೈಕೋರ್ಟ್


ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನಲ್ಲಿ ಮಸೀದಿ ಮುಂದೆ ನುಗ್ಗಿ ಜೈ ಶ್ರೀರಾಮ್ ಘೋಷಣೆ ಕೂಗಿದ ಆರೋಪದಡಿ ಬಂಧನಕ್ಕೊಳಗಾಗಿದ್ದ ಇಬ್ಬರ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಸಂಬಂಧ ಪುತ್ತೂರಿನ ಬಿಳಿನೆಲೆಯ ಕೀರ್ತನ್ ಕುಮಾರ್ (28) ಮತ್ತು ಎನ್.ಎಂ.ಸಚಿನ್ ಕುಮಾರ್ (26) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಹಿಂದೂ, ಮುಸಲ್ಮಾನರು ಸೌಹಾರ್ದತೆಯಿಂದ ಜೀವಿಸುತ್ತಿದ್ದೇವೆ ಎಂದು ಸ್ವತಃ ದೂರುದಾರರೇ ಹೇಳಿದ್ದಾರೆ. ಆದರೆ, ಅರ್ಜಿದಾರರ ವಿರುದ್ಧ 1860ರ (ಐಪಿಸಿ) ಕಲಂ 295ಎ (ಧಾರ್ಮಿಕ ಭಾವನೆ, ಧರ್ಮ ಅಥವಾ ಧಾರ್ಮಿಕ ನಂಬಿಕೆಗಳನ್ನು ಅವಮಾನಿಸುವುದು) ಅಡಿಯಲ್ಲಿ ದೂರು ದಾಖಲಿಸಲಾಗಿದೆ’ ಎಂದು ನ್ಯಾಯಪೀಠ ಹೇಳಿದೆ.

‘ಜೈ ಶ್ರೀರಾಮ್ ಎಂದು ಘೋಷಣೆ ಕೂಗುವುದು ಧಾರ್ಮಿಕ ಭಾವನೆಗೆ ಹೇಗೆ ಧಕ್ಕೆಯಾಗುತ್ತದೆ ಎಂಬುದು ಅರ್ಥವಾಗುತ್ತಿಲ್ಲ. ಈ ಪ್ರಕರಣದಲ್ಲಿ ಯಾವುದೇ ಅಪರಾಧ ಕಂಡು ಬರುತ್ತಿಲ್ಲ. ಹಾಗಾಗಿ, ಅರ್ಜಿದಾರರ ವಿರುದ್ಧ ವಿಚಾರಣೆಗೆ ಅನುಮತಿ ನೀಡುವುದು ಕಾನೂನು ಪ್ರಕ್ರಿಯೆಯ ದುರುಪಯೋಗವಾಗುತ್ತದೆ’ ಎಂದಿದೆ.

ಪ್ರಕರಣವೇನು?: ‘ಕಡಬದ ಐತ್ತೂರು ಗ್ರಾಮದ ಮರ್ಧಾಳದ ಬದ್ರಿಯಾ ಜುಮ್ಮಾ ಮಸೀದಿ ಮುಂದೆ ಸೆ. 24ರಂದು ರಾತ್ರಿ ಅಕ್ರಮವಾಗಿ ಪ್ರವೇಶಿಸಿ ಜೈ ಶ್ರೀರಾಮ್ ಘೋಷಣೆ ಕೂಗಿದ್ದಾರೆ. ಬ್ಯಾರಿಗಳನ್ನು ಬದುಕಲು ಬಿಡುವುದಿಲ್ಲ ಎಂದಿದ್ದಾರೆ’ ಎಂದು ಆರೋಪಿಸಿ ಮಸೀದಿ ಸಿಬ್ಬಂದಿ ಕೀರ್ತನ್ ಕುಮಾರ್ ಮತ್ತು ಎನ್.ಎಂ.ಸಚಿನ್ ಕುಮಾರ್ ವಿರುದ್ಧ ದೂರು ದಾಖಲಿಸಿದ್ದರು.



ಜಾಮೀನು ಕೋರಿ ದರ್ಶನ್ ಹೈಕೋರ್ಟ್‌ಗೆ ಅರ್ಜಿ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಅವರಿಗೆ ನಗರದ ಸೆಷನ್ಸ್ ನ್ಯಾಯಾಲಯ ಜಾಮೀನು ತಿರಸ್ಕರಿಸಿದ ಬೆನ್ನಲ್ಲೇ ಅವರೀಗ ಜಾಮೀನು ಕೋರಿ ಹೈಕೋರ್ಟ್ ಮೆಟ್ಟಲೇರಿದ್ದಾರೆ.

ಜಾಮೀನು ಅರ್ಜಿಯನ್ನು ದರ್ಶನ್ ಪರ ವಕಾಲತ್ತು ವಹಿಸಿರುವ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಮಂಗಳವಾರ ಮಧ್ಯಾಹ್ನ ಹೈಕೋರ್ಟ್ ಫೈಲಿಂಗ್ ವಿಭಾಗಕ್ಕೆ ಸಲ್ಲಿಸಿದರು.

ಸುಮಾರು 300 ಪುಟಗಳಿಗೂ ಅಧಿಕ ದಸ್ತಾವೇಜು ಹೊಂದಿರುವ ಈ ಅರ್ಜಿಗೆ ಸದ್ಯ ಎಫ್‌ಆರ್ ನಂಬರ್ ನೀಡಲಾಗಿದ್ದು, ಪರಿಶೀಲನೆ ನಂತರ ಕ್ರಿಮಿನಲ್ ಅರ್ಜಿ ಸಂಖ್ಯೆ ನಮೂದಾಗಬೇಕಿದೆ. ನಂತರವೇ ಅದು ನ್ಯಾಯಪೀಠದ ಮುಂದೆ ಬರಲಿದೆ ಅಥವಾ ಅವರ ಪರ ವಕೀಲರು ಮೆಮೊ ಸಲ್ಲಿಕೆಯ ಮೂಲಕ ತುರ್ತು ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಸೂಕ್ತ ನ್ಯಾಯಪೀಠದಲ್ಲಿ ಮನವಿ ಮಾಡಲಿದ್ದಾರೆ.

ಯೋಗ್ಯತೆಯ ವಾದಾಂಶಗಳ ಆಧಾರದಲ್ಲಿ ಜಾಮೀನು ನೀಡುವಂತೆ ಕೋರಲಾಗಿರುವ ಈ ಅರ್ಜಿಯಲ್ಲಿ ದರ್ಶನ್ ಅವರಿಗೆ ತುರ್ತು ವೈದ್ಯಕೀಯ ಚಿಕಿತ್ಸೆಯ ಅಗತ್ಯವನ್ನು ವಿಶೇಷವಾಗಿ ಪ್ರತಿಪಾದಿಸಲಾಗಿದೆ. ‘ದರ್ಶನ್ ಈಗ ಬೆನ್ನುಹುರಿ ನೋವಿನಿಂದ ಬಳಲುತ್ತಿದ್ದು ಅಗತ್ಯ ಚಿಕಿತ್ಸೆಗಾಗಿ ತಕ್ಷಣವೇ ಜಾಮೀನು ಮಂಜೂರು ಮಾಡಬೇಕು’ ಎಂದು ಕೋರಲಾಗಿದೆ.

‘ಮಹಾ’ ಚುನಾವಣೆಗೆ ಅಖಾಡ ಸಜ್ಜು

ಒಂದನೇ ಪುಟದಿಂದ...

ನಾಂದೇಡ್ ಲೋಕಸಭಾ ಕ್ಷೇತ್ರ ಹಾಗೂ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯನ್ನು ನ.20ರಂದು ನಡೆಸಲಾಗುವುದು’ ಎಂದು ಮಾಹಿತಿ ನೀಡಿದರು.


ರಾಜೀವ್ ಕುಮಾರ್


ಮಹಾರಾಷ್ಟ್ರಕ್ಕಿಂತ ಚಿಕ್ಕದಾಗಿರುವ ಜಾರ್ಖಂಡ್‌ನಲ್ಲಿ ಒಂದೇ ಹಂತದಲ್ಲಿ ಏಕೆ ಚುನಾವಣೆ ನಡೆಸಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ರಾಜೀವ್ ಕುಮಾರ್, ‘ಜಾರ್ಖಂಡ್‌ನಲ್ಲಿ 2019ರಲ್ಲಿ ಐದು ಹಂತಗಳಲ್ಲಿ ಮತದಾನ ನಡೆದಿತ್ತು. ಆದರೆ, ಈ ಸಲ ಎರಡು ಹಂತಗಳಲ್ಲಿ ಚುನಾವಣೆ ನಡೆಸಲಾಗುತ್ತಿದೆ’ ಎಂದು ಸ್ಪಷ್ಟಪಡಿಸಿದರು. ರಾಜ್ಯದ ನಕ್ಸಲ್ ಪೀಡಿತ ಪ್ರದೇಶಗಳು ಹಾಗೂ ಸಂಬಂಧಿಸಿದ ಸಮಸ್ಯೆಗಳನ್ನು ಪರಿಗಣಿಸಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಾಗಿದೆ’ ಎಂದು ಹೇಳಿದರು.

ಚುನಾವಣಾ ತಕರಾರು ಅರ್ಜಿಗಳು ಬಾಕಿ ಇರುವುದರಿಂದ ಪಶ್ಚಿಮ ಬಂಗಾಳದ ಬಸಿರ್‌ಹತ್ ಲೋಕಸಭೆ ಮತ್ತು ಉತ್ತರ ಪ್ರದೇಶದ ಮಿಲ್ಕಿಪುರ ವಿಧಾನಸಭಾ ಕ್ಷೇತ್ರಕ್ಕೆ ಉಪಚುನಾವಣೆ ಘೋಷಿಸಿಲ್ಲ ಎಂದು ಕುಮಾರ್ ಹೇಳಿದರು.

ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಜಯ ಗಳಿಸಲಿದೆ ಎಂದು ಮತಗಟ್ಟೆ ಸಮೀಕ್ಷೆಗಳು ಭವಿಷ್ಯ ನುಡಿದಿದ್ದವು. ಆದರೆ, ಸಂಘಟನಾತ್ಮಕ ಬಲದ ನೆರವಿನಿಂದ ಬಿಜೆಪಿಯು ಚುನಾವಣೆಯಲ್ಲಿ ಅಚ್ಚರಿಯ ಜಯ ಗಳಿಸಿತ್ತು. ಅದೇ ಉಮೇದಿನಿಂದ ‘ಮಹಾ’ ಚುನಾವಣೆಗೆ ಪಕ್ಷ ಸಜ್ಜಾಗಿದೆ. ಕಾಂಗ್ರೆಸ್– ಶಿವಸೇನಾ (ಉದ್ಧವ್ ಠಾಕ್ರೆ ಬಣ)– ಎನ್‌ಸಿಪಿ (ಶರದ್ ಪವಾರ್ ಬಣ) ಒಳಗೊಂಡ ‘ಮಹಾವಿಕಾಸ ಅಘಾಡಿ’ಯು ಕಮಲ ಪಾಳಯಕ್ಕೆ ಸವಾಲು ಒಡ್ಡಲು ಸಜ್ಜಾಗಿದೆ. ಜಾರ್ಖಂಡ್‌ನಲ್ಲಿ ಇಂಡಿಯಾ ಮೈತ್ರಿಕೂಟವು ಮತ್ತೆ ಸರ್ಕಾರ ರಚಿಸುವ ವಿಶ್ವಾಸದಲ್ಲಿದೆ.

ನಗರ ಮತದಾರರ ನಿರಾಸಕ್ತಿ ಚುನಾವಣಾ ಆಯೋಗ ಕಳವಳ

ಮತ ಚಲಾಯಿಸಲು ನಗರ ಪ್ರದೇಶದ ಜನರು ನಿರಾಸಕ್ತಿ ತೋರುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ರಾಜೀವ್ ಕುಮಾರ್, ‘ಬಸ್ತಾರ್, ಕಾಶ್ಮೀರದ ಜನರು ಉಮೇದಿನಿಂದ ಮತ ಚಲಾಯಿಸುತ್ತಾರೆ. ಆದರೆ, ಬೆಂಗಳೂರು ದಕ್ಷಿಣ, ಹೈದರಾಬಾದ್, ಗಾಂಧಿನಗರ, ಪುಣೆ, ಠಾಣೆಯಂತಹ ನಗರಗಳಲ್ಲಿ ಮತದಾನ ಪ್ರಮಾಣ ಸರಾಸರಿಗಿಂತ ಕಡಿಮೆ ಇದೆ. ಮತದಾನ ಮಾಡಲು ಅವರಿಗೆ ಇರುವ ಸಮಸ್ಯೆ ಏನು’ ಎಂದು ಪ್ರಶ್ನಿಸಿದರು.



ನಗರ ಜನರ ನಿರಾಸಕ್ತಿ ಬಗ್ಗೆ ಉದಾಹರಣೆ ನೀಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಶೇ 73.84 ಮತದಾನ ಆಗಿತ್ತು. ಆದರೆ, ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಶೇ 47.5 ಮಂದಿ ಮತ ಚಲಾಯಿಸಿದ್ದರು. ಜನರು ಹೆಚ್ಚಿನ ಸಂಖ್ಯೆಯಲ್ಲಿ ಜನತಂತ್ರದ ಹಬ್ಬದಲ್ಲಿ ಭಾಗಿಯಾಗಬೇಕು ಎಂದು ಮನವಿ ಮಾಡಿದರು. ನಗರದ ಜನರ ನಿರಾಸಕ್ತಿ ಸಮಸ್ಯೆ ನಿವಾರಣೆಗೆ ಎರಡೂ ರಾಜ್ಯಗಳಲ್ಲಿ ವಾರದ ಮಧ್ಯ ದಿನವಾದ ಬುಧವಾರ ಚುನಾವಣೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಮತಗಟ್ಟೆ ಸಮೀಕ್ಷೆ: ಆತ್ಮಾವಲೋಕನಕ್ಕೆ ಕಿವಿಮಾತು

ಮತ ಎಣಿಕೆ ದಿನದಂದು ಆರಂಭಿಕ ಪ್ರವೃತ್ತಿಯನ್ನು ತೋರಿಸುವ ಸುದ್ದಿ ವಾಹಿನಿಗಳ ನಡೆಯನ್ನು ‘ಅಸಂಬದ್ಧ’ ಎಂದು ಟೀಕಿಸಿರುವ ರಾಜೀವ್ ಕುಮಾರ್, ‘ಇದು, ತಮ್ಮ ಚುನಾವಣೋತ್ತರ ಸಮೀಕ್ಷೆಯ ಲೋಪವನ್ನು ಮುಚ್ಚಿ ಹಾಕಲು ನಡೆಸುವ ಕಸರತ್ತೇ’ ಎಂದು ಪ್ರಶ್ನಿಸಿದರು.

ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ಅತಂತ್ರ ವಿಧಾನಸಭೆ ಸೃಷ್ಟಿಯಾಗಲಿದೆ ಎಂದು ಹೆಚ್ಚಿನ ಮತಗಟ್ಟೆ ಸಮೀಕ್ಷೆಗಳು ಭವಿಷ್ಯ ಹೇಳಿದ್ದವು. ‘ನೈಜ ಫಲಿತಾಂಶಕ್ಕೆ ಹೊಂದಿಕೆಯಾಗದ ಮತ್ತು ಇಡೀ ಪ್ರಕ್ರಿಯೆಗೆ ಹಾನಿ ಮಾಡುವ ಮತಗಟ್ಟೆ ಸಮೀಕ್ಷೆಯಂತಹ ಅಭ್ಯಾಸಗಳ ಕುರಿತು ಮಾಧ್ಯಮಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು’ ಎಂದು ಚುನಾವಣಾ ಆಯುಕ್ತರು ಕಿವಿಮಾತು ಹೇಳಿದರು.

‘ನಿರೀಕ್ಷೆಗಳನ್ನು ಹೆಚ್ಚಿಸುವ ಮೂಲಕ ದೊಡ್ಡ ಗೊಂದಲ ಸೃಷ್ಟಿಸುವ’ ಮತಗಟ್ಟೆ ಸಮೀಕ್ಷೆಗಳನ್ನು ಆಯೋಗ ನಿಯಂತ್ರಿಸುವುದಿಲ್ಲ ಎಂದು ಒತ್ತಿ ಹೇಳಿದ ಅವರು, ಸುದ್ದಿ ಪ್ರಸಾರ ಹಾಗೂ ಡಿಜಿಟಲ್ ಮಾನದಂಡಗಳ ಪ್ರಾಧಿಕಾರದಂತಹ ಮಾಧ್ಯಮ ಸಂಸ್ಥೆಗಳು ಕೆಲವು ಸ್ವಯಂ ನಿಯಂತ್ರಣಗಳನ್ನು ಹಾಕಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ವಿದ್ಯುನ್ಮಾನ ಮತ ಯಂತ್ರಗಳಲ್ಲಿ (ಇವಿಎಂ) ಅವ್ಯವಹಾರ ನಡೆದಿದೆ ಎಂಬ ಕಾಂಗ್ರೆಸ್‌ನ 20 ಅಭ್ಯರ್ಥಿಗಳ ಆರೋಪದ ಬಗ್ಗೆ ಆಯೋಗವು ವಿವರವಾದ ಪ್ರತಿಕ್ರಿಯೆ ನೀಡಲಿದೆ ಎಂದು ರಾಜೀವ್ ಕುಮಾರ್ ತಿಳಿಸಿದರು. ಇವಿಎಂ ಕುರಿತ ಕಾಂಗ್ರೆಸ್ ಆರೋಪವನ್ನು ತಳ್ಳಿ ಹಾಕಿದರು. ಮತ ಎಣಿಕೆಗೆ ಮೊದಲು ಅಭ್ಯರ್ಥಿಗಳು ಹಾಗೂ ಅವರ ಏಜೆಂಟ್‌ಗಳು ಇವಿಎಂಗಳ ಪ್ರಶ್ನೆ ಎತ್ತಿರಲಿಲ್ಲ. ಅವುಗಳನ್ನು ಸಮಗ್ರವಾಗಿ ಪರಿಶೀಲಿಸಿ ಬಳಸಲಾಗಿದೆ ಎಂದರು.

ಮದುವೆ ಆಗುವುದಾಗಿ ನಂಬಿಸಿ ಅತ್ಯಾಚಾರ ಎಸಗಿದ ಆರೋಪ ರದ್ದುಪಡಿಸಿದ ಕೋರ್ಟ್

‘ವಂಚನೆಯ ಉದ್ದೇಶವಿಲ್ಲದ ಸಂಬಂಧ ಅತ್ಯಾಚಾರವಲ್ಲ’

ಪ್ರಯಾಗರಾಜ್ (ಪಿಟಿಐ): ಆರಂಭದಿಂದಲೂ ವಂಚನೆಯ ಉದ್ದೇಶವು ಇಲ್ಲದಿದ್ದಾಗ, ಸಹಮತದ ಆಧಾರದ ವಿವಾಹೇತರ ದೈಹಿಕ ಸಂಬಂಧವು ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 375ರ ಅಡಿಯಲ್ಲಿ ವ್ಯಾಖ್ಯಾನಿಸಿರುವ ಅತ್ಯಾಚಾರ ಆಗುವುದಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಈಚೆಗೆ ಹೇಳಿದೆ.

ಮಹಿಳೆಯೊಂದಿಗೆ ಆಕೆಯ ಇಚ್ಛೆಗೆ ವಿರುದ್ಧವಾಗಿ ಲೈಂಗಿಕ ಸಂಬಂಧ ಹೊಂದುವುದನ್ನು ಅತ್ಯಾಚಾರ ಎಂದು ಐಪಿಸಿಯ ಸೆಕ್ಷನ್ 375 ಹೇಳುತ್ತದೆ.

ಮದುವೆ ಆಗುವುದಾಗಿ ನಂಬಿಸಿ ಮಹಿಳೆಯೊಬ್ಬಳ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿದ್ದ ಶ್ರೇಯ್ ಗುಪ್ತಾ ಎನ್ನುವವರ ವಿರುದ್ಧದ ಕ್ರಿಮಿನಲ್ ಪ್ರಕ್ರಿಯೆಯನ್ನು ಹೈಕೋರ್ಟ್ ರದ್ದುಪಡಿಸಿದೆ. ಮದುವೆ ಆಗುವುದಾಗಿ ನೀಡುವ ಭರವಸೆಯು ಆರಂಭದಿಂದಲೂ ವಂಚನೆಯ ಉದ್ದೇಶವನ್ನು ಹೊಂದಿತ್ತು ಎಂಬುದನ್ನು ಸಾಬೀತು ಮಾಡಲು ಆಗದಿದ್ದರೆ, ಅಂತಹ ಭರವಸೆಯ ಆಧಾರದಲ್ಲಿ ಮೂಡುವ ಸಮ್ಮತಿಯ ಲೈಂಗಿಕ ಸಂಬಂಧವು ಅತ್ಯಾಚಾರ ಆಗುವುದಿಲ್ಲ ಎಂದು ಕೋರ್ಟ್ ಹೇಳಿದೆ.

'ಆರೋಪಿಯು ಸಂಬಂಧದ ಆರಂಭದಿಂದಲೂ, ಭರವಸೆ ನೀಡುವಾಗ ವಂಚಿಸುವ ಉದ್ದೇಶವನ್ನು ಹೊಂದಿದ್ದ ಎಂಬ ಆರೋಪ ಇಲ್ಲದಿದ್ದರೆ, ಅಂತಹ ಭರವಸೆಯನ್ನು ಸುಳ್ಳು ಭರವಸೆ ಎಂದು ಪರಿಗಣಿಸಲು ಆಗುವುದಿಲ್ಲ' ಎಂದು ಕೋರ್ಟ್ ಹೇಳಿದೆ.

ಶ್ರೇಯ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಅನೀಶ್ ಕುಮಾರ್ ಗುಪ್ತಾ ಅವರು ಈ ಆದೇಶ ನೀಡಿದ್ದಾರೆ.

ತನ್ನ ಪತಿಯ ಮರಣದ ನಂತರ, ಮದುವೆ ಆಗುವುದಾಗಿ ಶ್ರೇಯ್ ಅವರು ತನ್ನ ಜೊತೆ ದೈಹಿಕ ಸಂಬಂಧ ಹೊಂದಿದ್ದರು ಎಂದು ಮಹಿಳೆಯು ಮೊರಾದಾಬಾದ್‌ನಲ್ಲಿ ದೂರು ದಾಖಲಿಸಿದ್ದರು. ಮದುವೆ ಆಗುವುದಾಗಿ ಮತ್ತೆ ಮತ್ತೆ ಭರವಸೆ ನೀಡಿದ್ದ ಶ್ರೇಯ್, ನಂತರ ಮಾತಿಗೆ ತಪ್ಪಿದರು. ಬೇರೊಬ್ಬ ಮಹಿಳೆಯ ಜೊತೆ ಅವರಿಗೆ ನಿಶ್ಚಿತಾರ್ಥ ಆಯಿತು ಎಂದು ದೂರಿನಲ್ಲಿ ಹೇಳಲಾಗಿತ್ತು.

ಶ್ರೇಯ್ ಅವರು ₹ 50 ಲಕ್ಷ ನೀಡದೆ ಇದ್ದರೆ, ಖಾಸಗಿ ಕ್ಷಣಗಳ ದೃಶ್ಯಗಳನ್ನು ಬಹಿರಂಗಪಡಿಸಲಾಗುತ್ತದೆ ಎಂಬ ಬೆದರಿಕೆ ಒಡ್ಡಿದ್ದರು ಎಂದು ಕೂಡ ಮಹಿಳೆ ದೂರಿದ್ದರು. ದೂರಿನ ಆಧಾರದಲ್ಲಿ ಶ್ರೇಯ್ ಅವರ ವಿರುದ್ಧ ಅತ್ಯಾಚಾರ ಹಾಗೂ ಸುಲಿಗೆ ಪ್ರಕರಣ ದಾಖಲಿಸಲಾಗಿತ್ತು.

ಇದನ್ನು ಪ್ರಶ್ನಿಸಿ ಶ್ರೇಯ್ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ದೂರು ನೀಡಿರುವ ಮಹಿಳೆಯು ವಿಧವೆ. ಆರೋಪಿ ಶ್ರೇಯ್ ಅವರು 12–13 ವರ್ಷಗಳಿಂದ ಈ ಮಹಿಳೆಯ ಜೊತೆ ದೈಹಿಕ ಸಂಬಂಧ ಹೊಂದಿದ್ದಾರೆ. ಮಹಿಳೆಯ ಪತಿ ಬದುಕಿದ್ದಾಗಲೂ ಶ್ರೇಯ್ ಅವರು, ಮಹಿಳೆಯ ಜೊತೆ ದೈಹಿಕ ಸಂಬಂಧ ಹೊಂದಿದ್ದರು ಎಂದು ಕೋರ್ಟ್ ಹೇಳಿದೆ.

ದೂರುದಾರ ಮಹಿಳೆಯು ಶ್ರೇಯ್ ಅವರ ಮೇಲೆ ಅನುಚಿತ ಪ್ರಭಾವ ಬೀರಿದ್ದಾರೆ. ಆರೋಪಿಯು ಮಹಿಳೆಗಿಂತ ವಯಸ್ಸಿನಲ್ಲಿ ಚಿಕ್ಕವ. ಮಹಿಳೆಯ ಪತಿಗೆ ಸೇರಿದ ವಹಿವಾಟಿನಲ್ಲಿ ಕೆಲಸ ಮಾಡುತ್ತಿದ್ದವ ಎಂಬುದನ್ನು ಆದೇಶದಲ್ಲಿ ವಿವರಿಸಲಾಗಿದೆ.

ನಯೀಂ ಅಹಮದ್ ಮತ್ತು ಹರಿಯಾಣ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಉಲ್ಲೇಖಿಸಿ, 'ಮದುವೆ ಆಗುವುದಾಗಿ ಭರವಸೆ ನೀಡಿ, ನಂತರ ಅದನ್ನು ಉಳಿಸಿ ಕೊಳ್ಳಲಾಗದ ಪ್ರತಿ ಪ್ರಕರಣವನ್ನೂ 'ಸುಳ್ಳು ಭರವಸೆ' ಎಂದು ಪರಿಗಣಿಸಿ, ವ್ಯಕ್ತಿಯನ್ನು ಶಿಕ್ಷೆಗೆ ಗುರಿಪಡಿಸುವುದು ವಿವೇಕದ ಕೆಲಸ ಆಗುವುದಿಲ್ಲ' ಎಂದು ಹೈಕೋರ್ಟ್ ಹೇಳಿದೆ.

ನ್ಯಾಯಮೂರ್ತಿ ರಂಜನ್ ಗೊಗೊಯಿ ವಿರುದ್ಧದ ಅರ್ಜಿ ವಜಾ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯಿ ಅವರ ವಿರುದ್ಧ ಅರ್ಜಿ ಸಲ್ಲಿಸಿದ್ದ ವಕೀಲ ಮತ್ತು ಸುಪ್ರೀಂ ಕೋರ್ಟ್ ಪೀಠದ ನಡುವೆ ಮಂಗಳವಾರ ತೀವ್ರ ವಾದ–ವಿವಾದ ನಡೆಯಿತು.

ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮಾ ಅವರು ಅರ್ಜಿದಾರನನ್ನು ನ್ಯಾಯಾಲಯದ ಕೊಠಡಿಯಿಂದ ಹೊರಗೆ ಕಳುಹಿಸುವಂತೆ ಭದ್ರತಾ ಸಿಬ್ಬಂದಿಗೆ ಸೂಚಿಸಿದ ಪ್ರಸಂಗವೂ ನಡೆಯಿತು.

ಸೇವಾ ತಕರಾರಿಗೆ ಸಂಬಂಧಿಸಿದ ಅರ್ಜಿಯೊಂದನ್ನು ವಜಾಗೊಳಿಸಿದ್ದ ಕ್ಕಾಗಿ ಗೊಗೊಯಿ ವಿರುದ್ಧ ಆಂತರಿಕ ವಿಚಾರಣೆಗೆ ಆದೇಶಿಸುವಂತೆ ಕೋರಿ ಅರುಣ್ ರಾಮಚಂದ್ರ ಹುಬ್ಳೀಕರ್ ಎಂಬವರು ಪಿಐಎಲ್ ಸಲ್ಲಿಸಿದ್ದರು. ನಿವೃತ್ತ ನ್ಯಾಯಮೂರ್ತಿಯೊಬ್ಬರನ್ನು ಪ್ರತಿವಾದಿಯನ್ನಾಗಿಸಿ ಪಿಐಎಲ್ ಸಲ್ಲಿಸಿದ್ದಕ್ಕೆ ಸುಪ್ರೀಂ ಕೋರ್ಟ್, ಈ ಹಿಂದೆ ಅಸಮಾಧಾನ ಹೊರಹಾಕಿತ್ತು.

ಮಂಗಳವಾರದ ವಿಚಾರಣೆ ವೇಳೆ ಹುಬ್ಳೀಕರ್ ಅವರು, ಮತ್ತೆ ಗೊಗೊಯಿ ಅವರ ವಿರುದ್ಧ ಆರೋಪಗಳನ್ನು ಪ್ರಸ್ತಾಪಿಸಿದರು. ಅದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಪೀಠ, 'ನಿಮ್ಮ ಮೇಲೆ ದಂಡ ವಿಧಿಸುತ್ತೇವೆ. ಯಾವುದೇ ನ್ಯಾಯಾಧೀಶರ ಹೆಸರು ಪ್ರಸ್ತಾಪಿಸುವಂತಿಲ್ಲ. ನಿಮ್ಮ ಅರ್ಜಿಯಲ್ಲಿ ಏನೂ ಇಲ್ಲ' ಎಂದಿತು.

ಅದಕ್ಕೆ ಅರ್ಜಿದಾರ, 'ನನ್ನ ಪ್ರಕರಣದಲ್ಲಿ ಏನೂ ಇಲ್ಲ ಎಂದು ನೀವು ಹೇಗೆ ಹೇಳುತ್ತೀರಿ, ನನಗೆ ಅನ್ಯಾಯವಾಗಿದೆ. ಕನಿಷ್ಠ ಸಾವಿಗೆ ಮುನ್ನವಾದರೂ ನನಗೆ ನ್ಯಾಯ ಸಿಗಬೇಕು' ಎಂದು ವಾದಿಸಿದರು.

ನಿಮ್ಮ ಅರ್ಜಿಯನ್ನು ವಜಾಗೊಳಿಸಲಾಗಿದೆ ಎಂದು ಹೇಳಿದ ಪೀಠ, ಅರ್ಜಿದಾರರನ್ನು ನ್ಯಾಯಾಲಯದಿಂದ ಹೊರಗೆ ಕರೆದೊಯ್ಯುವಂತೆ ಭದ್ರತಾ ಸಿಬ್ಬಂದಿಗೆ ಸೂಚಿಸಿತು.

ಎನ್‌ಸಿಪಿ ನಾಯಕ ಸಿದ್ದೀಕಿ ಹತ್ಯೆ ಪ್ರಕರಣ: ಮತ್ತೊಬ್ಬನ ಬಂಧನ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಎನ್‌ಸಿಪಿ (ಅಜಿತ್ ಪವಾರ್ ಬಣ) ನಾಯಕ, ಮಾಜಿ ಸಚಿವ ಬಾಬಾ ಸಿದ್ದೀಕಿ (66) ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹರೀಶ್‌ಕುಮಾರ್ ಬಾಲಕರಾಮ್ (23) ಎಂಬುವರನ್ನು ಬಂಧಿಸಿರುವುದಾಗಿ ಮುಂಬೈ ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಉತ್ತರ ಪ್ರದೇಶದ ಬಹರಾಯಿಚ್ ಮೂಲದ ಬಾಲಕರಾಮ್‌ನನ್ನು ಬಹರಾಯಿಚ್‌ನಲ್ಲಿ ಸೋಮವಾರ ಬಂಧಿಸಿ, ಮಂಗಳವಾರ ಬೆಳಿಗ್ಗೆ ಮುಂಬೈಗೆ ಕರೆತರಲಾಯಿತು. ಈತ ಪುಣೆಯಲ್ಲಿ ಗುಜರಿ ವ್ಯಾಪಾರಿಯಾಗಿದ್ದು, ಸಿದ್ದೀಕಿ ಹತ್ಯೆಗಾಗಿ ಶೂಟರ್‌ಗಳಿಗೆ ಹಣ ಮತ್ತು ಇತರ ಸಾಮಗ್ರಿಗಳನ್ನು ಪೂರೈಸಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪೊಲೀಸ್ ವಶಕ್ಕೆ: ಆರೋಪಿ ಹರೀಶ್ ಕುಮಾರ್‌ನನ್ನು ಇದೇ 21ರವರೆಗೆ ಪೊಲೀಸ್ ವಶಕ್ಕೆ ಒಪ್ಪಿಸಿ ನ್ಯಾಯಾಲಯ ಆದೇಶಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಒಟ್ಟು ನಾಲ್ವರನ್ನು ಬಂಧಿಸಿದಂತಾಗಿದೆ. ಇದಕ್ಕೂ ಮುನ್ನ ಪೊಲೀಸರು, ಹರಿಯಾಣದ ನಿವಾಸಿ ಗುರ್ಮೈಲ್ ಬಲ್ಜಿತ್ ಸಿಂಗ್ (23), ಉತ್ತರ ಪ್ರದೇಶದ ಧರ್ಮರಾಜ್ ರಾಜೇಶ್ ಕಶ್ಯಪ್ (19) ಮತ್ತು ಪುಣೆಯ ಸಹ ಸಂಚುಕೋರ ಪ್ರವೀಣ್ ಲೋಣಕರ್ ಅವರನ್ನು ಬಂಧಿಸಿದ್ದರು. ಮತ್ತೊಬ್ಬ ಶಂಕಿತ ಶೂಟರ್ ಶಿವಕುಮಾರ್ ಗೌತಮ್ ಮತ್ತು ಆರೋಪಿ ಮೊಹಮ್ಮದ್ ಜಿಶನ್ ಅಖ್ತರ್‌ಗಾಗಿ ಶೋಧ ಮುಂದುವರಿಸಿದ್ದಾರೆ.

ಸಿದ್ದೀಕಿ ಹತ್ಯೆಗೆ ಸಂಚುರೂಪಿಸಿದ್ದ ಕಶ್ಯಪ್, ಗೌತಮ್, ಪ್ರವೀಣ ಮತ್ತು ಶಿಬು ಲೋಣಕರ್ ಜತೆ ಬಾಲಕರಾಮ್ ಸಹ ಭಾಗಿಯಾಗಿದ್ದಾನೆ ಎಂದು ಅವರು ವಿವರಿಸಿದ್ದಾರೆ.

ವಕ್ಫ್ ಮಸೂದೆ ಕುರಿತ ಸಭೆ; ಪಕ್ಷಪಾತ ನಿಲುವಿಗೆ ಆಕ್ರೋಶ

ನಿಯಮ ಉಲ್ಲಂಘನೆ: ಸ್ಪೀಕರ್‌ಗೆ ಪತ್ರ

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಮಸೂದೆಗೆ ಸಂಬಂಧಿಸಿದಂತೆ ಸಂಸದ ಜಗದಂಬಿಕಾ ಪಾಲ್ ನೇತೃತ್ವದಲ್ಲಿ ನಡೆಯುತ್ತಿರುವ ಜಂಟಿ ಸದನ ಸಮಿತಿಯ ಸಭೆಯು 'ಸಂಸದೀಯ ನೀತಿ ಸಂಹಿತೆಯ ಸಂಪೂರ್ಣ ಉಲ್ಲಂಘನೆ'ಯಾಗಿದೆ ಎಂದು ಆರೋಪಿಸಿ ವಿರೋಧ ಪಕ್ಷದ ಸಂಸದರು ಮಂಗಳವಾರ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ.

'ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖಂಡ ರೆಹಮಾನ್ ಖಾನ್ ಅವರು ವಕ್ಫ್‌ಗೆ ಸಂಬಂಧಿಸಿದ ಆಸ್ತಿಗಳ ಕಬಳಿಕೆಯಲ್ಲಿ ಭಾಗಿಯಾಗಿದ್ದಾರೆ' ಎಂದು ಬಿಜೆಪಿ ಮಾಜಿ ಉಪಾಧ್ಯಕ್ಷ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ಅವರು ಸೋಮವಾರ ನಡೆದ ಸಭೆಯಲ್ಲಿ ಹೆಸರು ಉಲ್ಲೇಖಿಸಿದ್ದರಿಂದ ವಿರೋಧಪಕ್ಷದ ಸಂಸದರು ಸಭೆ ಬಹಿಷ್ಕರಿಸಿ ಹೊರನಡೆದಿದ್ದರು. ಇದಾದ ಮರುದಿನವೇ ಸ್ಪೀಕರ್‌ಗೆ ಪತ್ರ ಬರೆದಿದ್ದಾರೆ.

'ಸಮಿತಿಯ ಅಧ್ಯಕ್ಷ ಜಗದಾಂಬಿಕ ಪಾಲ್ ಅವರು ಸಮಿತಿಯ ನಡಾವಳಿಗಳಲ್ಲಿ ಪಕ್ಷಪಾತಿ ನಿಲುವು ತಳೆದಿದ್ದಾರೆ' ಎಂದು ಆರೋಪಿಸಿ ವಿರೋಧ ಪಕ್ಷದ ಸಂಸದರಾದ ಗೌರವ್ ಗೊಗೋಯಿ, ಸೈಯದ್ ನಾಸೀರ್ ಹುಸೇನ್, ಇಮ್ರಾನ್ ಮಸೂದ್ (ಕಾಂಗ್ರೆಸ್), ಎ.ರಾಜಾ, ಎಂ.ಎಂ.ಅಬ್ದುಲ್ಲಾ (ಡಿಎಂಕೆ) ಅಸಾದುದ್ದೀನ್ ಒವೈಸಿ(ಎಐಎಂಐಎಂ), ಕಲ್ಯಾಣ್ ಬ್ಯಾನರ್ಜಿ (ಟಿಎಂಸಿ) ಅವರು ಪತ್ರ ಬರೆದಿದ್ದಾರೆ.

ಅನ್ವರ್ ಮಾಣಿಪ್ಪಾಡಿ ಅವರು ಜಂಟಿ ಸದನ ಸಮಿತಿ ಮುಂದೆ ಸೋಮವಾರ ಹಾಜರಾಗಿದ್ದರು.




ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲನೆಗೆ ಸಂಬಂಧಿಸಿದಂತೆ ನವದೆಹಲಿಯಲ್ಲಿ ನಡೆದ ಸಂಸತ್‌ನ ಜಂಟಿ ಸಮಿತಿ ಸಭೆಯಲ್ಲಿ ಅವಹೇಳನಕಾರಿ ಟೀಕೆ ಖಂಡಿಸಿ ವಿರೋಧ ಪಕ್ಷದ ಸಂಸದರು ಸಭಾತ್ಯಾಗ ಮಾಡಿದರು – ಪಿಟಿಐ ಚಿತ್ರ

ಎರಡನೇ ದಿನವೂ ಸಭಾತ್ಯಾಗ

ಜಂಟಿ ಸಮಿತಿಯ ಸಭೆಯಲ್ಲಿ ಬಿಜೆಪಿ ಸದಸ್ಯರೊಬ್ಬರು ಅವಹೇಳನಕಾರಿ ಟೀಕೆ ಮಾಡಿದ್ದನ್ನು ಖಂಡಿಸಿ ಮಂಗಳವಾರ ವಿರೋಧ ಪಕ್ಷದ ಹಲವು ಸಂಸದರು ಸಭಾತ್ಯಾಗ ಮಾಡಿದರು. ವಿರೋಧ ಪಕ್ಷದ ಸಂಸದರಾದ ಕಲ್ಯಾಣ್ ಬ್ಯಾನರ್ಜಿ, ಗೌರವ್ ಗೊಗೋಯಿ, ಎ.ರಾಜಾ, ಮೊಹಮ್ಮದ್ ಅಬ್ದುಲ್ಲಾ ಹಾಗೂ ಅರವಿಂದ್ ಸಾವಂತ್ ಅವರು ಹೊರನಡೆದರು. ಸಮಿತಿಯ ಅಧ್ಯಕ್ಷ ಜಗದಂಬಿಕಾ ಪಾಲ್ ಅವರನ್ನು ವಿರೋಧ ಪಕ್ಷದ ಸಂಸದರು ಅವಾಚ್ಯವಾಗಿ ನಿಂದಿಸಿದರು ಎಂದು ಬಿಜೆಪಿ ಸದಸ್ಯರು ಆರೋಪಿಸಿದರು.

ಇ.ಡಿ.ಯಿಂದ ಆಸ್ತಿ ಜಪ್ತಿ

ಹೈದರಾಬಾದ್: ಆಂಧ್ರಪ್ರದೇಶ ರಾಜ್ಯ ಕೌಶಲ ಅಭಿವೃದ್ಧಿ ನಿಗಮದ ಅನುದಾನ ದುರ್ಬಳಕೆ ಆರೋಪಕ್ಕೆ ಸಂಬಂಧಿಸಿದಂತೆ ₹23.54 ಕೋಟಿ ಮೌಲ್ಯದ ಸ್ಥಿರಾಸ್ತಿ ಮತ್ತು ಚರಾಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಜಪ್ತಿ ಮಾಡಿದೆ.



ಸುಭಾಷಿತ

ಒಬ್ಬರನ್ನು ಸೋಲಿಸುವುದು ತುಂಬಾ ಸುಲಭ. ಆದರೆ, ಒಬ್ಬರ ಮನಸ್ಸನ್ನು ಗೆಲ್ಲುವುದು ಬಹಳ ಕಷ್ಟ.

-ಎ.ಪಿ.ಜೆ. ಅಬ್ದುಲ್ ಕಲಾಂ

ಸಾಯಿಬಾಬಾ ಸಾವು: ನಿರಪರಾಧಿಯನ್ನು ಅಸಹಾಯಕನನ್ನಾಗಿಸಿದ ವ್ಯವಸ್ಥೆ

ದೆಹಲಿ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿದ್ದ ಜಿ.ಎನ್. ಸಾಯಿಬಾಬಾ ಅವರ ಸಾವು, ಸರ್ಕಾರ ಕಡೆಯಿಂದ ಆಗಿರುವ ದೋಷವನ್ನು ತೋರಿಸುತ್ತಿದೆ. ಅಲ್ಲದೆ, ಇದು ನ್ಯಾಯದಾನ ವ್ಯವಸ್ಥೆಯಲ್ಲಿನ ಕಟು ವಾಸ್ತವಕ್ಕೆ ಹಿಡಿದಿರುವ ಕೈಗನ್ನಡಿಯೂ ಹೌದು. ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು. 10 ವರ್ಷ ಜೈಲಿನಲ್ಲಿದ್ದ ಸಾಯಿಬಾಬಾ ಅವರನ್ನು ನ್ಯಾಯಾಲಯವು ಕೆಲವು ತಿಂಗಳ ಹಿಂದೆ ಬಿಡುಗಡೆ ಮಾಡಿತ್ತು. ಸಾಯಿಬಾಬಾ ಅವರು ಶೇಕಡ 90ರಷ್ಟು ಅಂಗವಿಕಲರಾಗಿದ್ದರು, ಗಾಲಿಕುರ್ಚಿಗೆ ಅವರು ಸೀಮಿತರಾಗಿದ್ದರು. ಅವರಿಗೆ ಪಿತ್ತಕೋಶದಲ್ಲಿ ಕಲ್ಲು ಆಗಿತ್ತು, ಅದನ್ನು ತೆಗೆಯಲು ಶಸ್ತ್ರಚಿಕಿತ್ಸೆ ನಡೆಸಿದ ನಂತರ ಅವರ ಆರೋಗ್ಯ ಪರಿಸ್ಥಿತಿ ವಿಷಮಗೊಂಡಿತು. 57 ವರ್ಷ ವಯಸ್ಸಿನ ಅವರು ಶನಿವಾರ ಮೃತಪಟ್ಟಿದ್ದಾರೆ. 57 ವರ್ಷ ಸಾಯುವ ವಯಸ್ಸಲ್ಲ, ಬಹಳ ದೀರ್ಘ ಅವಧಿಗೆ ಅವರನ್ನು ಜೈಲಿನಲ್ಲಿ ಇರಿಸಿದ್ದು, ಜೈಲಿನ ಕೊಠಡಿಯು ಬಹಳ ಇಕ್ಕಟ್ಟಾಗಿದ್ದುದು ಕೂಡ ಅವರ ಸಾವಿಗೆ ಕಾರಣ ಎನ್ನಲು ಆಧಾರಗಳಿವೆ. ಗಾಲಿಕುರ್ಚಿ ಇಲ್ಲದೆ ಎಲ್ಲಿಗೂ ತೆರಳಲು ಸಾಧ್ಯವಿಲ್ಲದ ಅವರಿಗೆ ಪದೇ ಪದೇ ಜಾಮೀನು ನಿರಾಕರಿಸಲಾಯಿತು. ಅವರನ್ನು ಭಯೋತ್ಪಾದಕನಂತೆ, ಶಿಕ್ಷೆಗೆ ಗುರಿಯಾದ ಅಪರಾಧಿಯಂತೆ ಕಾಣಲಾಯಿತು. ಜೈಲಿನಿಂದ ಹೊರಗೆ ಬರಲು, ತಾವು ಅಮಾಯಕ ಎಂಬುದನ್ನು ಮನವರಿಕೆ ಮಾಡಿಕೊಡಲು ಅವರು ನ್ಯಾಯಾಲಯಗಳಲ್ಲಿ ಹಲವು ಹಂತಗಳಲ್ಲಿ ಹೋರಾಟ ನಡೆಸಬೇಕಾಯಿತು.



ಸರ್ಕಾರವು ಹಟಕ್ಕೆ ಬಿದ್ದರೆ ಅಮಾಯಕ ವ್ಯಕ್ತಿಯೊಬ್ಬನನ್ನು 'ಶಿಕ್ಷೆ'ಗೆ ಗುರಿಪಡಿಸಬಲ್ಲದು ಎಂಬ ಸಂಗತಿಯು ಆತಂಕ ಮೂಡಿಸುವಂಥದ್ದು

ಸಾಯಿಬಾಬಾ ಅವರನ್ನು ಮಹಾರಾಷ್ಟ್ರ ಸರ್ಕಾರವು 2014ರಲ್ಲಿ ಬಂಧಿಸಿತು. ಮಾವೊವಾದಿಗಳ ಜೊತೆ ಅವರಿಗೆ ನಂಟು ಇದೆ ಎಂಬ ಆರೋಪ ಹೊರಿಸಲಾಯಿತು. ಅವರ ಬಂಧನ ಹಾಗೂ ಅವರ ವಿರುದ್ಧ ಕಠಿಣ ಯುಎಪಿಎ ಕಾಯ್ದೆಯ ಅಡಿಯಲ್ಲಿ ಆರೋಪಗಳನ್ನು ಹೊರಿಸಿ ಪ್ರಕರಣ ದಾಖಲಿಸಿದ್ದರ ಬಗ್ಗೆ ಆರಂಭದಿಂದಲೂ ಹಲವು ಪ್ರಶ್ನೆಗಳು ಇದ್ದವು. ಮೂರು ವರ್ಷಗಳ ನಂತರ ವಿಚಾರಣಾ ನ್ಯಾಯಾಲಯವೊಂದು ಅವರನ್ನು ಅಪರಾಧಿ ಎಂದು ಘೋಷಿಸಿತು. ಆದರೆ ಮುಂಬೈ ಹೈಕೋರ್ಟ್ ಈ ಆದೇಶವನ್ನು ರದ್ದುಪಡಿಸಿತು. ಈ ಆದೇಶ ಬರುವಷ್ಟರಲ್ಲಿ, ಅಪರಾಧಿ ಎಂಬ ಘೋಷಣೆ ಆಗಿ ಐದು ವರ್ಷಗಳು ಕಳೆದಿದ್ದವು. ಮಹಾರಾಷ್ಟ್ರ ಸರ್ಕಾರ ಸಲ್ಲಿಸಿದ ಮೇಲ್ಮನವಿ ಆಧರಿಸಿ, ಒಂದು ಶನಿವಾರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ವಿಶೇಷ ಪೀಠವು ಹೈಕೋರ್ಟ್ ಆದೇಶಕ್ಕೆ ತಡೆ ನೀಡಿತು. ನಂತರದಲ್ಲಿ ಪ್ರಕರಣವನ್ನು ಹೈಕೋರ್ಟ್‌ಗೆ ಮತ್ತೆ ರವಾನಿಸಿತು. ತನ್ನ ಮೊದಲಿನ ನಿಲುವನ್ನು ಪುನರುಚ್ಚರಿಸಿದ ಹೈಕೋರ್ಟ್, ಆರೋಪಗಳಿಗೆ ಪೂರಕವಾಗಿ ಯಾವುದೇ ಸಾಕ್ಷ್ಯವನ್ನು ಒದಗಿಸದ ಮಹಾರಾಷ್ಟ್ರ ಸರ್ಕಾರವನ್ನು ಕಟುವಾಗಿ ಟೀಕಿಸಿತು. ನಕಲಿ ಸಿದ್ಧಾಂತಕ್ಕೆ ಸಂಬಂಧಿಸಿದ ವಿಷಯಗಳನ್ನು ಡೌನ್‌ಲೋಡ್ ಮಾಡಿಕೊಂಡ ಮಾತ್ರಕ್ಕೆ, ಸಿದ್ಧಾಂತದ ಬಗ್ಗೆ ಸಹಾನುಭೂತಿ ಹೊಂದಿದ್ದ ಮಾತ್ರಕ್ಕೆ ಯುಎಪಿಎ ಅಡಿಯಲ್ಲಿ ಬಂಧಿಸುವ ಅಗತ್ಯ ಇಲ್ಲ ಎಂದು ಕೂಡ ಕೋರ್ಟ್ ಹೇಳಿತು.

ಸಾಯಿಬಾಬಾ ಅವರ ದುರಂತಮಯ ಜೀವನವು ವ್ಯವಸ್ಥೆಯು ಅದೆಷ್ಟು ವಿಷಾದನೀಯವಾಗಿರುತ್ತದೆ, ವ್ಯವಸ್ಥೆಯಲ್ಲಿನ ಹುಳುಕುಗಳು ಸರ್ಕಾರದ ಶಕ್ತಿಯ ಮುಂದೆ ವ್ಯಕ್ತಿಯೊಬ್ಬನನ್ನು ಹೇಗೆ ನಿಸ್ಸಹಾಯಕನನ್ನಾಗಿ ಮಾಡುತ್ತವೆ ಎಂಬುದನ್ನು ತೋರಿಸುತ್ತಿವೆ. ಸರ್ಕಾರಗಳು ತಮ್ಮ ತಾಕತ್ತನ್ನು ಮನಸೋಇಚ್ಛೆ ಬಳಕೆ ಮಾಡುವುದರ ಮೇಲೆ ನ್ಯಾಯಾಂಗ ನಿಯಂತ್ರಣ ಹೇರಬೇಕಿತ್ತು. ಆದರೆ ಹಲವು ಸಂದರ್ಭಗಳಲ್ಲಿ ವ್ಯವಸ್ಥೆಯು ಸಾಯಿಬಾಬಾ ಅವರ ನೆರವಿಗೆ ಬರಲಿಲ್ಲ. ಅವರಿಗೆ ವ್ಯವಸ್ಥೆ ನೆರವು ನೀಡುವ ಹೊತ್ತಿಗೆ ಅವರ ಜೀವನದ 10 ವರ್ಷಗಳು ಕಳೆದುಹೋಗಿದ್ದವು. ಆದರ್ಶ ಸ್ಥಿತಿಯಲ್ಲಿ ಪ್ರತಿ ಪ್ರಜೆಗೂ ಮೂಲಭೂತ ಹಕ್ಕುಗಳ ಖಾತರಿ ಇದೆ. ಆದರೆ ಹಲವು ಸಂದರ್ಭಗಳಲ್ಲಿ ಪ್ರಜೆಗಳ ನಿಜ ಜೀವನದಲ್ಲಿ ಹಕ್ಕುಗಳ ಖಾತರಿ ಇರುವುದಿಲ್ಲ. 10 ವರ್ಷಗಳನ್ನು ಜೈಲಿನಲ್ಲಿ ಕಳೆದಿದ್ದರು ಎಂಬುದಷ್ಟೇ ಸಾಯಿಬಾಬಾ ಅವರಿಗೆ ಆದ ನಷ್ಟವಲ್ಲ. ಅವರು ತಮ್ಮ ಉದ್ಯೋಗ ಕಳೆದುಕೊಂಡರು, ತಮ್ಮ ಕುಟುಂಬದಿಂದ ದೂರವಾದರು, ಜೈಲುವಾಸವು ಅವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಿತು. ವ್ಯಕ್ತಿಯ ರಕ್ಷಣೆಗೆ ಕಾನೂನು ಹಾಗೂ ನ್ಯಾಯಾಲಯಗಳು ಇವೆಯಾದರೂ, ಸರ್ಕಾರವು ಹಟಕ್ಕೆ ಬಿದ್ದರೆ ಅಮಾಯಕ ವ್ಯಕ್ತಿಯೊಬ್ಬನನ್ನು 'ಶಿಕ್ಷೆ'ಗೆ ಗುರಿಪಡಿಸಬಲ್ಲದು ಎಂಬ ಸಂಗತಿಯು ಆತಂಕ ಮೂಡಿಸುವಂಥದ್ದು.

ದಿನದ ಟ್ವೀಟ್

ಪೌರಕಾರ್ಮಿಕರ ಸುರಕ್ಷತೆಗೆ ಆದ್ಯತೆ ಇರಲಿ




ಪೌರಕಾರ್ಮಿಕರಿಗೆ ಷೂ, ಟಾರ್ಚ್, ಜಾಕೆಟ್ ಮತ್ತು ಹೆಲ್ಮೆಟ್‌ನ ಅಗತ್ಯವಿರುತ್ತದೆ. ಇವು ಅವರ ಸುರಕ್ಷತೆಗೆ ಅಗತ್ಯವಾದ ಮೂಲ ಪರಿಕರಗಳು. ಅವುಗಳನ್ನು ಬಿಟ್ಟು, ನೀವು ಅವರಿಗೆ ಟಿ- ಷರ್ಟ್ ಕೊಡುವುದಕ್ಕೆ ಅವರೇನೂ ಕ್ರಿಕೆಟ್ ಆಡಲು ಸ್ಟೇಡಿಯಂಗೆ ತೆರಳುತ್ತಿಲ್ಲ.

(ಬೆಂಗಳೂರಿನ ಬಡಾವಣೆಯೊಂದರ ಸಾರ್ವಜನಿಕ ಸ್ಥಳದಲ್ಲಿ ನಿಂತಿದ್ದ ಮಳೆ ನೀರನ್ನು, ಬಿಬಿಎಂಪಿ ಲೋಗೊ ಇದ್ದ ಟಿ- ಷರ್ಟ್ ಧರಿಸಿದ್ದ ಪೌರಕಾರ್ಮಿಕರು ಯಾವುದೇ ಸುರಕ್ಷತಾ ಸಾಧನಗಳಿಲ್ಲದೆ ಬರಿಗಾಲಲ್ಲಿ ಸ್ವಚ್ಛ ಮಾಡುತ್ತಿದ್ದ ವಿಡಿಯೊಗೆ ಪ್ರತಿಕ್ರಿಯೆ)

ಕಾರ್ತಿಕ್ ರೆಡ್ಡಿ

ಕಿಡಿನುಡಿ



ಪ್ರಿಯ ನಾಗರಿಕರೇ, ನಿಮಗಿಂದು ಕೋಪ ಬಂದಿದೆ ಎಂಬುದು ನನಗೆ ಗೊತ್ತು. ಜಲಾವೃತವಾದ ರಸ್ತೆ ಮತ್ತು ಟ್ರಾಫಿಕ್‌ನಲ್ಲಿ ಗಂಟೆಗಟ್ಟಲೆ ನೀವು ಪಾಡುಪಡುವಂತಾಯಿತು. ಎರಡು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಭಾರಿ ಮಳೆಯಾಗಿದ್ದಾಗಲೂ ನಿಮಗೆ ಕೋಪ ಬಂದಿತ್ತು... ಇಂದು ನಾವು ಮತ್ತೆ ಅದೇ ಸ್ಥಿತಿಯಲ್ಲಿ ಇದ್ದೇವೆ... ಉತ್ತಮ ರಸ್ತೆಗಳು ನಿರ್ಮಾಣಗೊಳ್ಳುವವರೆಗೆ, ಕೆರೆ ಒತ್ತುವರಿ ತೆರವುಗೊಳ್ಳುವವರೆಗೆ ಇದೇ ರೀತಿ ಕೋಪವನ್ನು ಉಳಿಸಿಕೊಳ್ಳಿ ಎಂದು ಮನವಿ ಮಾಡುತ್ತೇನೆ. ಸ್ಥಳೀಯ ಶಾಸಕರು ಮತ್ತು ಬೆಂಗಳೂರಿನ ಉಸ್ತುವಾರಿ ಹೊಣೆ ಹೊತ್ತಿರುವ ಸಚಿವರನ್ನು ಇದಕ್ಕೆ ನೀವು ಹೊಣೆ ಮಾಡದೇ ಹೋದರೆ ಮುಂದಿನ ವರ್ಷ ಕೂಡ ಇದೇ ಸ್ಥಿತಿಯನ್ನು ನೀವು ಅನುಭವಿಸಬೇಕಾಗುತ್ತದೆ.

ಅಶೋಕ್ ಮೃತ್ಯುಂಜಯ, ಎಎಪಿ ಮುಖಂಡ, ಟೆಕಿ

25 ವರ್ಷಗಳ ಹಿಂದೆ

ಶನಿವಾರ, 16-10-1999

• ಪಾಕ್‌ನಲ್ಲಿ ತುರ್ತುಸ್ಥಿತಿ ಸಂವಿಧಾನ ಅಮಾನತು

ಇಸ್ಲಾಮಾಬಾದ್, ಅ. 15 (ಪಿಟಿಐ)– ಪಾಕಿಸ್ತಾನದಲ್ಲಿ ತುರ್ತು ಪರಿಸ್ಥಿತಿ ಹೇರಲಾಗಿದ್ದು, ಸಂವಿಧಾನವನ್ನು ಅಮಾನತುಗೊಳಿಸಲಾಗಿದೆ. ಜನರಲ್ ಪರ್ವೇಜ್ ಮುಷರಫ್ ದೇಶದ ಮುಖ್ಯ ಅಧಿಕಾರಿಯಾಗಿ ಸ್ವಯಂ ಘೋಷಿಸಿಕೊಂಡಿರುವ ಹಿನ್ನೆಲೆಯಲ್ಲಿ ಪಾಕಿಸ್ತಾನ ಮತ್ತೆ ಸೇನಾ ಸರ್ವಾಧಿಕಾರದ ತೆಕ್ಕೆಗೆ ಸಿಲುಕಿದೆ.

ಮಂಗಳವಾರ ಕ್ಷಿಪ್ರಕ್ರಾಂತಿ ನಡೆಸಿ ನವಾಜ್ ಷರೀಫ್ ನೇತೃತ್ವದ ಸರ್ಕಾರವನ್ನು ಕೆಳಗಿಳಿಸಿದ ಮುಷರಫ್ ಇಂದು ಬೆಳಗಿನ ಜಾವ ತುರ್ತು ಪರಿಸ್ಥಿತಿ ಘೋಷಿಸಿದರು. ಕೆಲವು ಗಂಟೆಗಳಲ್ಲಿ ಸೇರಬೇಕಿದ್ದ ರಾಷ್ಟ್ರೀಯ ಅಸೆಂಬ್ಲಿಯನ್ನು ಹಾಗೂ ರಾಜ್ಯ ಅಸೆಂಬ್ಲಿಗಳನ್ನು ಅಮಾನತುಗೊಳಿಸಿದರು. ಸುಪ್ರೀಂ ಕೋರ್ಟ್‌ನ ಅಧಿಕಾರವನ್ನೂ ಮೊಟಕುಗೊಳಿಸಲಾಗಿದೆ. ಆದರೆ ಸಂಪೂರ್ಣ ಸೇನಾಡಳಿತ ಹೇರಲಾಗಿಲ್ಲ.

ತುರ್ತು ಪರಿಸ್ಥಿತಿ ಘೋಷಣೆ ಆದೊಡನೆಯೇ ಸೇನಾ ಅಧಿಕಾರಿಗಳು ನಾಲ್ಕೂ ಪ್ರಾಂತ್ಯಗಳ ಅಧಿಕಾರ ವಹಿಸಿಕೊಂಡರು. ತುರ್ತು ಪರಿಸ್ಥಿತಿ ಎಷ್ಟು ಸಮಯವಿರುತ್ತದೆ ಎಂಬುದನ್ನು ಹೇಳಲಾಗಿಲ್ಲ.

• ರಾಜೀವ್ ಹಂತಕರಿಗೆ ನ.5ಕ್ಕೆ ಗಲ್ಲುಶಿಕ್ಷೆ ಜಾರಿ ಅಸಂಭವ

ಚೆನ್ನೈ, ಅ. 15 (ಪಿಟಿಐ)– ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ಗಲ್ಲುಶಿಕ್ಷೆಗೆ ಗುರಿಯಾಗಿರುವ ನಾಲ್ವರಿಗೆ ನವೆಂಬರ್ ಐದರಂದು ಈ ಶಿಕ್ಷೆ ಜಾರಿಗೊಳಿಸಬೇಕು ಎಂದು ಇಲ್ಲಿನ ವಿಚಾರಣಾ ನ್ಯಾಯಾಲಯ ಆದೇಶ ನೀಡಿದೆ.

ಆದರೆ ತಮಗೆ ಕ್ಷಮಾದಾನ ಕರುಣಿಸಬೇಕು ಎಂದು ಅಪರಾಧಿಗಳು ರಾಷ್ಟ್ರಪತಿಯವರಲ್ಲಿ ಕೋರಿಕೊಳ್ಳಲಿರುವ ಅರ್ಜಿ ಇತ್ಯರ್ಥವಾಗುವ ತನಕ ಇವರನ್ನು ಗಲ್ಲಿಗೇರಿಸುವುದಿಲ್ಲ ಎಂದು ಜೈಲು ಅಧಿಕಾರಿಗಳು ಹೇಳಿದ್ದಾರೆ.

ಗಲ್ಲುಶಿಕ್ಷೆಗೆ ಗುರಿಯಾಗಿರುವ ಮುರುಗನ್, ನಳಿನಿ, ಸಂತನ್ ಮತ್ತು ಪೇರ್‌ಅರಿವಳನ್ ಅವರು ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿರುವುದನ್ನು ದೃಢಪಡಿಸಿದ ನಿಯೋಜಿತ ನ್ಯಾಯಾಲಯ, ನ. 5ರಂದು ಇವರನ್ನು ಗಲ್ಲಿಗೇರಿಸುವಂತೆ ಆದೇಶ ನೀಡಿತ್ತು.

• ಏರಿದ ತರಕಾರಿ ಬೆಲೆ ಕಂಗಾಲಾದ ನಾಗರಿಕರು

ಬೆಂಗಳೂರು, ಅ. 16– ತರಕಾರಿಗಳ ಬೆಲೆ ತುಟ್ಟಿಯಿಂದಾಗಿ ಮೊದಲೇ ನಲುಗಿದ್ದ ಶ್ರೀಸಾಮಾನ್ಯ ಈಗ ಡೀಸೆಲ್ ಬೆಲೆ ಏರಿಕೆ ಹಾಗೂ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದ ತರಕಾರಿಗಳ ಬೆಲೆ ಮತ್ತಷ್ಟು ಹೆಚ್ಚಳವಾಗಿ ಕಂಗಾಲಾಗಿದ್ದಾನೆ.

ಮಳೆ ಬಾರದಿದ್ದರೂ ಕಷ್ಟ, ಬಂದರೂ ಕಷ್ಟ ಎಂಬ ಅರಿವು ರೈತರಿಗೆ ಹೊಸದೇನೂ ಅಲ್ಲ.

ಕಾರಣ, ಬೆಳೆಗಾಗಿ ಮಳೆ ಬರಬೇಕು ಎಂಬುದು ಪ್ರತಿಯೊಬ್ಬ ರೈತನ ಆಸೆ. ಆದರೆ, ಬೆಳೆ ಬಂದಾಗ ಕಟಾವಿಗೂ ಬಿಡುವು ಕೊಡದೆ ನಿರಂತರವಾಗಿ ಸುರಿಯುವ ಮಳೆಯೇ ರೈತನಿಗೆ ಶಾಪವಾಗಿ ಪರಿಣಮಿಸಿದರೆ ಏನು ಗತಿ?

ಕಳೆದ ಕೆಲವು ದಿನಗಳಿಂದ ಒಂದೇ ಸಮನೆ ಸುರಿಯುತ್ತಿರುವ ಮಳೆಯಿಂದಾಗಿ ಕೆಲವು ತರಕಾರಿಗಳು ಮಾರುಕಟ್ಟೆಗೆ ಸಮರ್ಪಕ ರೀತಿಯಲ್ಲಿ ಪೂರೈಕೆಯಾಗದೆ ಅವುಗಳ ಬೆಲೆ ಹೆಚ್ಚಿದೆ.

ಕರ್ನಾಟಕದ ಮಾನಸಿಕ ಆರೋಗ್ಯಕ್ಕೆ ಆಘಾತ ತಂದ ಹಗರಣಗಳ ಸರಮಾಲೆ

ಭ್ರಷ್ಟಾಚಾರದ ಸಿಡಿಲು ಬಡಿದೊಡೆ



ಗತಿಬಿಂಬ

ವೈ.ಗ. ಜಗದೀಶ್

ಲೋಕಸಭೆ ಚುನಾವಣೆ ಮುಗಿದ ತರುವಾಯ ರಾಜ್ಯದಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತದ ವಿಚಾರಗಳೇ ಹೆಚ್ಚು ಸದ್ದು ಮಾಡುತ್ತಿವೆ, ದೇಶದ ಗಮನವನ್ನು ಸೆಳೆದಿವೆ. 'ಹೇಳುವುದು ಆಚಾರ, ಮಾಡುವುದು ಅನಾಚಾರ, ಬೀದಿಗೆ ಬಂದು ನಿಂತಿದೆ ಎಲ್ಲರ ಭ್ರಷ್ಟಾಚಾರ' ಎಂಬ ಸರಳ ವಾಕ್ಯದಲ್ಲಿ ಹೇಳಿಬಿಡಬಹುದಾದ ಪರಿಸ್ಥಿತಿಯನ್ನು ರಾಜಕಾರಣಿಗಳು ತಂದುಕೊಂಡಿದ್ದಾರೆ.

ಹಿಂದಿನ ನಾಲ್ಕೈದು ತಿಂಗಳಿನಲ್ಲಿ ಅಭಿವೃದ್ಧಿ, ಕೈಗಾರಿಕಾ ಬೆಳವಣಿಗೆ, ಬಡವರ ಕಲ್ಯಾಣ, ಶಿಕ್ಷಣ-ಆರೋಗ್ಯ-ಜನಜೀವನ ಸುಧಾರಣೆಗೆ ಒತ್ತು ಎಂಬಂತಹ ಯಾವ ಪದಗಳೂ ಕೇಳಿಸುತ್ತಲೇ ಇಲ್ಲ. ಬರ-ನೆರೆ ತಂದಿತ್ತ ಅನಾಹುತವು ಯಾವ ರಾಜಕೀಯ ಪಕ್ಷದವರಿಗೂ ಕಾಳಜಿಯ ಸಂಗತಿಯೇ ಆಗಿಲ್ಲ. ಅವರ ಮೇಲೆ ಇವರು ಕಲ್ಲೆಸೆಯುವುದು, ಇವರ ಮೇಲೆ ಅವರು ಕೆಸರು ಎರಚುವುದು– ಇದನ್ನು ಕಂಡು ಜನ ಆಡಿಕೊಳ್ಳುವುದು... ಇಷ್ಟಕ್ಕೇ ಸೀಮಿತವಾಗಿದೆ ರಾಜ್ಯದ ರಾಜಕೀಯ ಬೆಳವಣಿಗೆ. ಒಂದು ಕಾಲದಲ್ಲಿ ಮೌಲ್ಯಾಧಾರಿತ ರಾಜಕಾರಣ, ಜನಕಲ್ಯಾಣ ಎಂಬುದನ್ನು ಮಾತಿನಲ್ಲಾದರೂ ಉಳಿಸಿಕೊಂಡ ರಾಜ್ಯವಾಗಿ ಕರ್ನಾಟಕವು ದೇಶದಲ್ಲೇ ಪರಿಗಣಿತವಾಗಿತ್ತು. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಎರಡನೇ ಬಾರಿ ಅಧಿಕಾರ ವಹಿಸಿಕೊಂಡಾಗ, ಪಂಚ ಗ್ಯಾರಂಟಿಗಳ ಅನುಷ್ಠಾನದಿಂದಾಗಿ ಕಲ್ಯಾಣದ ಕನಸುಗಳು ಗರಿಗೆದರಿದವು. ಆರ್ಥಿಕ ಹಿಂಜರಿತ, ಬರದಿಂದ ಕಂಗೆಟ್ಟ ಜನರಲ್ಲಿ ಹೊಸ ಕಸುವು ತುಂಬಲು ಗ್ಯಾರಂಟಿಗಳು ತಾಯಿಬೇರಾಗಿದ್ದವು. ಹೀಗೆ ಹೊಸ ದಿಕ್ಕಿನತ್ತ ಚಲಿಸಹೊರಟಿತ್ತು ಕರ್ನಾಟಕ.

ಲೋಕಸಭೆ ಚುನಾವಣೆ ಫಲಿತಾಂಶದ ಬಳಿಕ ಹೊರಬಂದ ಹೀನಾತಿಹೀನ ಲೈಂಗಿಕ ಹಗರಣಗಳು, ಭ್ರಷ್ಟಾಚಾರದ ಆರೋಪಗಳು ಕರ್ನಾಟಕದ ಮಾನಸಿಕ ಆರೋಗ್ಯಕ್ಕೆ ಕೊಳ್ಳಿ ಇಟ್ಟವು. ಕಲ್ಯಾಣದ ಹೊಂಗನಸುಗಳನ್ನು ಒಂದರ್ಥದಲ್ಲಿ ಹೊಸಕಿ ಹಾಕಿದವು.

ದೇಶಕ್ಕೆ ಪ್ರಧಾನಿಯಾಗಿ ಎಚ್.ಡಿ. ದೇವೇಗೌಡರನ್ನು ಕೊಟ್ಟ ರಾಜಕೀಯ ಕುಟುಂಬದ ಕುಡಿಗಳಿಬ್ಬರ ಲೈಂಗಿಕ ಹಗರಣಗಳು ಸಾರ್ವಜನಿಕ ಜೀವನದಲ್ಲಿ ನೈತಿಕತೆ ಕುಸಿದಿರುವುದನ್ನು ಬಿಂಬಿಸಿದವು. ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಬಿ.ಎಸ್.ಯಡಿಯೂರಪ್ಪ ಅವರ ವಿರುದ್ಧ ಎಫ್‌ಐಆರ್ ದಾಖಲಾಯಿತು. ಬಿಜೆಪಿ ಶಾಸಕ ಮುನಿರತ್ನ ಪ್ರಕರಣವಂತೂ 'ವಿಷಕನ್ಯೆ'ಯರನ್ನು ರಾಜಕೀಯ ದುರುದ್ದೇಶಕ್ಕೆ ಬಳಸಿಕೊಳ್ಳುತ್ತಿದ್ದ ಪುರಾಣದ ಕತೆಗಳನ್ನು ನೆನಪಿಸಿದವು. ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರ ವಿರುದ್ಧವೂ ಅತ್ಯಾಚಾರದ ಆರೋಪದಡಿ ಪ್ರಕರಣ ದಾಖಲಾಯಿತು.

ವಾಲ್ಮೀಕಿ ಅಭಿವೃದ್ಧಿ ನಿಗಮ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಹಗರಣಗಳು ಹೊರಬಂದವು. ನಿಗಮದಲ್ಲಿ ನಡೆದ ಅಕ್ರಮದ ಕಾರಣಕ್ಕೆ ಬಿ. ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಜೈಲಿಗೆ ಹೋದರು. ಮುಡಾ ಪ್ರಕರಣ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸುತ್ತಲೇ ಗಿರಕಿ ಹೊಡೆಯುತ್ತಿದೆ. ಅವರ ವಿರುದ್ಧ ವಿರೋಧ ಪಕ್ಷಗಳು 'ಮುಡಾಸ್ತ್ರ' ಬಳಸುತ್ತಿದ್ದರೆ, ಹಸ್ತದಲ್ಲಿ ಅಡಗಿದ್ದ ಒಂದೊಂದೇ ಪ್ರಕರಣ ಬೀದಿಗೆ ಬರತೊಡಗಿವೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಯಡಿಯೂರಪ್ಪ ಕುಟುಂಬ, ಕೋವಿಡ್ ಹಗರಣಗಳನ್ನೆಲ್ಲ ಬೀದಿಗೆ ತಂದು ನಿಲ್ಲಿಸಲಾಯಿತು. ಸಿದ್ದರಾಮಯ್ಯ ಅವರನ್ನು ಬೀದಿಗೆ ತಂದು ನಿಲ್ಲಿಸಬೇಕೆಂಬ ಕುಮಾರಸ್ವಾಮಿ ಅವರ ಹಟ, ಎಲ್ಲರನ್ನೂ ನಡುಬೀದಿಗೆ ತಳ್ಳಿತು.

ಭ್ರಷ್ಟಾಚಾರದ ಪ್ರಕರಣಗಳಲ್ಲಿ ಹೀಗೆ ಏಕಾಏಕಿ ಒಂದೇ ವರ್ಷದಲ್ಲಿ ಹೊರಬಂದಿವೆ. ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊದ ಈ ವರ್ಷದ ವರದಿಯಲ್ಲಿ 'ಕರ್ನಾಟಕ ಭ್ರಷ್ಟಾಚಾರದಲ್ಲಿ ನಂ.1' ಎಂದು ದಾಖಲಾಗಿರುವುದು ಅಚ್ಚರಿ ಇಲ್ಲ! ಹಾಗೆಂದು, ರಾಜ್ಯದಲ್ಲಿ ಹಿಂದೆಂದೂ ಭ್ರಷ್ಟಾಚಾರ ಇರಲೇ ಇಲ್ಲವೆಂದಲ್ಲ. ಮುಖ್ಯಮಂತ್ರಿಯಾದ ಬಹುತೇಕರು ಇಂತಹ ಆರೋಪಗಳ ಸುಳಿಯಲ್ಲಿ ಮುಳುಗಿ ಎದ್ದವರೇ. ಆದರೆ ಬಂದ ದುಡ್ಡೆಲ್ಲವೂ ತನ್ನ ಮನೆಯ ತಿಜೋರಿಯನ್ನೇ ಸೇರಬೇಕು ಎಂಬ ಪದ್ಧತಿ ಇಟ್ಟುಕೊಂಡವರಲ್ಲ.

ಮುಖ್ಯಮಂತ್ರಿಯಾಗಿದ್ದ ಡಿ. ದೇವರಾಜ ಅರಸು ಅವರ ಒಡನಾಡಿಯಾಗಿದ್ದ ಡಿ.ಬಿ. ಚಂದ್ರೇಗೌಡರು ಹೇಳಿದ ಕತೆಯೊಂದು ಹೀಗಿದೆ: ಬಾಲಬ್ರೂಯಿಯಲ್ಲಿ ವಾಸಿಸುತ್ತಿದ್ದ ಅರಸು ಅವರನ್ನು ಒಮ್ಮೆ ಚಂದ್ರೇಗೌಡರು ಕಾಣಲು ಹೋಗಿದ್ದರು. ಅಲ್ಪಸಂಖ್ಯಾತ ಸಮುದಾಯದ ಒಬ್ಬ ಯುವಕ, ಅರಸು ಭೇಟಿಗಾಗಿ ಕಾಯುತ್ತಾ ಕುಳಿತಿದ್ದರು. ಎಷ್ಟು ಹೊತ್ತಾದರೂ ಅರಸು ಅವರು ಭೇಟಿಗೆ ಅವಕಾಶ ಕೊಟ್ಟಿರಲಿಲ್ಲ. ಚಂದ್ರೇಗೌಡರನ್ನು ಕಂಡ ಕೂಡಲೇ, ಹೇಗಾದರೂ ಭೇಟಿ ಮಾಡಿಸಿ ಎಂದು ಆ ಯುವಕ ದುಂಬಾಲು ಬಿದ್ದರು. ಗೌಡರು ಇದನ್ನು ತಿಳಿಸಿದಾಗ, 'ಅವನಿಗೆ ದುಡ್ಡು ಬೇಕಷ್ಟೆ, ಕಾಯಲಿ ಬಿಡು' ಎಂದು ಅರಸು ಹೇಳಿದರು. ಗೌಡರ ಒತ್ತಾಯದ ಮೇರೆಗೆ ಯುವಕನನ್ನು ಕರೆಸಿಕೊಂಡ ಅರಸು, ತಮ್ಮ ಆಪ್ತ ನಟರಾಜನನ್ನು ಕರೆದು, 'ಆ ಎರಡು ಬ್ಯಾಗ್ ತಂದುಕೊಡು' ಎಂದು ಆಜ್ಞಾಪಿಸಿದರು. ಆ ಯುವಕನಿಗೆ ಕೊಟ್ಟ ಬ್ಯಾಗ್‌ನಲ್ಲಿ ಎಷ್ಟು ಹಣವಿತ್ತೋ ಗೊತ್ತಿಲ್ಲ. 'ಮತ್ತೆ ಆರು ತಿಂಗಳು ಬರಬೇಡ' ಎಂದು ಗದರಿದ ಅರಸು ಆತನನ್ನು ಕಳುಹಿಸಿದ್ದರು. ಇಷ್ಟು ಉದಾರಿಯಾಗಿದ್ದ ಅರಸು ಅವರಿಗೆ ಅವರ ಜತೆಗಿದ್ದವರೆಲ್ಲ 'ನೀವು ಹೇಳಿದರೆ ಹಾಳುಬಾವಿಗೆ ಬೇಕಾದರೂ ಹಾರುತ್ತೇವೆ' ಎಂದು ಹೇಳುತ್ತಿದ್ದರು. ಆದರೆ ಅರಸು ಸ್ವತಃ ಕಷ್ಟಕ್ಕೆ ಸಿಲುಕಿ 'ಬಾವಿಗೆ ಬೀಳುವಂತಹ' ಸನ್ನಿವೇಶ ಎದುರಾದಾಗ, ಅವರೆಲ್ಲ ಬಾವಿಕಟ್ಟೆ ಮೇಲೆ ನಿಂತು ಗಹಗಹಿಸಿ ನಗುತ್ತಿದ್ದರು.



ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರದಲ್ಲಿ ಅಬಕಾರಿ ಸಚಿವರಾಗಿ ಜೆ.ಎಚ್.ಪಟೇಲ್ ಅಧಿಕಾರ ಸ್ವೀಕರಿಸಿದ್ದರು. ಮೊದಲ ದಿನವೇ ಅವರನ್ನು ಭೇಟಿಯಾದ ಅಬಕಾರಿ ಕುಳಗಳು, 'ಇದನ್ನು ಒಪ್ಪಿಸಿಕೊಳ್ಳಿ' ಎಂದು ದೊಡ್ಡ ಸೂಟ್‌ಕೇಸ್ ಒಂದನ್ನು ಮುಂದಕ್ಕೆ ತಳ್ಳಿದರು. 'ಏನಿದು?' ಎಂದು ಪಟೇಲರು ಕೇಳಿದಾಗ, 'ಇಲಾಖೆ ಸಚಿವರಿಗೆ ಕೊಡುವ ಮಾಮೂಲು' ಎಂದರು. ಸಿಟ್ಟಿಗೆದ್ದ ಪಟೇಲರು ಸೂಟ್‌ಕೇಸನ್ನು ಝಾಡಿಸಿ ಒದ್ದಿದ್ದರು. ಇದು ಪಟೇಲರೇ ಹೇಳಿದ್ದ ಕತೆ.

'ಸುಮ್ಮನೆ ಕುಳಿತಿದ್ದರೂ ತಿಂಗಳಿಗೆ ಕನಿಷ್ಠ ₹ 100 ಕೋಟಿ ಬರುತ್ತದೆ. ಸ್ವಲ್ಪ ದಬಾಯಿಸಿ, ಬಡಿಗೆ ಹಿಡಿದರೆ ಬರುವ ಹಣಕ್ಕೆ ಲೆಕ್ಕವೇ ಇರುವುದಿಲ್ಲ. ಹೀಗಿರುವಾಗ ಇನ್ನಷ್ಟು ಹೆಚ್ಚು ದುಡ್ಡು ಏಕೆ ಬೇಕು' ಎಂದು ಮುಖ್ಯಮಂತ್ರಿ ಆಗಿದ್ದವರೊಬ್ಬರು ಹೇಳುತ್ತಿದ್ದುದು ಉಂಟು. ಆದರೆ, ಈಗ ಕಾಲ ಬದಲಾಗಿದೆ. ಬಹುಕೋಟಿ ವೆಚ್ಚ ಮಾಡದೇ ಚುನಾವಣೆಯನ್ನು ಎದುರಿಸುವ ಪರಿಸ್ಥಿತಿಯೇ ಇಲ್ಲ. ಕೋಟಿಗಟ್ಟಲೆ ಬೆಲೆಬಾಳುವ ಬಂಗಲೆ, ಕಾರು ಹೊಂದಿರುವವರೇ ಮತ ಹಾಕಲು ಹಣಕ್ಕಾಗಿ ಕೈಯೊಡ್ಡುವ ದುರ್ದಿನಗಳಲ್ಲಿ ಹಣವಿಲ್ಲದೆ ಚುನಾವಣೆ ಎದುರಿಸುವುದಾದರೂ ಹೇಗೆ? ಇದು ಭ್ರಷ್ಟಾಚಾರಕ್ಕೆ ಸಮರ್ಥನೆಯಲ್ಲ. ವ್ಯವಸ್ಥೆಯನ್ನು ಸರಿದಾರಿಗೆ ತರುವ ಕುರಿತು ಚರ್ಚೆಯಾಗದೇ, ರಾಜಕಾರಣಿಗಳು ಮಾತ್ರ ಭ್ರಷ್ಟರಾಗಬಾರದು ಎಂದು ಹೇಳುವುದಕ್ಕೆ ಅರ್ಥವೇ ಇರುವುದಿಲ್ಲ.


ಕರ್ನಾಟಕದಲ್ಲಿ ಸಮಾಜವಾದಿ ಚಳವಳಿ ಕಟ್ಟಿದ ಶಾಂತವೇರಿ ಗೋಪಾಲಗೌಡ ಅವರು ಮೂರು ಬಾರಿ ಶಾಸಕರಾಗಿದ್ದವರು. ನಿವೇಶನ, ಮನೆ ಯಾವುದೂ ಅವರಿಗೆ ಇರಲಿಲ್ಲ. ಆಗ ಮುಖ್ಯಮಂತ್ರಿಯಾಗಿದ್ದವರು, ಮನೆ ಕೊಡುವುದಾಗಿ ಹೇಳಿದರು. 'ನನ್ನ ಕ್ಷೇತ್ರದಲ್ಲಿನ ಜನ ಸೇರಿದಂತೆ ರಾಜ್ಯದಲ್ಲಿ ಹಲವರಿಗೆ ಮನೆ-ನಿವೇಶನ ಯಾವುದೂ ಇಲ್ಲ. ಅವರೆಲ್ಲರಿಗೂ ಕೊಟ್ಟ ಮೇಲೆ ನನಗೆ ಕೊಡಿ' ಎಂದು ಶಾಂತವೇರಿ ಹೇಳಿದ್ದರು. ಈಗಿನ ಸಮಾಜವಾದಿಗಳ ಕತೆ?

ಈಗಂತೂ ಪೈಪೋಟಿಗೆ ಬಿದ್ದವರಂತೆ ಒಬ್ಬರ ಮೇಲೊಬ್ಬರು ಪ್ರಕರಣ ದಾಖಲಿಸುವ ಉಮೇದಿನಲ್ಲಿದ್ದಾರೆ. ಯಾರೂ ಸತ್ಯ ಹರಿಶ್ಚಂದ್ರರಲ್ಲ, ಎಲ್ಲರೂ ಒಬ್ಬರನ್ನೊಬ್ಬರು ಕಾಡುವ ನಕ್ಷತ್ರಿಕರೇ. ಮೇಲೆ ಕುಳಿತು ಆಡಿಸುತ್ತಿರುವವರು ನಕ್ಷತ್ರಿಕನನ್ನು ಛೂ ಬಿಟ್ಟ 'ವಿಶ್ವಾಮಿತ್ರ'ರಷ್ಟೆ.

'ಸಿದ್ದರಾಮಯ್ಯನವರನ್ನು ಇಳಿಸಿಯೇ ಸಿದ್ಧ' ಎಂದು ಕುಮಾರಸ್ವಾಮಿ, ವಿಜಯೇಂದ್ರ ಹಾಗೂ ಕೆಲವು ಕಾಂಗ್ರೆಸ್ಸಿಗರು ಸ್ಪರ್ಧೆಗಿಳಿದಿದ್ದಾರೆ. ಸಿದ್ದರಾಮಯ್ಯ ಅಧಿಕಾರದಿಂದ ಇಳಿದರೆ ಇಳಿಯಲಿ, ಅದು ಅವರಿಗೆ, ಪಕ್ಷದ ವರಿಷ್ಠರಿಗೆ ಬಿಟ್ಟ ವಿಚಾರ. ಆದರೆ, ಅವರ ಜಾಗದಲ್ಲಿ ಕೂರುವಂತಹ ಸತ್ಯ ಹರಿಶ್ಚಂದ್ರ ಯಾವ ಪಕ್ಷದಲ್ಲಿದ್ದಾರೆ? ಎಲ್ಲರ ಬಳಿ ಮೂರು ತಲೆಮಾರಿಗೆ ಆಗುವಷ್ಟು ಆಸ್ತಿ ಇರುವಂತೆ, ಅಷ್ಟೇ ಕಾಲ ಎದುರಿಸಬೇಕಾದ ಪ್ರಕರಣಗಳೂ ಇವೆ. ಕಾಂಗ್ರೆಸ್‌ನಲ್ಲಿ ಮುಂಚೂಣಿಯಲ್ಲಿರುವವರ ಪೈಕಿ ಒಬ್ಬರು ಈಗಾಗಲೇ ಜೈಲಿಗೆ ಹೋಗಿ ಬಂದಿದ್ದರೆ, ಮತ್ತೆ ಕೆಲವರು ಆದಾಯ ತೆರಿಗೆಯ ದಾಳಿಗೆ ಒಳಗಾದವರು. ಒಂದಿಬ್ಬರ ಮೇಲಷ್ಟೇ ಪ್ರಕರಣ ಇರಲಿಕ್ಕಿಲ್ಲ.

ಹಾಗಿದ್ದರೂ, ಸರ್ಕಾರದ ನಾಯಕತ್ವ ಬದಲಾವಣೆಯ ಚರ್ಚೆ ಬಲವಾಗಿದೆ. ಭ್ರಷ್ಟಾಚಾರ ಮತ್ತು ಅಧಿಕಾರ ರಾಜಕಾರಣ ಒಂದಕ್ಕೊಂದು ಬೆಸೆದುಕೊಂಡು ವಿಜೃಂಭಿಸುತ್ತಿರುವ ಹೊತ್ತಿನೊಳಗೆ, ಭವಿಷ್ಯದ ಮುಖ್ಯಮಂತ್ರಿ ಸ್ಥಾನಕ್ಕೆ 'ಸಜ್ಜನ'ರೊಬ್ಬರ ಹುಡುಕಾಟವೇ ದೊಡ್ಡ ವ್ಯಂಗ್ಯ.

ಚುರುಮುರಿ



ಸಮ್ಮೇಳನ ಸಂಕಟ

• ಮಣ್ಣೆ ರಾಜು

'ಮದುವೆಗೆ ದುಡ್ಡು ಹೊಂಚುವುದಕ್ಕಿಂತ ಮದುವೆ ಇನ್ವಿಟೇಷನ್ ಹಂಚುವುದೇ ಕಷ್ಟ ಎನ್ನುವಂತಾಗಿದೆ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಆಯ್ಕೆ ವಿಚಾರ' ನ್ಯೂಸ್‌ಪೇಪರ್ ಓದುತ್ತಾ ಶಂಕ್ರಿ ಹೇಳಿದ.

'ಹೌದೂರಿ, ಸಮ್ಮೇಳನದ ಖರ್ಚಿಗಿಂತ ಸಮ್ಮೇಳನಾಧ್ಯಕ್ಷರ ಕುರ್ಚಿ ವಿಚಾರವೇ ಹೆಚ್ಚು ಚರ್ಚೆಯಾಗ್ತಿದೆ' ಸುಮಿ ಮಾತಿಗೆ ಜೊತೆಯಾದಳು.

'ಹಿಂದೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಹಿರಿಯ ಸಾಹಿತಿಯೊಬ್ಬರಿಗೆ ಪಟ್ಟ ಕಟ್ಟುವ ಸಂಪ್ರದಾಯವಿತ್ತು. ಸಾಹಿತ್ಯೇತರರೂ ಅಧ್ಯಕ್ಷರಾಗಬಹುದು ಎನ್ನುವ ಅಭಿಪ್ರಾಯ ವ್ಯಕ್ತವಾಗಿ ಕುರ್ಚಿ ಕಂಟಕ ಎದುರಾಗಿದೆ'.

'ಕನ್ನಡಿಗರೆಲ್ಲರೂ ಸಾಹಿತ್ಯ ಪರಿಷತ್ತಿಗೆ ಸದಸ್ಯರಾಗಬಹುದು ಎನ್ನುವಾಗ ಸಾಹಿತ್ಯೇತರ ಕನ್ನಡಿಗ ಅಧ್ಯಕ್ಷರಾಗಬಾರದೇಕೆ?'

'ಆಗಬಹುದು, ಸಮ್ಮೇಳನಾಧ್ಯಕ್ಷರಾದವರು ತಮ್ಮ ಭಾಷಣವನ್ನು ತಾವೇ ಬರೆದು ಓದುವಷ್ಟಾದರೂ ಸಾಹಿತ್ಯ ಜ್ಞಾನ ಇರಬೇಕಲ್ಲವೇ ಎಂಬುದು ಸಾಹಿತಿಗಳ ವಾದ'.

'ವಾದ, ವಿವಾದವಿಲ್ಲದೆ ಇತ್ತೀಚೆಗೆ ಯಾವ ಸಮ್ಮೇಳನಗಳು ನಡೆದಿವೆ ಹೇಳಿ? ಸಾಹಿತ್ಯ ಪರಿಷತ್ತಿಗೆ ಹೈಕಮಾಂಡ್ ಇದ್ದಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ'.

'ಹೈಕಮಾಂಡಾ?!'

'ಮಂತ್ರಿ, ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳು ಹೆಚ್ಚಾದಾಗ ಹೈಕಮಾಂಡ್ ಆಯ್ಕೆ ಮಾಡಿದವರನ್ನು ಪಕ್ಷದವರು ಸಮ್ಮತಿಸುತ್ತಾರಲ್ಲ ಹಾಗೇ ಇಲ್ಲೂ ಆಗಬೇಕಾಗುತ್ತದೆ. ಸರ್ಕಾರವೇ ಹೈಕಮಾಂಡ್ ರೀತಿ ನಡೆದುಕೊಂಡು ಸಮ್ಮೇಳನಾಧ್ಯಕ್ಷರನ್ನು ಆಯ್ಕೆ ಮಾಡಿ ವಿವಾದ ಬಗೆಹರಿಸಬೇಕಾಗುತ್ತದೆ'.

'ನಿಗಮ, ಮಂಡಳಿ, ಪ್ರಾಧಿಕಾರಕ್ಕೆ ನೇಮಕ ಮಾಡಿದಂತೆ ತಮ್ಮ ಪಕ್ಷದ ಬೆಂಬಲಿಗರನ್ನೇ ಸರ್ಕಾರವು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ ಎಂಬ ಆಕ್ಷೇಪ ವ್ಯಕ್ತವಾಗುತ್ತದೆ'.

'ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿ ಹೆಚ್ಚಾದಾಗ ಅರ್ಧ ಅವಧಿಗೆ ಒಬ್ಬರು, ಇನ್ನೊಂದು ಅವಧಿಗೆ ಇನ್ನೊಬ್ಬರು ಅಂತ ನಾಯಕರು ಒಪ್ಪಂದ ಮಾಡಿಕೊಳ್ಳುವಂತೆ, ಮೂರು ದಿನದ ಸಮ್ಮೇಳನದಲ್ಲಿ ಒಂದೊಂದು ದಿನ ಒಬ್ಬೊಬ್ಬರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಬಹುದಲ್ವೇ?'

'ಸಮ್ಮೇಳನಕ್ಕೆ ಮೌಲ್ಯ ಮುಖ್ಯವಲ್ಲ ಎನ್ನುವುದಾದರೆ ದಿನಕ್ಕೊಬ್ಬರು, ಗೋಷ್ಠಿಗೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಬಹುದು' ಶಂಕ್ರಿ ಸಿಟ್ಟಾದ.

ಸಂಗತ

ಆಟವಲ್ಲ ಇದು ಮೋಸದ ಕೂಟ

ಆನ್‌ಲೈನ್ ಗೇಮ್ ಮಾಯೆಗೆ ಸಿಲುಕಿದ ಕೆಲವು ಯುವಕ–ಯುವತಿಯರ ಬದುಕು ಮೂರಾಬಟ್ಟೆಯಾಗಿದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ವಿದ್ಯಾರ್ಥಿಗಳಿಗೆ ಮಾದಕವಸ್ತು ವ್ಯಸನದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ಪೊಲೀಸ್ ಇಲಾಖೆ ಮತ್ತು ಆರೋಗ್ಯ ಇಲಾಖೆಯು ಅಂದು ಕೈಜೋಡಿಸಿದ್ದವು. 'ವ್ಯಸನಮುಕ್ತ ಸಮಾಜ'ದ ಕುರಿತು ಮಾಹಿತಿ ನೀಡುತ್ತಿದ್ದ ಸಂದರ್ಭ. ಹುರುಪಿನಿಂದ ಸಂವಾದಿಸುತ್ತಿದ್ದ ಸಂಪನ್ಮೂಲ ವ್ಯಕ್ತಿಗಳು ಕಡೆಯಲ್ಲಿ ಒಬ್ಬ ವಿದ್ಯಾರ್ಥಿನಿ ಪ್ರಶ್ನೆಗೆ ತಬ್ಬಿಬ್ಬಾಗಿ ನಿರುತ್ತರರಾದರು! ಆಕೆ ದೃಢವಾಗಿ 'ಮಾದಕವಸ್ತುಗಳನ್ನು ಉಪಯೋಗಿಸಬೇಡಿ ಅಂತ ವಿದ್ಯಾರ್ಥಿಗಳಿಗೋ ಸಾರ್ವಜನಿಕರಿಗೋ ಹೀಗೆಲ್ಲಾ ಮನವರಿಕೆ ಮಾಡುವ ಬದಲು ಅವುಗಳ ತಯಾರಿಕೆ, ಸಾಗಣೆ ಮತ್ತು ಮಾರಾಟಕ್ಕೆ ಅವಕಾಶವೇ ಆಗದಂತೆ ಕಟ್ಟುನಿಟ್ಟಾಗಿ ಮೂಲದಲ್ಲಿಯೇ ನಿರ್ಬಂಧಿಸಬಹುದಲ್ಲವೇ?' ಎಂದಳು. ಉಳಿದ ವಿದ್ಯಾರ್ಥಿಗಳೂ ದನಿಗೂಡಿಸಿ 'ಕಲಬೆರಕೆ ಪದಾರ್ಥಗಳು, ಮಾಲಿನ್ಯ ಕಾರಕಗಳು, ಪುನರ್ಬಳಕೆ ಮಾಡಲಾಗದ ಪ್ಲಾಸ್ಟಿಕ್, ಅಸಭ್ಯ ವಿಡಿಯೊ ದೃಶ್ಯಗಳು, ಆನ್‌ಲೈನ್ ಗೇಮ್, ಕ್ರಿಪ್ಟೊಕರೆನ್ಸಿ... ಇಂಥವುಗಳನ್ನು ಮೂಲದಲ್ಲಿಯೇ ನಿರ್ಬಂಧಿಸಿದರೆ ಜನ ನೆಮ್ಮದಿಯಿಂದ ಬದುಕಬಹುದಲ್ಲವೇ?' ಎಂದರು.

ನಾಡಿನ ಶಕ್ತಿಯಾಗಬೇಕಾದ ಎಳೆಯರು ನಡೆಯುವ ಹಾದಿಯಲ್ಲಿ ಬೆಳಕಿರಬೇಕು. ಆದರೆ ಕೆಲವೆಡೆ ಕಿರಾಣಿ ಅಂಗಡಿಗಳಲ್ಲೂ ಲಭ್ಯವಾಗುತ್ತಿರುವ ಮಾದಕವಸ್ತುಗಳು ಪ್ರೌಢಶಾಲಾ ಮಕ್ಕಳನ್ನು ಸಹ ಸೆಳೆಯುತ್ತಿರುವುದು ಪೋಷಕರನ್ನು ಬೆಚ್ಚಿಬೀಳಿಸುತ್ತಿದೆ. ಇದೀಗ ಎಲ್ಲಕ್ಕಿಂತಲೂ ಅಪಾಯಕಾರಿಯಾದ ಆನ್‌ಲೈನ್ ಗೇಮ್‌ಗಳ ಮಾಯೆಗೆ ಹದಿಹರೆಯದವರ ಬದುಕು-ಭವಿಷ್ಯ ಬಲಿಯಾಗುತ್ತಿದೆ. ಈಚಿನ ದಿನಗಳಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ನಡೆದ ಕೆಲವು ಅಧಿಕೃತ, ನೈಜ ಘಟನೆಗಳಿವು:

ಉತ್ತಮ ಶ್ರೇಣಿಯಲ್ಲಿ ಅಂಕ ಗಳಿಸುತ್ತಿದ್ದ ಶಿಸ್ತಿನ ವಿದ್ಯಾರ್ಥಿಯೊಬ್ಬ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾದ. ಇದನ್ನು ಕೇಳಿದವರಿಗೆ ನಂಬಲೇ ಆಗಲಿಲ್ಲ. ಕಳಪೆ ಫಲಿತಾಂಶಕ್ಕಿದ್ದ ಕಾರಣವನ್ನು ಅವನ ತಂದೆ ಬಿಚ್ಚಿಟ್ಟ ಪರಿ, ಅವನ ಬಗ್ಗೆ ಕಾಳಜಿ ವಹಿಸುತ್ತಿದ್ದ ಉಪನ್ಯಾಸಕರಿಗೂ ಅಚ್ಚರಿ ತಂದಿತ್ತು. ಪರೀಕ್ಷೆಯ ಹೊಸ್ತಿಲಲ್ಲಿ ಗೇಮ್ ಆಡುವ ಗೀಳಿಗೆ ಮಗ ಜಾರಿಬಿಟ್ಟಿದ್ದ. ಎರಡು ಗಂಟೆಯ ತಡರಾತ್ರಿಯಲ್ಲೂ ಬೆಡ್‌ಶೀಟ್ ಒಳಗಡೆ ಮೊಬೈಲ್ ಆನ್ ಇರುತ್ತಿತ್ತು! 'ನಿದ್ದೆಗೆಟ್ಟು ಅಸ್ವಸ್ಥನಾಗಿದ್ದ ಮಗನ ಫಲಿತಾಂಶ ನಿರೀಕ್ಷಿತವೇ, ಸದ್ಯ ಅವನುಳಿದರೆ ಅಷ್ಟೇ ಸಾಕು!' ಎಂದರು ತಂದೆ.

ಪದವಿ ಕಾಲೇಜಿನಲ್ಲಿ ಓದುತ್ತಿದ್ದ ಬುದ್ಧಿವಂತ ವಿದ್ಯಾರ್ಥಿಯೊಬ್ಬ ಆನ್‌ಲೈನ್ ಆಟದ ಬೆನ್ನುಬಿದ್ದು ಮೊನ್ನೆ ತುಂಗಾ ನದಿಯಲ್ಲಿ ಶವವಾಗಿ ತೇಲುತ್ತಿದ್ದ. 'ಸಾಲ ತೀರಿಸಲು ಈ ಜನ್ಮ ಸಾಲದೆಂದು ಸಾವಿನ ಮೊರೆ ಹೋಗುತ್ತಿದ್ದೇನೆ' ಎಂದಿತ್ತು ಅವನ ಡೆತ್‌ನೋಟ್! ಆನ್‌ಲೈನ್ ಗೇಮ್‌ಗಾಗಿ ಇದೇ ಕೊನೆಯ ಸಾವಾಗಲಿ ಎಂದು ಹಿರಿಯರು ರೋದಿಸಿದ್ದರು, ಹಾಗಾಗಲಿಲ್ಲ.

ದೊಡ್ಡಮೊತ್ತದ ಡೊನೇಷನ್ ತೆತ್ತು ಡಿಪ್ಲೊಮಾ ಓದಲು ಹೋಗುತ್ತಿದ್ದ ಇನ್ನೊಬ್ಬ ಹಳ್ಳಿಹುಡುಗ ಕೂಡ ಲಕ್ಷಗಟ್ಟಲೆ ಸಾಲ ಮಾಡಿಕೊಂಡು, ಮನೆಗೇ ಬಾರದೆ ಕಣ್ತಪ್ಪಿಸಿ ಅಲೆಯುತ್ತಾ ಹೆತ್ತವರನ್ನು ಕಣ್ಣೀರಿನಲ್ಲಿ ಕೆಡವಿದ್ದಾನೆ. ಮತ್ತೊಬ್ಬ ಯುವಕ ತನ್ನ ಕಾಲೇಜು ದಿನಗಳಲ್ಲಿ ತುಂಬಾ ಜವಾಬ್ದಾರಿಯುತ ವಿದ್ಯಾರ್ಥಿ. ಕಡುಕಷ್ಟವನ್ನು ಗೆದ್ದು ಸಣ್ಣ ಪ್ರಾಯದಲ್ಲೇ ಬ್ಯಾಂಕ್ ಉದ್ಯೋಗ ಪಡೆದು ಯಶಸ್ವಿಯಾಗಿ ಬದುಕು ಕಟ್ಟಿಕೊಂಡಿದ್ದವ. ಆದರೆ ಆನ್‌ಲೈನ್ ಗೇಮ್ ಗೀಳು ಶುರುವಾಗುತ್ತಿದ್ದಂತೆ ಬ್ಯಾಂಕ್‌ನ ಸುಮಾರು ಒಂದು ಕೋಟಿ ರೂಪಾಯಿಯಷ್ಟು ಅವ್ಯವಹಾರದಲ್ಲಿ ಭಾಗಿಯಾಗಿ ಜೈಲು ಸೇರಿದ್ದ, ಜಾಮೀನು ಪಡೆಯುತ್ತಲೇ ಸಾವಿಗೆ ಶರಣಾದ. ಹಾಗೆಯೇ ಸಾತ್ವಿಕ ಕುಟುಂಬಕ್ಕೆ ಸೇರಿದ ಯುವತಿಯೊಬ್ಬಳು ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದವಳು ದೊಡ್ಡಪ್ರಮಾಣದ ಸಾಲದಲ್ಲಿ ಬೀಳುತ್ತಿದ್ದಂತೆ ನೇಣಿಗೆ ಗೋಣೊಡ್ಡಿದಳು. ಹೀಗೊಬ್ಬ ಸಣ್ಣ ಉದ್ದಿಮೆಯಲ್ಲಿ ಯಶಸ್ವಿಯಾಗಿ ನೆಮ್ಮದಿಯಲ್ಲಿ ಮುನ್ನಡೆದಿದ್ದ ಸಂಸಾರಸ್ಥನೂ ಜೀವನಾಧಾರಕ್ಕೆ ಇದ್ದ ಆಸ್ತಿಯನ್ನು ಮಾರಿಕೊಂಡು ಅಪಾರ ಪ್ರಮಾಣದ ಸಾಲಕ್ಕೆ ತುತ್ತಾಗಿ, ಬರಿಗೈ ದಾಸನಾಗಿಬಿಟ್ಟ.

ಈ ಎಲ್ಲಾ ಪ್ರಕರಣಗಳ ಹಿಂದೆಯೂ ಆನ್‌ಲೈನ್ ಗೇಮ್‌ಗಳ ಮಾಯಾಜಾಲ ಎಷ್ಟರಮಟ್ಟಿಗೆ ಪ್ರಭಾವ ಬೀರಿದೆ ಮತ್ತು ಅದು ಎಷ್ಟು ಗಂಭೀರವಾಗಿದೆ ಎಂಬುದು ಅರಿವಾಗುತ್ತದೆ.



ಡಿಜಿಟಲ್ ಕಾಲಘಟ್ಟದಲ್ಲಿ ಹಣಕಾಸು ವ್ಯವಹಾರ ಮಾಡಿದಾಗ ಅಥವಾ ವಸ್ತುಗಳನ್ನು ಆನ್‌ಲೈನ್‌ನಲ್ಲಿ ಖರೀದಿಸಿದಾಗ ಉತ್ತೇಜಕವಾಗಿ ಸಿಗುವ ಗಿಫ್ಟ್ ವೋಚರ್‌ಗಳೆಂದರೆ, ಆನ್‌ಲೈನ್ ಗೇಮ್‌ಗಳ ಉಚಿತ ಆಫರ್ ಕೂಪನ್! ಮಕ್ಕಳು-ಯುವಕರು ದಾರಿ ತಪ್ಪಲು, ಹಣ ಕಳೆದುಕೊಳ್ಳಲು, ಸಂಕಷ್ಟದಲ್ಲಿ ಸಿಲುಕಲು ಇಷ್ಟು ಸಾಕು. ಆನ್‌ಲೈನ್ ಪೋರ್ಟಲ್‌ಗಳಲ್ಲಿ ಆನ್‌ಲೈನ್ ಗೇಮ್ ಜಾಹೀರಾತುಗಳದೇ ಹಾವಳಿ.

ಮೊಬೈಲ್ ಫೋನ್ ಹಿಡಿದ ಯುವಕರನ್ನು ಏಕಾಂತದ ಕತ್ತಲಿಗೆ ತಳ್ಳಿ ರಮ್ಮಿ, ಪಬ್ಜಿ, ಫೋರ್ಟ್‌ನೈಟ್ ಬ್ಯಾಟಲ್, ಮೈನ್‌ಕ್ರಾಫ್ಟ್, ಕಾಲ್ ಆಫ್ ಲೆಜೆಂಡ್ಸ್... ಹೀಗೆ ಸಾಲುಸಾಲು ಗೇಮ್‌ಗಳ ಅಡ್ಡಾದಲ್ಲಿ ದಿನವಿಡೀ ಕೆಡಹುವ ಮೋಸದ ಜಾಲವದು. ಜನಜಾಗೃತಿ ಮೂಡಿಸಬೇಕಾದವರು, ಜನಹಿತ ಕಾಯಬೇಕಾದವರು ಯಾರು? ವಿದ್ಯಾರ್ಥಿಗಳ ನೈತಿಕತೆ ಕುರಿತ ಪ್ರಶ್ನೆಗೆ ಉತ್ತರ ಹುಡುಕಬೇಕಿದೆ. ಪ್ರಜೆಗಳನ್ನು ಮೋಸ, ವಂಚನೆ, ದುರಾಚಾರದಿಂದ ಮುಕ್ತಗೊಳಿಸಿ ಸನ್ನಡತೆಯತ್ತ ನಡೆಸಬೇಕಾದದ್ದು ತಾಯ್ತನದ ಆಡಳಿತದ ಹೊಣೆಗಾರಿಕೆಯೂ ಹೌದು.

ವ್ಯವಸ್ಥೆಯು ತೆರಿಗೆ, ವರಮಾನದ ಆದ್ಯತೆಯಾಚೆಗೂ ಗಮನಹರಿಸಿ, ಮೋಸದ ದಂಧೆಗಳಿಗೆ ಕಡಿವಾಣ ಹಾಕಬೇಕು, ಜನರ ಆರೋಗ್ಯ ಮತ್ತು ನೆಮ್ಮದಿಗೂ ದಾರಿ ತೋರಬೇಕು.

ವಾಚಕರ ವಾಣಿ

ಇವಿಎಂ ವಿರುದ್ಧ ಸಲ್ಲದ ಟೀಕೆ

ಸೋಲು- ಗೆಲುವನ್ನು ಸಮಚಿತ್ತದಿಂದ ಸ್ವೀಕರಿಸುವ ವ್ಯಕ್ತಿಯು ಜನರ ಮನಸ್ಸನ್ನು ಗೆಲ್ಲುತ್ತಾನೆ ಎನ್ನುವ ಮಾತಿದೆ. ಆದರೆ ಇಂತಹ ಸಮಚಿತ್ತವನ್ನು ನಮ್ಮ ರಾಜಕಾರಣಿಗಳು ಹೊಂದಿಲ್ಲ ಎಂಬುದಕ್ಕೆ ಇತ್ತೀಚಿನ ಹರಿಯಾಣ ಮತ್ತು ಜಮ್ಮು- ಕಾಶ್ಮೀರ ವಿಧಾನಸಭಾ ಚುನಾವಣೆಗಳ ಫಲಿತಾಂಶಕ್ಕೆ ಅವರು ಪ್ರತಿಕ್ರಿಯಿಸುತ್ತಿರುವ ರೀತಿಯೇ ಜ್ವಲಂತ ನಿದರ್ಶನ. ಇನ್ನೇನು ಜಯ ತಮ್ಮದೇ ಎಂದು ಬೀಗುತ್ತಿದ್ದ ಕಾಂಗ್ರೆಸ್ ಪಕ್ಷವು ಹರಿಯಾಣದಲ್ಲಿ ಸೋಲು ಕಂಡಿದೆ. ಅದೇ ರೀತಿ, ರಾಜ್ಯದಲ್ಲಿ ತಾವು ತಂದ ಕ್ರಾಂತಿಕಾರಿ ಬದಲಾವಣೆಗಳಿಂದ ಜಮ್ಮು- ಕಾಶ್ಮೀರದಲ್ಲಿ ಗೆಲುವು ತಮ್ಮದೇ ಎಂದು ನಂಬಿದ್ದ ಬಿಜೆಪಿಯು ಬಹುಮತ ಗಳಿಸುವಲ್ಲಿ ವಿಫಲವಾಗಿದೆ. ಇದು ಜನರ ತೀರ್ಮಾನ. ಪ್ರಜಾಪ್ರಭುತ್ವದ ವಿಶೇಷವೇ ಇದು. ಆದರೆ ಕಾಂಗ್ರೆಸ್ ಮಾತ್ರ ಸೋಲನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಇಲ್ಲಿ ಇವಿಎಂನಲ್ಲಿ ಮೋಸವಾಗಿದೆ ಎಂದು ದೂರಿ ಹತಾಶ ಭಾವನೆಯನ್ನು ಹೊರಹಾಕಿದೆ.

ಇವಿಎಂ ಅನ್ನು ದುರ್ಬಳಕೆ ಮಾಡಿಕೊಂಡು ಗೆಲ್ಲಬಹುದು ಎಂದಿದ್ದರೆ ಜಮ್ಮು- ಕಾಶ್ಮೀರದಲ್ಲಿ ಬಿಜೆಪಿ ಸೋಲುವ ಸಂಭವವೇ ಇರುತ್ತಿರಲಿಲ್ಲ. ಅಲ್ಲದೆ ಲೋಕಸಭಾ ಚುನಾವಣೆಯಲ್ಲಿಯೂ ಎನ್‌ಡಿಎ ಮೈತ್ರಿಕೂಟವು 400ಕ್ಕೂ ಹೆಚ್ಚು ಸ್ಥಾನಗಳನ್ನು ಗಳಿಸಿರುತ್ತಿತ್ತು. ಸೋಲಿನ ಹತಾಶೆಯ ಬೇಗೆಯಿಂದ ಇವಿಎಂಗಳಲ್ಲಿ ಸಲ್ಲದ ದೋಷ ಹುಡುಕುವುದು ತರವಲ್ಲ. ಈಗಲೂ ಕಾಲ ಮಿಂಚಿಲ್ಲ. ಕಾಂಗ್ರೆಸ್ ಸೋಲನ್ನು ಒಪ್ಪಿಕೊಂಡು ಆತ್ಮವಿಮರ್ಶೆ ಮಾಡಿಕೊಂಡರೆ, ಈ ಸೋಲೇ ಮುಂದಿನ ಗೆಲುವಿಗೆ ಸೋಪಾನವಾಗಬಲ್ಲದು. ಇಲ್ಲದಿದ್ದರೆ, ಮುಂದೆ ಇರುವುದು ಏಳಲಾರದ ಪ್ರಪಾತ ಮತ್ತು ಏಕಪಕ್ಷದ ಸರ್ವಾಧಿಕಾರದ ಆಡಳಿತ.

ಸತ್ಯಬೋಧ, ಬೆಂಗಳೂರು

ಲಂಚ: ಮಾಹಿತಿ ಮುಚ್ಚಿಡುವುದೂ ಅಪರಾಧ

'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಹಣ ಪಡೆದು ಕಡತಕ್ಕೆ ಸಹಿ ಹಾಕಿದ್ದಾರೆ ಎಂದು ನಾನು ರಾಮನಗರದ ಚಾಮುಂಡೇಶ್ವರಿ ದೇವಸ್ಥಾನದ ಮುಂದೆ ಕರ್ಪೂರ ಹಚ್ಚುತ್ತೇನೆ. ಕುಮಾರಸ್ವಾಮಿ ಅವರ ಪರವಾಗಿ ಯಾರಾದರೂ ಬಂದು, ಅವರು ಹಣ ಪಡೆದಿಲ್ಲ ಎಂದು ದೇವಸ್ಥಾನದಲ್ಲಿ ಆಣೆ ಮಾಡುತ್ತಾರಾ' ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಸವಾಲು ಹಾಕಿರುವುದರ ಜೊತೆಗೆ, ಅದಕ್ಕೆ ಪೂರಕವಾದ ದಾಖಲೆಗಳನ್ನು ನೀಡಲೂ ತಯಾರಿರುವುದಾಗಿ ಹೇಳಿದ್ದಾರೆ. ಲಂಚ ಪಡೆದದ್ದಕ್ಕೆ ಶಾಸಕರ ಬಳಿ ದಾಖಲೆಗಳಿದ್ದರೆ ಇಷ್ಟು ವರ್ಷ ಏಕೆ ಸುಮ್ಮನಿದ್ದರು? ಒಬ್ಬ ಜನಪ್ರತಿನಿಧಿಯಾಗಿ ಲಂಚದ ವಿಷಯ ಗಮನಕ್ಕೆ ಬಂದಿದ್ದರೆ ಕೂಡಲೇ ಪೊಲೀಸರಿಗೋ ಲೋಕಾಯುಕ್ತಕ್ಕೋ ಅಥವಾ ನ್ಯಾಯಾಲಯಕ್ಕೋ ದೂರು ನೀಡಬೇಕಿತ್ತು. ಇಂತಹ ವಿಷಯವನ್ನು ಮುಚ್ಚಿಡುವುದೂ ಅಪರಾಧ ಅಲ್ಲವೇ?

ಈಗಲೂ ದಾಖಲೆಗಳು ಇದ್ದರೆ ದೂರು ನೀಡಿ, ಕುಮಾರಸ್ವಾಮಿ ಅವರ ವಿರುದ್ಧ ಕ್ರಮ ಜರುಗಿಸಲು ಮುಂದಾಗಲಿ ಅಥವಾ ದಾಖಲೆಗಳಿಲ್ಲದೆ ವೃಥಾ ಅಪವಾದ ಹೊರಿಸುತ್ತಿದ್ದರೆ, ಕುಮಾರಸ್ವಾಮಿಯವರೇ ಬಾಲಕೃಷ್ಣ ಅವರ ವಿರುದ್ಧ ದೂರು ನೀಡಲಿ. ದೇವರ ಮೇಲೆ ಮಾಡುವ ಆಣೆ, ಪ್ರಮಾಣಕ್ಕೆ ಕವಡೆ ಕಾಸಿನ ಕಿಮ್ಮತ್ತೂ ಇಲ್ಲದ ಸ್ಥಿತಿ ಇರುವ ಕಾಲ ಇದು. ಯಾರೂ ದೂರು ನೀಡದೆ ಬರೀ ಹೇಳಿಕೆಗಳಲ್ಲೇ ಕಾಲ ಕಳೆದರೆ 'ನಾನು ಹೊಡೆದಂತೆ ಮಾಡ್ತೀನಿ, ನೀನು ಅತ್ತಂತೆ ಮಾಡು' ಎಂದು ಇಬ್ಬರೂ ನಾಟಕ ಆಡಿದಂತೆ ಅನ್ನಿಸುತ್ತದೆ ಅಷ್ಟೆ. ಜೊತೆಗೆ ಇಬ್ಬರ ಮೇಲೂ ಜನ ಅನುಮಾನ ಪಡುವಂತೆ ಆಗುತ್ತದೆ. ಯಾರೊಬ್ಬರೂ ದೂರು ನೀಡದೇ ಇದ್ದಾಗ ಸಂಬಂಧಪಟ್ಟವರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ಕ್ರಮಕ್ಕೆ ಮುಂದಾಗಬೇಕು. ಆಗ ಇಂತಹ ನಾಲಿಗೆಚಪಲ ವೀರರಿಗೆ ಕಡಿವಾಣ ಬೀಳುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಇಲ್ಲೂ ತಪ್ಪಲಿ ಮಾಲಿನ್ಯದ ಉಪಟಳ

ದೆಹಲಿಯಲ್ಲಿ ಬರುವ ಜನವರಿವರೆಗೆ ಪಟಾಕಿ ಬಳಕೆ ಮೇಲೆ ಅಲ್ಲಿನ ಸರ್ಕಾರ ನಿಷೇಧ ಹೇರಿರುವುದು (ಪ್ರ.ವಾ., ಅ. 15) ಸರಿಯಾಗಿದೆ. ಇಂತಹ ಜನೋಪಯೋಗಿ ಕ್ರಮಗಳಿಗೆ ಸರ್ಕಾರಗಳು ಆದ್ಯತೆ ನೀಡಬೇಕು. ಕರ್ನಾಟಕದಲ್ಲೂ ಇಂತಹ ಕ್ರಮ ಜರುಗಿಸಿದರೆ ಜನಸಮೂಹಕ್ಕೆ ಹಾಗೂ ಪಕ್ಷಿ- ಪ್ರಾಣಿಗಳಿಗೆ ಶಬ್ದಮಾಲಿನ್ಯ, ವಾಯುಮಾಲಿನ್ಯದಿಂದ ಉಂಟಾಗುವ ಉಪದ್ರವದಿಂದ ಮುಕ್ತಿ ಸಿಗುತ್ತದೆ. ಕೆಲವೇ ಮಂದಿಯ ಒಳಿತಿಗಾಗಿ ಇಡೀ ರಾಜ್ಯದ ಜನರು ಮಾಲಿನ್ಯದ ಪರಿಣಾಮ ಎದುರಿಸುವಂತೆ ಮಾಡುವುದು ಧರ್ಮವಲ್ಲ. ಪಟಾಕಿ ತಯಾರಿಸುವವರ ಕಾಯಕವನ್ನು ದೃಷ್ಟಿಯಲ್ಲಿಟ್ಟು ಈ ಕಾರ್ಯ ನಿರ್ವಹಿಸದೇ ಇರುವುದು ಸಹ ಸರಿಯಲ್ಲ. ಅವರು ಪರ್ಯಾಯ ಕೆಲಸಕ್ಕೆ ಮುಂದಾಗಲು ನೆರವು ನೀಡುವುದು ಒಳ್ಳೆಯದು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ದಸರಾ ರಜೆ ಮೊಟಕುಗೊಳಿಸಿದ್ದು ಎಷ್ಟು ಸರಿ?

ರಾಜ್ಯ ಸರ್ಕಾರ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಇದೇ 3ರಿಂದ 20ರವರೆಗೆ ದಸರಾ ರಜೆಯನ್ನು ನೀಡಿ ಆದೇಶಿಸಿದೆ. ಆದರೆ ಕೆಲವು ಖಾಸಗಿ ಶಾಲೆಗಳು ಸರ್ಕಾರದ ನಿಯಮವನ್ನು ಗಾಳಿಗೆ ತೂರಿ, 18 ದಿನಗಳ ರಜೆಯನ್ನು ಕಡಿತಗೊಳಿಸಿ, ಏಳೆಂಟು ದಿನಗಳಷ್ಟೇ ರಜೆ ನೀಡಿ ಈಗಾಗಲೇ ಶಾಲೆಗಳನ್ನು ಪುನಃ ಆರಂಭಿಸಿವೆ. ಕ್ರೈಸ್ತ ಸಮುದಾಯಕ್ಕೆ ಸೇರಿದ ಶಾಲೆಗಳು ದಸರಾ ರಜೆಯನ್ನು ಕಡಿತಗೊಳಿಸಿ, ಬಾಕಿ ಉಳಿದ ರಜೆಯನ್ನು ಕ್ರಿಸ್ಮಸ್ ಹಬ್ಬದ ಸಮಯದಲ್ಲಿ ಸರಿದೂಗಿಸಲು ಅವಕಾಶ ಇದೆ. ಉಳಿದ ಶಾಲೆಗಳು ದಸರಾ ರಜೆ ನಿಯಮ ಪಾಲಿಸಲು ಸೂಚಿಸಲಾಗಿದೆ. ಆದರೆ ಇಂತಹ ಶಾಲೆಗಳು ಕೂಡ ಮನಸೋ ಇಚ್ಛೆ ದಸರಾ ರಜೆ ನೀಡಿವೆ.

ಶಾಲೆ ಇದ್ದಾಗ ಪಠ್ಯ ವಿಷಯಕ್ಕೆ ಸಂಬಂಧಪಟ್ಟಂತೆ ಮಕ್ಕಳ ನಿರಂತರ ಕಲಿಕೆ ಇದ್ದೇ ಇರುತ್ತದೆ. ಆದರೆ ದಸರಾ ರಜೆಯ ಮಜವನ್ನು ಮಕ್ಕಳು ಅರ್ಥಪೂರ್ಣವಾಗಿ ಆಚರಿಸದೇ ಇದ್ದರೆ ಹೇಗೆ? ಒತ್ತಡರಹಿತವಾಗಿ ರಜೆಯ ಮಜವನ್ನು ಅನುಭವಿಸಿದರೆ ಮಕ್ಕಳ ಚಿಂತನಾಲಹರಿ ಬದಲಾಗಿ ಅವರ ಜ್ಞಾನ ವಿಸ್ತಾರವಾಗುತ್ತದೆ. ಸ್ನೇಹ, ಬಾಂಧವ್ಯ ಹೆಚ್ಚಾಗಿ ಏಕಾಂಗಿತನ ದೂರವಾಗುತ್ತದೆ. ಇಷ್ಟೇ ಅಲ್ಲದೆ ಕೂಡು ಕುಟುಂಬದ ಜೊತೆ ಸಂಬಂಧಿಕರ ಊರುಗಳಿಗೆ ಮಕ್ಕಳು ಭೇಟಿ ನೀಡುವುದರ ಪರಿಣಾಮವಾಗಿ ವಿವಿಧ ಸ್ಥಳಗಳ ಪರಿಚಯ, ವಿವಿಧ ಕುಟುಂಬಗಳ ಆರ್ಥಿಕ ಸ್ಥಿತಿಗತಿ ಮತ್ತು ಬದುಕಿನ ವೃತ್ತಿಗಳ ಅರಿವು ಸಿಕ್ಕಂತಾಗುತ್ತದೆ. ಮಕ್ಕಳ ಮನಸ್ಸನ್ನು ಪ್ರಫುಲ್ಲಗೊಳಿಸಲು ನೆರವಾಗುತ್ತದೆ. ಆದರೆ ಇವೆಲ್ಲವುಗಳಿಂದ ಮಕ್ಕಳನ್ನು ವಂಚಿತರನ್ನಾಗಿ ಮಾಡಿರುವ ಶಾಲೆಗಳ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಒಂದು ಹತ್ಯೆ ಪ್ರಕರಣ ಭಾರತ– ಕೆನಡಾ ನಡುವಿನ ಕಲಹಕ್ಕೆ ಕಾರಣವಾಗಿದೆ. ಯಾವ ಮಟ್ಟಿಗೆ ಎಂದರೆ, ಎರಡೂ ದೇಶಗಳು ಪರಸ್ಪರ ರಾಜತಾಂತ್ರಿಕರಿಗೆ ದೇಶ ತೊರೆಯುವಂತೆ ಸೂಚನೆ ನೀಡಿವೆ. ಹತ್ಯೆಗೊಳಗಾದ ಹರ್ದೀಪ್ ಸಿಂಗ್ ನಿಜ್ಜರ್ ಭಾರತದ ಪ್ರಕಾರ ಭಯೋತ್ಪಾದಕ; ಆದರೆ, ಅದನ್ನು ಒಪ್ಪಲು ಕೆನಡಾ ಸಿದ್ಧವಿಲ್ಲ. ಅದಕ್ಕೆ ಕಾರಣಗಳು ಹಲವು. ಮುಖ್ಯವಾದುದು, ಕೆನಡಾದಲ್ಲಿ ಸಿಖ್ಖರು ನಿರ್ಣಾಯಕ ರಾಜಕೀಯ ಶಕ್ತಿ ಎನ್ನುವುದು. ಆಡಳಿತ ವಿರೋಧಿ ಅಲೆ ಎದುರಿಸುತ್ತಿರುವ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರಿಗೆ ಮುಂದಿನ ಚುನಾವಣೆಯಲ್ಲಿ ಸಿಖ್ಖರ ಬೆಂಬಲ ಬೇಕು. ಭಾರತ–ಕೆನಡಾದ ಸಂಬಂಧ ಹಿಂದೆಂದೂ ಇಲ್ಲದ ರೀತಿಯಲ್ಲಿ ಬಿಗಡಾಯಿಸಲು ಇದೇ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ



ಖಾಲಿಸ್ತಾನಿ ಪ್ರತ್ಯೇಕತಾವಾದಿ ನಿಜ್ಜರ್ ಕೊಲೆ; ಬಿಗಡಾಯಿಸಿದ ಭಾರತ–ಕೆನಡಾ ಸಂಬಂಧ



ಒಂದು ಹತ್ಯೆ ಎರಡು ದೇಶಗಳ ಕಲಹ

ಭಾರತೀಯರ ಶಿಕ್ಷಣ, ಉದ್ಯೋಗಕ್ಕೆ ಕತ್ತರಿ?

ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಾದ ಭಾರತ ಮತ್ತು ಕೆನಡಾಗಳು ಸಾಂಸ್ಕೃತಿಕವಾಗಿ ಉತ್ತಮ ಬಾಂಧವ್ಯವನ್ನು ಈವರೆಗೂ ಹೊಂದಿವೆ. ಹೊರದೇಶಗಳ ಪೈಕಿ ಅತಿ ಹೆಚ್ಚಿನ ಸಂಖ್ಯೆಯ ಭಾರತೀಯರು ನೆಲಸಿರುವುದು ಕೆನಡಾದಲ್ಲಿ. ಕೇಂದ್ರ ಸರ್ಕಾರದ ಅಂಕಿಅಂಶಗಳ ಪ್ರಕಾರ, 18 ಲಕ್ಷ ಭಾರತೀಯರು ಅಲ್ಲಿದ್ದಾರೆ. ಈ ಪೈಕಿ ಸಿಖ್ ಸಮುದಾಯದವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅಮೆರಿಕದಲ್ಲಿ ಹೋಗಿ ಕೆಲಸ ಮಾಡುವ, ನೆಲಸುವ ಆಕಾಂಕ್ಷೆಯುಳ್ಳ ಭಾರತೀಯ ವೃತ್ತಿಪರರಿಗೆ, ಅಲ್ಲಿಗೆ ಹೋಗಲು ಅವಕಾಶ ಸಿಗದಿದ್ದರೆ, ಅವರ ನಂತರದ ಆಯ್ಕೆ ಕೆನಡಾ. ಉನ್ನತ ಶಿಕ್ಷಣಕ್ಕಾಗಿ ಕೆನಡಾಕ್ಕೆ ತೆರಳಿರುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ದೊಡ್ಡದಿದೆ. ವಿದೇಶಿ ವಿದ್ಯಾರ್ಥಿಗಳ ಸಂಖ್ಯೆಗೆ ಕಡಿವಾಣ ಹಾಕುವ ಉದ್ದೇಶದಿಂದ ವೀಸಾ ನಿಯಮವನ್ನು ಬಿಗಿಗೊಳಿಸಿದ ನಂತರ ಮತ್ತು ಕಳೆದ ವರ್ಷ ರಾಜತಾಂತ್ರಿಕ ಬಿಕ್ಕಟ್ಟು ಉಂಟಾದ ಬಳಿಕ ಅಲ್ಲಿಗೆ ಶಿಕ್ಷಣಕ್ಕಾಗಿ ತೆರಳುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಮುಂದೆ ಏನಾಗಲಿದೆ ಎನ್ನುವ ಆತಂಕವೂ ಕೆಲವರಲ್ಲಿದೆ.

18 ಲಕ್ಷ	10 ಲಕ್ಷ	7.70 ಲಕ್ಷ	5%	2%	₹33,112 ಕೋಟಿ	600	1,000ಕ್ಕೂ ಹೆಚ್ಚು
ಕೆನಡಾದಲ್ಲಿ ನೆಲಸಿರುವ ಭಾರತೀಯರು	ಕೆನಡಾದಲ್ಲಿರುವ ಅನಿವಾಸಿ ಭಾರತೀಯರು (ಎನ್‌ಆರ್‌ಐ)	ಕೆನಡಾದಲ್ಲಿರುವ ಸಿಖ್ ಸಮುದಾಯದವರ ಸಂಖ್ಯೆ	ಒಟ್ಟು ಜನಸಂಖ್ಯೆಯಲ್ಲಿ ಭಾರತೀಯರ ಪಾಲು	ಒಟ್ಟು ಜನಸಂಖ್ಯೆಯಲ್ಲಿ ಸಿಖ್ ಸಮುದಾಯದ ಪಾಲು	2000 ಏಪ್ರಿಲ್‌ನಿಂದ 2024ರ ಜೂನ್ ಅವಧಿಯಲ್ಲಿ ಕೆನಡಾದಿಂದ ಭಾರತಕ್ಕೆ ಬಂದ ಎಫ್‌ಡಿಐ ಮೊತ್ತ	ಭಾರತದಲ್ಲಿ ಕಾರ್ಯಾಚರಿಸುತ್ತಿರುವ ಕೆನಡಾ ಕಂಪನಿಗಳು	ಭಾರತದ ಮಾರುಕಟ್ಟೆಯಲ್ಲಿ ವಹಿವಾಟು ನಡೆಸುತ್ತಿರುವ ಕೆನಡಾದ ಉದ್ದಿಮೆಗಳು

ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣ ಹಲವು ತಿರುವುಗಳನ್ನು ಪಡೆಯುತ್ತಿದೆ. ಹತ್ಯೆ ಸಂಬಂಧ ಭಾರತದ ಹೈಕಮಿಷನರ್ ಅವರನ್ನು ವಿಚಾರಣೆಗೆ ಒಳಪಡಿಸುವುದಾಗಿ ಕೆನಡಾ ಹೇಳಿದ ನಂತರ ಉಭಯ ದೇಶಗಳ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ತೀವ್ರಗೊಂಡಿದೆ. ಅಲ್ಲಿನ ತನ್ನ ಹೈಕಮಿಷನರ್ ಅನ್ನು ವಾಪಸ್ ಕರೆಸಿಕೊಳ್ಳುವುದಾಗಿ ಭಾರತ ಘೋಷಿಸಿದ ಬೆನ್ನಲ್ಲೇ ಭಾರತದ ಹೈಕಮಿಷನರ್ ಸೇರಿದಂತೆ ಆರು ಮಂದಿ ರಾಜತಾಂತ್ರಿಕರಿಗೆ ಕೆನಡಾ ದೇಶ ಬಿಟ್ಟು ಹೋಗುವಂತೆ ಸೂಚಿಸಿದೆ. ಅದಕ್ಕೆ ಪ್ರತಿಯಾಗಿ ಕೆನಡಾದ ಆರು ಮಂದಿ ರಾಜತಾಂತ್ರಿಕರಿಗೆ ಭಾರತ ಕೂಡ ದೇಶ ತೊರೆಯುವಂತೆ ಹೇಳಿದೆ. ಎರಡು ದೇಶಗಳ ನಡುವಿನ ಸಂಬಂಧ ಬಿಗಡಾಯಿಸುವ ಹಂತಕ್ಕೆ ಹೋಗುತ್ತಿದೆ. ಮುಂದೇನು ಎನ್ನುವ ಆತಂಕಕ್ಕೂ ಇದು ಕಾರಣವಾಗಿದೆ.

1974ರಲ್ಲಿಯೂ ಇಂಥದೇ ಪರಿಸ್ಥಿತಿ ಉದ್ಭವಿಸಿತ್ತು. ಭಾರತ ರಾಜಸ್ಥಾನದ ಪೋಖ್ರಾನ್‌ನಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಸಿ ಜಾಗತಿಕ ಮಟ್ಟದಲ್ಲಿ ಭಾರಿ ಸುದ್ದಿ ಮಾಡಿತ್ತು. ತಾನು ಶಾಂತಿಯ ಉದ್ದೇಶಕ್ಕಾಗಿ ಉಡುಗೊರೆಯಾಗಿ ನೀಡಿದ್ದ ಕೆನಡಿಯನ್ ರಿಯಾಕ್ಟರ್‌ನಿಂದ ಪ್ಲುಟೋನಿಯಂ ಅನ್ನು ಭಾರತವು ಅಣ್ವಸ್ತ್ರಕ್ಕೆ ಬಳಸಿಕೊಂಡಿದೆ ಎಂದು ಕೆನಡಾ ಅಸಮಾಧಾನ ವ್ಯಕ್ತಪಡಿಸಿತ್ತು. ಭಾರತದ ಪರಮಾಣು ಕಾರ್ಯಕ್ರಮವನ್ನು ತಾನು ಬೆಂಬಲಿಸುವುದಿಲ್ಲ ಎಂದು ಘೋಷಿಸಿತ್ತು. 1998ರಲ್ಲಿಯೂ ಭಾರತ ಅಣ್ವಸ್ತ್ರ ಪರೀಕ್ಷೆ ಮಾಡಿದಾಗ ಕೆನಡಾ ಆಕ್ಷೇಪಿಸಿತ್ತು. ಇನ್ನೊಮ್ಮೆ, 2005ರಲ್ಲಿ, ಏರ್ ಇಂಡಿಯಾದಲ್ಲಿ ಬಾಂಬ್ ಇಟ್ಟಿದ್ದ ಆರೋಪಕ್ಕೆ ಒಳಗಾಗಿದ್ದ ಕೆನಡಾದ ಇಬ್ಬರು ಸಿಖ್ಖರನ್ನು ಅಲ್ಲಿನ ನ್ಯಾಯಾಲಯ ಖುಲಾಸೆಗೊಳಿಸಿದಾಗ ಭಾರತ ತನ್ನ ಅಸಮಾಧಾನ ವ್ಯಕ್ತಪಡಿಸಿತ್ತು.

ಮೂರೂ ಸಂದರ್ಭಗಳಲ್ಲಿ ಎರಡು ರಾಷ್ಟ್ರಗಳ ನಡುವೆ ಒಂದಿಷ್ಟು ಅಸಮಾಧಾನದ ವಾತಾವರಣ ಮೂಡಿತ್ತು, ನಿಜ. ಆದರೆ, ಯಾವ ಸಂದರ್ಭದಲ್ಲಿಯೂ ಉಭಯ ರಾಷ್ಟ್ರಗಳು ತಮ್ಮ ರಾಜತಾಂತ್ರಿಕರನ್ನು ವಾಪಸ್ ಕರೆಸಿಕೊಂಡಿರಲಿಲ್ಲ ಎನ್ನುವುದು ಗಮನಾರ್ಹ. ಈಗ, ಎರಡೂ ದೇಶಗಳ ಮುಖಂಡರು ನೇರಾನೇರ ಆಪಾದನೆಗಳನ್ನು ಮಾಡುತ್ತಿದ್ದು, ಹಿಂದೆಂದೂ ಇಲ್ಲದ ರೀತಿಯಲ್ಲಿ ರಾಜತಾಂತ್ರಿಕ ಸಂಬಂಧ ಹದಗೆಟ್ಟಿದೆ.

ಹರ್ದೀಪ್ ಸಿಂಗ್ ನಿಜ್ಜರ್ ಭಾರತದ ಮಟ್ಟಿಗೆ ಒಬ್ಬ ಭಯೋತ್ಪಾದಕ. ನಿಜ್ಜರ್ ಹುಟ್ಟಿದ್ದು ಭಾರತದಲ್ಲಿಯೇ ಆದರೂ 1997ರಲ್ಲಿ– ತನ್ನ 20ನೇ ವಯಸ್ಸಿನಲ್ಲಿ ಕೆನಡಾಗೆ ಹೋಗಿ ನೆಲಸಿದ್ದ. ಪ್ಲಂಬಿಂಗ್ ವ್ಯಾಪಾರ ಮಾಡುತ್ತಿದ್ದ ಈತ 2015ರಲ್ಲಿ ಕೆನಡಾದ ಪೌರತ್ವ ಪಡೆದಿದ್ದ. ಭಾರತವನ್ನು 80 ಮತ್ತು 90ರ ದಶಕದಲ್ಲಿ ತೀವ್ರವಾಗಿ ಕಾಡಿದ್ದ ಪ್ರತ್ಯೇಕ ಖಾಲಿಸ್ತಾನಿ ಹೋರಾಟವನ್ನು ಮುಂದುವರಿಸುವ ಬಗ್ಗೆ ಕೆನಡಾದಲ್ಲಿ ಪ್ರಯತ್ನ ನಡೆಸುತ್ತಿದ್ದ ಈತ, ಅಲ್ಲಿ ಸಿಖ್ ಗುರುದ್ವಾರವೊಂದರ ಅಧ್ಯಕ್ಷನಾಗಿದ್ದ. ಅಲ್ಲಿನ ಸಿಖ್ ಸಮುದಾಯದಲ್ಲಿ ಖಾಲಿಸ್ತಾನಿ ಹೋರಾಟದ ಬಗ್ಗೆ ಪ್ರಚಾರ ಮಾಡುತ್ತಾ, ಅದರ ಬಗ್ಗೆ ಸಿಖ್ಖರ ಸಹಾನುಭೂತಿ ಗಿಟ್ಟಿಸುತ್ತಿದ್ದ; ಅಲ್ಲಿದ್ದುಕೊಂಡೇ ಭಾರತದಲ್ಲಿ ಹಲವು ಭಯೋತ್ಪಾದನಾ ಕೃತ್ಯಗಳಿಗೆ, ಹಲವರ ಸಾವಿಗೆ ಕಾರಣಕರ್ತನಾಗಿದ್ದ ಎನ್ನುವುದು ಭಾರತದ ಆರೋಪ.


ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ 2018ರಲ್ಲಿ ಪಂಜಾಬ್‌ಗೆ ಭೇಟಿ ನೀಡಿದ್ದರು. ಕೆನಡಾದಲ್ಲಿರುವ ನಿಜ್ಜರ್ ಸೇರಿದಂತೆ ಎಂಟು ಮಂದಿ ಪ್ರತ್ಯೇಕತಾವಾದಿ ನಾಯಕರ ವಿರುದ್ಧ ಕ್ರಮ ಜರುಗಿಸುವಂತೆ ಆಗಿನ ಪಂಜಾಬ್ ಮುಖ್ಯಮಂತ್ರಿಯು ಅವರನ್ನು ಒತ್ತಾಯಿಸಿದ್ದರು. ಅವರೆಲ್ಲ ಖಾಲಿಸ್ತಾನ ಪ್ರತ್ಯೇಕ ರಾಷ್ಟ್ರದ ಹೆಸರಿನಲ್ಲಿ ಪಂಜಾಬ್‌ನಲ್ಲಿ ಅಶಾಂತಿ ಮತ್ತು ದಂಗೆಗೆ ಕಾರಣರಾಗುತ್ತಿದ್ದಾರೆ ಎನ್ನುವುದು ಅವರ ಆರೋಪವಾಗಿತ್ತು. ನಿಜ್ಜರ್‌ನನ್ನು ಒಬ್ಬ 'ಭಯೋತ್ಪಾದಕ' ಎಂದು ಕರೆದಿದ್ದ ಭಾರತವು, ಆತನ ಸುಳಿವು ನೀಡಿದವರಿಗೆ ₹10 ಲಕ್ಷ ಬಹುಮಾನ ಘೋಷಿಸಿತ್ತು.

ಇದರ ನಡುವೆ, 45 ವರ್ಷದ ನಿಜ್ಜರ್‌ನನ್ನು 2023ರ ಜೂನ್ 18ರಂದು ವ್ಯಾಂಕೂವರ್‌ನ ಗುರುದ್ವಾರದ ಎದುರು ಮುಸುಕುಧಾರಿಗಳು ಗುಂಡಿಟ್ಟು ಕೊಂದಿದ್ದರು. ಅದನ್ನು ಭಾರತದ ಏಜೆಂಟರೇ ಮಾಡಿದ್ದು, ಅದಕ್ಕೆ ಭಾರತ ಸರ್ಕಾರ ಬೆಂಬಲ ನೀಡಿದೆ ಎಂದು ಟ್ರುಡೊ ಹಿಂದಿನಿಂದಲೂ ಪ್ರತಿಪಾದನೆ ಮಾಡುತ್ತಿದ್ದಾರೆ. ಖಾಲಿಸ್ತಾನಿ ಪ್ರತ್ಯೇಕತಾವಾದಿ ಹೋರಾಟಗಾರರಿಗೆ ಕೆನಡಾ ನೆಲೆಯಾಗಿದೆ ಎನ್ನುವುದು ಭಾರತದ ಆರೋಪವಾಗಿತ್ತು. ಈಗಿನ ಬೆಳವಣಿಗೆಗಳು ಅದರ ಮುಂದುವರಿದ ಭಾಗವಾಗಿವೆ.

ನಿಜ್ಜರ್ ಹತ್ಯೆ ಪ್ರಕರಣವನ್ನು ಕೆನಡಾ ಗಂಭೀರವಾಗಿ ಪರಿಗಣಿಸುವುದಕ್ಕೆ ಕಾರಣ, ಅಲ್ಲಿರುವ ಸಿಖ್ಖರ ಜನಸಂಖ್ಯೆ. ಭಾರತದ ಪಂಜಾಬ್ ಬಿಟ್ಟರೆ ಅತಿ ಹೆಚ್ಚು ಮಂದಿ ಸಿಖ್ಖರು ಇರುವುದು (7.7 ಲಕ್ಷ) ಕೆನಡಾದಲ್ಲಿಯೇ. ಅಲ್ಲಿನ ರಾಜಕೀಯದಲ್ಲಿ ಗಮನಾರ್ಹ ಪ್ರಭಾವ ಹೊಂದಿರುವ ಸಿಖ್ಖರು, ಹೌಸ್ ಆಫ್ ಕಾಮನ್ಸ್‌ನಲ್ಲಿ 18 ಸ್ಥಾನ ಪಡೆದಿದ್ದಾರೆ. ದೇಶದ ಜನಸಂಖ್ಯೆಯಲ್ಲಿ ಶೇ 2ರಷ್ಟಿದ್ದರೂ, ಹೌಸ್ ಆಫ್ ಕಾಮನ್ಸ್‌ನಲ್ಲಿ ಶೇ 4ರಷ್ಟು ಪ್ರತಿನಿಧಿಗಳನ್ನು ಹೊಂದಿದ್ದಾರೆ. ಸಿಖ್ಖರು ಪ್ರತಿನಿಧಿಸುವ ಕ್ಷೇತ್ರಗಳು ಪ್ರಮುಖ ಕ್ಷೇತ್ರಗಳಾಗಿದ್ದು, ರಾಜಕೀಯದಲ್ಲಿ ವಿಶೇಷ ಮಹತ್ವ ಪಡೆದಿವೆ. ಹಾಗಾಗಿಯೇ ಸಿಖ್ಖರನ್ನು ಓಲೈಸಲು ಕೆನಡಾದ ರಾಜಕಾರಣಿಗಳು– ವಿಶೇಷವಾಗಿ, ಆಳುವ ಸರ್ಕಾರ– ಸದಾ ಮುಂದಿರುತ್ತದೆ ಎನ್ನುವುದು ವಿಶ್ಲೇಷಕರ ಅಭಿಪ್ರಾಯ.

2020ರಲ್ಲಿ ದೆಹಲಿಯ ಸಿಂಘು ಗಡಿಯಲ್ಲಿ ಪಂಜಾಬ್ ರೈತರು ನಡೆಸುತ್ತಿದ್ದ ಪ್ರತಿಭಟನೆಯನ್ನು ಟ್ರುಡೊ ಬೆಂಬಲಿಸಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರ ಸಂಪುಟಕ್ಕಿಂತಲೂ ಹೆಚ್ಚು ಸಿಖ್ ಸಮುದಾಯದ ಸಚಿವರು (ನಾಲ್ಕು ಮಂದಿ) ನನ್ನ ಸಂಪುಟದಲ್ಲಿದ್ದಾರೆ ಎಂದು ಹಿಂದೊಮ್ಮೆ ಹೇಳಿದ್ದರು. ಅಲ್ಲಿ ಮುಂದಿನ ವರ್ಷ ಸಂಸತ್ ಚುನಾವಣೆ ನಡೆಯಲಿದೆ. ಟ್ರುಡೊ ಆಡಳಿತ ವಿರೋಧಿ ಅಲೆ ಎದುರಿಸುತ್ತಿದ್ದು, ಅವರ ಪುನರಾಯ್ಕೆಯ ಸಾಧ್ಯತೆ ಶೇ 28 ಮಾತ್ರ ಎಂದು ಸಮೀಕ್ಷೆಗಳು ಹೇಳಿವೆ. ಹೀಗಾಗಿ ಅವರಿಗೆ ಸಿಖ್ ಸಮುದಾಯದ ಬೆಂಬಲ ಪಡೆಯುವುದು ಮುಖ್ಯವಾಗಿದೆ. ಟ್ರುಡೊ ಅವರು ನಿಜ್ಜರ್ ಹತ್ಯೆಯ ವಿಚಾರಕ್ಕೆ ಅಗತ್ಯಕ್ಕಿಂತ ಹೆಚ್ಚು ಒತ್ತು ನೀಡುತ್ತಿದ್ದಾರೆ; ಇದರ ಹಿಂದೆ ಮತಬ್ಯಾಂಕ್ ರಾಜಕೀಯ ಇದೆ ಎಂದು ಭಾರತ ಸರ್ಕಾರ ಹೇಳಿರುವುದು ಇದೇ ಅರ್ಥದಲ್ಲಿ.

ಭಾರತ - ಕೆನಡಾ ದ್ವಿಪಕ್ಷೀಯ ವ್ಯಾಪಾರ



* ಜನವರಿಯಿಂದ ಏಪ್ರಿಲ್‌ವರೆಗೆ

ವ್ಯಾಪಾರಕ್ಕೆ ಧಕ್ಕೆಯಾಗುವ ಆತಂಕ


2023ರ ಸೆಪ್ಟೆಂಬರ್‌ನಿಂದಲೇ ಉಭಯ ರಾಷ್ಟ್ರಗಳ ನಡುವಿನ ಸಂಬಂಧ ಹಳಸಿದ್ದರೂ, ಎರಡೂ ರಾಷ್ಟ್ರಗಳ ನಡುವಿನ ಆರ್ಥಿಕ ಸಂಬಂಧಕ್ಕೆ ಧಕ್ಕೆಯಾಗಿರಲಿಲ್ಲ. ಆದರೆ, ಈಗಿನ ಬೆಳವಣಿಗೆಗಳು ಈ ಸಂಬಂಧದ ಮೇಲೂ ಕರಿಛಾಯೆ ಆವರಿಸುವಂತೆ ಮಾಡಿವೆ.

ಭಾರತದಲ್ಲಿ ಬಂಡವಾಳ ಹೂಡುತ್ತಿರುವ ರಾಷ್ಟ್ರಗಳಲ್ಲಿ ಕೆನಡಾ 17ನೇ ದೊಡ್ಡ ದೇಶ. ಕಳೆದ ವರ್ಷ ಉಭಯ ದೇಶಗಳ ನಡುವಿನ ಸೇವೆಗಳ ವಹಿವಾಟು ಮೌಲ್ಯ ₹83,956 ಕೋಟಿ ಆಗಿತ್ತು. ಭಾರತವು ₹20,926 ಕೋಟಿ ಮೌಲ್ಯದ ಸೇವೆಗಳನ್ನು ರಫ್ತು ಮಾಡಿದ್ದರೆ, ₹63,030 ಕೋಟಿ ಮೌಲ್ಯದ ಸೇವೆಗಳನ್ನು ಆಮದು ಮಾಡಿಕೊಂಡಿತ್ತು.

ಭಾರತವು ಔಷಧ ಉತ್ಪನ್ನಗಳು, ಎಲೆಕ್ಟ್ರಾನಿಕ್ ಸರಕುಗಳು, ಆಭರಣ, ಹರಳುಗಳು, ಬೆಲೆಬಾಳುವ ಶಿಲೆಗಳು, ಸಮುದ್ರ ಆಹಾರ ಉತ್ಪನ್ನ (ಸಿಗಡಿ), ಎಂಜಿನಿಯರಿಂಗ್ ಸರಕುಗಳು ಮತ್ತು ವಾಹನಗಳ ಬಿಡಿಭಾಗಗಳನ್ನು ರಫ್ತು ಮಾಡಿದರೆ, ಖನಿಜಗಳು, ದ್ವಿದಳ ಧಾನ್ಯಗಳು, ಪೊಟ್ಯಾಷ್, ನ್ಯೂಸ್‌ಪ್ರಿಂಟ್, ಕಬ್ಬಿಣ ಮತ್ತು ಅಲ್ಯೂಮಿನಿಯಂ ಚೂರುಗಳು, ಕೈಗಾರಿಕಾ ರಾಸಾಯನಿಕಳು ಮತ್ತು ಬೆಲೆಬಾಳುವ ರತ್ನಗಳನ್ನು ಆಮದು ಮಾಡಿಕೊಳ್ಳುತ್ತದೆ.

ಭಾರತ ಮಾಡಿದ ರಫ್ತು,ಆಮದು

(ಕೋಟಿ ₹ಗಳಲ್ಲಿ)



*ಜನವರಿಯಿಂದ ಏಪ್ರಿಲ್‌ವರೆಗೆ

ನಿಜ್ಜರ್ ಒಬ್ಬನೇ ಅಲ್ಲ...

ಕಳೆದ ವರ್ಷ ನಿಜ್ಜರ್ ಹತ್ಯೆಗೂ ಮುನ್ನ ಇಬ್ಬರು ಖಾಲಿಸ್ತಾನಿ ಪ್ರತ್ಯೇಕತಾವಾದಿ ಮುಖಂಡರು ವಿದೇಶಿ ನೆಲದಲ್ಲಿ ಮೃತಪಟ್ಟಿದ್ದರು.

ಭಾರತವು ಭಯೋತ್ಪಾದಕ ಎಂದು ಗುರುತಿಸಿದ್ದ ಖಾಲಿಸ್ತಾನ್ ಕಮಾಂಡೊ ಪಡೆಯ ಮುಖ್ಯ-ಸ್ಥನಾಗಿದ್ದ ಪರಮ್‌ಜಿತ್ ಸಿಂಗ್ ಪಂಜ್ವಾರ್‌ನನ್ನು 2023ರ ಮೇ 6ರಂದು ಪಾಕಿಸ್ತಾನದ ಲಾಹೋರ್‌ನಲ್ಲಿ ಅಪರಿಚಿತರು ಗುಂಡಿಕ್ಕಿ ಹತ್ಯೆ ಮಾಡಿದ್ದರು.



ನಿಜ್ಜರ್

ಆತನನ್ನು ಹತ್ಯೆ ಮಾಡಿದವರು ಯಾರು ಎಂಬುದು ಇದುವರೆಗೆ ಗೊತ್ತಾಗಿಲ್ಲ.

ಬ್ರಿಟನ್‌ನ ಆಸ್ಪತ್ರೆಯೊಂದರಲ್ಲಿ ಕಳೆದ ವರ್ಷದ ಜೂನ್ 15ರಂದು ಖಾಲಿಸ್ತಾನ ಲಿಬರೇಷನ್ ಫೋರ್ಸ್‌ನ ಮುಖ್ಯಸ್ಥ ಎಂದು ನಂಬಲಾದ ಅವತಾರ್ ಸಿಂಗ್ ಖಂಡಾ ಮೃತಪಟ್ಟಿದ್ದ. ಮಾರ್ಚ್‌ನಲ್ಲಿ ಲಂಡನ್ನಿನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯ ಸಂದರ್ಭದಲ್ಲಿ ಭಾರತದ ರಾಯಭಾರ ಕಚೇರಿಯಲ್ಲಿ ಅಳವಡಿಸಲಾಗಿದ್ದ ತ್ರಿವರ್ಣ ಧ್ವಜವನ್ನು ಕೆಳಕ್ಕೆ ಎಳೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ರಿಟನ್ ಪೊಲೀಸರು ಆತನನ್ನು ಬಂಧಿಸಿದ್ದರು. ಆತನ ಸಾವಿನ ಕುರಿತಂತೆ ಯಾವುದೇ ಅನುಮಾನಗಳಿಲ್ಲ ಎಂದು ಪೊಲೀಸರು ಹೇಳಿದ್ದರು.


ಪಂಜ್ವಾರ್ ಸತ್ತ ಮೂರು ದಿನಗಳ ಬಳಿಕ ಕೆನಡಾದಲ್ಲಿ ನಿಜ್ಜರ್‌ನ ಹತ್ಯೆ ನಡೆದಿತ್ತು.

ಭಾರತವು ಭಯೋತ್ಪಾದಕ ಎಂದು ಘೋಷಿಸಿರುವ, ಅಮೆರಿಕದಲ್ಲಿ ನೆಲಸಿರುವ ಖಾಲಿಸ್ತಾನಿ ಪ್ರತ್ಯೇಕತಾವಾದಿ ಮುಖಂಡ ಗುರುಪತ್ವಂತ್ ಸಿಂಗ್ ಪನ್ನೂ ಕೊಲೆ ಯತ್ನವೂ ನಡೆದಿತ್ತು. 2023ರ ನವೆಂಬರ್‌ನಲ್ಲಿ ಅಮೆರಿಕ ಅಧಿಕೃತವಾಗಿ ಈ ಬಗ್ಗೆ ಹೇಳಿಕೆ ನೀಡಿತ್ತು. ಈ ಹತ್ಯೆ ಯತ್ನದ ಹಿಂದೆ ಭಾರತದ ಕೈವಾಡ ಇದೆ ಎಂಬ ಆರೋಪವೂ ಇದೆ. ತನಿಖೆಗಾಗಿ ಭಾರತವೂ ತನಿಖಾ ತಂಡ ರಚಿಸಿದ್ದು, ಅದೀಗ ಅಮೆರಿಕಕ್ಕೆ ಭೇಟಿ ನೀಡಿದೆ.

ಆಧಾರ: ಎಎಫ್‌ಪಿ, ಬಿಬಿಸಿ, ಪಿಐಬಿ, ಭಾರತೀಯ ವಿದೇಶಾಂಗ ಸಚಿವಾಲಯ, ಇನ್‌ವೆಸ್ಟ್ ಇಂಡಿಯಾ ವೆಬ್‌ಸೈಟ್

ಸಿನಿ ಬಿಟ್ಸ್

's/o ಮುತ್ತಣ್ಣ' ಶೀಘ್ರದಲ್ಲಿ ತೆರೆಗೆ



ಖುಷಿ ರವಿ, ಪ್ರಣಮ್ ದೇವರಾಜ್

ನಟ ದೇವರಾಜ್ ಅವರ ಎರಡನೇ ಪುತ್ರ ಪ್ರಣಮ್ ದೇವರಾಜ್ ನಾಯಕನಾಗಿ ನಟಿಸಿರುವ 's/o ಮುತ್ತಣ್ಣ' ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ. ನಿರ್ದೇಶಕ ಪ್ರೇಮ್ ಜೊತೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದ ಶ್ರೀಕಾಂತ್ ಹುಣಸೂರು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಪೋಸ್ಟ್ ಪ್ರೊಡಕ್ಷನ್ ಕೆಲಸ ಅಂತಿಮ ಹಂತದಲ್ಲಿದೆ. ಇತ್ತೀಚೆಗಷ್ಟೆ ಚಿತ್ರದ ಆಡಿಯೊ ಹಕ್ಕುಗಳನ್ನು A2 ಮ್ಯೂಸಿಕ್ ಸಂಸ್ಥೆ ಉತ್ತಮ ಮೊತ್ತಕ್ಕೆ ಖರೀದಿಸಿದೆ. ಇದರಿಂದ ಸಿನಿಮಾದ ಮೇಲಿನ ನಿರೀಕ್ಷೆ ದುಪ್ಪಟ್ಟಾಗಿದೆ' ಎಂದಿದ್ದಾರೆ ನಿರ್ದೇಶಕರು.


ಪ್ರಣಮ್‌ಗೆ ನಾಯಕಿಯಾಗಿ 'ದಿಯಾ' ಖ್ಯಾತಿಯ ಖುಷಿ ರವಿ ಜೊತೆಯಾಗಿದ್ದಾರೆ. ಶೀರ್ಷಿಕೆಯೇ ಹೇಳುತ್ತಿರುವಂತೆ ಅಪ್ಪ-ಮಗನ ಬಾಂಧವ್ಯದ ಕಥೆ ಸಿನಿಮಾದಲ್ಲಿದೆ. ಪುರಾತನ ಫಿಲ್ಮ್ಸ್ ಹಾಗೂ ಎಸ್‌ಆರ್‌ಕೆ ಫಿಲ್ಮ್ಸ್ ಜೊತೆಗೂಡಿ ನಿರ್ಮಿಸಿರುವ ಚಿತ್ರಕ್ಕೆ ಸ್ಕೇಟಿಂಗ್ ಕೃಷ್ಣ ಛಾಯಾಚಿತ್ರಗ್ರಹಣ, ಹರೀಶ್ ಕೊಮ್ಮೆ ಸಂಕಲನ, ಸಚಿನ್ ಬಸ್ರೂರ್ ಸಂಗೀತವಿದೆ.

ರಂಗಾಯಣ ರಘು, ಸುಚೇಂದ್ರ ಪ್ರಸಾದ್, ಗಿರಿ ಶಿವಣ್ಣ, ತಬಲ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ ಮುಂತಾದವರು ತಾರಾ-ಗಣದಲ್ಲಿದ್ದಾರೆ. ❖

ಮತ್ತೆ ಬರುತ್ತಿದ್ದಾನೆ 'ನಮ್ಮ ಪ್ರೀತಿಯ ರಾಮು'

ಕಳೆದೊಂದು ವರ್ಷದಿಂದ ಸ್ಟಾರ್ ನಟರ ಸಿನಿಮಾಗಳ ಮರುಬಿಡುಗಡೆ ಹೊಸ ಟ್ರೆಂಡ್ ಎಂಬಂತಾಗಿದೆ. ಉಪೇಂದ್ರ ನಟನೆಯ 'ಎ', 'ಉಪೇಂದ್ರ' ಸಿನಿಮಾಗಳು ಮರುಬಿಡುಗಡೆಗೊಂಡಿದ್ದವು. ಸುದೀಪ್ ಅವರ 'ಹೆಬ್ಬುಲಿ' ಮತ್ತೆ ತೆರೆಗೆ ಬಂದಿತ್ತು. ರೇಣುಕಾ ಸ್ವಾಮಿ ಕೊಲೆ ಆರೋಪದಲ್ಲಿ ನಟ ದರ್ಶನ್ ಜೈಲು ಸೇರುತ್ತಿದ್ದಂತೆ ಅವರ 'ಶಾಸ್ತ್ರಿ', 'ಕರಿಯ' ಸಿನಿಮಾಗಳು ಮತ್ತೆ ತೆರೆಗೆ ಬಂದವು.

ಇದೀಗ ದರ್ಶನ್ ಅಭಿನಯದ ಮತ್ತೊಂದು ಹಿಟ್ ಚಿತ್ರ 'ನಮ್ಮ ಪ್ರೀತಿಯ ರಾಮು' ನವೆಂಬರ್ 1ರಂದು ತೆರೆಗೆ ಬರಲಿದೆ.



ದರ್ಶನ್

2003ರಲ್ಲಿ ಬಿಡುಗಡೆಗೊಂಡ ಚಿತ್ರ ಜನಮನ್ನಣೆ ಗಳಿಸಿತ್ತು. 'ಅಮೆರಿಕಾ! ಅಮೆರಿಕಾ!!' ಚಿತ್ರ ನಿರ್ಮಾಣ ಮಾಡಿದ್ದ ಜಿ.ನಂದಕುಮಾರ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದು, ಸಂಜಯ್-ವಿಜಯ್ ನಿರ್ದೇಶಕರಾಗಿ ಗುರುತಿಸಿಕೊಂಡಿದ್ದರು.

ನವ್ಯ ನಟರಾಜನ್ ದರ್ಶನ್‌ಗೆ ಜೋಡಿಯಾಗಿದ್ದರು. 'ದೊಡ್ಡಣ್ಣ, ಉಮಾಶ್ರೀ, ಕರಿಬಸವಯ್ಯ, ಪವಿತ್ರಾ ಲೋಕೇಶ್, ರಮೇಶ್ ಪಂಡಿತ್ ಮುಂತಾದವರು ನಟಿಸಿದ್ದ ಚಿತ್ರ 5.1 ಸೌಂಡ್ ಎಫೆಕ್ಟ್‌ನೊಂದಿಗೆ ಬಿಡು-ಗಡೆಗೊಳ್ಳಲಿದೆ. ಚಿತ್ರವನ್ನು ಡಿಜಿಟಲ್ ಮಾದರಿಗೆ ಪರಿವರ್ತಿಸಲಾಗಿದೆ' ಎಂದಿದೆ ಚಿತ್ರತಂಡ.

ಇಳಯರಾಜಾ ಸಂಗೀತ, ರಮೇಶ್‌ಬಾಬು ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ನಮ್ಮದಲ್ಲದ ದೇಹ!



ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

45

ಭಾವ ಬಂಧನ ಅಂತೀವಿ, ಭೌತಿಕ ಬಂಧನ ಅಂತೀವಿ. ಏನಿದು ಬಂಧನ? ಯಾಕಾತು ಬಂಧನ?. ಯಾಕಾತು ಅಂದ್ರ ಅಜ್ಞಾನದಿಂದ ಆತು. ಏನು ಅಜ್ಞಾನ? ತಪ್ಪು ತಿಳಕೊಳ್ಳೋದೆ ಅಜ್ಞಾನ. ಈ ನಮ್ಮ ದೇಹ ಐತಲ್ಲ, ಇದನ್ನು ನಮ್ಮದು ಅಂತಾ ತಿಳಕೊಂಡೇವಿ. ಆದರೆ ಇದು ನಮ್ಮದಲ್ಲ. ಮತ್ತ ಮಂದೀದು ದೇಹ ಅಂತಾ ಅನಕೋತ ಹೋಗಾಣೇನು ಅಂತಾ ನೀವು ಕೇಳ್ತೀರಿ ಅಂತಾ ನನಗೆ ಗೊತ್ತು. ಹಾಂಗಲ್ಲ, ಸುಮ್ಮನೆ ವಿಚಾರ ಮಾಡಿ. ಇವ ನಮ್ಮ ಸೇವಕ ಅನಬೇಕಾದರೆ ಅವ ನಾವು ಹೇಳಿದಂಗೆ ಕೇಳಬೇಕಲ್ಲ?

ಈ ದೇಹ ನನ್ನದು ಅಂತೀನಿ ಖರೆ, ಆದರೆ ಇದು ನಾನು ಹೇಳಿದ್ಹಂಗ ಎಲ್ಲಿ ಕೇಳತೈತಿ? ಈಗ ಒಳಗೆ ಹೃದಯ ಬಡಿತೈತಿ. ನಾನು ಬಡಿ ಅಂದಾಗ ಅದು ಬಡಿತೈತೇನು? ನಿಲ್ಲು ಅಂದಾಗ ನಿಲ್ಲುತೈತೇನು? ಬಡಿಯೋದು, ನಿಲ್ಲಿಸೋದು ಎರಡೂ ನನ್ನ ಕೈಯಾಗಿಲ್ಲ. ನಾನು ಮಲಗಿದ್ದಾಗಲೂ ಬಡಿತೈತೆ. ಅಂದರೆ ಇದು ಬೇರೆ ಯಾರದ್ದೋ ಕೈಯಾಗೆ ಐತೆ. ಮುಖದ ಸೌಂದರ್ಯ ಮಾಸಬಾರದು ಅಂತಾ ಸೌಂದರ್ಯ ಸಾಮಗ್ರಿ ಬಳಸತೀವಿ, ನಾವು ಎಷ್ಟೇ ಪ್ರಯತ್ನ ಮಾಡಿದರೂ ಮುಪ್ಪು ಮಾಡುವ ತಯಾರಿ ಒಳಗಿಂದಲೇ ನಡೀತೈತೆ. ಅದನ್ನು ತಡೆಯೋದು ನಮ್ಮ ಕೈಯಲ್ಲಿ ಐತೇನು? ಕಣ್ಣು ಮಬ್ಬಾಗಬಾರದು ಅಂತ ಪ್ರಯತ್ನ ಮಾಡತೇವಿ, ಆದರೆ ಅದು ಸಾಧ್ಯವಿಲ್ಲ. ಅಂದರೆ ಈ ದೇಹ ನಮ್ಮ ಮಾತನ್ನು ಯಾವಾಗಲೂ ಕೇಳಿಲ್ಲ. ದೇಹದಲ್ಲಿ ಮೊದಲು ಸೊಕ್ಕಿತ್ತು. ಈಗ ಸುಕ್ಕುಗಟ್ಟೈತಿ. ಮೊದಲು ಉಸೇನ್ ಬೋಲ್ಟ್ ತರಹ, ಪಿ.ಟಿ.ಉಷಾ ತರಹ ಓಡುತ್ತಿತ್ತು. ಈಗ ಕಾಲು, ಕಾಲಿಗೊಂದು ಕೋಲು ಬಂದೈತಿ. ನಡ್ಯಾಕ ಬರವಲ್ದು.

ನಿಮಗೆ ಗೊತ್ತಿರಬಹುದು ತೇನ್ ಸಿಂಗ್ ಅಂತ ಒಬ್ಬ ಇದ್ದ. ಅವ ಯುವಕ ಇದ್ದಾಗ ಹಿಮಾಲಯದ ಮೌಂಟ್ ಎವರೆಸ್ಟ್ ಹತ್ತಿದ್ದ. ಮುಪ್ಪಾದಾಗ ಒಮ್ಮೆ ಅವನಿಗೆ ಸನ್ಮಾನ ಇಟ್ಟುಕೊಂಡಿದ್ದರು. ಇವಗೆ ವೇದಿಕೆ ಹತ್ತಲು ಆಗಲಿಲ್ಲ. ಇಬ್ಬರು ಹಿಡಕೊಂಡು ಹತ್ತಿಸಿದರು. ಆಗ ಅವ ಅಳಾಕತ್ತಿದ. 'ಯಾಕೆ ಅಳ್ತಿ' ಎಂದು ಕೇಳಿದರು. ಅದಕ್ಕೆ ತೇನ್ ಸಿಂಗ್, 'ಒಂದು ಕಾಲಕ್ಕೆ ಈ ತೇನ್ ಸಿಂಗ್ 30 ಸಾವಿರ ಅಡಿ ಎತ್ತರದ ಮೌಂಟ್ ಎವರೆಸ್ಟ್ ಶಿಖರವನ್ನು ಹತ್ತಿ ಅದನ್ನು ತನ್ನ ಕಾಲ ಕೆಳಗೆ ಹಾಕಿಕೊಂಡಿದ್ದ. ಈಗ ಮೂರು ಮೆಟ್ಟಿಲು ಹತ್ತಕೆ ಆಗವಲ್ದು. ಇದು ಬದುಕಿನ ವಿಪರ್ಯಾಸ. ಅದಕ್ಕೆ ದುಃಖ ಆಗಾಕ ಹತ್ತೈತಿ' ಅಂದ.

ನನ್ನ ಹೆಜ್ಜೆ ನನಗೇ ಸಂಭಾಳಿಸಲು ಆಗುವುದಿಲ್ಲ. ಹಲ್ಲು ಬಿದ್ದಾವ. ಯಾವ ಜಗತ್ತು ಬೆಳಕಾಗಿ ಕಂಡಿತ್ತೋ ಅದೇ ಈಗ ಕತ್ತಲಾಗೈತಿ. ಕಿವಿ ಕಿವುಡಾಗೈತಿ. ಮುಪ್ಪು ಎಷ್ಟು ಕಷ್ಟ ಎಂದರೆ ಹೊಟ್ಯಾಗೆ ಹುಟ್ಟಿದ ಮಕ್ಕಳೂ ವೈರಿ ತರಹ ಆಗಿಬಿಡ್ತಾರ. ಈ ದೇಹ ನನ್ನ ಮಾತು ಕೇಳೋದಿಲ್ಲ ಅಂದ ಮ್ಯಾಲ ಇದನ್ನು ನಂದು ಅಂತ ಹ್ಯಾಂಗ್ ಹೇಳೋದು.

ಮನೆ ಕಟ್ಟತೀರಿ. ಮನೆ ನಂದು ಅನ್ತೀರಿ. ನೀವು ಹೋದಾಗ ಆ ಮನೆ ಅಳತೈತೇನು? ನನ್ನ ಹೊಲ, ನನ್ನ ಜಾತಿ ಅಂತೆಲ್ಲಾ ಹೇಳ್ತೀರಿ. ಇದೆಲ್ಲ ನಾವು ಸುಮ್ಮನೆ ಹೇಳೋದಷ್ಟೆ. ಯಾವುದೂ ನಮ್ಮದಲ್ಲ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಅಕ್ಟೋಬರ್ 16, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಶುಕ್ಲ ಚತುರ್ದಶಿ ಗಂ. 20-41 ನಕ್ಷತ್ರ: ಉತ್ತರಭಾದ್ರ ಗಂ. 19-18 ಯೋಗ: ಧ್ರುವ ಗಂ. 10-09 ನಂತರ ವ್ಯಾಘಾತ ಗಂ. 29-56, ಕನ್ಯಾ ಮಾಸದ 29 ನೇ ದಿನ, ಮಳೆನಕ್ಷತ್ರ: ಚಿತ್ರ 2. ರಾಹುಕಾಲ : ಮಧ್ಯಾಹ್ನ 12-00 – 01-30, ಸೂರ್ಯೋದಯ : 06-25 ಸೂರ್ಯಾಸ್ತ : 06-07
ಮುಸ್ಲಿಂ ದಿನಾಂಕ : 12 ರಬಿಯುಸ್ಸಾನಿ
ದಿನ ವಿಶೇಷ : ಶರತ್ ಪೂರ್ಣಿಮಾ
ಅದೃಷ್ಟ ಸಂಖ್ಯೆ : 10, 8

ಮೇಷ: ಕಳೆದ ವಾರದ ಎಲ್ಲ ಕೆಲಸಗಳು ಈ ದಿನ ಸಂಪೂರ್ಣಗೊಂಡು ವಿಪುಲ ಆದಾಯ ಪಡೆದುಕೊಳ್ಳುವಿರಿ. ಆರೋಗ್ಯ ವೃದ್ಧಿಗಾಗಿ ನಿಯಮ ಪಾಲಿಸುವುದು ಒಳ್ಳೆಯದು.

ವೃಷಭ: ಕೋರ್ಟಿನ ಕಾರ್ಯಗಳಲ್ಲಿ ವಿನೂತನ ತಿರುವು ಸಿಗಲಿದೆ. ಹಣ್ಣು-ಹೂವಿನ ಮಾರಾಟ ಮಾಡುವವರಿಗೆ ಅಧಿಕ ಲಾಭಾಂಶದ ನಿರೀಕ್ಷೆ ಬೇಡ. ಸ್ನೇಹಿತರ ಜತೆ ಕಾಲ ಕಳೆಯುವಿರಿ.

ಮಿಥುನ: ಯಂತ್ರೋಪಕರಣಗಳ ಖರೀದಿಯಿಂದಾಗಿ ಅಧಿಕ ಮಟ್ಟದಲ್ಲಿ ಖರ್ಚು ಸಂಭವಿಸುವುದು. ಮೇಲಧಿಕಾರಿಗಳ ಒತ್ತಾಯಕ್ಕೆ ಮಣಿದು ಕೆಲಸದಲ್ಲಿ ಸತ್ಯ ಮಾರ್ಗವನ್ನು ಬಿಡಬೇಕಾದ ಪರಿಸ್ಥಿತಿ ಎದುರಾಗಬಹುದು.

ಕರ್ಕಾಟಕ: ವೈದ್ಯರ ಸಲಹೆಯಂತೆ ಮನಸ್ಸಿನ ಸಂಯಮಕ್ಕಾಗಿ ಯೋಗ, ಧ್ಯಾನದತ್ತ ಗಮನ ಹರಿಸಿ. ಗುಂಪು ಚಟುವಟಿಕೆಗಳಿಗೆ ಮುಂದಾಳತ್ವ ಅಗತ್ಯವಾ-ಗಿರುವುದು. ಪಾಲುದಾರರ ಮಾತಿನಲ್ಲಿ ವಿಶ್ವಾಸವಿಡಬಹುದು.

ಸಿಂಹ: ರಾಜಕೀಯದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ನಿಮಗೆ ಸದ್ಯದ ಪರಿಸ್ಥಿತಿ ಅನುಕೂಲಕರವಾಗಿದೆ. ಸುತ್ತಮುತ್ತಲಿನವರ ಬಗ್ಗೆ ಮೌನದಿಂದಿರುವುದು ವ್ಯಕ್ತಿತ್ವಕ್ಕೆ ಶೋಭೆ ತರುವುದು.

ಕನ್ಯಾ: ನಿಮ್ಮಲ್ಲಿರುವ ಆತ್ಮಸ್ಥೈರ್ಯ ಹಾಗೂ ದೇವರ ಮೇಲಿರುವ ಶ್ರದ್ಧೆ, ಭಕ್ತಿ ನಂಬಿಕೆಯಿಂದಾಗಿ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಿ ಪರಿಹರಿಸಿಕೊಳ್ಳು-ವಿರಿ. ವಾದ ವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.

ತುಲಾ: ಉದ್ಯೋಗವನ್ನು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಮೂಲಕ ದೊರಕಿಸಿಕೊಳ್ಳಬಹುದು. ಕುಟುಂಬದ ಸದಸ್ಯರೊಂದಿಗೆ ಸಂತಸದಲ್ಲಿ ಕೆಲ ಕಾಲ ಕಳೆಯುವಂತಾಗುವುದು. ಕೆಲಸದ ಕಾರಣವಾಗಿ ಕಿರು ಸಂಚಾರದ ಯೋಗವಿದೆ.

ವೃಶ್ಚಿಕ: ಹಣಕಾಸು ನಿರ್ವಹಣೆಯ ವಿಚಾರದಲ್ಲಿ ಹೆಂಡತಿಯ ಕುಶಲಮತಿಯು ಉಪಯೋಗಕ್ಕೆ ಬರುತ್ತದೆ. ಕರಕುಶಲ ವಸ್ತುಗಳ ತಯಾರಿಕ ವೃತ್ತಿಗಳಿಂದ ಹೆಚ್ಚಿನ ವರಮಾನ ಸಿಗಲಿದೆ. ಕೈಗೊಂಡ ಕಾರ್ಯ ಸಫಲವಾಗಲಿದೆ.

ಧನು: ಆಸ್ತಿ ಖರೀದಿಯ ವಿಚಾರದಲ್ಲಿ ಪರಿಸ್ಥಿತಿ ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇರಿಸಿ. ಮಹಿಳೆಯರಿಗೆ ಉಪಯೋಗಕ್ಕೆ ಬಾರದ ವಿಚಾರದ ಬಗೆಗಿನ ಚಿಂತೆಯು ಆರೋಗ್ಯವನ್ನು ಹಾಳು ಮಾಡುತ್ತದೆ.

ಮಕರ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ತುಸು ಚೇತರಿಕೆ ಕಂಡುಬಂದು ಮುಂದುವರಿಯಲು ಸಹಾಯವಾಗುತ್ತದೆ.

ಕುಂಭ: ಬದುಕನ್ನು ವಿಲಾಸಿಯಾಗಿ ಕಳೆಯುವ ಹೊರತಾಗಿ ಇನ್ನೊಂದು ಪ್ರಪಂಚವಿದ್ದು, ಅನೇಕ ಜವಾಬ್ದಾರಿಗಳಿವೆ ಎಂಬುದನ್ನು ಮರೆಯದಿರಿ. ಧನಾಗಮನಕ್ಕೆ ಯಾವುದೇ ತೊಂದರೆ, ಅಡ್ಡಿ-ಆತಂಕ ಇರುವುದಿಲ್ಲ.


ಮೀನ: ವ್ಯವಹಾರದ ವಿಷಯಗಳಲ್ಲಿ ಯಾವುದೇ ಸಂಬಂಧಗಳಿಗೆ ಆಸ್ಪದವಿರ-ದಂತೆ ನೋಡಿಕೊಳ್ಳುವುದು ಒಳ್ಳೆಯದು. ಅಭಿರುಚಿಗೆ ತಕ್ಕಂಥ ಮನಸ್ಥಿತಿಯನ್ನು ಹೊಂದಿದ ವ್ಯಕ್ತಿಗಳೊಂದಿಗೆ ವ್ಯವಹರಿಸುವುದು ಹೆಚ್ಚು ಸೂಕ್ತ.

ಪದಬಂಧ 5833

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ತಂದೆತಾಯಿಯಿರುವ ಊರು (3)
5.ಇನ್ನೂ ಮರಿ! ಈ ಹೆಣ್ಣುದುಂಬಿ (4)
6.ನೀರಾಗಿ ಹರಿಯುವಂತಹ ವಸ್ತು (2)
7.ದರಿಯಲ್ಲಿ ಬಂಧನ! (4)
9.ಸತ್ಯವಲ್ಲ ಇದು! (2)
10.ರೇಖಾಗಣಿತದಲ್ಲಿ ವರ್ತುಲವನ್ನು ಸಮನಾಗಿ ವಿಭಾಗಿಸುವ ರೇಖೆ (2)
12.ತೀಕ್ಷ್ಣವಾದ ಮಾತು (4)
15.ನೇರವಾದ ಅರ್ಥವಿಲ್ಲಿ ಉಲ್ಟಾ ಆಗಿದೆ (2)
16.ಅಲಕ್ಷ್ಯಕ್ಕೊಂದು ಪರ್ಯಾಯ ಪದ (4)
17.ಚಿತ್ರ ಸಹಿತವಾದುದು (3)

ಮೇಲಿಂದ ಕೆಳಕ್ಕೆ
1.ಸಮರಸದ ಭಾವ (4)
2.ಹೂವಿನ ರಸ (4)
3.ತರಿಯನ್ನು ತರಲು ಕನ್ನಡಿಗನ ಅರ್ಜೆಂಟು! (4)
4.ಸ್ಮಶಾನ ಇಲ್ಲಿದೆ (4)
8.ಹೊಳಪಿನ ಲೇಪನ (3)
11.ಜೊತೆಯಲ್ಲಿ ವಾಸಿಸುವುದು (4)
12.ಸೂತ್ರವುಳ್ಳ ಡಾಬು! (4)
13.ನ್ಯಾಯಾಲಯದಲ್ಲಿ ತನ್ನ ಕಡೆಗೆ ತೀರ್ಪು ಪಡೆದಿರುವ ವ್ಯಕ್ತಿ (4)
14.ನಯವಾಗಿರುವ ನಟನೆ! (4)



5832ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಭಾವಲಯ
3.ಪ್ರಭವ 5.ಜಕಾತಿ
7.ವಿಚ್ಛಿಂಖಲ 8.ರಕ್ಷಾಕವಚ
11.ಪರಿಮಾಣ 13.ದರಗ
16.ಬುರುಜು 17.ಅಂಗರಕ್ಷಕ

ಮೇಲಿಂದ ಕೆಳಕ್ಕೆ:
1.ಪ್ರಭಂಜನ 2.ಲಡಿ
3.ಪ್ರಮುಖ 4.ವಕ್ರ
6.ತಿಸರ 7.ಉಪಕರಣ
9.ಚಕ್ಕಂದ 10.ಜಾಗರೂಕ
12.ರಿವಾಜು 14.ತೂಬು
15.ಖಗ

ಸುಡೊಕು 6218

		1		6				2
6		2	4		9			
	8					6		9
3	5	7	2			4		
		8		4			3	7
4					3	2		8
		9	8					4
8					4		2	
		3		2		7		6


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6217 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,127
ಇಂದಿನ ಅಂತ್ಯ	25,057
▼	70
ದಿನದ ಕನಿಷ್ಠ	25,008

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹100-528
ದ್ವಿತಳಿ (ಬಿ.ವಿ)	₹222-656

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹193
ಆರ್‌ಎಸ್‌ಎಸ್-5	₹188
ಗುಡ್ ಲಾಟ್	₹185

(ಪ್ರತಿ ಕೆ.ಜಿಗೆ)

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	19000-26500
ಹಳತು	40500-48500
ಚಿತ್ರದುರ್ಗ	
ಅಪಿ	48119-48529
ಬೆಟ್ಟೆ	32649-33099
ಕೆಂಪುಗೋಟು	27400-27800
ರಾಶಿ	47639-48069
ಪುತ್ತೂರು	
ಹೊಸತು	26000-31000
ಹಳತು	32000-48500
ಸಾಗರ	
ಬಿಳಿಗೋಟು	17699-25011
ಚಾಲಿ	28699-32209
ಕೋಕ	10600-18699
ಕೆಂಪುಗೋಟು	26055-31029
ರಾಶಿ	30199-48209
ಸಿಪ್ಪೆಗೋಟು	15099-16532
ಶಿವಮೊಗ್ಗ	
ಬೆಟ್ಟೆ	41672-54986
ಗೊರಬಲು	17021-38669
ಹೊಸತು	32800-47509
ರಾಶಿ	26500-49269
ಸರಕು	54069-80696
ಸಿದ್ದಾಪುರ	
ಬಿಳಿಗೋಟು	24389-27689
ಚಾಲಿ	30599-34409
ಕೋಕ	20999-25119
ಕೆಂಪುಗೋಟು	20699-22699
ರಾಶಿ	41089-46399
ತಟ್ಟಿಬೆಟ್ಟೆ	27699-32499
ಶಿರಸಿ	
ಬೆಟ್ಟೆ	23069-38709
ಬಿಳಿಗೋಟು	20305-29808
ಚಾಲಿ	32250-35522
ಕೆಂಪುಗೋಟು	10999-22899
ರಾಶಿ	40018-42899
ಯಲ್ಲಾಪುರ	
ಅಪಿ	61265-61265
ಬಿಳಿಗೋಟು	13099-28510
ಚಾಲಿ	28611-35099
ಕೋಕ	4040-14299
ಕೆಂಪುಗೋಟು	13012-22305
ರಾಶಿ	38609-55259
ತಟ್ಟಿಬೆಟ್ಟೆ	22699-36699

ಬ್ರೆಂಟ್: ಬ್ಯಾರೆಲ್‌ಗೆ 3.51 ಡಾಲರ್ ಇಳಿಕೆ

ಕಚ್ಚಾ ತೈಲ ದರ ಕುಸಿತ

ಲಂಡನ್ (ರಾಯಿಟರ್ಸ್): ಜಾಗತಿಕ ಮಾರುಕಟ್ಟೆಯಲ್ಲಿ ಮಂಗಳವಾರ ಕಚ್ಚಾ ತೈಲದ ಬೆಲೆಯಲ್ಲಿ ಶೇ 4.70ರಷ್ಟು ಇಳಿಕೆಯಾಗಿದ್ದು, ಎರಡು ವಾರದ ಕನಿಷ್ಠ ಮಟ್ಟಕ್ಕೆ ತಲುಪಿದೆ.

ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದ ಉಲ್ಬಣದಿಂದಾಗಿ ಕಳೆದ ಎರಡು ವಾರದಿಂದ ಕಚ್ಚಾ ತೈಲದ ಬೆಲೆಯು ಏರಿಕೆಯ ಹಾದಿ ಹಿಡಿದಿತ್ತು. ಆದರೆ, ಇರಾನ್‌ನ ತೈಲ ಉತ್ಪಾದನೆ ಮತ್ತು ಸಂಗ್ರಹಾಗಾರಗಳ ಮೇಲೆ ವಾಯುದಾಳಿ ನಡೆಸುವುದಿಲ್ಲವೆಂದು ಇಸ್ರೇಲ್ ಘೋಷಿಸಿದೆ ಎಂದು ವರದಿಯಾಗಿದೆ. ಹಾಗಾಗಿ, ತೈಲ ಪೂರೈಕೆ ಸರಪಳಿಗೆ ಎದುರಾಗಿದ್ದ ಆತಂಕ ನಿವಾರಣೆಯಾಗಿದೆ.

ಮತ್ತೊಂದೆಡೆ ಆಮದು ರಾಷ್ಟ್ರಗಳಿಂದ ಬೇಡಿಕೆ ಕೂಡ ಕಡಿಮೆಯಾಗಿದೆ. ಇದರಿಂದ ಕಚ್ಚಾ ತೈಲ ಧಾರಣೆಯು ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಬ್ರೆಂಟ್ ಕಚ್ಚಾ ತೈಲದ ದರವು ಪ್ರತಿ ಬ್ಯಾರೆಲ್‌ಗೆ 3.51 ಡಾಲರ್ ಇಳಿಕೆಯಾಗಿದೆ (ಶೇ 4.71ರಷ್ಟು). ಸದ್ಯ 73.81 ಡಾಲರ್ ಆಗಿದೆ. ವೆಸ್ಟ್ ಟೆಕ್ಸಾಸ್ ಇಂಟರ್‌ಮೀಡಿಯೇಟ್ ಕಚ್ಚಾ ತೈಲದ ಬೆಲೆಯು 3.48 ಡಾಲರ್ ಕಡಿಮೆಯಾಗಿದ್ದು (ಶೇ 4.70ರಷ್ಟು), ಬ್ಯಾರೆಲ್‌ಗೆ 70.35 ಡಾಲರ್ ಆಗಿದೆ.



ಇರಾನ್‌ನ ಪರಮಾಣು ಘಟಕ ಅಥವಾ ತೈಲ ಉತ್ಪಾದನಾ ಘಟಕಗಳ ಮೇಲೆ ವಾಯುದಾಳಿ ನಡೆಸಲಾಗುವುದು ಎಂದು ಕಳೆದ ವಾರ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಘೋಷಿಸಿದ್ದರು. ಇದರ ಬೆನ್ನಲ್ಲೇ ಕಚ್ಚಾ ತೈಲದ ಬೆಲೆಯು ಗಗನಮುಖಿಯಾಗಿತ್ತು.

'ತೈಲ ಉತ್ಪಾದಿಸುವ ರಾಷ್ಟ್ರಗಳು ದರ ಸಮರವನ್ನು ಹಿಂಪಡೆದಿವೆ. ಹಾಗಾಗಿ, ತೈಲ ಆಮದು ಮಾಡಿಕೊಳ್ಳುವ ರಾಷ್ಟ್ರಗಳು ಕೂಡ ಹೆಚ್ಚು ಸಂಗ್ರಹಕ್ಕೆ ಮುಂದಾಗಿಲ್ಲ. ಇದು ಕೂಡ ಬೆಲೆ ಇಳಿಕೆಗೆ ಕಾರಣವಾಗಿದೆ' ಎಂದು ಬ್ರೋಕರೇಜ್ ಸಂಸ್ಥೆ ಫಿಲಿಪ್ ನೋವಾದ ಹಿರಿಯ ಮಾರುಕಟ್ಟೆ ವಿಶ್ಲೇಷಕಿ ಪ್ರಿಯಾಂಕಾ ಸಚ್‌ದೇವ ತಿಳಿಸಿದ್ದಾರೆ.

'ಮಧ್ಯಪ್ರಾಚ್ಯ ಬಿಕ್ಕಟ್ಟು ಇನ್ನೂ ಶಮನಗೊಂಡಿಲ್ಲ. ಸಂಘರ್ಷ ಕಡಿಮೆಯಾದರೆ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 70 ಡಾಲರ್‌ಗೆ ಇಳಿಕೆಯಾಗುವ ಸಾಧ್ಯತೆಯಿದೆ' ಎಂದು ಹೇಳಿದ್ದಾರೆ.

ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುವ ದೇಶಗಳ ಸಂಘಟನೆ (ಒಪೆಕ್) ಮತ್ತು ಅಂತರರಾಷ್ಟ್ರೀಯ ಇಂಧನ ಸಂಸ್ಥೆಯು (ಐಇಎ) ಇದೇ ವಾರದಲ್ಲಿ ಪ್ರಸಕ್ತ ವರ್ಷದ ಜಾಗತಿಕ ತೈಲ ಬೇಡಿಕೆಯ ಮುನ್ನೋಟವನ್ನು ಕಡಿಮೆಗೊಳಿಸುವ ಸಾಧ್ಯತೆಯಿದೆ.

ಕರಡಿ ಕುಣಿತ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಮಂಗಳವಾರ ಕರಡಿ ಕುಣಿತದಿಂದಾಗಿ ಸೂಚ್ಯಂಕಗಳು ಕುಸಿತ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 152 ಅಂಶ ಇಳಿಕೆ ಕಂಡು 81,820 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 70 ಅಂಶ ಕುಸಿತ ಕಂಡು 25,057 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯ ಗೊಳಿಸಿತು.

ಸೆಪ್ಟೆಂಬರ್ ತ್ರೈಮಾಸಿಕದ ನಿವ್ವಳ ಲಾಭದಲ್ಲಿ ಇಳಿಕೆಯಾಗಿರುವುದರಿಂದ ರಿಲಯನ್ಸ್ ಇಂಡಸ್ಟ್ರಿಸ್ ಲಿಮಿಟೆಡ್‌ನ ಷೇರಿನ ಮೌಲ್ಯದಲ್ಲಿ ಶೇ 2.06ರಷ್ಟು ಕುಸಿತವಾಗಿದೆ.

ಸ್ಯಾಮ್ಸಂಗ್ ನೌಕರರ ಹೋರಾಟ ಅಂತ್ಯ

ಚೆನ್ನೈ (ಪಿಟಿಐ): ತಮಿಳುನಾಡಿನ ಶ್ರೀಪೆರಂಬದೂರು ಬಳಿಯ ಸ್ಯಾಮ್ಸಂಗ್ ಕಂಪನಿಯ ಘಟಕದಲ್ಲಿ ಕಳೆದ 37 ದಿನಗಳಿಂದ ನೌಕರರು ನಡೆಸುತ್ತಿದ್ದ ಹೋರಾಟವು ಮಂಗಳವಾರ ಅಂತ್ಯಗೊಂಡಿದೆ.

ಸಂಬಳ ಹೆಚ್ಚಳ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ 1,100ಕ್ಕೂ ಹೆಚ್ಚು ನೌಕರರು ಸೆಪ್ಟೆಂಬರ್ 9ರಿಂದ ಅನಿರ್ದಿಷ್ಟಾವಧಿ ಹೋರಾಟ ಹಮ್ಮಿಕೊಂಡಿದ್ದರು. ಕೊನೆಗೆ, ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದ ಸರ್ಕಾರವು ಮಧ್ಯಪ್ರವೇಶಿಸಿ ನೌಕರರು ಮತ್ತು ಕಂಪನಿ ಸಮಸ್ಯೆ ಆಲಿಸಿತ್ತು.

'ರಾಜ್ಯ ಕಾರ್ಮಿಕ ಕಲ್ಯಾಣ ಇಲಾಖೆಯು ಕಂಪನಿಯ ಪ್ರತಿನಿಧಿಗಳು ಮತ್ತು ನೌಕರರ ನಡುವೆ ನಡೆಸಿದ ಸಂಧಾನ ಸಭೆಯು ಯಶಸ್ವಿಯಾಗಿದೆ. ಹೋರಾಟ ಹಿಂಪಡೆದಿರುವ ನೌಕರರು ಕೆಲಸಕ್ಕೆ ಹಾಜರಾಗಲಿದ್ದಾರೆ. ಹೋರಾಟ ನಿರತ ಕಾರ್ಮಿಕರ ಮೇಲೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲವೆಂದು ಕಂಪನಿಯು ಭರವಸೆ ನೀಡಿದೆ' ಎಂದು ತಮಿಳುನಾಡು ಸರ್ಕಾರ ಹೇಳಿದೆ.

ಮುಂಬೈ ಧಾರಣೆ (ಶೇಂಗಾ)

15-10-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9100-9200
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1550)
ಒಂದು ವಾರದ ಡೆಲಿವರಿ	1535 (1545)
ಪಾಮ್ ವಾರದ ಡೆಲಿವರಿ	1258 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1215 (1210)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹75,600 (75,800)
ಬೆಳ್ಳಿ ಕೆ.ಜಿ	₹89,900 (90,100)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಿನಿಮಯ ದರ

$ ಡಾಲರ್	84.04
£ ಪೌಂಡ್	109.91
€ ಯುರೊ	91.70

'ಎ.ಐ ಬಳಕೆಗೆ ಚೌಕಟ್ಟು ಅಗತ್ಯ'

ನವದೆಹಲಿ (ಪಿಟಿಐ): 'ಕೃತಕ ಬುದ್ಧಿಮತ್ತೆ (ಎ.ಐ) ಸೇರಿ ಡಿಜಿಟಲ್ ತಂತ್ರಜ್ಞಾನ ಬಳಕೆಗೆ ಸಂಬಂಧಿಸಿದಂತೆ ಜಾಗತಿಕ ಮಟ್ಟದಲ್ಲಿ ಚೌಕಟ್ಟು ರೂಪಿಸುವ ಅಗತ್ಯವಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಮಂಗಳವಾರ ನಡೆದ ಅಂತರ-ರಾಷ್ಟ್ರೀಯ ದೂರಸಂಪರ್ಕ ಒಕ್ಕೂಟ-ಡಬ್ಲ್ಯುಟಿಎಸ್‌ಎ ಮತ್ತು ಇಂಡಿಯನ್ ಮೊಬೈಲ್ ಕಾಂಗ್ರೆಸ್‌ನ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ಡಿಜಿಟಲ್ ಸಾಧನಗಳನ್ನು ದೇಶದ ಕಾನೂನಿನ ಪರಿಮಿತಿ ಹಾಗೂ ಗಡಿ ದಾಟಿ ಬಳಸಲಾಗುತ್ತಿದೆ. ಪ್ರಸ್ತುತ ಜಗತ್ತಿನ ಯಾವುದೇ ದೇಶವು ಸೈಬರ್ ಬೆದರಿಕೆಗಳಿಂದ ತನ್ನ ಜನರನ್ನು ರಕ್ಷಿಸಿಕೊಳ್ಳುವ ಸ್ವಸಾಮರ್ಥ್ಯ ಹೊಂದಿಲ್ಲ. ಹಾಗಾಗಿ, ಎಲ್ಲಾ ದೇಶಗಳು ಒಟ್ಟಾಗಿ ಕೆಲಸ ನಿರ್ವಹಿಸಬೇಕಿದೆ. ಈ ನಿಟ್ಟಿನಲ್ಲಿ ಜಾಗತಿಕ ಸಂಸ್ಥೆಗಳು ಜವಾಬ್ದಾರಿ ತೆಗೆದುಕೊಳ್ಳಬೇಕಿದೆ' ಎಂದರು.

> **ಭಾರತವು ಜಗತ್ತಿನಲ್ಲಿ 5ಜಿ ತಂತ್ರಜ್ಞಾನದ ಎರಡನೇ ಅತಿದೊಡ್ಡ ಮಾರುಕಟ್ಟೆಯಾಗಿದೆ. 6ಜಿ ತಂತ್ರಜ್ಞಾನದಲ್ಲಿ ಮುಂಚೂಣಿ ಸ್ಥಾನಕ್ಕೇರಲು ಕಾರ್ಯತತ್ಪರವಾಗಿದೆ**
> **ನರೇಂದ್ರ ಮೋದಿ,** ಪ್ರಧಾನಿ

ಡಿಜಿಟಲ್ ತಂತ್ರಜ್ಞಾನ ಬಳಸಿಕೊಂಡು ಏನನ್ನು ಮಾಡಬೇಕು ಹಾಗೂ ಏನನ್ನು ಮಾಡಬಾರದು ಎಂಬ ಬಗ್ಗೆ ಸ್ಪಷ್ಟ ನಿಯಮಾವಳಿಗಳನ್ನು ರೂಪಿಸಬೇಕಿದೆ ಎಂದು ಹೇಳಿದರು.

ಬಿಒಎಂಗೆ ₹1,327 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರವು (ಬಿಒಎಂ) 2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹1,327 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹920 ಕೋಟಿ ಲಾಭ ಗಳಿಸಿತ್ತು. ಈ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಶೇ 44ರಷ್ಟು ಹೆಚ್ಚಳವಾಗಿದೆ. ಬಡ್ಡಿ ವರಮಾನದಲ್ಲಿ ಏರಿಕೆಯಾಗಿರುವುದೇ ಲಾಭ ಗಳಿಕೆಗೆ ಕಾರಣವಾಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ತಿಳಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹5,736 ಕೋಟಿ ವರಮಾನ ಗಳಿಸಿತ್ತು. ಈ ಬಾರಿ ₹6,809 ಕೋಟಿ ಗಳಿಸಿದೆ.

'ಬ್ಯಾಂಕ್‌ನ ನಿವ್ವಳ ಬಡ್ಡಿ ಲಾಭವು (ಎನ್‌ಐಎಂ) ಶೇ 3.88ರಿಂದ ಶೇ 3.98ಕ್ಕೆ ಹೆಚ್ಚಳವಾಗಿದೆ' ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ನಿಧು ಸಕ್ಸೇನಾ ತಿಳಿಸಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹5 ಸಾವಿರ ಕೋಟಿಗೂ ಹೆಚ್ಚು ನಿವ್ವಳ ಲಾಭಗಳಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದ್ದಾರೆ. ಕಳೆದ ಆರ್ಥಿಕ ವರ್ಷದಲ್ಲಿ ₹4,055 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಬ್ಯಾಂಕ್‌ನ ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 2.19ರಿಂದ ಶೇ 1.84ಕ್ಕೆ ತಗ್ಗಿದೆ. ನಿವ್ವಳ ಎನ್‌ಪಿಎ ಶೇ 0.23ರಿಂದ ಶೇ 0.20ಕ್ಕೆ ಇಳಿಕೆಯಾಗಿದೆ. ಸಮರ್ಪಕ ಬಂಡವಾಳ ಅನುಪಾತ (ಸಿಎಆರ್) ಶೇ 17.26ಕ್ಕೆ ಏರಿಕೆಯಾಗಿದೆ ಎಂದು ಬ್ಯಾಂಕ್ තಿಳಿಸಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಚಂದ್ರಶೇಖರ್, ಯಾದಗಿರಿ.

- **ಪ್ರಶ್ನೆ:** ನಾನು ರಾಜ್ಯ ಸರ್ಕಾರಿ ನೌಕರ. ಮ್ಯೂಚುವಲ್ ಫಂಡ್ ಮತ್ತು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವಂತಿಲ್ಲ ಎಂಬ ನಿಯಮವು ಕರ್ನಾಟಕ ನಾಗರಿಕ ಸೇವಾ ನಿಯಮಗಳಲ್ಲಿದೆ ಎಂಬುದನ್ನು ಕೇಳಲ್ಪಟ್ಟೆ. ಇದು ಹೌದೇ? ಒಂದು ವೇಳೆ ಹೌದಾಗಿದ್ದಲ್ಲಿ ನಮ್ಮ ಹಣವನ್ನು ಹೂಡಿಕೆ ಮಾಡಿ ಹಣ ಬೆಳೆಸದಂತೆ ನಿರ್ಬಂಧಿಸಲು ಸರ್ಕಾರಕ್ಕೆ ಯಾವ ಹಕ್ಕಿದೆ? ದಯಮಾಡಿ ಪರಿಹಾರೋಪಾಯ ತಿಳಿಸಿ.

ಉತ್ತರ: ನಮ್ಮ ಹಿಂದಿನ ಕೆಲವು ಸಂಚಿಕೆಗಳಲ್ಲಿ ವಿವಿಧ ಓದುಗರು ಕೇಳಿದ ಇದೇ ರೀತಿಯ ಪ್ರಶ್ನೆಗೆ ಉತ್ತರಿಸಲಾಗಿದೆ. ನಾಗರಿಕ ಸೇವಾ ನಿಯಮದಲ್ಲಿ ಈ ಬಗ್ಗೆ ನಿರ್ಬಂಧ ಇದೆ. ನಿಮ್ಮ ಅಭಿಪ್ರಾಯದಂತೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಎಲ್ಲ ವರ್ಗದ ವ್ಯಕ್ತಿಗಳಿಗೆ ಮುಕ್ತ ಅವಕಾಶ ಇದ್ದರೂ ನಾಗರಿಕ ಸೇವಾ ಕಾನೂನು ಅನ್ವಯವಾಗುವ ಸರ್ಕಾರಿ ನೌಕರಿಯಲ್ಲಿರುವ ವ್ಯಕ್ತಿಗಳಿಗೆ ಸಂಬಂಧಿಸಿ ಕೆಲವು ನಿಯಮಗಳನ್ನು ಉಲ್ಲೇಖಿಸಲಾಗಿದೆ.

ಈ ನಿಯಮದ ಉದ್ದೇಶ ಷೇರುಪೇಟೆ ವ್ಯವಹಾರದಿಂದ ತಮ್ಮ ಕರ್ತವ್ಯ ಪಾಲನೆಯಲ್ಲಿ ಲೋಪವಾಗುವ ಅಥವಾ ಪ್ರಲೋಭನೆಗೊಳಗಾಗುವ ಸಾಧ್ಯತೆ ಇರುವುದನ್ನು ನಿಯಂತ್ರಿಸುವುದಾಗಿದೆ. ಈ ನಿರ್ಬಂಧ ಸರ್ಕಾರಿ ಉದ್ಯೋಗಿಯ ಪತಿ-ಪತ್ನಿ-ಮಕ್ಕಳಿಗೂ ಇದೆ ಎನ್ನುವುದು ಗಮನಾರ್ಹ ವಿಚಾರ.

ಕರ್ನಾಟಕ ಸಿವಿಲ್ ಸರ್ವಿಸಸ್ ರೂಲ್ಸ್ 1966ರ (ಕರ್ನಾಟಕ ನಾಗರಿಕ ಸೇವಾ ನಿಯಮಗಳು) ನಿಯಮಾವಳಿಯಂತೆ ಸರ್ಕಾರಿ ಹುದ್ದೆಯಲ್ಲಿರುವ ವ್ಯಕ್ತಿಗಳಿಗೆ ಅನ್ವಯಿಸುವಂತೆ ಈ ನಿರ್ಬಂಧಗಳನ್ನು ಹೇರಲಾಗಿದೆ. ನಿಯಮ 21ರ ಅನ್ವಯ ಯಾವುದೇ ಸರ್ಕಾರಿ ಉದ್ಯೋಗಿಗಳು ಷೇರು ಅಥವಾ ಇತರೆ ಹೂಡಿಕೆ ಉತ್ಪನ್ನದಲ್ಲಿ ಸ್ಪೆಕ್ಯುಲೇಟಿವ್ (ತ್ವರಿತ ದರ ಏರಿಳಿತ) ರೂಪದಲ್ಲಿರುವ ವ್ಯವಹಾರಗಳಲ್ಲಿ ತೊಡಗಿಸುವುದನ್ನು ನಿರ್ಬಂಧಿಸಲಾಗಿದೆ. ಈ ನಿಯಮವು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶ ವ್ಯಾಪ್ತಿಗೆ ಬರುವ ಇಲಾಖೆಗಳಲ್ಲಿ ಉದ್ಯೋಗ ಮಾಡುವ ಎಲ್ಲಾ ನೌಕರರಿಗೂ ಆಯಾ ಪ್ರಾದೇಶಿಕ ನಿಯಮಗಳಂತೆ ಅನ್ವಯಿಸುತ್ತದೆ.

ಆದರೆ, ಕೇವಲ ಹೂಡಿಕೆ ದೃಷ್ಟಿಯಿಂದ ಮಾಡುವ ವ್ಯವಹಾರ ಇದರಲ್ಲಿ ಒಳಗೊಳ್ಳುವುದಿಲ್ಲ. ಕೆಲವೊಂದು ರೀತಿಯ ಹೂಡಿಕೆಗಳಿಗೆ ರಿಯಾಯಿತಿಗಳನ್ನೂ ನೀಡಲಾಗಿದೆ. ಉದಾಹರಣೆಗೆ ಹಂತ ಹಂತವಾಗಿ ಷೇರುಗಳನ್ನು ದೀರ್ಘಾವಧಿಗಾಗಿ ಖರೀದಿಸಿ ಕೆಲವು ವರ್ಷದ ಬಳಿಕ ಮಾರಾಟ ಮಾಡಿದಾಗ ಅದು ಹೂಡಿಕೆ ಎಂದೇ ಪರಿಗಣಿಸಲ್ಪಡುತ್ತದೆ.

ನಿಷೇಧಿತ ಪರಿಮಿತಿಯಲ್ಲಿ ಅಲ್ಪಾವಧಿ ಷೇರು ಖರೀದಿ ಮಾರಾಟ, ಕರೆನ್ಸಿ ಹಾಗೂ ಕಮೋಡಿಟಿ ವಹಿವಾಟು, ಫ್ಯೂಚರ್ಸ್ ಮತ್ತು ಆಪ್ಶನ್ ವ್ಯವಹಾರ ಅಥವಾ ಇಂಟ್ರಾಡೇ ಟ್ರೇಡಿಂಗ್ ಇತ್ಯಾದಿಗಳು ಇಲ್ಲಿ ಬಹುಮುಖ್ಯವಾಗಿ ಒಳಗೊಳ್ಳುತ್ತವೆ. ನಿಯಮಾವಳಿಯಲ್ಲಿ ಎಷ್ಟು ಬಾರಿ ವ್ಯವಹರಿಸಬಹುದು ಎನ್ನುವ ನಿರ್ದಿಷ್ಟ ಮಾಹಿತಿ ನೀಡಿಲ್ಲದಿದ್ದರೂ, ಅದರರ್ಥ ಅನೇಕ ಬಾರಿ ಖರೀದಿ ಮಾರಾಟ ಮಾಡಬಹುದೆಂದಲ್ಲ. ದೀರ್ಘಾವಧಿಗೆ ಷೇರುಗಳಲ್ಲದೆ ಎಸ್‌ಐಪಿ, ಗೋಲ್ಡ್ ಬಾಂಡ್, ಆರ್‌ಬಿಐ ಬಾಂಡ್ ಮತ್ತು ಅಂತಹ ಇತರೆ ಹೂಡಿಕೆಗಳನ್ನೂ ಮಾಡಬಹುದು. ಈ ಬಗ್ಗೆ ಅಗತ್ಯ ಬಿದ್ದರೆ ಸಂಬಂಧಪಟ್ಟ ಉನ್ನತ ಅಧಿಕಾರಿಗಳಿಗೂ ನೀವು ಲಿಖಿತ ರೂಪದಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಕಿರಣ್ ನೇಮಗೌಡ, ಅಥಣಿ, ಬೆಳಗಾವಿ ಜಿಲ್ಲೆ.

- **ಪ್ರಶ್ನೆ:** ನಾನು ವಿದ್ಯಾರ್ಥಿಯಾಗಿದ್ದು, ದೀರ್ಘಾವಧಿ ಸಂಪತ್ತನ್ನು ಸೃಷ್ಟಿಸುವ ಗುರಿ ಹೊಂದಿದ್ದೇನೆ. ಸಣ್ಣ ಉಳಿತಾಯದೊಂದಿಗೆ ನಾನು ಮ್ಯೂಚುವಲ್ ಫಂಡ್‌ಗಳಲ್ಲಿ ಹೇಗೆ ಹೂಡಿಕೆ ಪ್ರಾರಂಭಿಸಬಹುದು. ಕಡಿಮೆ ಅಪಾಯದೊಂದಿಗೆ ಸಮತೋಲಿತ ಬೆಳವಣಿಗೆ ಹೊಂದಲು ಯಾವ ರೀತಿಯ ಫಂಡ್‌ಗಳನ್ನು ಪರಿಗಣಿಸಬೇಕು?

ಉತ್ತರ: ನೀವು ವಿದ್ಯಾರ್ಥಿ ಜೀವನದ ಹಂತದಲ್ಲೇ ದೀರ್ಘಾವಧಿ ಹೂಡಿಕೆ ಮಾಡಲು ಮನಸ್ಸು ಮಾಡಿರುವುದು ದೊಡ್ಡ ವಿಚಾರ. ಮ್ಯೂಚುವಲ್ ಫಂಡ್‌ಗಳ ಮೂಲ ಉದ್ದೇಶ ಹೂಡಿಕೆಯಲ್ಲಿ ಆಸಕ್ತಿ ಇರುವ ವರ್ಗದಿಂದ ಹಣ ಸಂಗ್ರಹಿಸಿ, ಅವರಿಗೆ ನಿರ್ದಿಷ್ಟ ಗುರಿಯ ಸೂಚ್ಯಂಕಕ್ಕಿಂತ ಅಥವಾ ಅದೇ ವರ್ಗದ ಇತರೆ ಫಂಡ್‌ಗಳ ಸರಾಸರಿ ಲಾಭಕ್ಕಿಂತ ತುಸು ಹೆಚ್ಚಿನ ಲಾಭ ಮಾಡಿ ಕೊಡುವುದಾಗಿದೆ. ಇದರಿಂದ ಫಂಡ್ ನಿರ್ವಹಿಸುವ ವ್ಯಕ್ತಿಗಳ ಕ್ಷಮತೆ ಅರಿವಿಗೆ ಬರುತ್ತದೆ.

ಉದಾಹರಣೆಗೆ ನಿಫ್ಟಿ ಸೂಚ್ಯಂಕವನ್ನು ಮಾನದಂಡವಾಗಿ ಪರಿಗಣಿಸುವ ವಿವಿಧ ಇಂಡೆಕ್ಸ್ ಫಂಡ್‌ಗಳನ್ನು ಪರಿಗಣಿಸುವುದಾದರೆ ಮಾಸಿಕವಾಗಿ ಸೂಚ್ಯಂಕ ಶೇ 5ರಷ್ಟು ಏರಿಕೆ ಕಂಡಾಗ ಅದಕ್ಕಿಂತ ಅಧಿಕ ಲಾಭ ಗಳಿಸಿಕೊಡುವ ಫಂಡ್ ಅಥವಾ ಕುಸಿಯುತ್ತಿರುವಾಗ ಅದೇ ಸೂಚ್ಯಂಕಕ್ಕಿಂತ ಕಡಿಮೆ ಕುಸಿತಕ್ಕೊಳಗಾಗುವಂತೆ ನಿರ್ವಹಿಸುವುದು ಫಂಡ್ ಮ್ಯಾನೇಜರ್‌ನ ನಿಪುಣತೆ ತೋರಿಸುತ್ತದೆ. ಹೂಡಿಕೆಯ ಆಯ್ಕೆಯಲ್ಲಿ ಈ ವಿಚಾರವನ್ನು ಗಮನದಲ್ಲಿ ಇರಲಿ. ಫಂಡ್‌ಗಳ ತುಲನೆಯನ್ನು ಇಂಡೆಕ್ಸ್ ಜೊತೆ ಸೂಕ್ಷ್ಮವಾಗಿ ಮಾಡಿ.

ನೀವು ಹೂಡಿಕೆ ಆರಂಭಿಸುವುದಿದ್ದರೆ, ಇಂಡೆಕ್ಸ್ ಸೂಚ್ಯಂಕ ಆಧಾರಿತ ಫಂಡ್‌ಗಳನ್ನು ಮೊದಲು ಆಯ್ಕೆ ಮಾಡಿ. ಇದು ನಿಮಗೆ ವಿವಿಧ ಸನ್ನಿವೇಶದಲ್ಲಿ ಮಾರುಕಟ್ಟೆ ಏರಿಳಿತಗಳ ಅನುಭವ ಮಾಡಿಕೊಡುತ್ತದೆ. ಅಲ್ಲದೆ, ಇಂಡೆಕ್ಸ್ ಫಂಡ್‌ಗಳು ಯಾವತ್ತೂ ಆಯ್ಕೆ ಮಾಡಿದ ಇಂಡೆಕ್ಸ್‌ನ ತೂಕಕ್ಕೆ ಸಮನಾಗಿ ಇರುವುದರಿಂದ ಅದರಂತೆಯೇ ವ್ಯವಹರಿಸುತ್ತದೆ. ಇವು ವಿಪರೀತ ಕುಸಿತ ಕಾಣುವ ಸನ್ನಿವೇಶಗಳು ತೀರಾ ವಿರಳ.

ಕಳೆದ ಕೆಲವು ವರ್ಷದಿಂದ ಯಾವುದೇ ಇಂಡೆಕ್ಸ್ ಆಗಿರಲಿ, ದೀರ್ಘಾವಧಿಯಲ್ಲಿ ನಿಧಾನವಾಗಿಯಾದರೂ ಏರುಗತಿಯನ್ನೇ ಕಂಡಿದೆ. ಹೀಗಾಗಿ, ಮೊದಲ ಹಂತದ ಅನುಭವಕ್ಕೆ ಇಂಡೆಕ್ಸ್ ಮ್ಯೂಚುವಲ್ ಫಂಡ್ ಉತ್ತಮವಾಗಿದೆ. ಕ್ರಮೇಣ ಉತ್ತಮ ಈಕ್ವಿಟಿ ಆಧಾರಿತ ಫಂಡ್‌ಗಳ ಬಗ್ಗೆ ಗಮನಹರಿಸಿ. ಅದಕ್ಕಾಗಿ ಹೆಚ್ಚಿನ ಮಾಹಿತಿ ಸಂಗ್ರಹಿಸಿ ಫಂಡ್‌ಗಳ ವಿಶೇಷತೆಯನ್ನು ಅರ್ಥೈಸಿಕೊಳ್ಳಿ.

ದೀರ್ಘಾವಧಿ ಸಂಪತ್ತು ಸೃಷ್ಟಿಸುವ ಉದ್ದೇಶ ಹೊಂದಿದ್ದಾಗ ಅಲ್ಪಾವಧಿ ಸಮಯದಲ್ಲಾಗುವ ಏರುಪೇರುಗಳು ಗೌಣ. ಇಲ್ಲಿ ಯೋಜಿತ ನಿರ್ಧಾರ ಹಾಗೂ ಸರಿಯಾದ ಫಂಡ್‌ಗಳ ಸಕಾಲಿಕ ಆಯ್ಕೆಯೇ ಎಲ್ಲದಕ್ಕಿಂತ ಮುಖ್ಯ. ಒಂದಷ್ಟು ಅಪಾಯ ನಿರ್ವಹಿಸುವ ಗುಣವೂ ಅಗತ್ಯ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್:businessdesk@prajavani.co.in

ಬಿಇಎಂಎಲ್‌ಗೆ ಹೈಸ್ಪೀಡ್ ರೈಲು ನಿರ್ಮಾಣ ಗುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಹೈಸ್ಪೀಡ್ ರೈಲುಗಳ ವಿನ್ಯಾಸ ಹಾಗೂ ತಯಾರಿಕೆಗೆ ಸಂಬಂಧಿಸಿದಂತೆ ಚೆನ್ನೈನಲ್ಲಿರುವ ಭಾರತೀಯ ರೈಲ್ವೆ ಇಲಾಖೆಯ ಅಧೀನಕ್ಕೆ ಸೇರಿರುವ ಇಂಟಗ್ರಲ್ ಕೋಚ್ ಫ್ಯಾಕ್ಟರಿಯಿಂದ (ಐಸಿಎಫ್) ₹866.87 ಕೋಟಿ ಮೌಲ್ಯದ ಗುತ್ತಿಗೆ ಲಭಿಸಿದೆ ಎಂದು ಸರ್ಕಾರಿ ಸ್ವಾಮ್ಯದ ಬಿಇಎಂಎಲ್ ಮಂಗಳವಾರ ತಿಳಿಸಿದೆ.

'ಪ್ರತಿ ರೈಲು ಎಂಟು ಬೋಗಿಗಳನ್ನು ಒಳಗೊಂಡಿರಲಿದೆ. ಗಂಟೆಗೆ 280 ಕಿ.ಮೀ ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹೊಂದಿರಲಿದೆ. ಈ ರೈಲುಗಳು ಸಂಪೂರ್ಣ ಹವಾನಿಯಂತ್ರಣ ವ್ಯವಸ್ಥೆ ಹೊಂದಿರಲಿವೆ. ಜೊತೆಗೆ, ಪ್ರಯಾಣಿಕರಿಗೆ ಆಧುನಿಕ ಸೌಕರ್ಯ ಒದಗಿಸಲಾಗುವುದು' ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

'ಈ ಮಾದರಿಯ ಒಂದು ರೈಲಿನ ವೆಚ್ಚ ₹27.86 ಕೋಟಿಯಾಗಲಿದೆ. ಇದರ ವಿನ್ಯಾಸ, ಅಭಿವೃದ್ಧಿ ಸೇರಿ ಎಲ್ಲಾ ಅನುಭವಗಳನ್ನು ಬುಲೆಟ್ ರೈಲು ಅಭಿವೃದ್ಧಿಗೆ ಬಳಸಲಾಗುವುದು' ಎಂದು ಹೇಳಿದೆ.

'ಭಾರತದ ಹೈಸ್ಪೀಡ್ ರೈಲು ಅಭಿವೃದ್ಧಿ ಯೋಜನೆಯಲ್ಲಿ ಇದು ಹೊಸ ಮೈಲುಗಲ್ಲು ಆಗಲಿದೆ. ಸ್ವದೇಶಿ ನಿರ್ಮಿತ ರೈಲು ಇದಾಗಲಿದೆ. ಈ ರೈಲನ್ನು ಬೆಂಗಳೂರಿನಲ್ಲಿ ಕಂಪನಿಗೆ ಸೇರಿದ ರೈಲ್ವೆ ಕೋಚ್ ಸಂಕೀರ್ಣದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ. 2026ರ ಅಂತ್ಯಕ್ಕೆ ಹಸ್ತಾಂತರಿಸುವ ಗುರಿ ಹೊಂದಲಾಗಿದೆ' ಎಂದು ವಿವರಿಸಿದೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1530 (1540)
ಸೋಯಾ (ರಿಫೈನ್ಡ್)	₹1270 (1280)
ಸೂರ್ಯಕಾಂತಿ (ರಿಫೈನ್ಡ್)	₹1290 (1300)
ಪಾಮೋಲಿನ್	₹1260 (1290)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹3500-4500
ಮಧ್ಯಮ	₹2000-3500
ಸಣ್ಣ	₹1000-2500

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹14500-15426
ತಿಪಟೂರು	₹15000-15300

ಭಾರತ–ಕೆನಡಾ ಬಿಕ್ಕಟ್ಟು ತಾರಕಕ್ಕೆ

ಒಂದನೇ ಪುಟದಿಂದ...

ಈ ಆರೋಪವನ್ನು ಭಾರತ ಅಲ್ಲಗಳೆದಿದೆ.

ನಿಜ್ಜರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈಚೆಗಿನ ಬೆಳವಣಿಗೆಗಳಿಂದ ಭಾರತ-ಕೆನಡಾ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ಏರ್ಪಟ್ಟಿದೆ. ಹತ್ಯೆ ಪ್ರಕರಣದಲ್ಲಿ ಭಾರತದ ಹೈಕಮಿಷನರ್ ಹಾಗೂ ಇತರ ರಾಜತಾಂತ್ರಿಕರನ್ನು ತನಿಖೆಗೆ ಒಳಪಡಿಸುವುದಾಗಿ ಕೆನಡಾ, ಭಾನುವಾರ ಹೇಳಿತ್ತು. ಇದಕ್ಕೆ ಪ್ರತಿಯಾಗಿ ಭಾರತವು, ಕೆನಡಾದಲ್ಲಿರುವ ತನ್ನ ಹೈಕಮಿಷನರ್ ಸಂಜಯ್ ಕುಮಾರ್ ವರ್ಮಾ ಅವರನ್ನು ವಾಪಸ್ ಕರೆಸಿಕೊಂಡಿತ್ತು.

ಕೆನಡಾ ಸರ್ಕಾರವು ಭಾರತದ ಆರು ರಾಜತಾಂತ್ರಿಕ ಅಧಿಕಾರಿಗಳಿಗೆ ದೇಶ ತೊರೆಯುವಂತೆ ಸೂಚಿಸಿದರೆ, ಅದಕ್ಕೆ ಪ್ರತಿಯಾಗಿ ಭಾರತ ಕೂಡಾ ಕೆನಡಾದ ಆರು ರಾಜತಾಂತ್ರಿಕರಿಗೆ ಅಕ್ಟೋಬರ್ 19ರ ಒಳಗಾಗಿ ದೇಶ ಬಿಟ್ಟು ಹೋಗುವಂತೆ ಸೂಚಿಸಿತ್ತು.

ಟ್ರುಡೊ ಗಂಭೀರ ಆರೋಪ: ಭಾರತದ ಏಜೆಂಟರು ಕೆನಡಾದಲ್ಲಿ 'ಹಿಂಸೆಗೆ ಕುಮ್ಮಕ್ಕು' ನೀಡುತ್ತಿದ್ದಾರೆ ಎಂದು ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸರು (ಆರ್‌ಸಿಎಂಪಿ) ಸೋಮವಾರ ಆರೋಪಿಸಿದ್ದಾರೆ. ಅದರ ಬೆನ್ನಲ್ಲೇ ಸುದ್ದಿಗೋಷ್ಠಿ ನಡೆಸಿದ ಟ್ರುಡೊ ಭಾರತದ ವಿರುದ್ಧ ಸರಣಿ ಆರೋಪಗಳನ್ನು ಮಾಡಿದ್ದಾರೆ.

'ಭಾರತವು ತನ್ನ ರಾಜತಾಂತ್ರಿಕರನ್ನು ಬಳಸಿಕೊಂಡು ಸಂಘಟಿತ ಅಪರಾಧಗಳ ಮೂಲಕ ಕೆನಡಾ ಪ್ರಜೆಗಳ ಮೇಲೆ ದಾಳಿ ಮಾಡುತ್ತಿದೆ. ಹಿಂಸೆ ಹರಡುವುದಲ್ಲದೆ, ಕೊಲೆ ಕೃತ್ಯಗಳನ್ನೂ ನಡೆಸಿ ಇಲ್ಲಿನ ಜನರಲ್ಲಿ ಅಸುರಕ್ಷತೆಯ ಭಾವನೆ ಮೂಡಿಸಿದೆ. ಇಂತಹ ಕೃತ್ಯಗಳ ಮೂಲಕ ಭಾರತ ಬಹುದೊಡ್ಡ ತಪ್ಪು ಮಾಡಿದೆ. ಇದನ್ನು ಒಪ್ಪಲಾಗದು' ಎಂದಿದ್ದಾರೆ. 'ನಿಜ್ಜರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಅಮೆರಿಕ ಒಳಗೊಂಡಂತೆ ನಮ್ಮ ಐದು ಮಿತ್ರ ರಾಷ್ಟ್ರಗಳೊಂದಿಗೆ ಹಂಚಿಕೊಂಡಿದ್ದೇವೆ. ಹತ್ಯೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಅಮೆರಿಕ ಕೂಡಾ ಭಾರತದಿಂದ ಇದೇ ರೀತಿಯ ವರ್ತನೆಯನ್ನು ಎದುರಿಸಬೇಕಾಗಿ ಬಂದಿತ್ತು' ಎಂದಿದ್ದಾರೆ.

ಆದರೆ, ಭಾರತ- ಕೆನಡಾ ನಡುವಣ ಉದ್ಭವಿಸಿರುವ ರಾಜತಾಂತ್ರಿಕ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಅಮೆರಿಕ ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಟ್ರುಡೊ ಅವರು ಈ ಬೆಳವಣಿಗೆಗಳ ಬಗ್ಗೆ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರ ಜತೆ ಚರ್ಚಿಸಿದ್ದಾರೆ.

ಭಾರತ ತಿರುಗೇಟು: 'ಕೆನಡಾ ಪ್ರಧಾನಿ ಅವರು ಪತ್ರಿಕಾಗೋಷ್ಠಿಯಲ್ಲಿ ಅದೇ ಹಳೆಯ ವಿಷಯಗಳು ಮತ್ತು ಹಳೆಯ ಕಾರಣಗಳನ್ನು ಹೇಳಿದ್ದಾರೆ' ಎಂದು ಭಾರತ ತಿರುಗೇಟು ನೀಡಿದೆ.

'ಭಾರತ ಕೇಳಿರುವ ಎಲ್ಲ ಪುರಾವೆಗಳನ್ನು ನೀಡಲಾಗಿದೆ ಎಂದು ಕೆನಡಾ ಅಧಿಕಾರಿಗಳು ಹೇಳಿದ್ದಾರೆ. ನವದೆಹಲಿಯಲ್ಲಿರುವ ಕೆನಡಾ ಡೆಪ್ಯುಟಿ ಹೈಕಮಿಷನರ್ ಸ್ಟಿವರ್ಟ್ ವೀಲರ್ಸ್ ಅವರೂ ಮಾಧ್ಯಮಗಳ ಮುಂದೆ ಇದೇ ಮಾತನ್ನು ಪುನರುಚ್ಚರಿಸಿದ್ದಾರೆ. ಆದರೆ, ಕೆನಡಾ ಇದುವರೆಗೂ ಪುರಾವೆ ಒದಗಿಸಿಲ್ಲ' ಎಂದು ಸ್ಪಷ್ಟಪಡಿಸಿದೆ.

'ಅಸ್ಪಷ್ಟ ಆರೋಪಗಳನ್ನು ಮಾಡಿ, ಅದನ್ನು ನಿರಾಕರಿ ಸುವ ಹೊರೆಯನ್ನು ಭಾರತದ ಮೇಲೆ ಹಾಕುವ ಕೆಲಸವನ್ನು ಕೆನಡಾ ಮೊದಲಿನಿಂದಲೂ ಮಾಡಿಕೊಂಡು ಬರುತ್ತಿದೆ' ಎಂದಿದೆ.

'ಬಿಷ್ಣೋಯಿ ಗ್ಯಾಂಗ್ ಜತೆ ನಂಟು'

ಒಟ್ಟಾವಾ (ಪಿಟಿಐ): ಭಾರತ ಸರ್ಕಾರದ ಏಜೆಂಟ್‌ಗಳು ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಜತೆ ಸೇರಿಕೊಂಡು ಕೆನಡಾದಲ್ಲಿರುವ ದಕ್ಷಿಣ ಏಷ್ಯಾದ ಸಮುದಾಯದವರನ್ನು ತಮ್ಮ ಗುರಿಯಾಗಿಸುತ್ತಿದ್ದಾರೆ ಎಂದು ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸರು (ಆರ್‌ಸಿಎಂಪಿ) ಆರೋಪಿಸಿದ್ದಾರೆ.

ಆರ್‌ಸಿಎಂಪಿ ಕಮಿಷನರ್ ಮೈಕ್ ಡ್ಯುಹೆಮ್ ಮತ್ತು ಡೆಪ್ಯುಟಿ ಕಮಿಷನರ್ ಬ್ರಿಜೆಟ್ ಗಾವಿನ್ ಅವರು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಹೇಳಿಕೆ ಕೊಟ್ಟಿದ್ದಾರೆ. ಭಾರತವು ಕೆನಡಾದಲ್ಲಿರುವ ಸಿಖ್ ಸಮುದಾಯವನ್ನು ತನ್ನ ಗುರಿಯಾಗಿಸುತ್ತಿದೆಯೇ ಎಂಬ ಪ್ರಶ್ನೆಗೆ ಗಾವಿನ್, 'ಭಾರತವು ದಕ್ಷಿಣ ಏಷ್ಯಾ ಸಮುದಾಯವನ್ನು ಅದರಲ್ಲೂ ಮುಖ್ಯವಾಗಿ ಖಾಲಿಸ್ತಾನಿ ಪರ ಹೋರಾಟಗಾರರನ್ನು ಗುರಿಯಾಗಿಸುತ್ತಿದೆ' ಎಂದು ಹೇಳಿದರು. 'ಸಂಘಟಿತ ಅಪರಾಧ ಕೃತ್ಯದಲ್ಲಿ ತೊಡಗಿಸಿಕೊಂಡವರನ್ನು ಭಾರತ ಸರ್ಕಾರದ ಏಜೆಂಟ್‌ಗಳು ಬಳಸಿಕೊಳ್ಳುತ್ತಿರುವುದು ಆರ್‌ಸಿಎಂಪಿ ಗಮನಕ್ಕೆ ಬಂದಿದೆ' ಎಂದು ತಿಳಿಸಿದರು.

'ಬಿಷ್ಣೋಯಿ ಗ್ಯಾಂಗ್‌ನವರು ಕೆನಡಾದಲ್ಲಿ ಸಂಘಟಿತ ಅಪರಾಧ ಚಟುವಟಿಕೆಗಳಲ್ಲಿ ತೊಡಗಿಕೊಂಡಿದೆ. ಆ ಗ್ಯಾಂಗ್‌ನವರು ಭಾರತ ಸರ್ಕಾರದ ಏಜೆಂಟ್‌ಗಳ ಜತೆ ನಂಟು ಹೊಂದಿರುವುದಾಗಿ ನಾವು ನಂಬುತ್ತೇವೆ' ಎಂದು ಹೇಳಿದರು.

ಶಾಂತಿಪಾಲನಾ ಪಡೆ ಮೇಲೆ ಇಸ್ರೇಲ್ ದಾಳಿ ಪ್ರಕರಣ

ವಿಶ್ವಸಂಸ್ಥೆ ಭದ್ರತಾ ಮಂಡಳಿ ಕಳವಳ



ವಿಶ್ವಸಂಸ್ಥೆ (ಎಪಿ): ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯ ಸದಸ್ಯರು ಗಾಯಗೊಂಡಿರುವ ಘಟನೆಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ತೀವ್ರ ಕಳವಳ ವ್ಯಕ್ತಪಡಿಸಿದೆ.

ಲೆಬನಾನ್‌ನಲ್ಲಿರುವ ಶಾಂತಿಪಾಲನಾ ಪಡೆಯ (ಯುಎನ್‌ಐಎಫ್‌ಐಎಲ್) ನೆಲೆಯ ಮೇಲೆ ಕಳೆದ ವಾರ ನಡೆದ ದಾಳಿಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಇದೇ ಮೊದಲ ಬಾರಿಗೆ ಪ್ರತಿಕ್ರಿಯಿಸಿದೆ.

ಶಾಂತಿಪಾಲನಾ ಪಡೆಯನ್ನು ಈಗ ಇರುವ ತಾಣಗಳಲ್ಲೇ ಮುಂದುವರಿಸಲಾಗುವುದು ಎಂದು ವಿಶ್ವಸಂಸ್ಥೆ ಸ್ಪಷ್ಟಪಡಿಸಿದೆ. ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಬಂಡುಕೋರರ ವಿರುದ್ಧ ಭೂಸೇನಾ ಕಾರ್ಯಾಚರಣೆ ನಡೆಸುತ್ತಿರುವ ಇಸ್ರೇಲ್ ಸೇನೆ, ಶಾಂತಿಪಾಲನಾ ಪಡೆಯ ಸದಸ್ಯರಿಗೆ ತಾವು ಇರುವ ಸ್ಥಳದಿಂದ 5 ಕಿ.ಮೀ. ನಷ್ಟು ಉತ್ತರಕ್ಕೆ ತೆರಳುವಂತೆ ಸೂಚಿಸಿತ್ತು.

'ಯುಎನ್‌ಐಎಫ್‌ಐಎಲ್ ಸಿಬ್ಬಂದಿ ಮತ್ತು ವಿಶ್ವಸಂಸ್ಥೆಗೆ ಸೇರಿದ ಆವರಣದ ಸುರಕ್ಷತೆ ಮತ್ತು ಭದ್ರತೆಯನ್ನು ಗೌರವಿಸುವಂತೆ ಸಂಬಂಧಪಟ್ಟ ಎಲ್ಲರನ್ನೂ ಕೇಳಿಕೊಳ್ಳುತ್ತೇವೆ' ಎಂದು ಭದ್ರತಾ ಮಂಡಳಿಯ ಪ್ರಕಟಣೆ ತಿಳಿಸಿದೆ. ಆದರೆ ತನ್ನ ಪ್ರಕಟಣೆಯಲ್ಲಿ ಇಸ್ರೇಲ್, ಲೆಬನಾನ್ ಅಥವಾ ಹಿಜ್ಬುಲ್ಲಾ ಒಳಗೊಂಡಂತೆ ಯಾರ ಹೆಸರನ್ನೂ ಉಲ್ಲೇಖಿಸಿಲ್ಲ.

ವಿಶ್ವಸಂಸ್ಥೆಯಲ್ಲಿರುವ ಅಮೆರಿಕದ ಡೆಪ್ಯುಟಿ ರಾಯಭಾರಿ ರಾಬರ್ಟ್ ವುಡ್, 'ಸದ್ಯ ಜಗತ್ತಿನ ಎಲ್ಲೆಡೆಯಿರುವ ಜನರ ಮನಸ್ಸಿನಲ್ಲಿ ಏನಿದೆಯೋ, ಅದೇ ವಿಷಯದ ಕುರಿತು ಭದ್ರತಾ ಮಂಡಳಿ ಒಮ್ಮತದಿಂದ ಮಾತನಾಡಿರುವುದು ಉತ್ತಮ ಬೆಳವಣಿಗೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ಭದ್ರತಾ ಮಂಡಳಿಯು ನಿಮ್ಮ ಮೇಲೆ ಕಾಳಜಿ ವಹಿಸಿದೆ. ಇಲ್ಲಿನ ಪರಿಸ್ಥಿತಿಯನ್ನು ಅವಲೋಕಿಸುತ್ತಿದೆ ಎಂಬ ಸಂದೇಶವನ್ನು ಲೆಬನಾನ್‌ನ ಜನರಿಗೆ ನೀಡಲು ಸಾಧ್ಯವಾಗಿದೆ' ಎಂದಿದ್ದಾರೆ.

ಉನ್ನತ ಮಟ್ಟದ ತನಿಖೆ: 'ಕಾರ್ಯಾಚರಣೆ ವೇಳೆ ಶಾಂತಿಪಾಲನಾ ಪಡೆಯ ಸದಸ್ಯರೊಂದಿಗೆ ನಿರಂತರ ಸಂಪರ್ಕ ಸಾಧಿಸಲು ಇಸ್ರೇಲ್ ಪ್ರಯತ್ನಿಸಿದೆ. ಶಾಂತಿಪಾಲನಾ ಪಡೆಯ ಸಿಬ್ಬಂದಿ ಗಾಯಗೊಂಡಿದ್ದರೆ, ಆ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲಾಗುವುದು' ಎಂದು ಇಸ್ರೇಲ್ ಸೇನೆಯ ವಕ್ತಾರ ಲೆಫ್ಟಿನೆಂಟ್ ಕರ್ನಲ್ ನಡಾವ್ ಶೊಶಾನಿ ಹೇಳಿದ್ದಾರೆ.

ಇರಾನ್‌ಗೆ ಪ್ರತ್ಯುತ್ತರ: ದೇಶದ ಹಿತಾಸಕ್ತಿಗೆ ಅನುಗುಣವಾಗಿ ನಿರ್ಧಾರ ಕೈಗೊಳ್ಳಲಾಗುವುದು- ಪ್ರಧಾನಿ ಕಚೇರಿ

ಅಮೆರಿಕದ ಮಾತು ಕೇಳುವುದಿಲ್ಲ: ಇಸ್ರೇಲ್

ಜೆರುಸಲೆಂ/ರೋಮ್ (ಎಎಫ್‌ಪಿ/ ರಾಯಿಟರ್ಸ್): 'ನಮ್ಮ ಮೇಲೆ ಇರಾನ್ ಸಿಡಿಸಿದ 200 ಕ್ಷಿಪಣಿಗಳಿಗೆ ಹೇಗೆ ಪ್ರತ್ಯುತ್ತರ ನೀಡಬೇಕು ಎಂದು ಅಮೆರಿಕವನ್ನು ಕೇಳಿ ನಾವು ನಿರ್ಧರಿಸುವುದಿಲ್ಲ. ನಮ್ಮ 'ದೇಶದ ಹಿತಾಸಕ್ತಿ'ಗೆ ಅನುಗುಣವಾಗಿ ನಾವೇ ನಿರ್ಧರಿಸುತ್ತೇವೆ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರ ಕಚೇರಿ ಮಂಗಳವಾರ ಹೇಳಿದೆ.

ಇರಾನ್‌ನ ಪ್ರಮುಖ ಕಮಾಂಡರ್ ಇಸ್ಮಾಯಿಲ್ ಖಾನಿ ಅವರು ಹಲವು ದಿನಗಳಿಂದ ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ. ಇಸ್ರೇಲ್‌ನ ವಾಯು ದಾಳಿಯಲ್ಲಿ ಖಾನಿ ಅವರ ಹತ್ಯೆ ಆಗಿದೆ ಎಂಬ ಸುದ್ದಿ ಹರಡಿತ್ತು. ಆದರೆ, ಮಂಗಳವಾರ ಖಾನಿ ಅವರು ಸಾರ್ವಜನಿಕ ವಾಗಿ ಕಾಣಿಸಿಕೊಂಡಿದ್ದಾರೆ. ಈ ಬೆಳವಣಿಗೆ ಬಳಿಕ ನೇತನ್ಯಾಹು ಕಚೇರಿ ಈ ಹೇಳಿಕೆ ನೀಡಿದೆ.



ಇಸ್ರೇಲ್–ಹಿಜ್ಬುಲ್ಲಾ ಸಂಘರ್ಷದಿಂದ ಬೈರೂತ್‌ನ ತಾತ್ಕಾಲಿಕವಾಗಿ ಮುಚ್ಚಿದ್ದ ಶಾಲೆಗಳು ಮಂಗಳವಾರ ಪ್ರಾರಂಭವಾಗಿದ್ದು, ಮಕ್ಕಳು ಹಾಜರಾದರು —ಎಎಫ್‌ಪಿ ಚಿತ್ರ

'ಅಮೆರಿಕದ ಅಭಿಪ್ರಾಯವನ್ನು ನಾವು ಕೇಳುತ್ತೇವೆ. ಆದರೆ, ನಮ್ಮದೇ ಅಂತಿಮ ನಿರ್ಧಾರವಾಗಿರಲಿದೆ' ಎಂದು ಇಸ್ರೇಲ್ ಹೇಳಿದೆ. ಕೆಲವು ದಿನಗಳ ಹಿಂದೆ ನೇತನ್ಯಾಹು ಹಾಗೂ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ದೂರವಾಣಿ ಮೂಲಕ ಮಾತುಕತೆ ನಡೆಸಿದ್ದರು. 'ಇರಾನ್‌ನ ಅಣುಸ್ಥಾವರ ಹಾಗೂ ತೈಲ ಘಟಕಗಳ ಮೇಲೆ ದಾಳಿ ನಡೆಸಬಾರದು' ಎಂದು ಅಮೆರಿಕವು ಇಸ್ರೇಲ್‌ಗೆ ಈ ವೇಳೆ ಎಚ್ಚರಿಕೆ ನೀಡಿತ್ತು.

ಇದಕ್ಕೆ ಉತ್ತರಿಸಿದ್ದ ಇಸ್ರೇಲ್, 'ನಾವು ಸೇನಾ ನೆಲೆಗಳ ಮೇಲೆ ಅಷ್ಟೇ ಗುರಿ ಇರಿಸಿದ್ದೇವೆ' ಎಂದು ಹೇಳಿತ್ತು. ಆದರೆ, ಮಂಗಳವಾರದ ಹೊತ್ತಿಗೆ ಇಸ್ರೇಲ್ ಬೇರೆಯದೇ ಧ್ವನಿಯಲ್ಲಿ ಹೇಳಿಕೆ ನೀಡಿದೆ. ಇಸ್ರೇಲ್-ಅಮೆರಿಕ ಮಾತುಕತೆಗಳ ಬಗ್ಗೆ 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆ ವರದಿ ಮಾಡಿದೆ.

'ವೆಸ್ಟ್ ಬ್ಯಾಂಕ್, ಲೆಬನಾನ್ ಆಕ್ರಮಣಕ್ಕೆ ಯತ್ನ'

'ವೆಸ್ಟ್ ಬ್ಯಾಂಕ್ ಹಾಗೂ ಲೆಬನಾನ್‌ನನ್ನು ಆಕ್ರಮಿಸಿಕೊಂಡು, ಅಲ್ಲಿ ನೆಲೆ ನಿಲ್ಲಬೇಕು ಎನ್ನುವುದಕ್ಕಾಗಿ ಇಸ್ರೇಲ್ ಉದ್ದೇಶಪೂರ್ವಕವಾಗಿಯೇ ಯುದ್ಧವನ್ನು ವಿಸ್ತರಿಸಿದೆ. ಇದು ಇಸ್ರೇಲ್‌ನ ಬಹಳ ಹಿಂದಿನ ಯೋಜನೆಯಾಗಿತ್ತು' ಎಂದು ಕತಾರ್ ರಾಜ ತಮೀಮ್ ಬಿನ್ ಹಮದ್ ಅಲಿ ಥಾನಿ ಮಂಗಳವಾರ ಆರೋಪಿಸಿದರು.

ದಾಳಿ: ಪ್ಯಾಲೆಸ್ಟೀನ್‌ನ 40 ಮಂದಿ ಸಾವು

ಗಾಜಾಪಟ್ಟಿಯ ಮೇಲೆ ಮಂಗಳವಾರ ಇಸ್ರೇಲ್ ಸೇನೆ ನಡೆಸಿದ ದಾಳಿಯಲ್ಲಿ ಪ್ಯಾಲೆಸ್ಟೀನ್‌ನ ಒಟ್ಟು 40 ಮಂದಿ ಮೃತಪಟ್ಟಿದ್ದಾರೆ. ಗಾಜಾಪಟ್ಟಿಯ ದಕ್ಷಿಣ ಭಾಗದ ಪ್ರದೇಶಗಳ ಮೇಲೆ ಇಸ್ರೇಲ್ ನಡೆಸಿದ ದಾಳಿಗೆ 6 ಮಕ್ಕಳು, ಇಬ್ಬರು ಮಹಿಳೆಯರು ಸೇರಿ ಒಟ್ಟು 15 ಮಂದಿ ಮೃತಪಟ್ಟಿದ್ದಾರೆ.

ಲೆಬನಾನ್‌ಗೆ ಭೇಟಿ ನೀಡುತ್ತೇನೆ: ಮೆಲೊನಿ

'ಲೆಬನಾನ್‌ನಲ್ಲಿರುವ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿರುವ ತಮ್ಮ ಸೈನಿಕರ ಭದ್ರತೆಯನ್ನು ಖಚಿತಪಡಿಸಬೇಕು' ಎಂದು ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರು ಮಂಗಳವಾರ ಹೇಳಿದರು. ಶಾಂತಿಪಾಲನಾ ಪಡೆಯಲ್ಲಿ ಇಟಲಿಯ 1,000 ಸೈನಿಕರಿದ್ದಾರೆ.

ಲೆಬನಾನ್‌ನಲ್ಲಿನ ಈ ಪಡೆಯ ನೆಲೆಗಳ ಮೇಲೆ ಇಸ್ರೇಲ್ ದಾಳಿ ನಡೆಸಿತ್ತು. 'ಇಸ್ರೇಲ್ ದಾಳಿ ನ್ಯಾಯಸಮ್ಮತವಾಗಿಲ್ಲ' ಎಂದು ಮೆಲೊನಿ ಸೆನೆಟ್‌ನಲ್ಲಿ ಹೇಳಿಕೆ ನೀಡಿದ್ದಾರೆ. ಅಲ್ಲದೆ, ಲೆಬನಾನ್‌ಗೆ ಭೇಟಿ ನೀಡುವುದಾಗಿಯೂ ತಿಳಿಸಿದ್ದಾರೆ.

ಭಾರತ– ನ್ಯೂಜಿಲೆಂಡ್ ಮೊದಲ ಟೆಸ್ಟ್ ಇಂದಿನಿಂದ • ಉದ್ಯಾನನಗರಿಯಲ್ಲಿ ಯಲ್ಲೋ ಅಲರ್ಟ್

ಮಳೆಯಾಟವೋ, ಕ್ರಿಕೆಟ್ ಆಟವೋ?

• ಗಿರೀಶ ದೊಡ್ಡಮನಿ

ಬೆಂಗಳೂರು: ಯಾವುದೇ ಕ್ರಿಕೆಟ್ ಪಂದ್ಯ ನಡೆಯುವ ಮುನ್ನಾದಿನ ಅಭಿಮಾನಿಗಳ ವಲಯದಲ್ಲಿ ಸೋಲು, ಗೆಲುವುಗಳ ಲೆಕ್ಕಾಚಾರ ನಡೆಯುತ್ತದೆ. ಆದರೆ ಬುಧವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ ಭಾರತ ಮತ್ತು ನ್ಯೂಜಿಲೆಂಡ್ ಟೆಸ್ಟ್ ಪಂದ್ಯದ ಸನ್ನಿವೇಶ ವಿಭಿನ್ನವಾಗಿದೆ. ಈ ಪಂದ್ಯ ಸುಸೂತ್ರವಾಗಿ ನಡೆಯಲು ಮಳೆಯು ಅವಕಾಶ ಕೊಡುವುದೇ ಎಂಬ ಮಾತುಕತೆಗಳು ಜೋರಾಗಿವೆ.

ಮಂಗಳವಾರ ಬೆಳಗಿನ ಜಾವ ದಿಂದಲೇ ಉದ್ಯಾನನಗರಿಯಲ್ಲಿ ಮಳೆ ಸುರಿಯುತ್ತಿದೆ. ಇನ್ನೂ ಎರಡು, ಮೂರು ದಿವಸ ಇದೇ ವಾತಾವರಣ ಮುಂದುವರಿಯುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಅದರಿಂದಾಗಿ ಪಂದ್ಯದ ಬಹುತೇಕ ಸಮಯವು ಮಳೆಯಲ್ಲಿ ಕೊಚ್ಚಿಹೋಗುವ ಸಾಧ್ಯತೆ ಇದೆ.

‘ಕನಿಷ್ಠ ಎರಡು ಅಥವಾ ಮೂರು ದಿನ ಆಟ ನಡೆದರೂ ಸಾಕು. ಭಾರತ ತಂಡ ಗೆಲ್ಲುವುದು ಖಚಿತ’ ಎಂಬ ವಿಶ್ವಾಸದ ಮಾತುಗಳಿಗೂ ಕಡಿಮೆಯೇನಿಲ್ಲ. ಇದಕ್ಕೆ ಕಾರಣ; ಈಚೆಗಷ್ಟೇ ಕಾನ್ಪುರದ ಗ್ರೀನ್ ಪಾರ್ಕ್‌ನಲ್ಲಿ ನಡೆದಿದ್ದ ಬಾಂಗ್ಲಾ ಎದುರಿನ ಟೆಸ್ಟ್‌ನಲ್ಲಿ ಭಾರತ ಸಾಧಿಸಿದ್ದ ವಿಜಯ. ಆ ಪಂದ್ಯದ ಎರಡೂವರೆ ದಿನಗಳ ಆಟವು ಮಳೆಗಾಹುತಿಯಾಗಿತ್ತು. ಕೊನೆಯ ಎರಡು ದಿನ ಮಳೆ ಬರಲಿಲ್ಲ. ಈ ಅವಧಿಯಲ್ಲಿಯೇ ಭಾರತ ಅಬ್ಬರಿಸಿತ್ತು. ಅಮೋಘ ಜಯ ಸಾಧಿಸಿತ್ತು. ಅದರೊಂದಿಗೆ ಸ್ವದೇಶದಲ್ಲಿ ಸತತ 18ನೇ ಸರಣಿ ಗೆದ್ದ ದಾಖಲೆ ಬರೆಯಿತು.

ಬಾಂಗ್ಲಾ ವಿರುದ್ಧ ತೋರಿದ ಆಕ್ರಮಣಶೀಲ ಆಟವನ್ನೇ ಇಲ್ಲಿಯೂ ಮುಂದುವರಿಸುವ ತವಕದಲ್ಲಿ ರೋಹಿತ್ ಶರ್ಮಾ ಬಳಗವಿದೆ. ಸೋಮವಾರ ಮುಖ್ಯ ಕೋಚ್ ಗೌತಮ್ ಗಂಭೀರ್ ಕೂಡ ಇದನ್ನೇ ಸೂಚ್ಯವಾಗಿ ಹೇಳಿದ್ದರು.

ಕಾನ್ಪುರ ಕ್ರೀಡಾಂಗಣದಲ್ಲಿ ಮಳೆ ನೀರು ನಿರ್ವಹಣೆಗೆ ಸೂಕ್ತ ವ್ಯವಸ್ಥೆ ಇರಲಿಲ್ಲ. ಆದರೆ, ಚಿನ್ನಸ್ವಾಮಿ ಅಂಗಳದಲ್ಲಿ ಸಬ್ ಏರ್ ಸಿಸ್ಟಮ್ ಎಂಬ ಅತ್ಯಾಧುನಿಕ ವ್ಯವಸ್ಥೆ ಇದೆ. ಮಳೆ ಬಂದು ನಿಂತ ಅರ್ಧ ಗಂಟೆಯಲ್ಲಿ ಪಂದ್ಯವಾಡಲು ಮೈದಾನವನ್ನು ಸಿದ್ಧಗೊಳಿಸುವ ನುರಿತ ಸಿಬ್ಬಂದಿಯೂ ಇಲ್ಲಿದ್ದಾರೆ. ಆದರೆ ಮಳೆ ಸುರಿಯುತ್ತಲೇ ಇದ್ದರೆ, ಆಟಗಾರರು ಡ್ರೆಸ್ಸಿಂಗ್ ರೂಮ್‌ನಲ್ಲಿ ಕಾಲ ಕಳೆಯಬೇಕಷ್ಟೇ.

ಎರಡು ವರ್ಷಗಳ ನಂತರ ಇಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯವನ್ನು ಕಣ್ತುಂಬಿಕೊಳ್ಳಲು ಕ್ರಿಕೆಟ್‌ಪ್ರಿಯರು ಕಾತುರರಾಗಿದ್ದಾರೆ. ಅದರಲ್ಲೂ ತಮ್ಮ ನೆಚ್ಚಿನ ಆಟಗಾರ ವಿರಾಟ್ ಕೊಹ್ಲಿ ಆಟವನ್ನು ನೋಡುವ ತವಕದಲ್ಲಿದ್ದಾರೆ. ಕೊಹ್ಲಿ ಮತ್ತು ತಂಡದ ನಾಯಕ ರೋಹಿತ್ ಶರ್ಮಾ ಅವರು ಈಗಾಗಲೇ ಟಿ20 ಮಾದರಿಯಿಂದ ನಿವೃತ್ತಿ ಪಡೆದಿದ್ದಾರೆ. ಆದ್ದರಿಂದ ಉಳಿದ ಮಾದರಿಗಳಲ್ಲಿ ಇನ್ನು ಹೆಚ್ಚು ಕಾಲ ಆಡುವುದು ಅನುಮಾನ. ಇಬ್ಬರಿಗೂ ಬೆಂಗಳೂರಿನಲ್ಲಿ ಆಡುವ ಕೊನೆಯ ಟೆಸ್ಟ್ ಪಂದ್ಯವೂ ಇದಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಆದರೆ ಅವರಿಬ್ಬರೂ ಬ್ಯಾಟಿಂಗ್‌ನಲ್ಲಿ ಲಯಕ್ಕೆ ಮರಳುವ ಅಗತ್ಯವಿದೆ.

ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ರಿಷಭ್ ಪಂತ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರ ಆಲ್‌ರೌಂಡ್ ಆಟವು ತಂಡದ ಪ್ರಮುಖ ಶಕ್ತಿಯಾಗಿದೆ. ಚೆನ್ನೈನಲ್ಲಿ ಬಾಂಗ್ಲಾ ಎದುರಿನ ಟೆಸ್ಟ್‌ನಲ್ಲಿ ಅಶ್ವಿನ್ ಶತಕ ಹೊಡೆದಿದ್ದರು ಮತ್ತು ಐದು ವಿಕೆಟ್ ಗೊಂಚಲೂ ಗಳಿಸಿದ್ದರು. ವೇಗದ ಬೌಲಿಂಗ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ, ಆಕಾಶ್ ದೀಪ್ ಮತ್ತು ಮೊಹಮ್ಮದ್ ಸಿರಾಜ್ ಎದುರಾಳಿ ಬ್ಯಾಟರ್‌ಗಳಿಗೆ ಕಠಿಣ ಸವಾಲೊಡ್ಡಬಲ್ಲ ಆಟಗಾರರು.

ಆದರೆ ಬಾಂಗ್ಲಾ ತಂಡಕ್ಕಿಂತಲೂ ಕಿವೀಸ್ ಪಡೆ ಹೆಚ್ಚು ಬಲಾಢ್ಯವಾಗಿದೆ. ಕೇನ್ ವಿಲಿಯಮ್ಸನ್ ಗಾಯಗೊಂಡಿದ್ದು ಟಾಮ್ ಲೇಥಮ್ ನಾಯಕತ್ವದಲ್ಲಿ ತಂಡ ಕಣಕ್ಕಿಳಿಯಲಿದೆ. ಡೆವೊನ್ ಕಾನ್ವೆ, ಡ್ಯಾರಿಲ್ ಮಿಚೆಲ್, ಗ್ಲೆನ್ ಫಿಲಿಪ್ಸ್, ರಚಿನ್ ರವೀಂದ್ರ ಸೇರಿದಂತೆ ನ್ಯೂಜಿಲೆಂಡ್‌ನ ಹಲವು ಆಟಗಾರರೂ ಐಪಿಎಲ್‌ನಲ್ಲಿ ಆಡಿ ಭಾರತದ ವಾತಾವರಣವನ್ನು ಚೆನ್ನಾಗಿ ಅರಿತಿದ್ದಾರೆ. ವೇಗಿ ಟಿಮ್ ಸೌಥಿ, ಸ್ಪಿನ್ನರ್ ಸ್ಯಾಂಟನರ್ ಮತ್ತು ಅಜಾಜ್ ಪಟೇಲ್ ಅವರು ಆತಿಥೇಯ ಬ್ಯಾಟರ್‌ಗಳನ್ನು ಕಾಡುವಷ್ಟು ಸಮರ್ಥರಾಗಿದ್ದಾರೆ. ಆದರೆ ಇವರೆಲ್ಲರ ಆಟ ನಡೆಯಬೇಕಾದರೆ ಜಮಖಾನೆ, ಟಾರ್ಪಾಲಿನ್‌ಗಳ ಹೊದಿಕೆಗಳಲ್ಲಿ ಬೆಚ್ಚಗೆ ಮಲಗಿರುವ ಪಿಚ್ ಮೈಕೊಡವಿ ಏಳಲು ಮಳೆರಾಯ ಆಸ್ಪದ ಕೊಡಬೇಕಷ್ಟೇ!



ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಪೋರ್ಟ್ಸ್ 18
ಜಿಯೊ ಸಿನಿಮಾ ಆ್ಯಪ್

ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ಅನ್ನು ಮಳೆಯಿಂದ ರಕ್ಷಿಸಲು ಹೊದಿಕೆ ಹಾಕುತ್ತಿರುವುದು–ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಪ್ರಮುಖ ಅಂಶಗಳು

25 ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯ

18 ಸ್ವದೇಶದಲ್ಲಿ ಭಾರತ ತಂಡವು ಸತತವಾಗಿ ಜಯ ಸಾಧಿಸಿರುವ ಟೆಸ್ಟ್ ಸರಣಿಗಳು

12 ಭಾರತದ ನೆಲದಲ್ಲಿ ನ್ಯೂಜಿಲೆಂಡ್ ತಂಡವು ಆಡಿರುವ ಟೆಸ್ಟ್ ಸರಣಿಗಳು. ಒಂದು ಬಾರಿಯೂ ಜಯಿಸಿಲ್ಲ

53 ವಿರಾಟ್ ಕೊಹ್ಲಿ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 9 ಸಾವಿರ ರನ್‌ಗಳ ಗಡಿ ದಾಟಲು ಬೇಕಾಗಿರುವ ರನ್‌ಗಳು

ಬಲಾಬಲ

ಪಂದ್ಯ	62
ಭಾರತ ಜಯ	22
ನ್ಯೂಜಿಲೆಂಡ್ ಜಯ	13
ಡ್ರಾ	27

ತವರಿನಲ್ಲಿ ಮಿಂಚುವರೇ ರಾಹುಲ್?

ಬೆಂಗಳೂರು: ‘ಸ್ಥಳೀಯ ಹೀರೊ’ ಕೆ.ಎಲ್. ರಾಹುಲ್ ಅವರು ಭಾರತ ತಂಡದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಛಲದಲ್ಲಿದ್ದಾರೆ. ಸಿಗುತ್ತಿರುವ ಅವಕಾಶಗಳಲ್ಲಿಯೇ ತಮ್ಮ ಸಾಮರ್ಥ್ಯ ಮೆರೆಯುವ ಪ್ರಯತ್ನ ಮಾಡುತ್ತಿದ್ದಾರೆ. ಬಾಂಗ್ಲಾ ಎದುರಿನ ಸರಣಿಯಲ್ಲಿ ಆರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ್ದ ಅವರು ಒಂದು ಅರ್ಧಶತಕ ಗಳಿಸಿದ್ದರು. ಇದೀಗ ತಮ್ಮ ತವರಿನಂಗಳದಲ್ಲಿ ಅವಕಾಶ ಸಿಕ್ಕರೆ ಮಿಂಚುವ ಭರವಸೆಯಲ್ಲಿದ್ದಾರೆ.

ಆರಂಭಿಕ ಬ್ಯಾಟರ್‌ಗಳ ಸ್ಥಾನದಲ್ಲಿ ನಾಯಕ ರೋಹಿತ್ ಶರ್ಮಾ ಮತ್ತು ಯಶಸ್ವಿ ಜೈಸ್ವಾಲ್ ಆಡುತ್ತಿದ್ದಾರೆ. ಮೂರನೇ ಕ್ರಮಾಂಕದಲ್ಲಿ ಶುಭಮನ್ ಗಿಲ್ ಆಡುತ್ತಿದ್ದಾರೆ. ಅಪಘಾತದಲ್ಲಿ ಆದ ಗಾಯಗಳಿಂದ ಸಂಪೂರ್ಣ ಚೇತರಿಸಿಕೊಂಡಿರುವ ರಿಷಭ್ ಪಂತ್ ವಿಕೆಟ್‌ಕೀಪಿಂಗ್ ಮತ್ತು ಬ್ಯಾಟಿಂಗ್ ಎರಡರಲ್ಲೂ ಮಿಂಚುತ್ತಿದ್ದಾರೆ. ಅಲ್ಲದೇ ಈ ಸರಣಿಯಲ್ಲಿ ಎರಡನೇ ವಿಕೆಟ್‌ಕೀಪರ್ ಆಗಿ ಧ್ರುವ ಜುರೇಲ್ ಕೂಡ ಸ್ಥಾನ ಪಡೆದಿದ್ದಾರೆ. ಆದ್ದರಿಂದ ರಾಹುಲ್ ಅವರು ಪರಿಣತ ಬ್ಯಾಟರ್ ಆಗಿ ತಮ್ಮ ಹೊಣೆ ನಿಭಾಯಿಸಬೇಕಿದೆ. ಅದರಲ್ಲೂ ಆರನೇ ಕ್ರಮಾಂಕದಲ್ಲಿ ತಮ್ಮ ಸಾಮರ್ಥ್ಯ ತೋರುವ ಸವಾಲು ಅವರ ಮುಂದಿದೆ.

ಮುಂಬರುವ ಆಸ್ಟ್ರೇಲಿಯಾ ಪ್ರವಾಸ ಮಾಡಲಿರುವ ತಂಡದಲ್ಲಿ ಸ್ಥಾನ ಪಡೆಯಲು ರಾಹುಲ್ ಅವರಿಗೆ ಕಿವೀಸ್ ಎದುರಿನ ಸರಣಿಯಲ್ಲಿ ತೋರುವ ಆಟ ಮುಖ್ಯವಾಗಲಿದೆ. ಇಲ್ಲಿ ವಿಫಲರಾದರೆ; ಅವರ ಸ್ಥಾನಕ್ಕೆ ಲಗ್ಗೆ ಹಾಕಲು ಮುಂಬೈನ ಸರ್ಫರಾಜ್ ಖಾನ್, ಶ್ರೇಯಸ್ ಅಯ್ಯರ್ ಸಿದ್ಧವಾಗಿದ್ದಾರೆ.

ಆಸ್ಟ್ರೇಲಿಯಾ ಪ್ರವಾಸಕ್ಕೆ ಶಮಿ ಅನುಮಾನ



‘ವೇಗಿ ಮೊಹಮ್ಮದ್ ಶಮಿ ಅವರನ್ನು ಮುಂಬರುವ ಆಸ್ಟ್ರೇಲಿಯಾ ಪ್ರವಾಸಕ್ಕೆ ತೆರಳುವ ತಂಡಕ್ಕೆ ಆಯ್ಕೆ ಮಾಡುವ ಕುರಿತು ಖಚಿತವಾಗಿ ಹೇಳಲಾಗದು. ಅವರು ಹಿಮ್ಮಡಿಯ ಶಸ್ತ್ರಚಿಕಿತ್ಸೆಯ ನಂತರ ಚೇತರಿಸಿಕೊಳ್ಳುತ್ತಿದ್ದಾರೆ. ಈ ಹಂತದಲ್ಲಿಯೇ ಅವರ ಮೊಣಕಾಲಿನಲ್ಲಿ ಊತ ಕಂಡುಬಂದಿದೆ. ಇದು ಅನಿರೀಕ್ಷಿತ ಬೆಳವಣಿಗೆ’ ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಶಮಿ ಶೇ 100ರಷ್ಟು ಫಿಟ್ ಆಗುವ ಹೊತ್ತಿನಲ್ಲಿಯೇ ಮತ್ತೆ ಸಮಸ್ಯೆಯಾಗಿದೆ. ಅವರು ಎನ್‌ಸಿಎಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪರಿಣತ ವೈದ್ಯರು ಮತ್ತು ಫಿಸಿಯೊಗಳು ಅವರ ಆರೈಕೆ ಮಾಡುತ್ತಿದ್ದಾರೆ’ ಎಂದರು.

‘ಶಮಿ ಫಿಟ್ ಆಗಿ ತಂಡಕ್ಕೆ ಮರಳಬೇಕು ಎಂದು ನಮ್ಮ ಆಶಯವಾಗಿದೆ. ಆದರೆ ಅವರು ಸಂಪೂರ್ಣ ಚೇತರಿಸಿಕೊಳ್ಳಬೇಕು’ ಎಂದರು.

ನಡೆಯದ ಅಭ್ಯಾಸ: ಮಂಗಳವಾರ ಮಳೆಯಿಂದಾಗಿ ಭಾರತ ತಂಡದ ಅಭ್ಯಾಸವನ್ನು ರದ್ದುಗೊಳಿಸಲಾಯಿತು. ಬೆಳಿಗ್ಗೆಯ ಅವಧಿಯಲ್ಲಿ ರೋಹಿತ್ ಬಳಗವು ಅಭ್ಯಾಸ ಮಾಡಬೇಕಿತ್ತು.

ಸೆಮಿಗೆ ವೆಸ್ಟ್ ಇಂಡೀಸ್

ಮಹಿಳಾ ವಿಶ್ವಕಪ್: ಇಂಗ್ಲೆಂಡ್‌ಗೆ ನಿರಾಸೆ

ದುಬೈ (ಪಿಟಿಐ): ನಾಯಕಿ ಹೆಯಲಿ ಮ್ಯಾಥ್ಯೂಸ್ (50;38ಎ) ಮತ್ತು ಕಿಯಾನಾ ಜೋಸೆಫ್ (52;38ಎ) ಅವರಿಬ್ಬರ ಅರ್ಧಶತಕದ ಬಲದಿಂದ ವೆಸ್ಟ್ ಇಂಡೀಸ್ ತಂಡವು ಮಂಗಳವಾರ ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿ, ಸೆಮಿಫೈನಲ್‌ಗೆ ಲಗ್ಗೆ ಹಾಕಿತು.

ಈ ನಿರ್ಣಾಯಕ ಪಂದ್ಯದಲ್ಲಿ 142 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ ವೆಸ್ಟ್‌ಇಂಡೀಸ್ ತಂಡಕ್ಕೆ ಹೆಯಲಿ ಮತ್ತು ಕಿಯಾನಾ ಮೊದಲ ವಿಕೆಟ್‌ಗೆ 102 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ನಂತರ ಬಂದ ಡಿಯಾಂಡ್ರಾ ಡಾಟಿನ್ (27;19) ಉಪಯುಕ್ತ ಕಾಣಿಕೆ ನೀಡಿದರು. ಹೀಗಾಗಿ, ತಂಡವು ಇನ್ನೂ 12 ಎಸೆತ ಬಾಕಿ ಇರುವಂತೆ 4 ವಿಕೆಟ್‌ಗೆ 144 ರನ್ ಗಳಿಸಿತು.

‘ಬಿ’ ಗುಂಪಿನಲ್ಲಿದ್ದ ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ ಮತ್ತು ಇಂಗ್ಲೆಂಡ್ ತಂಡಗಳು ಆಡಿರುವ ನಾಲ್ಕು ಪಂದ್ಯಗಳಲ್ಲಿ ಮೂರನ್ನು ಗೆದ್ದು ತಲಾ 6 ಅಂಕ ಸಂಪಾದಿಸಿವೆ. ಆದರೆ, ನೆಟ್ ರನ್‌ರೇಟ್ ಆಧಾರದಲ್ಲಿ ವಿಂಡೀಸ್ (1.536) ಮತ್ತು ದಕ್ಷಿಣ ಆಫ್ರಿಕಾ (1.382) ತಂಡಗಳು ನಾಲ್ಕರ ಘಟ್ಟಕ್ಕೆ ಮುನ್ನಡೆದರೆ, ಇಂಗ್ಲೆಂಡ್ (1.091) ಹೊರಬಿತ್ತು.

ಇದಕ್ಕೂ ಮೊದಲು ನಥಾಲಿ ಶಿವರ್ ಬ್ರಂಟ್ (ಔಟಾಗದೆ 57; 50ಎಸೆತ, 4X7) ಅವರ ಅರ್ಧಶತಕ ಬಲದಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 141 ರನ್ ಗಳಿಸಿತು. ವಿಂಡೀಸ್ ತಂಡದ ಎಫೈ ಫ್ಲೆಚರ್ ಮತ್ತು ಹೆಯಲಿ ಮ್ಯಾಥ್ಯೂಸ್ ಕ್ರಮವಾಗಿ ಮೂರು ಮತ್ತು ಎರಡು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 20 ಓವರ್‌ಗಳಲ್ಲಿ 7ಕ್ಕೆ141 (ನಥಾಲಿ ಶಿವರ್ ಬ್ರಂಟ್ ಔಟಾಗದೆ 57, ಹೀಥರ್ ನೈಟ್ 21, ಹೆಯಲಿ ಮ್ಯಾಥ್ಯೂಸ್ 35ಕ್ಕೆ2, ಎಫೈ ಫ್ಲೆಚರ್ 21ಕ್ಕೆ3) ವೆಸ್ಟ್ ಇಂಡೀಸ್: 18 ಓವರ್‌ಗಳಲ್ಲಿ 4ಕ್ಕೆ 144 (ಹೆಯಲಿ ಮ್ಯಾಥ್ಯೂಸ್ 50 ಮತ್ತು ಕಿಯಾನಾ ಜೋಸೆಫ್ 52, ಡಿಯಾಂಡ್ರಾ ಡಾಟಿನ್ 27). **ಫಲಿತಾಂಶ:** ವೆಸ್ಟ್ ಇಂಡೀಸ್‌ಗೆ 6 ವಿಕೆಟ್ ಜಯ, ಪಂದ್ಯದ ಆಟಗಾರ್ತಿ: ಕಿಯಾನಾ ಜೋಸೆಫ್



ಕಿಯಾನಾ ಜೋಸೆಫ್ –ಎಕ್ಸ್ ಚಿತ್ರ

ಸೆಮಿಫೈನಲ್ ಮುಖಾಮುಖಿ

ಆಸ್ಟ್ರೇಲಿಯಾ–ದಕ್ಷಿಣ ಆಫ್ರಿಕಾ (ಅ.17)

ನ್ಯೂಜಿಲೆಂಡ್–ವೆಸ್ಟ್‌ಇಂಡೀಸ್ (ಅ.18)

ಚೊಚ್ಚಲ ಪಂದ್ಯದಲ್ಲಿ ಕಮ್ರಾನ್ ಶತಕ

ಮುಲ್ತಾನ್ (ಪಾಕಿಸ್ತಾನ), (ಎಪಿ): ನಾಲ್ಕನೇ ಕ್ರಮಾಂಕದಲ್ಲಿ ಪಾಕಿಸ್ತಾನ ತಂಡ ಎದುರಿಸುತ್ತಿದ್ದ ಸಮಸ್ಯೆಗೆ ಪರಿಹಾರ ಎಂಬಂತೆ ಕಮ್ರಾನ್ ಗುಲಾಂ ತಮ್ಮ ಪದಾರ್ಪಣೆ ಪಂದ್ಯದಲ್ಲೇ ಶತಕ ಬಾರಿಸಿದರು. ಇಂಗ್ಲೆಂಡ್ ವಿರುದ್ಧ ಎರಡನೇ ಟೆಸ್ಟ್ ಪಂದ್ಯದ ಮೊದಲ ದಿನದಾಟವನ್ನು ಆತಿಥೇಯರು 5 ವಿಕೆಟ್‌ಗೆ 259 ರನ್‌ಗಳೊಡನೆ ತೃಪ್ತಿಕರವಾಗಿ ಪೂರೈಸಿದರು.

ಪುನರ್ನಿರ್ಮಾಣಗೊಂಡ ಪಿಚ್‌ನಲ್ಲಿ ಸಂಯಮದಿಂದ ಆಡಿದ ಗುಲಾಂ 224 ಎಸೆತಗಳನ್ನು ಎದುರಿಸಿ 118 ರನ್ (4x11, 6x1) ಗಳಿಸಿದರು. ಚೊಚ್ಚಲ ಟೆಸ್ಟ್‌ನಲ್ಲೇ ಶತಕ ಬಾರಿಸಿದ ಪಾಕಿಸ್ತಾನದ 13ನೇ ಆಟಗಾರ ಎನಿಸಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಪಾಕಿಸ್ತಾನ: 90 ಓವರುಗಳಲ್ಲಿ 5 ವಿಕೆಟ್‌ಗೆ 259 (ಸಯೀಮ್ ಅಯೂಬ್ 77, ಕಮ್ರಾನ್ ಗುಲಾಂ 118, ಮೊಹಮ್ಮದ್ ರಿಜ್ವಾನ್ ಔಟಾಗದೇ 37; ಜಾಕ್ ಲೀಚ್ 92ಕ್ಕೆ2).

ಮಹಾರಾಷ್ಟ್ರ: ಜಾತಿ ವಿವಾದ ಮೇಲುಗೈ

ಮರಾಠ, ಒಬಿಸಿ ಮೀಸಲು ವಿಚಾರ • ‘ಮಹಾಯುತಿ’, ‘ಮಹಾ ವಿಕಾಸ ಅಘಾಡಿ’ ಮೈತ್ರಿಗೆ ಸವಾಲು

ಪ್ರಜಾವಾಣಿ ವಾರ್ತೆ

ಮುಂಬೈ: ಈ ಬಾರಿಯ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಮರಾಠ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ಜಾತಿ ವಿವಾದಗಳು ಮೇಲುಗೈ ಸಾಧಿಸುವ ಲಕ್ಷಣಗಳು ಗೋಚರಿಸಿವೆ.

2024ರ ಲೋಕಸಭಾ ಚುನಾವಣೆ ಮೇಲೂ ಜಾತಿ ವಿವಾದಗಳ ಪ್ರಭಾವ ಆವರಿಸಿದ್ದವು. ವಿಧಾನಸಭಾ ಚುನಾವಣೆಯಲ್ಲೂ ಅವುಗಳ ಪ್ರಭಾವ ಇನ್ನಷ್ಟು ವ್ಯಾಪಕವಾಗಿ ಬೀರಲಿವೆ.

ಮಹಾರಾಷ್ಟ್ರ ವಿಧಾನಸಭೆಗೆ ಚುನಾವಣಾ ದಿನಾಂಕ ಪ್ರಕಟವಾದ ಬೆನ್ನಲ್ಲೇ ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜರಂಗೆ ಮತ್ತು ಒಬಿಸಿ ಸಂಘಟನಾ ಸೇನಾದ ಸಂಸ್ಥಾಪಕ ಪ್ರೊ. ಲಕ್ಷ್ಮಣ್ ಹಾಕೆ ಅವರು ತಮ್ಮ ಬೇಡಿಕೆಗಳನ್ನು ಸ್ಪಷ್ಟಪಡಿಸಿದ್ದಾರೆ.

ಇವು ಮಹಾರಾಷ್ಟ್ರದ ಆಡಳಿತಾರೂಢ ‘ಮಹಾಯುತಿ’ ಮತ್ತು ವಿರೋಧ ಪಕ್ಷಗಳ ‘ಮಹಾ ವಿಕಾಸ ಅಘಾಡಿ’ ಮೈತ್ರಿಗೆ ಸವಾಲಾಗಿ ಪರಿಣಮಿಸಿವೆ.

ಮರಾಠ ಮೀಸಲಾತಿಗೆ ಆಗ್ರಹಿಸಿ 14 ತಿಂಗಳಲ್ಲಿ ಏಳು ಬಾರಿ ಉಪವಾಸ ನಿರಶನ ಮಾಡಿರುವ ಜಾರಂಗೆ ಅವರು, ‘ನಾನು ವೈಯಕ್ತಿಕವಾಗಿ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಆದರೆ, ಚುನಾವಣೆಗೆ ಸಂಬಂಧಿಸಿದಂತೆ ಸದ್ಯದಲ್ಲಿಯೇ ಮರಾಠ ಸಮಾಜ ಸಭೆ ಸೇರಲಿದೆ’ ಎಂದು ಹೇಳಿದ್ದಾರೆ.

‘ನಾವು ಬಹಳ ಸ್ಪಷ್ಟವಾಗಿದ್ದೇವೆ. ನಮ್ಮ ಬೇಡಿಕೆ ಈಡೇರಿಕೆಗೆ ಸಂಬಂಧಿಸಿದಂತೆ ಚುನಾವಣೆ ಘೋಷಣೆ ಮತ್ತು ನೀತಿ ಸಂಹಿತೆ ಜಾರಿಗೂ ಮುನ್ನವೇ ನಿರ್ಧಾರ ತೆಗೆದುಕೊಳ್ಳುವಂತೆ ಈಗಾಗಲೇ ಸರ್ಕಾರಕ್ಕೆ ಗಡುವು ನೀಡಿದ್ದೆವು. ಅದೀಗ ಮುಗಿದಿದೆ’ ಎಂದು ಹೇಳುವ ಮೂಲಕ ರಾಜಕೀಯದಲ್ಲಿ ಮಹತ್ವದ ಪಾತ್ರವಹಿಸುವ ಸೂಚನೆಯನ್ನು ಅವರು ನೀಡಿದ್ದಾರೆ.

‘ನಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ನಾವೆಲ್ಲರೂ ಒಗ್ಗೂಡಬೇಕಿದ್ದು, ಅದಕ್ಕಾಗಿ ಸಿದ್ಧರಾಗಿ’ ಎಂದು ಮನವಿ ಮಾಡಿದ ಅವರು, ಮರಾಠರಿಗೆ ಮೀಸಲಾತಿಯನ್ನು ಬಿಜೆಪಿಯ ನಾಯಕ, ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತಡೆದಿದ್ದಾರೆ ಎಂದು ಆರೋಪಿಸಿದ್ದಾರೆ.

ಎರಡು ಬಾರಿ ಉಪವಾಸ ನಿರಶನ ನಡೆಸಿರುವ ಒಬಿಸಿ ನಾಯಕ ಲಕ್ಷ್ಮಣ ಹಾಕೆ ಅವರು, ‘ಈ ಚುನಾವಣೆಯಲ್ಲಿ ಎಲ್ಲ ಒಬಿಸಿ ಸಮುದಾಯದವರೂ ಒಂದಾಗಿ, ಬಲ ಪ್ರದರ್ಶಿಸಬೇಕು’ ಎಂದು ಕರೆ ನೀಡಿದ್ದಾರೆ.

ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ರಾಜಕೀಯ ಪಕ್ಷಗಳು ಮೊದಲು ತಮ್ಮ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿ. ನಮ್ಮ ನಿಲುವು ಸ್ಪಷ್ಟವಿದೆ’ ಎಂದಿದ್ದಾರೆ. ರಾಜ್ಯದಲ್ಲಿ ಜಾತಿ ರಾಜಕೀಯದ ಪ್ರಭಾವ ಹೆಚ್ಚುತ್ತಿರುವ ಕುರಿತ ಪ್ರಶ್ನೆಗೆ, ‘ಇಲ್ಲಿಯವರೆಗೆ ರಾಜಕೀಯ ಪಕ್ಷಗಳು ಸ್ಪರ್ಧಿಸುತ್ತಿದ್ದವು, ನಾವು ಈಗ ಬದಲಾವಣೆಗಳನ್ನು ಕಾಣುತ್ತೇವೆ’ ಎಂದು ಉತ್ತರಿಸಿದ್ದಾರೆ.

ಮರಾಠ ಸಮುದಾಯದವರಿಗೆ ಒಬಿಸಿ ಅಡಿಯಲ್ಲಿ ಮೀಸಲಾತಿ ನೀಡಬೇಕು, ‘ಸಗೆ–ಸೋಯಾರೆ’ (ವಂಶವೃಕ್ಷದ ಸಂಬಂಧಿಕರು) ಕುರಿತು ಹೊರಡಿಸಿರುವ ಕರಡು ಅಧಿಸೂಚನೆಯನ್ನು ಜಾರಿಗೆ ತರಬೇಕು, ಮೀಸಲು ಕೋಟಾಗೆ ಆಗ್ರಹಿಸಿ ಹೋರಾಟ ನಡೆಸಿದವರ ಮೇಲೆ ಹೇರಲಾಗಿರುವ ಪ್ರಕರಣಗಳನ್ನು ಹಿಂಪಡೆಯಬೇಕು ಎಂಬುದು ಜಾರಂಗೆ ಅವರ ಪ್ರಮುಖ ಬೇಡಿಕೆಗಳಾಗಿವೆ.

ಇದರಿಂದ ಒಬಿಸಿ ಕೋಟಾ ದುರ್ಬಲವಾಗುತ್ತದೆ ಎಂದು ಒಬಿಸಿ ಸಮುದಾಯಗಳು ತೀವ್ರ ಪ್ರತಿರೋಧ ವ್ಯಕ್ತಪಡಿಸುತ್ತಿವೆ.

ಪ್ರಚಾರಕ್ಕೆ ಕಡಿಮೆ ಸಮಯ: ವಿಪಕ್ಷಗಳ ಅಸಮಾಧಾನ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಚುನಾವಣೆಗೆ ಕೇವಲ 35 ದಿನಗಳ ಸಮಯ ನೀಡುವ ಮೂಲಕ ಚುನಾವಣಾ ಆಯೋಗ, ಅತ್ಯಂತ ಕಡಿಮೆ ಅವಧಿ ನಿಗದಿ ಮಾಡಿದೆ. ಚುನಾವಣಾ ಘೋಷಣೆಯನ್ನು ವಿಳಂಬಗೊಳಿಸುವ ಮೂಲಕ ಸರ್ಕಾರಕ್ಕೆ ಹೊಸ ಯೋಜನೆಗಳ ಪ್ರಕಟಣೆಗೆ ಹೆಚ್ಚು ಅವಧಿ ನೀಡಿದ ಆಯೋಗವು, ಪ್ರಚಾರಕ್ಕೆ ಮಾತ್ರ ಕಡಿಮೆ ಅವಧಿ ನೀಡಿದೆ ಎಂದು ವಿರೋಧ ಪಕ್ಷಗಳು ಬೇಸರ ವ್ಯಕ್ತಪಡಿಸಿವೆ.

ದೇಶದಲ್ಲಿ ಉತ್ತರ ಪ್ರದೇಶ (403 ಕ್ಷೇತ್ರ) ಹೊರತುಪಡಿಸಿ, ಅತಿ ಹೆಚ್ಚು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಎರಡನೇ ದೊಡ್ಡ ರಾಜ್ಯ ಎಂಬ ಹಿರಿಮೆ ಮಹಾರಾಷ್ಟ್ರಕ್ಕಿದೆ (288). ಇಷ್ಟೂ ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಚುನಾವಣೆ ನಡೆಸುವುದಾಗಿ ಆಯೋಗ ಘೋಷಿಸಿದೆ. ಇದೇ ವರ್ಷ ನಡೆದಿದ್ದ ಲೋಕಸಭಾ ಚುನಾವಣೆ ರಾಜ್ಯದಲ್ಲಿ ಐದು ಹಂತಗಳಲ್ಲಿ ಜರುಗಿತ್ತು ಎಂದು ವಿರೋಧ ಪಕ್ಷಗಳ ನಾಯಕರು ಹೇಳಿದ್ದಾರೆ.

ಪ್ರಜಾ ಮತ
ಜನತಂತ್ರದ ಹಬ್ಬ

ಸರ್ಕಾರವು ರಾಜ್ಯದ ಪ್ರಗತಿಗೆ ಸಾಕಷ್ಟು ಯೋಜನೆಗಳನ್ನು ನೀಡಿದ್ದು, ‘ಮಹಾಯುತಿ’ ಮೈತ್ರಿ ಭಾರಿ ಬಹುಮತದೊಂದಿಗೆ ಮತ್ತೆ ಸರ್ಕಾರ ರಚಿಸಲಿದೆ
ಏಕನಾಥ ಶಿಂದೆ
ಮಹಾರಾಷ್ಟ್ರದ ಮುಖ್ಯಮಂತ್ರಿ

ನನ್ನ ವಯಸ್ಸು 84 ಅಥವಾ 90 ಆಗಿದ್ದರೂ, ಮಹಾರಾಷ್ಟ್ರವನ್ನು ಸರಿ ದಾರಿಗೆ ತೆಗೆದುಕೊಂಡು ಹೋಗುವ ತನಕ ವಿರಮಿಸುವುದಿಲ್ಲ
ಶರದ್ ಪವಾರ್
ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ

ಏಳು ಎಂಎಲ್‌ಸಿಗಳ ನೇಮಕ

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆಗೆ ಚುನಾವಣಾ ದಿನಾಂಕ ಪ್ರಕಟಣೆಗೂ ಕೆಲ ಗಂಟೆಗಳ ಮುನ್ನ ರಾಜ್ಯ ವಿಧಾನ ಪರಿಷತ್ತಿಗೆ ಏಳು ಸದಸ್ಯರನ್ನು ರಾಜ್ಯಪಾಲರು ನೇಮಿಸಿದ್ದಾರೆ. ಅದರ ಬೆನ್ನಲ್ಲೇ ಅವರೆಲ್ಲರೂ ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಏಳು ಸದಸ್ಯರಲ್ಲಿ ಬಿಜೆಪಿಯ ಮೂವರು, ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಮತ್ತು ಉಪ ಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯ ತಲಾ ಇಬ್ಬರು ಸದಸ್ಯರು ಇದ್ದಾರೆ.

ಸಂಚಾರ ವಿಳಂಬ; ಪ್ರಯಾಣಿಕರ ಪರದಾಟ

7 ವಿಮಾನಕ್ಕೆ ಬಾಂಬ್ ಬೆದರಿಕೆ

ನವದೆಹಲಿ (ಪಿಟಿಐ): ವಿವಿಧ ವಿಮಾನಯಾನ ಸಂಸ್ಥೆಗಳಿಗೆ ಸೇರಿದ ಏಳು ವಿಮಾನಗಳಿಗೆ ಮಂಗಳವಾರವೂ ಸಾಮಾಜಿಕ ಮಾಧ್ಯಮಗಳ ಮೂಲಕ ಬಾಂಬ್ ಬೆದರಿಕೆ ಹಾಕಲಾಯಿತು.

ಇವುಗಳಲ್ಲಿ ಎರಡು ಅಂತರ ರಾಷ್ಟ್ರೀಯ ವಿಮಾನಗಳು ತುರ್ತು ಭೂಸ್ಪರ್ಶ ಮಾಡಿವೆ.

ಅಯೋಧ್ಯೆ ಮೂಲಕ ಜೈಪುರದಿಂದ ಬೆಂಗಳೂರಿಗೆ, ದೆಹಲಿಯಿಂದ ಷಿಕಾಗೊಗೆ ಮತ್ತು ಮಧುರೈನಿಂದ ಸಿಂಗಪುರಕ್ಕೆ ತೆರಳುತ್ತಿದ್ದ ಏರ್ ಇಂಡಿಯಾದ ಮೂರು ವಿಮಾನಗಳು, ದರ್ಭಂಗಾದಿಂದ ಮುಂಬೈಗೆ ಸಂಚರಿಸಿದ ಸ್ಪೈಸ್ ಜೆಟ್ ವಿಮಾನ ಹಾಗೂ ಸಿಲಿಗುರಿಯಿಂದ ಬೆಂಗಳೂರಿಗೆ ಹೊರಟಿದ್ದ ಆಕಾಸ ವಿಮಾನ, ಸೌದಿ ಅರೇಬಿಯಾದ ದಮಾಮ್‌ನಿಂದ ಲಖನೌಗೆ ಬರುತ್ತಿದ್ದ ಇಂಡಿಗೋ ವಿಮಾನ, ಅಮೃತಸರ–ಡೆಹ್ರಾಡೂನ್–ದೆಹಲಿ ಅಲೈಯನ್ಸ್ ವಿಮಾನಗಳಿಗೆ ಸಾಮಾಜಿಕ ಜಾಲತಾಣ ‘ಎಕ್ಸ್’ ಮೂಲಕ ಬೆದರಿಕೆ ಸಂದೇಶಗಳು ಬಂದಿದ್ದವು ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿಗೆ ಹೊರಟಿದ್ದ ಏರ್ ಇಂಡಿಯಾ ವಿಮಾನವನ್ನು ಅಯೋಧ್ಯೆಯ ಮಹರ್ಷಿ ವಾಲ್ಮೀಕಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತಪಾಸಣೆಗೆ ಒಳಪಡಿಸಲಾಯಿತು. ಮಧ್ಯಾಹ್ನ 2.25 ಗಂಟೆಗೆ ಅಯೋಧ್ಯೆಯಿಂದ ಬೆಂಗಳೂರಿಗೆ ಹೊರಡಬೇಕಿದ್ದ ಈ ವಿಮಾನವು ಸಂಜೆ 5 ಗಂಟೆಗೆ ಸಂಚಾರ ಆರಂಭಿಸಿತು.

ದೆಹಲಿಯಿಂದ ಷಿಕಾಗೊಗೆ ತೆರಳುತ್ತಿದ್ದ ಏರ್ ಇಂಡಿಯಾ ವಿಮಾನವನ್ನು ಕೆನಡಾದಲ್ಲಿ ತುರ್ತು ಭೂಸ್ಪರ್ಶ ಮಾಡಿಸಿ, ತಪಾಸಣೆ ನಡೆಸಲಾಗಿದೆ. ಸೌದಿ ಅರೇಬಿಯಾದ ದಮಾಮ್‌ನಿಂದ ಲಖನೌಗೆ ಬರುತ್ತಿದ್ದ ಇಂಡಿಗೋ ವಿಮಾನವನ್ನು ಜೈಪುರದಲ್ಲಿ ತುರ್ತು ಭೂ ಸ್ಪರ್ಶ ಮಾಡಿಸಲಾಗಿದೆ.

ಮಧುರೈನಿಂದ ಹೊರಟಿದ್ದ ಏರ್ ಇಂಡಿಯಾ ವಿಮಾನ ಸಿಂಗಪುರಗೆ ತಲುಪಿದೆ. ಅಮೃತಸರ–ಡೆಹ್ರಾಡೂನ್–ದೆಹಲಿ ವಿಮಾನವನ್ನು ಡೆಹ್ರಾಡೂನ್‌ನಲ್ಲಿ ತಪಾಸಣೆಗೆ ಒಳಪಡಿಸಲಾಯಿತು.

ಸ್ಪೈಸ್ ಜೆಟ್ ವಿಮಾನವು ಮುಂಬೈನಲ್ಲಿ ಮತ್ತು ಆಕಾಸ ವಿಮಾನವು ಬೆಂಗಳೂರಿನಲ್ಲಿ ಸುರಕ್ಷಿತವಾಗಿ ಭೂಸ್ಪರ್ಶ ಮಾಡುವ ಮೂಲಕ ನಿಗದಿತ ಸ್ಥಳವನ್ನು ತಲುಪಿವೆ.

‘ಎಲ್ಲ ವಿಮಾನ ನಿಲ್ದಾಣಗಳಲ್ಲಿ ಸೂಕ್ತ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ’ ಎಂದು ವಿಮಾನಯಾನ ಭದ್ರತಾ ಸಂಸ್ಥೆ ತಿಳಿಸಿದೆ. ‘ಸೈಬರ್ ಭದ್ರತಾ ಏಜೆನ್ಸಿ ಮತ್ತು ಪೊಲೀಸರ ಸಹಾಯದಿಂದ, ಬೆದರಿಕೆ ಸಂದೇಶ ರವಾನಿಸಿದವರ ಬಗ್ಗೆ ತನಿಖೆ ನಡೆಸಲಾಗುತ್ತಿದೆ’ ಎಂದು ವಿಮಾನಯಾನ ಭದ್ರತಾ ವಿಭಾಗದ ಅಧಿಕಾರಿಗಳು ಹೇಳಿದ್ದಾರೆ.

ಜೆಎಂಎಂ ಜತೆ ಕಾಂಗ್ರೆಸ್ ಮೈತ್ರಿ; ಬಿಜೆಪಿಗೆ ಗೆಲ್ಲುವ ವಿಶ್ವಾಸ

ರಾಂಚಿ (ಪಿಟಿಐ): ಜಾರ್ಖಂಡ್ ವಿಧಾನಸಭಾ ಚುನಾವಣೆಯಲ್ಲಿ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಜೊತೆ ಮೈತ್ರಿ ಮಾಡಿಕೊಂಡು ಸ್ಪರ್ಧಿಸುವುದಾಗಿ ಕಾಂಗ್ರೆಸ್ ಮಂಗಳವಾರ ಹೇಳಿದೆ.

‘ನಾವು ನಮ್ಮ ಮೈತ್ರಿ ಪಾಲುದಾರರೊಂದಿಗೆ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಲಿದ್ದೇವೆ. ಸೀಟು ಹಂಚಿಕೆ ಕುರಿತು ಶೀಘ್ರ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು. ನಾವು ಮಾಡಿದ ಅಭಿವೃದ್ಧಿ ಕೆಲಸಗಳಿಂದ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸವಿದೆ’ ಎಂದು ಜಾರ್ಖಂಡ್ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೇಶವ್ ಮಹತೋ ಹೇಳಿದ್ದಾರೆ.

ಜೆಎಂಎಂ ಕೂಡ ತನ್ನ ಮೈತ್ರಿಕೂಟ ಪುನಃ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದೆ. ಮೈತ್ರಿಕೂಟವು ಎಲ್ಲ 81 ಸ್ಥಾನಗಳಲ್ಲಿ ಸ್ಪರ್ಧಿಸಲಿದೆ ಎಂದು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಹೇಳಿದ್ದಾರೆ.

ಮಂಗಳವಾರ ಚುನಾವಣಾ ವೇಳಾಪಟ್ಟಿ ಘೋಷಿಸಲಾಗುವುದು ಎಂಬುದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರಿಗೆ ಮೊದಲೇ ಹೇಗೆ ತಿಳಿದಿತ್ತು ಎಂಬ ಬಗ್ಗೆಯೂ ಜೆಎಂಎಂ ಇದೇ ವೇಳೆ ಕಳವಳ ವ್ಯಕ್ತಪಡಿಸಿದೆ.

‘ನಾವು ಚುನಾವಣೆಗೆ ಸ್ಪರ್ಧಿಸಲು ಸಿದ್ಧರಿದ್ದೇವೆ. ಆದರೆ, ಮಂಗಳವಾರ ಚುನಾವಣೆ ಘೋಷಣೆಯಾಗಲಿದೆ ಎಂದು ಶರ್ಮಾ ಅವರಿಗೆ ಹೇಗೆ ತಿಳಿದಿತ್ತು ಎಂಬುದನ್ನು ನಾವು ತಿಳಿಯಲು ಬಯಸುತ್ತೇವೆ. ಇದರಿಂದ ಪ್ರಜಾಪ್ರಭುತ್ವಕ್ಕೆ ಗಂಭೀರ ಅಪಾಯ’ ಎಂದು ಜೆಎಂಎಂ ವಕ್ತಾರ ಮನೋಜ್ ಪಾಂಡೆ ಹೇಳಿದ್ದಾರೆ.

ಜೆಎಂಎಂ ಆರೋಪಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ, ಮುಂಬರುವ ಚುನಾವಣೆಯಲ್ಲಿ ಜೆಎಂಎಂಗೆ ಸೋಲಿನ ಭೀತಿ ಕಾಡುತ್ತಿದೆ ಎಂದು ಹೇಳಿದೆ.

ವಿಧಾನಸಭೆ ಚುನಾವಣೆಗೆ ಎನ್‌ಡಿಎ ಪಾಲುದಾರರ ನಡುವೆ ಸೀಟು ಹಂಚಿಕೆ ಬಹುತೇಕ ಅಂತಿಮವಾಗಿದೆ. ಚುನಾವಣೆ ಘೋಷಣೆಯಾದ 48 ಗಂಟೆಗಳ ಒಳಗೆ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಬಿಜೆಪಿ ಹೇಳಿದೆ.

ಜಾರ್ಖಂಡ್ ವಿಧಾನಸಭೆಯ ಅವಧಿಯು 2025ರ ಜನವರಿ 5ರಂದು ಕೊನೆಗೊಳ್ಳಲಿದೆ.

ಚುನಾವಣಾ ಅಖಾಡ ಪ್ರವೇಶಿಸಲು ವೇದಿಕೆ ಸಜ್ಜು

ವಯನಾಡ್: ಪ್ರಿಯಾಂಕಾ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ/ಪಿಟಿಐ



ಪ್ರಿಯಾಂಕಾ ಗಾಂಧಿ ವಾದ್ರಾ

ನವದೆಹಲಿ: ಚುನಾವಣಾ ಆಯೋಗ ಕೇರಳದ ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ಘೋಷಿಸಿದ ಬೆನ್ನಲ್ಲೇ ಕಾಂಗ್ರೆಸ್ ಪಕ್ಷ ತನ್ನ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಅಭ್ಯರ್ಥಿಯನ್ನಾಗಿ ಮಂಗಳವಾರ ರಾತ್ರಿ ಘೋಷಿಸಿದೆ.

ಸಕ್ರಿಯ ರಾಜಕೀಯ ಪ್ರವೇಶಿಸಿದ ಐದು ವರ್ಷಗಳ ಬಳಿಕ ಪ್ರಿಯಾಂಕಾ ಅವರಿಗೆ ಚುನಾವಣಾ ಅಖಾಡ ಪ್ರವೇಶಿಸಲು ವೇದಿಕೆ ಸಜ್ಜಾದಂತಾಗಿದೆ.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಉತ್ತರ ಪ್ರದೇಶದ ರಾಯಬರೇಲಿ ಮತ್ತು ಕೇರಳದ ವಯನಾಡ್ ಕ್ಷೇತ್ರದಿಂದ ಸ್ಪರ್ಧಿಸಿ ಜಯಗಳಿಸಿದ್ದರು.

‘ರಾಹುಲ್ ಅವರು ರಾಯಬರೇಲಿ ಕ್ಷೇತ್ರವನ್ನು ಉಳಿಸಿಕೊಂಡಿದ್ದು, ವಯನಾಡ್ ಕ್ಷೇತ್ರಕ್ಕೆ ನಡೆಯುವ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ರಾಹುಲ್ ಅವರ ಸಹೋದರಿ ಪ್ರಿಯಾಂಕಾ ಗಾಂಧಿ ವಾದ್ರಾ ಸ್ಪರ್ಧಿಸಲಿದ್ದಾರೆ’ ಎಂದು ಕಾಂಗ್ರೆಸ್ ಜೂನ್‌ನಲ್ಲಿಯೇ ಪ್ರಕಟಿಸಿತ್ತು

ಉಪ ಚುನಾವಣೆಯಲ್ಲಿ ಪ್ರಿಯಾಂಕಾ ಆಯ್ಕೆಯಾದರೆ, ಮೊದಲ ಬಾರಿಗೆ ಅವರು ಸಂಸತ್ ಪ್ರವೇಶಿಸಿದಂತೆ ಆಗುತ್ತದೆ. ಅಲ್ಲದೆ ಗಾಂಧಿ ಕುಟುಂಬದ ಮೂವರು (ಸೋನಿಯಾ, ರಾಹುಲ್, ಪ್ರಿಯಾಂಕಾ) ಸಂಸತ್ತಿನಲ್ಲಿ ಇದ್ದಂತಾಗುತ್ತದೆ.

ಚುನಾವಣಾ ಆಯೋಗ ಮಂಗಳವಾರ ವಯನಾಡ್ ಮತ್ತು ನಾಂದೇಡ್ ಲೋಕಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ಘೋಷಿಸಿದ್ದು, ನವೆಂಬರ್ 13ರಂದು ಮತದಾನ ನಡೆಯಲಿದೆ.

ಪ್ರಿಯಾಂಕಾ ಅವರು 2019ರಲ್ಲಿ ಸಕ್ರಿಯ ರಾಜಕೀಯ ಪ್ರವೇಶಿಸಿದಾಗ, ವಾರಾಣಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಪ್ರತಿಸ್ಪರ್ಧಿ ಎಂದೇ ಬಿಂಬಿಸಲಾಗಿತ್ತು. ನಂತರ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ ಬಳಿಕ ರಾಯಬರೇಲಿಯ ಉತ್ತರಾಧಿಕಾರಿ ಎಂದೂ ಬಿಂಬಿಸಲಾಗಿತ್ತು. ಇದೀಗ ಅವರನ್ನು ವಯನಾಡ್ ಲೋಕಸಭಾ ಕ್ಷೇತ್ರದಿಂದ ತನ್ನ ಅಭ್ಯರ್ಥಿಯಾಗಿ ಕಾಂಗ್ರೆಸ್ ಪ್ರಕಟಿಸಿದೆ.

ಇದಕ್ಕೂ ಮುನ್ನ ಪ್ರಿಯಾಂಕಾ ಅವರು ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ನ ಉಸ್ತುವಾರಿಯಾಗಿ ಕಾರ್ಯನಿರ್ವಹಿಸಿದ್ದರು. ಕ್ರಮೇಣ ಅವರು ಪಕ್ಷದ ತಂತ್ರಗಾರರಾಗಿಯೂ ಬೆಳೆದರು. ಈ ವರ್ಷ ನಡೆದ ಲೋಕಸಭಾ ಚುನಾವಣೆಯಲ್ಲಿ ತಾರಾ ಪ್ರಚಾರಕರಾಗಿ ಅವರು ಪಕ್ಷವನ್ನು ಬಲಪಡಿಸಲು ವಿವಿಧ ರಾಜ್ಯಗಳಲ್ಲಿ ಪ್ರಚಾರ ಕೈಗೊಂಡಿದ್ದರು.

ಪಾಲಕ್ಕಾಡ್, ಚೇಲಕರ್‌ಗೆ ಅಭ್ಯರ್ಥಿ ಘೋಷಣೆ: ಕೇರಳ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ರಾಹುಲ್ ಮಾಂಕೂಟತ್ತಿಲ್ ಅವರನ್ನು ಪಾಲಕ್ಕಾಡ್ ವಿಧಾನಸಭಾ ಕ್ಷೇತ್ರ ಮತ್ತು ಮಾಜಿ ಸಂಸದೆ ರಮ್ಯಾ ಹರಿದಾಸ್ ಅವರನ್ನು ಚೇಲಕ್ಕರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಕಾಂಗ್ರೆಸ್ ಘೋಷಣೆ ಮಾಡಿದೆ.

31 ‘ಪ್ರಿಡೇಟರ್’ ಡ್ರೋನ್ ಖರೀದಿ

ನವದೆಹಲಿ: ಕಡಲ ಗಡಿಯಲ್ಲಿ ಕಣ್ಗಾವಲಿಡಲು ಬಳಕೆಯಾಗುವ ಶಸ್ತ್ರಸಜ್ಜಿತ ‘ಎಂಕ್ಯೂ 9ಬಿ’ ಹೆಸರಿನ 31 ಡ್ರೋನ್‌ಗಳನ್ನು ಖರೀದಿಸಲು ಅಮೆರಿಕದ ಜತೆ ಭಾರತ ಒಪ್ಪಂದ ಮಾಡಿಕೊಂಡಿದೆ. ಇದನ್ನು ‘ಪ್ರಿಡೇಟರ್’ ಎಂದೂ ಕರೆಯಲಾಗುತ್ತದೆ.

ನ್ಯಾಟೊ ಸಮೂಹ ಹೊರತುಪಡಿಸಿ ಅಮೆರಿಕದಿಂದ ಇಂತಹ ಶಸ್ತ್ರಾಸ್ತ್ರ ಪಡೆಯುತ್ತಿರುವ ಮೊದಲ ರಾಷ್ಟ್ರ ಭಾರತವಾಗಲಿದೆ. ಈ ವಹಿವಾಟಿನ ಮೊತ್ತ ಸುಮಾರು ₹26 ಸಾವಿರ ಕೋಟಿ (4 ಶತಕೋಟಿ ಡಾಲರ್) ಎಂದು ಮೂಲಗಳು ತಿಳಿಸಿವೆ.

ಅಮೆರಿಕ ನಿರ್ಮಿತ 31 ಡ್ರೋನ್‌ಗಳನ್ನು ಭಾರತೀಯ ಸೇನೆಗೆ ಸೇರಿಸಿಕೊಳ್ಳಲು ಅಕ್ಟೋಬರ್ 9ರಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ರಾಷ್ಟ್ರೀಯ ಭದ್ರತೆಯ ಸಂಪುಟ ಸಮಿತಿ (ಸಿಸಿಎಸ್) ಅನುಮೋದನೆ ನೀಡಿತ್ತು.

ಚಂದ್ರುರಿಂದ ಹಬ್ಬದ ಋತುವಿನ ಸತ್ಕಾರ




ಫ್ರೀಡಂ ಹೆಲ್ತಿ ಅಡುಗೆ ಎಣ್ಣೆ ಪ್ರಸ್ತುತಪಡಿಸಲಿರುವ ‘ಕರುನಾಡ ಸವಿಯೂಟ ಸೀಸನ್–3’ರ ಪಾಕ ಪದ್ಧತಿಗೆ ಶ್ರೀ ಕೃಷ್ಣ ಹಸುವಿನ ತುಪ್ಪದ (ಶ್ರೀ ಕೃಷ್ಣ ಶುದ್ಧ ಹಳ್ಳಿ ತುಪ್ಪ) ಸಹಯೋಗವಿದ್ದು, ಪಾಕ ಪ್ರವೀಣ ಸಿಹಿ ಕಹಿ ಚಂದ್ರು ಅವರಿಂದ ರುಚಿಕರ ಅಡುಗೆ ಭಕ್ಷ್ಯಗಳು ಮೂಡಿಬರಲಿವೆ. ಈ ಹಬ್ಬದ ಋತುವಿನಲ್ಲಿ ನಿಮ್ಮ ಮುಂದೆ ಎರಡು ಸಿಹಿ ತಿನಿಸುಗಳನ್ನು ಅವರು ಪ್ರದರ್ಶಿಸಲಿದ್ದಾರೆ. ಚಂದ್ರು ಅವರ ಅಡುಗೆ ಮನೆಯಿಂದ ಹೊರಬರುವ ತಿನಿಸುಗಳು ಇಲ್ಲಿವೆ.

ಕರ್ಜಿಕಾಯಿ

ಬೇಕಾದ ಪದಾರ್ಥಗಳು: ಮೈದಾ ಹಿಟ್ಟು ಒಂದು ಕಪ್, ಚಿರೋಟಿ ರವೆ ಅರ್ಧ ಕಪ್, ತುರಿದ ಕೊಬ್ಬರಿ ಒಂದು ಕಪ್, ಗುಲ್ಕಂದ್ ಒಂದು ಕಪ್, ಕತ್ತರಿಸಿದ ಗೋಡಂಬಿ 20, ಒಣದ್ರಾಕ್ಷಿ 20, ರುಚಿಗೆ ತಕ್ಕಷ್ಟು ಉಪ್ಪು, ತುಪ್ಪ ಎರಡು ಚಮಚ, ಅಡುಗೆ ಎಣ್ಣೆ

ಮಾಡುವ ವಿಧಾನ: ಬಟ್ಟಲಲ್ಲಿ ಮೈದಾ ಹಿಟ್ಟು ಹಾಗೂ ಚಿರೋಟಿ ರವೆ ತೆಗೆದುಕೊಂಡು ಒಂದು ಚಿಟಿಕೆ ಉಪ್ಪು ಸೇರಿಸಿ ಕಲೆಸಿ. ಬಿಸಿ ಮಾಡಿದ ತುಪ್ಪವನ್ನು ಕಲೆಸಿದ ಹಿಟ್ಟಿಗೆ ಹಾಕಿ ಮತ್ತಷ್ಟು ಚೆನ್ನಾಗಿ ಮಿಕ್ಸ್ ಮಾಡಿ. ಮುಷ್ಟಿಯಲ್ಲಿ ಹಿಡಿದು ಒತ್ತಿದರೆ ಹಿಟ್ಟು ಉಂಡೆ ಆಗುವಂತಿರಲಿ. ಅದಕ್ಕೆ ನೀರನ್ನು ಸ್ವಲ್ಪ ಸ್ವಲ್ಪ ಬೆರೆಸುತ್ತಾ ಹಿಟ್ಟು ಹದವಾಗಿ ಮೆತ್ತಗಿರುವಂತೆ ನೋಡಿಕೊಳ್ಳಿ. ಕಲೆಸಿದ ಹಿಟ್ಟನ್ನು 10 ನಿಮಿಷ ಮುಚ್ಚಿಡಿ.



ಕಡಾಯಿಗೆ ಎಣ್ಣೆ ಹಾಕಿ ಕಾಯಲು ಬಿಡಿ. ಒಂದು ಪ್ಯಾನ್‌ನಲ್ಲಿ ಕೊಬ್ಬರಿ ತುರಿಯನ್ನು ಹುರಿದು ಅದನ್ನು ಮಿಕ್ಸಿಗೆ ಹಾಕಿ. ಅದಕ್ಕೆ ಗುಲ್ಕಂದ್, ಗೋಡಂಬಿ ಮತ್ತು ದ್ರಾಕ್ಷಿ ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. ನಂತರ ಕಲೆಸಿಟ್ಟ ಹಿಟ್ಟಿನ ಸಣ್ಣ ಉಂಡೆಗಳನ್ನು ಒತ್ತಿ ಚಪಾತಿ ಮಾಡಿಕೊಳ್ಳಿ. ಚಪಾತಿ ಮಧ್ಯದೊಳಗೆ ಗುಲ್ಕಂದ್ ಬೆರೆತ ಪದಾರ್ಥ ಇಟ್ಟು, ಚಪಾತಿ ಹೊರಭಾಗದ ತುದಿಗೆ ನೀರನ್ನು ಸವರಿ. ಅರ್ಧ ವೃತ್ತಕಾರದಲ್ಲಿ ಅದನ್ನು ಮಡಚಿ, ಅಂಚುಗಳನ್ನು ಒತ್ತಿ ಮತ್ತು ಕಡಬನ್ನು ಸೀಲ್ ಮಾಡಿ. ಕಾದ ಎಣ್ಣೆಯಲ್ಲಿ ಬಿಡಿ. ಕಡಬು ಮಧ್ಯಮ ಉರಿಯಲ್ಲಿ ಗೋಲ್ಡನ್ ಬ್ರೌನ್ ಬಣ್ಣ ಬರುವವರೆಗೆ ಕರಿಯಿರಿ. ಕರಿದು ಹೊರತೆಗೆದು ಗರಿಗರಿ ಕರ್ಜಿಕಾಯಿ ಸವಿಯಿರಿ.



ಪನ್ನೀರ್ ಗೀ ರೋಸ್ಟ್

ಬೇಕಾದ ಪದಾರ್ಥಗಳು: 200 ಗ್ರಾಂ ಪನ್ನೀರ್ (ಕ್ಯೂಬ್ಡ್), 2 ಚಮಚ ದನಿಯಾ, ಕಾಲು ಸ್ಪೂನ್ ಮೆಂತ್ಯ, 1 ಚಮಚ ಜೀರಿಗೆ, 4 ಗುಂಟೂರು ಮೆಣಸಿನಕಾಯಿ, 10 ಬ್ಯಾಡಗಿ ಮೆಣಸಿನಕಾಯಿ, 1 ಸ್ಪೂನ್ ಸೋಂಪು, ಅರ್ಧ ಚಮಚ ಕಾಳುಮೆಣಸು, 4 ಲವಂಗ, ಅರ್ಧ ಕಪ್ ಮೊಸರು, ಅರ್ಧ ಇಂಚು ಶುಂಠಿ 8 ಎಸಳು ಬೆಳ್ಳುಳ್ಳಿ, ಅರ್ಧ ಈರುಳ್ಳಿ, ಕಾಲು ಚಮಚ ಅರಿಶಿನ, ಅರ್ಧ ಕಪ್ ಸಣ್ಣಗೆ ಕತ್ತರಿಸಿದ ಈರುಳ್ಳಿ, 3 ಚಮಚ ಹುಣಸೆಹುಳಿ, 10 ಕರಿಬೇವು ಎಲೆ, 2 ಚಮಚ ಸೂರ್ಯಕಾಂತಿ ಎಣ್ಣೆ, 2 ಚಮಚ ತುಪ್ಪ, ರುಚಿಗೆ ತಕ್ಕಷ್ಟು ಉಪ್ಪು

ಮಾಡುವ ವಿಧಾನ: ದನಿಯಾ, ಮೆಂತ್ಯ, ಜೀರಿಗೆ, ಗುಂಟೂರು ಮತ್ತು ಬ್ಯಾಡಗಿ ಮೆಣಸಿಕಾಯಿ, ಸೋಂಪು, ಕಾಳುಮೆಣಸು, ಲವಂಗ ಎಲ್ಲವನ್ನೂ ಒಂದೊಂದಾಗಿ ಹುರಿದುಕೊಳ್ಳಿ. ತಣ್ಣಗಾಗುವವರೆಗೆ ಬಿಡಿ. ನಂತರ ಮಿಕ್ಸಿ ಜಾರ್‌ಗೆ ಹಾಕಿ ಹುಡಿ ಮಾಡಿಕೊಳ್ಳಿ. ಅದಕ್ಕೆ ಶುಂಠಿ, ಬೆಳ್ಳುಳ್ಳಿ, ಕತ್ತರಿಸಿದ ಈರುಳ್ಳಿ, ಹುಣಸೆಹುಳಿ ಸೇರಿಸಿ ರುಬ್ಬಿ ನುಣ್ಣಗೆ ಪೇಸ್ಟ್ ಮಾಡಿಟ್ಟುಕೊಳ್ಳಿ.

ನಂತರ ಪ್ಯಾನ್ ತೆಗೆದುಕೊಂಡು ತುಪ್ಪ ಹಾಕಿ, ಬಿಸಿಯಾದ ನಂತರ ಪನ್ನೀರ್ ಕ್ಯೂಬ್‌ಗಳನ್ನು ಕಂದು ಬಣ್ಣ ಬರುವರೆಗೆ ಬಾಡಿಸಿ. ಅದೇ ಪ್ಯಾನ್‌ಗೆ ಎಣ್ಣೆ ಸೇರಿಸಿ, ಸಣ್ಣಗೆ ಕತ್ತರಿಸಿಟ್ಟ ಈರುಳ್ಳಿ ಹಾಕಿ ಅರೆ ಪಾರದರ್ಶಕ ಆಗುವವರೆಗೆ ಹುರಿಯಿರಿ. ಅದಕ್ಕೆ ರುಬ್ಬಿಟ್ಟ ಮಸಾಲೆ ಸೇರಿಸಿ ಕೊಂಚ ಸಮಯ ಬಾಡಿಸಿ. ಸ್ಟೌವ್ ಆಫ್ ಮಾಡಿ. ಕಡಿದ ಮೊಸರನ್ನು ಅದಕ್ಕೆ ಸೇರಿಸಿ ಚೆನ್ನಾಗಿ ಕಲೆಸಿ.

ಮತ್ತೊಮ್ಮೆ ಸ್ಟೌವ್ ಆನ್ ಮಾಡಿ ತುಪ್ಪ ಹೊರ ಹೊಮ್ಮುವವರೆಗೆ ಕಾಯಿರಿ. ನಂತರ ಪನ್ನೀರ್ ಹಾಕಿ ಕಲೆಸಿ. ಒಗ್ಗರಣೆ ಪ್ಯಾನ್‌ನಲ್ಲಿ ತುಪ್ಪ ಹಾಕಿ ಅದರಲ್ಲಿ ಕರಿಬೇವಿನ ಎಲೆಗಳನ್ನು ಹಾಕಿ ಬಾಡಿದ ನಂತರ ಅದನ್ನು ಕಲೆಸಿಟ್ಟ ಪನ್ನೀರ್ ಮೇಲೆ ಸುರಿದು ಮತ್ತೊಮ್ಮೆ ಚೆನ್ನಾಗಿ ಕಲೆಸಿ. ರುಚಿಕರ ಪನ್ನೀರ್ ಗೀ ರೋಸ್ಟ್ ತಿನ್ನಲು ರೆಡಿ.

ಅಡುಗೆ ಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಟಾಟ್

ಶೂಟಿಂಗ್ ವಿಶ್ವಕಪ್: ಸೋನಮ್‌ಗೆ ಬೆಳ್ಳಿ ಪದಕ



ನವದೆಹಲಿ (ಪಿಟಿಐ): ಯುವ ಶೂಟರ್ ಸೋನಮ್ ಮಸ್ಕರ್ ಅವರು ಇಲ್ಲಿ ಮಂಗಳವಾರ ಆರಂಭವಾದ ಐಎಸ್‌ಎಸ್‌ಎಫ್ ವಿಶ್ವಕಪ್ ಫೈನಲ್‌ನ ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಭಾರತಕ್ಕೆ ಮೊದಲ ಪದಕ ತಂದುಕೊಟ್ಟರು. ಆದರೆ, ಇತರ ಶೂಟರ್‌ಗಳು ನಿರಾಸೆ ಮೂಡಿಸಿದರು.

ಎರಡು ವರ್ಷಗಳ ಹಿಂದೆಯಷ್ಟೇ ಸ್ಪರ್ಧಾತ್ಮಕ ಶೂಟಿಂಗ್ ಆರಂಭಿಸಿ, ಕಳೆದ ವರ್ಷ ರಾಷ್ಟ್ರೀಯ ತಂಡಕ್ಕೆ ಬಂದಿದ್ದ 22 ವರ್ಷ ವಯಸ್ಸಿನ ಸೋನಮ್ ಫೈನಲ್‌ನಲ್ಲಿ 252.9 ಪಾಯಿಂಟ್ಸ್ ಗಳಿಸಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು.

ಪ್ಯಾರಿಸ್ ಒಲಿಂಪಿಕ್ಸ್‌ನ ಬೆಳ್ಳಿ ಪದಕ ವಿಜೇತ ಚೀನಾದ ಹುವಾಂಗ್ ಯುಟಿಂಗ್ (254.5) ವಿಶ್ವದಾಖಲೆಯ ಅಂಕದೊಂದಿಗೆ ಚಿನ್ನ ಜಯಿಸಿದರು. ಭಾರತದ ಮತ್ತೊಬ್ಬ ಸ್ಪರ್ಧಿ ತಿಲೋತ್ತಮಾ ಸೇನ್ ಅವರು ಎಂಟು ಶೂಟರ್‌ಗಳ ಫೈನಲ್‌ನಲ್ಲಿ ಆರನೇ ಸ್ಥಾನ ಪಡೆದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚು ತಪ್ಪಿಸಿಕೊಂಡಿದ್ದ ಅರ್ಜುನ್ ಬಬುತಾ ಇಲ್ಲೂ ನಿರಾಸೆ ಮೂಡಿಸಿದರು. ಪುರುಷರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಐದನೇ ಸ್ಥಾನ ಪಡೆದರು.

ಒಲಿಂಪಿಯನ್ ರಿದಂ ಸಂಗ್ವಾನ್ ಅವರು ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್‌ನಲ್ಲಿ ನಾಲ್ಕನೇ ಸ್ಥಾನ ಪಡೆದರು.



ಮಹಿಳೆಯರ ಹಾಕಿ ಲೀಗ್ ಹರಾಜು ಪ್ರಕ್ರಿಯೆ

ಉದಿತಾ ದುಹಾನ್‌ಗೆ ₹32 ಲಕ್ಷ

ನವದೆಹಲಿ (ಪಿಟಿಐ): ಭಾರತದ ರಕ್ಷಣೆ ಆಟಗಾರ್ತಿ ಉದಿತಾ ದುಹಾನ್ ಅವರು ಹಾಕಿ ಇಂಡಿಯಾ ಮಹಿಳೆಯರ ಲೀಗ್‌ನ ಹರಾಜು ಪ್ರಕ್ರಿಯೆಲ್ಲಿ ಅತಿ ಹೆಚ್ಚು ಮೌಲ್ಯ ಪಡೆದಿದ್ದಾರೆ. ಮಂಗಳವಾರ ಅವರು ₹32 ಲಕ್ಷ ಮೊತ್ತಕ್ಕೆ ಶ್ರಾಚಿ ರರ್ ಬೆಂಗಾಲ್ ಟೈಗರ್ಸ್ ತಂಡದ ಪಾಲಾಗಿದ್ದಾರೆ.

ಡಚ್ (ನೆದರ್ಲೆಂಡ್ಸ್) ಆಟಗಾರ್ತಿ, ಡ್ರ್ಯಾಗ್ ಫ್ಲಿಕ್ ಪರಿಣಿತೆ ಯಿಬ್ಬಿ ಜಾನ್ಸೆನ್ ಅವರು ಎರಡನೇ ಅತಿ ಹೆಚ್ಚು ಮೊತ್ತ (₹29 ಲಕ್ಷ)ಕ್ಕೆ ಒಡಿಶಾ ವಾರಿಯರ್ಸ್ ಪಾಲಾಗಿದ್ದಾರೆ. ಭಾರತದ ಆಟಗಾರ್ತಿಯರಲ್ಲಿ ಲಾಲ್‌ರೆಮ್ಸಿಯಾಮಿ ₹25 ಲಕ್ಷ ಮೊತ್ತಕ್ಕೆ ಶ್ರಾಚಿ ಬೆಂಗಾಲ್ ಟೈಗರ್ಸ್ ಪಾಲಾಗಿದ್ದಾರೆ. ಸುನೆಲಿಟಾ ಟೊಪ್ಪೊ ಅವರನ್ನು ₹24 ಲಕ್ಷಕ್ಕೆ ಡೆಲ್ಲಿ ಎಸ್‌ಜಿ ಪೈಪರ್ಸ್ ತಂಡ ಪಡೆದುಕೊಂಡಿದೆ. ಸಂಗೀತಾ ಕುಮಾರಿ ಅವರು ₹22 ಲಕ್ಷಕ್ಕೆ ಇದೇ ತಂಡದ ಪಾಲಾಗಿದ್ದಾರೆ.

ವಿದೇಶದ ಹಲವು ಆಟಗಾರ್ತಿಯರೂ ಬಿಡ್‌ನಲ್ಲಿ ವಿವಿಧ ತಂಡಗಳ ಪರ ಆಡಲು ಸಜ್ಜಾಗಿದ್ದಾರೆ. ಬೆಲ್ಜಿಯಂನ



ಉದಿತಾ ದುಹಾನ್ —ಎಕ್ಸ್ ಚಿತ್ರ

ಚಾರ್ಲೊಟ್ ಇಂಗೆಲ್‌ಬರ್ಟ್ (₹16 ಲಕ್ಷಕ್ಕೆ ಸೂರ್ಮಾ ಹಾಕಿ ಕ್ಲಬ್), ಜರ್ಮನಿಯ ಚಾರ್ಲೊಟೆ ಸ್ಟಫನ್‌ಹಾರ್ಸ್ಟ್ (₹16 ಲಕ್ಷಕ್ಕೆ ಸೂರ್ಮಾ ಹಾಕಿ ಕ್ಲಬ್), ಆಸ್ಟ್ರೇಲಿಯಾದ ಜೋಸ್ಲಿನ್ ಬಟ್ರ್ರಾಮ್ (₹15 ಲಕ್ಷಕ್ಕೆ ಒಡಿಶಾ ವಾರಿಯರ್ಸ್) ಇವರಲ್ಲಿ ಪ್ರಮುಖರು.

ಭಾರತದ ವಂದನಾ ಕಟಾರಿಯಾ ₹10.5 ಲಕ್ಷಕ್ಕೆ ಶ್ರಾಚಿ ಬೆಂಗಾಲ್ ಟೈಗರ್ಸ್ ತಂಡದ ಪಾಲಾಗಿದ್ದಾರೆ. ಭಾರತ ತಂಡದ ನಾಯಕಿ ಸಲೀಮಾ ಟೆಟೆ (₹20 ಲಕ್ಷ), ಇಶಿಕಾ ಚೌಧರಿ (₹16 ಲಕ್ಷ) ಮತ್ತು ನೇಹಾ ಗೋಯಲ್ (₹10 ಲಕ್ಷ) ಅವರನ್ನು ಒಡಿಶಾ ವಾರಿಯರ್ಸ್ ತಂಡ ಬಿಡ್‌ನಲ್ಲಿ ಪಡೆದಿದೆ.

ಭಾರತ ತಂಡದ ಮಾಜಿ ನಾಯಕಿ ಸವಿತಾ (₹20 ಲಕ್ಷ), ಶರ್ಮಿಲಾ ದೇವಿ (₹10ಲಕ್ಷ) ಮತ್ತು ನಿಕ್ಕಿ ಪ್ರಧಾನ್ (₹12 ಲಕ್ಷ) ಸೂರ್ಮಾ ಹಾಕಿ ಕ್ಲಬ್ ಪರ ಆಡಲಿದ್ದಾರೆ. ಡೆಲ್ಲಿ ಎಸ್‌ಜಿ ಪೈಪರ್ಸ್ ತಂಡವು ಅನುಭವಿ ಆಟಗಾರ್ತಿ ನವನೀತ್ ಕೌರ್ (₹19 ಲಕ್ಷ), ಯುವ ಗೋಲ್ ಕೀಪರ್ ಬಿಚುದೇವಿ ಖರಿಬಮ್ (₹16 ಲಕ್ಷ) ಮತ್ತು ದೀಪಿಕಾ (₹20 ಲಕ್ಷ) ಅವರನ್ನು ಬಿಡ್‌ನಲ್ಲಿ ತನ್ನದಾಗಿಸಿಕೊಂಡಿದೆ.

ಲೀಗ್‌ನಲ್ಲಿ ಒಟ್ಟು ನಾಲ್ಕು ತಂಡಗಳಿದ್ದು, ಪ್ರತಿ ತಂಡದಲ್ಲಿಯೂ ಎಂಟು ವಿದೇಶಿ ಆಟಗಾರ್ತಿಯರು ಸೇರಿದಂತೆ ಒಟ್ಟು 24 ಮಂದಿ ಇದ್ದಾರೆ.

‘ಫೇವರಿಟ್ ಹಣೆಪಟ್ಟೆಯಿಂದ ಒತ್ತಡವಿಲ್ಲ’

ನವದೆಹಲಿ (ಪಿಟಿಐ): ಚೀನಾದ ಡಿಂಗ್ ಲಿರೆನ್ ವಿರುದ್ಧ ವಿಶ್ವ ಚೆಸ್ ಚಾಂಪಿಯನ್‌ಷಿಪ್ ನಲ್ಲಿ ಗೆಲ್ಲುವ ನೆಚ್ಚಿನ ಆಟಗಾರ ಎಂಬ ಹಣೆಪಟ್ಟಿ ನೀಡಿರುವುದರಿಂದ ತಮ್ಮ ಮೇಲೆ ಹೆಚ್ಚುವರಿ ಒತ್ತಡವೇನೂ ಇಲ್ಲ’ ಎಂದು ಚೆಸ್ ತಾರೆ ಡಿ.ಗುಕೇಶ್ ಅವರು ಹೇಳಿದ್ದಾರೆ.



ಡಿ.ಗುಕೇಶ್

ಹಾಲಿ ವಿಶ್ವ ಚಾಂಪಿಯನ್ ಲಿರೆನ್ ಮತ್ತು ಗುಕೇಶ್ ನಡುವೆ ನವೆಂಬರ್ 20ರಿಂದ ಡಿಸೆಂಬರ್ 15ರವರೆಗೆ ಸಿಂಗಪುರದಲ್ಲಿ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ನಡೆಯಲಿದೆ. ಫೈನಲ್ ಪಂದ್ಯವು ಸುಮಾರು ₹21 ಕೋಟಿ ಬಹುಮಾನ ನಿಧಿಯನ್ನು ಹೊಂದಿದೆ.

ಕೆನಡಾದಲ್ಲಿ ಕಳೆದ ಏಪ್ರಿಲ್‌ನಲ್ಲಿ ನಡೆದ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯನ್ನು ಗೆಲ್ಲುವ ಮೂಲಕ, 18 ವರ್ಷ ವಯಸ್ಸಿನ ಗುಕೇಶ್ ಅವರು ವಿಶ್ವ ಚಾಂಪಿಯನ್‌ಷಿಪ್ ಇತಿಹಾಸದಲ್ಲೇ ಅತಿ ಕಿರಿಯ ಚಾಲೆಂಜರ್ ಎಂಬ ಹಿರಿಮೆಗೆ ಪಾತ್ರರಾಗಿದ್ದರು.

‘ಜನರು ಆ ರೀತಿ (ನೀವೇ ಗೆಲ್ಲುವ ನಿರೀಕ್ಷೆಯಿರುವ ಆಟಗಾರನೆಂದು) ಹೇಳುವಾಗ ಎಲ್ಲರಿಗೂ ಆಗುವಂತೆ ಸಂತಸವಾಗುತ್ತದೆ. ಆದರೆ ಇದರಿಂದೆಲ್ಲಾ ನನ್ನ ಮೇಲೆ ಒತ್ತಡ ಬೀಳುವುದಿಲ್ಲ’ ಎಂದು ಅವರು ಆಯ್ದ ಮಾಧ್ಯಮದವರೊಂದಿಗೆ ಆನ್‌ಲೈನ್ ಸಂವಾದದಲ್ಲಿ ತಿಳಿಸಿದರು. ಈಗ ಆಡುತ್ತಿರುವ ರೀತಿಯ (ಫಾರ್ಮ್) ಬಗ್ಗೆಯೂ ತಮಗೆ ಸಂತೃಪ್ತಿಯಿದೆ ಎಂದರು.

ಕ್ಯಾಂಡಿಡೇಟ್ಸ್ ಟೂರ್ನಿ ಗೆದ್ದ ನಂತರ ಗುಕೇಶ್ ಅವರು ಒಲಿಂಪಿಯಾಡ್‌ನಲ್ಲೂ ಅಮೋಘ ಆಟವಾಡಿದ್ದರು. ಮೊದಲ ಬೋರ್ಡ್‌ನಲ್ಲಿ ಆಡಿ ತಂಡ ಐತಿಹಾಸಿಕ ಚಿನ್ನ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಜೊತೆಗೆ ಮೊದಲ ಬೋರ್ಡ್‌ನಲ್ಲಿ ತೋರಿದ ಸಾಧನೆಗಾಗಿ ವೈಯಕ್ತಿಕ ಚಿನ್ನ ಕೂಡ ಅವರ ಪಾಲಾಗಿತ್ತು.

ಗುಕೇಶ್ ಎದುರಾಳಿಯಾಗಿರುವ 31 ವರ್ಷ ವಯಸ್ಸಿನ ಲಿರೆನ್, ಅತೀ ಹೆಚ್ಚಿನ ರೇಟಿಂಗ್ ಪಡೆದ ಚೀನಾದ ಆಟಗಾರ ಎನಿಸಿದ್ದಾರೆ. ಕಳೆದ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ರಷ್ಯಾದ ಇಯಾನ್ ನಿಪೊಮ್‌ನಿಷಿ ಅವರನ್ನು ಸೋಲಿಸಿದ ನಂತರ ಅವರು, ಖಿನ್ನತೆಯಿಂದ ಹೊರಬರಲು ವಿರಾಮ ಪಡೆದಿದ್ದರು. ಈ ವರ್ಷದ ಆರಂಭದಲ್ಲಷ್ಟೇ ಅವರು ಆಟಕ್ಕೆ ಪುನರಾಗಮನ ಮಾಡಿದ್ದರು. ಆದರೆ ನಂತರ ಎಂದಿನ ಲಯಕ್ಕೆ ಮರಳಲು ಅವರಿಗೆ ಸಾಧ್ಯವಾಗಿಲ್ಲ.

‘ಒಲಿಂಪಿಯಾಡ್‌ನಲ್ಲಿ ತೋರಿದ ಉತ್ತಮ ಸಾಧನೆ ನನ್ನ ಪಾಲಿಗೆ ವಿಶ್ವಾಸವರ್ಧಕ (ಕಾನ್ಫಿಡೆನ್ಸ್ ಬೂಸ್ಟರ್) ವಾಗಿ ಕೆಲಸ ಮಾಡಿತು’ ಎಂದು ಗುಕೇಶ್ ಹೇಳಿದ್ದಾರೆ.

ಕಿಲಿಯನ್ ಎಂಬಾಪೆ ವಿರುದ್ಧ ಅತ್ಯಾಚಾರ ಆರೋಪ?

ಸ್ಟಾಕ್‌ಹೋಮ್ (ಎಎಫ್‌ಪಿ): ರಿಯಲ್ ಮ್ಯಾಡ್ರಿಡ್ ಹಾಗೂ ಫ್ರಾನ್ಸ್‌ನ ಫುಟ್‌ಬಾಲ್ ತಾರೆ ಕಿಲಿಯನ್ ಎಂಬಾಪೆ ಅವರು ಭಾಗಿಯಾಗಿದ್ದಾರೆ ಎನ್ನಲಾದ ಅತ್ಯಾಚಾರ ಪ್ರಕರಣದ ತನಿಖೆಯನ್ನು ಆರಂಭಿಸಲಾಗಿದೆ. ಎಂಬಾಪೆ ಅವರ ಹೆಸರನ್ನು ಉಲ್ಲೇಖಿಸದೆ ತನಿಖೆ ಆರಂಭಿಸಿರುವ ವಿಚಾರವನ್ನು ಸ್ವೀಡನ್‌ನ ಪ್ರಾಸಿಕ್ಯೂಟರ್‌ರೊಬ್ಬರು ಮಂಗಳವಾರ ಖಚಿತಪಡಿಸಿದ್ದಾರೆ.

ಸ್ವೀಡನ್‌ನ ಎರಡು ದಿನಪತ್ರಿಕೆಗಳು ಮತ್ತು ಪ್ರಸಾರ ಸಂಸ್ಥೆಯೊಂದು 25




ವರ್ಷ ವಯಸ್ಸಿನ ಎಂಬಾಪೆ ಅವರು ಈ ಪ್ರಕರಣದ ತನಿಖೆಯ ಗುರಿಯಾಗಿದ್ದಾರೆ ಎಂದು ವರದಿ ಮಾಡಿವೆ. ಕಳೆದ ವಾರ ಎಂಬಾಪೆ ಅವರು ಎರಡು ದಿನಗಳ ಭೇಟಿಗಾಗಿ ಇಲ್ಲಿಗೆ ಬಂದಿದ್ದರು.

ಅಕ್ಟೋಬರ್ 10ರಂದು ಹೋಟೆಲ್ ಒಂದರಲ್ಲಿ ಅತ್ಯಾಚಾರ ಪ್ರಕರಣ ವರದಿಯಾಗಿದೆ. ಆದರೆ, ಅದರಲ್ಲಿ ಯಾರ ಹೆಸರನ್ನು ನೇರವಾಗಿ ಉಲ್ಲೇಖಿಸಿಲ್ಲ. ಹೆಚ್ಚಿನ ಮಾಹಿತಿಯನ್ನು ಹಂಚಿಕೊಂಡಿರಲಿಲ್ಲ.

ಈ ಆರೋಪವನ್ನು ಎಂಬಾಪೆ ಅವರು ಸಾಮಾಜಿಕ ಜಾಲತಾಣದಲ್ಲಿ ‘ಫೇಕ್ ನ್ಯೂಸ್’ ಎಂದಿದ್ದಾರೆ.

‘ಪ್ರಕರಣದಲ್ಲಿ ಹೆಸರು ತಳುಕು ಹಾಕಿಕೊಂಡಿರುವುದಕ್ಕೆ ಎಂಬಾಪೆ ಆಘಾತಗೊಂಡಿದ್ದಾರೆ. ಅವರು ಯಾವುದೇ ತಪ್ಪು ಎಸಗಿಲ್ಲ. ಹೀಗಾಗಿ, ಮಾನಹಾನಿಗಾಗಿ ಕಾನೂನು ಕ್ರಮಕ್ಕೆ ನಿರ್ಧರಿಸಿದ್ದಾರೆ’ ಎಂದು ಎಂಬಾಪೆ ಅವರ ವಕೀಲ ಕ್ಯಾನು ಬರ್ನಾರ್ಡ್ ಪ್ರತಿಕ್ರಿಯಿಸಿದ್ದಾರೆ.



ತಮಿಳುನಾಡು ತಂಡ ಬಿಗಿ ಹಿಡಿತ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮಧ್ಯಮ ಕ್ರಮಾಂಕದ ಆಟಗಾರ ಎಸ್.ರಿತಿಕ್ ಈಶ್ವರನ್ (87; 164 ಎ) ಅವರ ಅರ್ಧಶತಕ ಮತ್ತು ಬೌಲರ್‌ಗಳ ಉತ್ತಮ ದಾಳಿಯ ಬಲದಿಂದ ತಮಿಳುನಾಡು ತಂಡ ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕರ್ನಾಟಕ ತಂಡದ ಹಿಡಿತ ಸಾಧಿಸಿತು.

ತಮಿಳುನಾಡು ತಂಡ ಗಳಿಸಿದ್ದ 312 ರನ್‌ಗಳಿಗೆ ಉತ್ತರವಾಗಿ ಕರ್ನಾಟಕ ತಂಡ ಮಂಗಳವಾರ ಮೂರನೇ ದಿನದಾಟದ ಅಂತ್ಯಕ್ಕೆ 13 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 42 ರನ್ ಗಳಿಸಿದೆ.

ಇನ್ನೂ ಒಂದು ದಿನದ ಆಟ ಬಾಕಿ ಇದ್ದು, ಇನಿಂಗ್ಸ್ ಹಿನ್ನಡೆ ತಪ್ಪಿಸಿಕೊಳ್ಳಲು ಕರ್ನಾಟಕ ತಂಡ 270 ರನ್ ಗಳಿಸಬೇಕಿದೆ. ತಂಡದ ನಾಯಕ ಅನೀಶ್ವರ್ ಗೌತಮ್ (5) ಮತ್ತು ಹರ್ಷಿಲ್ ಧರ್ಮಾನಿ (6) ಬುಧವಾರ ಬ್ಯಾಟಿಂಗ್ ಮುಂದುವರಿಸಲಿದ್ದಾರೆ.

ಇದಕ್ಕೂ ಮುನ್ನ 4ಕ್ಕೆ 165 ರನ್‌ಗಳೊಂದಿಗೆ ಮಂಗಳವಾರ ಮೂರನೇ ದಿನದಾಟ ಆರಂಭಿಸಿದ ತಮಿಳುನಾಡು 97.2 ಓವರ್‌ಗಳಲ್ಲಿ 312 ರನ್ ಗಳಿಸಿತು. ಕರ್ನಾಟಕ ಪರ ಕೆ.ಶಶಿಕುಮಾರ್ 5 ಮತ್ತು ಪಾರಸ್ ಗುರುಬಕ್ಷ್ ಆರ್ಯ 4 ವಿಕೆಟ್ ಕಿತ್ತರು. ತಮಿಳುನಾಡು ತಂಡ 92.4 ಓವರ್‌ಗಳಲ್ಲಿ 8 ವಿಕೆಟ್‌ಗೆ 297 ರನ್ ಗಳಿಸಿದ್ದ ವೇಳೆ (ಮಧ್ಯಾಹ್ನ 1.25) ಮಳೆ ಸುರಿಯಿತು. ಇದರಿಂದ ಎರಡೂವರೆ ಗಂಟೆ ಪಂದ್ಯಕ್ಕೆ ಅಡಚಣೆಯಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ತಮಿಳುನಾಡು 97.2 ಓವರ್‌ಗಳಲ್ಲಿ 312 (ಸೋಮವಾರ 49 ಓವರ್‌ಗಳಲ್ಲಿ 4ಕ್ಕೆ 165) (ರಿತಿಕ್ ಈಶ್ವರನ್ 87, ಕೆ.ಟಿ.ಎ.ಮಾಧವ ಪ್ರಸಾದ್ 27; ಕೆ.ಶಶಿಕುಮಾರ್ 83ಕ್ಕೆ 5, ಪಾರಸ್ ಗುರುಬಕ್ಷ್ ಆರ್ಯ 72ಕ್ಕೆ 4); ಕರ್ನಾಟಕ: 13 ಓವರ್‌ಗಳಲ್ಲಿ 3ಕ್ಕೆ 42.

ಸಂಕ್ಷಿಪ್ತ ಸುದ್ದಿ

ಸಿಂಧು ಶುಭಾರಂಭ

ಒಡೆನ್ಸ್ (ಪಿಟಿಐ): ಭಾರತದ ತಾರೆ ಪಿ.ವಿ ಸಿಂಧು ಮಂಗಳವಾರ ಆರಂಭವಾದ ಡೆನ್ಮಾರ್ಕ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಆದರೆ, ಯುವ ಆಟಗಾರ ಲಕ್ಷ್ಯ ಸೇನ್ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಮಹಿಳೆಯರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿ 21-8, 13-7ರಿಂದ ಮುನ್ನಡೆಯಲ್ಲಿದ್ದಾಗ ಎದುರಾಳಿ ಆಟಗಾರ್ತಿ ಚೀನಾ ತೈಪೆಯ ಪೈ ಯು ಪೊ ಸ್ಪರ್ಧೆಯಿಂದ ಹಿಂದೆ ಸರಿದರು. ಹೀಗಾಗಿ, ಭಾರತದ ಆಟಗಾರ್ತಿ ಎರಡನೇ ಸುತ್ತಿಗೆ ಮುನ್ನಡೆದರು.

ಇದಕ್ಕೂ ಮುನ್ನ ಲಕ್ಷ್ಯ ಸೇನ್ ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ 21–12, 19–21, 14–21ರಿಂದ ಚೀನಾದ ಲು ಗುವಾಂಗ್ ಝು ವಿರುದ್ಧ ಸೋತರು.

ಚಂಡಿಕ ಅಮಾನತು

ಢಾಕಾ (ಎಎಫ್‌ಪಿ): ಆಟಗಾರನ ಮೇಲೆ ಹಲ್ಲೆ ಆರೋಪ ಸೇರಿದಂತೆ ಅನುಚಿತ ವರ್ತನೆಗಾಗಿ ಕೋಚ್ ಚಂಡಿಕ ಹತುರಸಿಂಘ ಅವರನ್ನು ಅಮಾನತುಗೊಳಿಸಿರುವುದಾಗಿ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ತಿಳಿಸಿದೆ.

ವೆಸ್ಟ್ ಇಂಡೀಸ್‌ನ ಮಾಜಿ ಆಲ್‌ರೌಂಡರ್ ಫಿಲ್ ಸಿಮನ್ಸ್ ಅವರನ್ನು ಪ್ರಭಾರಿ ಕೋಚ್ ಆಗಿ ನೇಮಕ ಮಾಡಲಾಗಿದೆ. ಅವರು ಪಾಕಿಸ್ತಾನದಲ್ಲಿ 2025ರಲ್ಲಿ ನಿಗದಿಯಾಗಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿಯವರೆಗೆ ತರಬೇತಿಯ ಹೊಣೆ ವಹಿಸಲಿದ್ದಾರೆ.

ಬಿಎಫ್‌ಸಿಗೆ ಜಯ

ಬೆಂಗಳೂರು: ಜೋಶುವಾ ಡಿಸಿಲ್ವ ಗಳಿಸಿದ ನಾಲ್ಕು ಗೋಲುಗಳ ಬಲದಿಂದ ಬಿಎಫ್‌ಸಿ ತಂಡವು ಇಲ್ಲಿನ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 8–1ರಿಂದ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು.

ದಿನದ ಮತ್ತೊಂದು ಪಂದ್ಯದಲ್ಲಿ ರಿಯಲ್ ಚಿಕ್ಕಮಗಳೂರು ಎಫ್‌ಸಿ ಮತ್ತು ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ಮುಖಾಮುಖಿಯಾಗಬೇಕಿತ್ತು. ಮಳೆಯ ಕಾರಣದಿಂದ ಪಂದ್ಯವನ್ನು ಬುಧವಾರಕ್ಕೆ ಮುಂದೂಡಲಾಗಿದೆ.

